ಇತಿಹಾಸದಲ್ಲಿ ಮರೆತುಹೋದ ಕನ್ನಡದ ಪುಟಗಳು



ಡಾ. ವೈ. ಉಮಾನಾಥ ಶೆಣೈ

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ

ಇತಿಹಾಸದಲ್ಲಿ ಮರೆತುಹೋದ ಕನ್ನಡದ ಪುಟಗಳು

ಡಾ. ವೈ. ಉಮಾನಾಥ ಶೆಣೈ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

ITHIHAASADALLI MARETHUHODA KANNADADA PUTAGALU
by : Dr. Y. Umanatha Shenai
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : 104 + x Price : Rs. **45=00** ; **2010**

ಮೊದಲನೇ ಮುದ್ರಣ : ೨೦೦೪
ಎರಡನೇ ಮುದ್ರಣ : ೨೦೧೦

ಪ್ರತಿಗಳು : ೧೦೦೦

ಬೆಲೆ : ನಲವತ್ತೈದು ರೂಪಾಯಿಗಳು

ಮುಖಪುಟ ವಿನ್ಯಾಸ : ಶ್ರೀ ಬಾಗೂರು ಮಾರ್ಕಂಡೇಯ

ಮುದ್ರಣ : ಬಿ.ಎಂ.ಶ್ರೀ ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿರುವುದನ್ನು ಕಂಡು ನನಗೆ ಮಹದಾನಂದವಾಗಿದೆ. ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ ತಲುಪುವಂತೆ ಮಾಡುವುದೇ ಪುಸ್ತಕೋದ್ಯಮದ ಪ್ರಾಥಮಿಕ ಆಶಯ. ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹು ವೇಗವಾಗಿ ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ ಆರಾಧನೆ ಮಾಡುತ್ತಿದ್ದೇನೆಂದು ಭಾವಿಸಿ ಕನ್ನಡ ಸಾಹಿತ್ಯ ಪರಿಷತ್ತು ತಣ್ಣಗೆ, ನಿರುಮ್ಮಳವಾಗಿ ಇರುವ ಕಾಲ ಮುಗಿದುಹೋಯಿತು. ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದರಲ್ಲೇ ಸಾಹಿತ್ಯ ಪರಿಷತ್ತಿನ ಜೀವಂತಿಕೆಯಿದೆಯೆಂದು ಬಲವಾಗಿ ನಂಬಿ ನಡೆಯುತ್ತಿರುವವನು ನಾನು. ಕನ್ನಡದಲ್ಲಿ ಇತ್ತೀಚೆಗೆ ಬರುತ್ತಿರುವ ವೈವಿಧ್ಯಮಯ ಪುಸ್ತಕಗಳನ್ನು ನೋಡಿದರೆ ಮೊದಲು ಅವುಗಳನ್ನು ಕಣ್ಣಿಗೊತ್ತಿಕೊಂಡು, ಮೃದುವಾಗಿ ಮೈದಡವಿ, ಸ್ವಲ್ಪ ಹತ್ತಿರದಿಂದಲೂ ನಂತರ ದೂರದಿಂದಲೂ ನೋಡಿ ಪುಳಕಗೊಂಡು ಪುಟ ತಿರುವಬೇಕೆನ್ನಿಸುತ್ತದೆ. ಪಂಚೇಂದ್ರಿಯಗಳಲ್ಲಿ ನಾಲಗೆಯೊಂದನ್ನು ಹೊರತುಪಡಿಸಿ ಉಳಿದವುಗಳೆಲ್ಲ ತಣಿಯದ ದಿವ್ಯಸುಖವನ್ನು ಖಂಡಿತ ಅನುಭವಿಸುತ್ತವೆ. ಪುಸ್ತಕಪ್ರೇಮಿಗಳು ಯಾರೂ ಈ ಭವಸುಖನಿಮಜ್ಜನದಿಂದ ಬಿಡಿಸಿಕೊಳ್ಳಲಾರರು.

ಲೇಖಕ–ಮಾರಾಟಗಾರ–ಓದುಗರಿಗೆ ವಿಭಿನ್ನ ರೀತಿಯ ಸುಖವುಣ್ಣಿಸುವ ಪೈಪೋಟಿಯಲ್ಲಿ ಪುಸ್ತಕೋದ್ಯಮ ಮುಳುಗಿಹೋಗಿರುವಾಗ ಪರಿಷತ್ತು ತಟಸ್ಥ ತಲ್ಲೀನತೆಯಲ್ಲಿರುವುದು ಸಾಧ್ಯವೇ ಇಲ್ಲ. ಗತವೈಭವದ ಸಾಕ್ಷಿಯಾಗಿ ಉಳಿದಿರುವ, ಆದರೆ ಇವತ್ತಿನ ಅಭಿರುಚಿಗೆ ಸಲ್ಲದಂಥ ಮುಖಪುಟ, ವರ್ಣಸಂಯೋಜನೆ, ಚಿತ್ರ ವಿನ್ಯಾಸ, ಒಳಗಿನ ಕಾಗದಗಳನ್ನು ಸಂಪೂರ್ಣ ಬದಲಾಯಿಸಿ ಚಂದಗಾಣಿಸಿದರೆ ಮಾತ್ರ ಓದುಗರು ಹತ್ತಿರ ಬರುತ್ತಾರೆ, ಕೈಯಿಂದ ಎತ್ತಿ ನೋಡುತ್ತಾರೆ, ಕೊಳ್ಳುವ ಮನಸ್ಸು ಮಾಡುತ್ತಾರೆ, ಮನೆಯ ಕಪಾಟುಗಳನ್ನು ಪುಸ್ತಕಗಳಿಂದ ಅಲಂಕರಿಸುತ್ತಾರೆ. ಪುಸ್ತಕವೊಂದರ ಪುಟ ಪುಟಗಳಲ್ಲಿ ಪ್ರತಿಭೆ–ಪಾಂಡಿತ್ಯಗಳ ವಿದ್ಯುತ್ ಪ್ರವಾಹ ಹರಿದು ಓದುಗರನ್ನು ರಸರೋಮಾಂಚನಗೊಳಿಸುವುದು ಎಷ್ಟು ಮುಖ್ಯವೋ ನಮಗೆ ಬೇಕಾದ್ದು ಅದರಲ್ಲೇನೋ ಇದೆ ಎನ್ನುವ ಸೂಚನೆ ಪುಸ್ತಕದತ್ತ ನೋಟ ಹಾಯಿಸುತ್ತಿದ್ದಂತೆ ಸಿಗುವುದೂ ಅಷ್ಟೇ ಮುಖ್ಯ. ಆಧುನಿಕ ಮುದ್ರಣ ತಂತ್ರಜ್ಞಾನದ ಸಾಧ್ಯತೆಗಳನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳುವುದರಿಂದಲೂ ಯಶಸ್ಸಿನ ಹೆದ್ದಾರಿ ನಿರ್ಮಾಣವಾಗುತ್ತದೆಂಬ ಮಾತೂ ಸತ್ಯವೇ. ಇಷ್ಟೆಲ್ಲಾ ಚಿಂತನ–ಮಂಥನ, ಪರೀಕ್ಷೆ–ಪ್ರಯೋಗ, ಅವಲೋಕನ–ಪರಾಮರ್ಶನಗಳ ಪರಿಣಾಮವಾಗಿಯೇ ವರ್ತಮಾನದ ಪುಸ್ತಕ ಪ್ರಕಟಣೆಯ ತುರುಸಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆತ್ಮವಿಶ್ವಾಸದ ಮತ್ತು ಹೆಮ್ಮೆಯ ಹೆಜ್ಜೆಗಳನ್ನು ಇಡಲು ಸಾಧ್ಯವಾಗಿದೆ. ಬೆಂಗಳೂರು ಮತ್ತು ಹೊರಗೆ ನಡೆಯುತ್ತಿರುವ ಪುಸ್ತಕ ಮೇಳ–ಪುಸ್ತಕ ಪ್ರದರ್ಶನಗಳಲ್ಲಿ ಜಯಭೇರಿ ಬಾರಿಸಲು ಸಾಧ್ಯವಾಗಿದೆ. ೨೦೦೯ರ ಕನ್ನಡ ರಾಜ್ಯೋತ್ಸವದ ನೆನಪಿಗೆ ಏರ್ಪಡಿಸಿದ್ದ ಪುಸ್ತಕ ಪ್ರದರ್ಶನ ಮತ್ತು ಮಾರಾಟದಲ್ಲಿ ದಾಖಲೆಯ ವಹಿವಾಟು ನಡೆಸಲು ಸಾಧ್ಯವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ಸಮ್ಮೇಳನಗಳ ಸಂದರ್ಭದಲ್ಲಿ ಭರವಸೆಯಿಂದ ಪುಸ್ತಕಗಳನ್ನು ಹೊರತರಲು ಸಾಧ್ಯವಾಗಿದೆ. ಇದನ್ನೆಲ್ಲ ಸಾಧ್ಯವಾಗಿಸುವುದಕ್ಕೆ ಕಾರಣರಾದ ಕನ್ನಡ ಪುಸ್ತಕಪ್ರೇಮಿಗಳನ್ನು ಅಭಿನಂದಿಸಬೇಕಾಗಿದೆ.

೨೦೧೦ ಫೆಬ್ರವರಿ ೧೯ ರಿಂದ ೨೧ ರವರೆಗೆ ಮೂರು ದಿನಗಳ ಕಾಲ ಗದಗದಲ್ಲಿ ನಡೆಯಲಿರುವ ೭೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿಗಾಗಿ ೭೬ ಕೃತಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿದೆ. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಒಳಗೊಳ್ಳಲಿರುವ ಈ ಪುಸ್ತಕಗಳ ಆಯ್ಕೆಗೆ ಅವುಗಳ ಗುಣಮಟ್ಟವೇ ಮೂಲ ಬಂಡವಾಳವಾಗಿದೆ. ಪರಿಷತ್ತು ತಮ್ಮ ಒಂದು ಪುಸ್ತಕವನ್ನು ಪ್ರಕಟಿಸಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿ ನಾಡಿನ ಮೂಲೆಮೂಲೆಗಳಿಂದ ಲೇಖಕರು ಪತ್ರ ಬರೆದು ವಿನಂತಿ ಮಾಡಿಕೊಳ್ಳುತ್ತಾರೆ. ಅನೇಕರು ಹಸ್ತಪ್ರತಿಗಳನ್ನೇ ಕಳುಹಿಸಿಕೊಡುತ್ತಾರೆ. ಜಿಲ್ಲಾಧ್ಯಕ್ಷರುಗಳ ಮೂಲಕ ಒತ್ತಾಯ ತರುತ್ತಾರೆ. ಅಂಥ ಮನವಿಗಳು ವರ್ಷವೊಂದರಲ್ಲಿ ಸಾವಿರವನ್ನೂ ಮೀರುತ್ತವೆ. ಹಾಗೆ ಎಲ್ಲ ಪುಸ್ತಕಗಳನ್ನೂ ಮರುಮಾತಿಲ್ಲದೆ ಪ್ರಕಟಿಸುವುದು ಪರಿಷತ್ತಿಗೆ ಸಾಧ್ಯವೂ ಇಲ್ಲ, ಅದು ಸಾಧುವೂ ಅಲ್ಲ. ಪುಸ್ತಕದ ಶಕ್ತಿ–ಯೋಗ್ಯತೆಗಳನ್ನು ಜರಡಿಯಾಡಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವ ಪರಿಶೀಲನಾ ಸಮಿತಿಯ ಅಗ್ನಿದಿವ್ಯವನ್ನು ಎದುರಿಸಿಯೇ ಕೃತಿ ಪ್ರಕಟಗೊಳ್ಳಬೇಕಾಗುತ್ತದೆ. ಈ ಬಾರಿಯ ಅಕ್ಷರಜಾತ್ರೆಯನ್ನು ಅರ್ಥಪೂರ್ಣವಾಗಿ ಸಿಂಗರಿಸುವುದಕ್ಕಾಗಿಯೇ ಸಜ್ಜುಗೊಂಡಿರುವ ಈ ಪುಸ್ತಕಗಳು ಪ್ರೀತಿಸುವ ಸಹೃದಯರ ಮಡಿಲನ್ನು ಸೇರಲಿ, ಅವರ ಜ್ಞಾನಭಂಡಾರವನ್ನು ವಿಸ್ತರಿಸಲಿ, ಅವರನ್ನು ರಸಾನಂದದಲ್ಲಿ ಮುಳುಗಿಸಲಿ ಎಂದು ಹಾರೈಸುತ್ತೇನೆ. ಓದುಗರ ರಚನಾತ್ಮಕ ಸಲಹೆ ಮತ್ತು ಪ್ರತಿಕ್ರಿಯೆಗಳಿಗೆ ಸದಾ ಸ್ವಾಗತವಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.

ಅಧ್ಯಕ್ಷರು

ಮುನ್ನುಡಿ

ನಮ್ಮ ಸುತ್ತಮುತ್ತಲಿರುವ ಪ್ರಾಚೀನ ಸ್ಮಾರಕಗಳು, ಶಿಲಾಶಾಸನಗಳು, ವೀರಕಲ್ಲು-ಮಾಸ್ತಿಕಲ್ಲುಗಳು, ಸಮಾಜದಲ್ಲಿರುವ ಸಂಪ್ರದಾಯಗಳು, ಕಟ್ಟು ಕಟ್ಟಳೆಗಳು, ಮರೆಯಾಗಿರುವ ವ್ಯಕ್ತಿತ್ವಗಳು ತಮ್ಮದೇ ಆದ ಹಿನ್ನೆಲೆಯನ್ನೂ, ಇತಿಹಾಸವನ್ನೂ ಹೊಂದಿರುತ್ತವೆ. ಆದರೆ ಅದಕ್ಕೆ ಸಂಬಂಧಿಸಿದ ವಿವರಗಳು ಎಲ್ಲರಿಗೂ ತಿಳಿದಿರುವುದಿಲ್ಲ. ಆದುದರಿಂದ ಆ ಬಗ್ಗೆ ಹಲವಾರು ಕಟ್ಟು ಕಥೆಗಳೂ, ವದಂತಿಗಳೂ ಹುಟ್ಟಿಕೊಳ್ಳುತ್ತವೆ. ಅವನ್ನೇ ಜನರು ಸತ್ಯವೆಂದು ನಂಬುವ ಅಪಾಯಗಳೂ ಇರುತ್ತವೆ. ಇಂತಹ ಸಂದರ್ಭದಲ್ಲಿ ಇತಿಹಾಸಕಾರನೊಬ್ಬನು ಅವೆಲ್ಲವುಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಇರಬಹುದಾದ ಸತ್ಯಾಸತ್ಯತೆಯನ್ನು ವಿಮರ್ಶಿಸಿ ನೋಡಿ, ಅದಕ್ಕೆ ಸಂಬಂಧಿಸಿದ ಪುರಾವೆ ಮತ್ತು ದಾಖಲೆಗಳನ್ನು ಸಂಗ್ರಹಿಸಿ ಅವುಗಳನ್ನು ಇತಿಹಾಸದ ಚೌಕಟ್ಟಿನೊಳಗೆ ತರಬಹುದು. ಜನಪದರಲ್ಲಿ ಚಾಲ್ತಿಯಲ್ಲಿರುವ ಹಲವಾರು ರೀತಿಯ ಹೇಳಿಕೆ, ನಂಬಿಕೆಗಳ ಪೈಕಿ ಯಥಾರ್ಥವಾದುದು ಯಾವುದು, ಅತ್ಯಂತ ಸಂಭಾವ್ಯ ವಾದುದು ಯಾವುದು ಎಂಬುದನ್ನು ಆತ ತಿಳಿಸಬಲ್ಲ. ಇಂತಹ ಕಾರ್ಯಕ್ರಮದಲ್ಲಿ ಮರೆತು ಹೋಗಿದ್ದ ಹಲವಾರು ಗೌಣ ಹಾಗೂ ನಿರ್ಲಕ್ಷಿಸಲ್ಪಟ್ಟ ವಿಚಾರಗಳು ಬೆಳಕಿಗೆ ಬರುತ್ತವೆ. ಈ ತೆರನಾದ ಒಂದು ಪ್ರಯತ್ನವನ್ನು ಪ್ರಸ್ತುತ "ಇತಿಹಾಸದಲ್ಲಿ ಮರೆತು ಹೋದ ಕನ್ನಡದ ಪುಟಗಳು" ಎಂಬ ಈ ಪುಸ್ತಕದಲ್ಲಿ ಕಾಣಬಹುದು.

ನಾಡಿನ ಪ್ರಸಿದ್ಧ ಕ್ಷೇತ್ರವಾಗಿರುವ ಧರ್ಮಸ್ಥಳದ ಪ್ರಾಚೀನತೆ ಹಾಗೂ ಐತಿಹಾಸಿಕ ಮಹತ್ವದ ಬಗ್ಗೆ ಹಲವಾರು ಹೇಳಿಕೆಗಳಿವೆ. ಶ್ರೀ ಸಾಮಾನ್ಯರಿಗೆ ಅವು ತಿಳಿದೂ ಇವೆ. ಅವುಗಳಲ್ಲಿ ಕೆಲವನ್ನು ಬ್ರಿಟಿಷ್ ಇತಿಹಾಸಕಾರರು ಕೂಡಾ ಸಮರ್ಥಿಸಿದ್ದಾರೆ. ಆದರೆ ಈ ಕ್ಷೇತ್ರದ ಐತಿಹಾಸಿಕತೆಯ ಬಗ್ಗೆ ಅಧಿಕೃತ ದಾಖಲೆಯೊಂದು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಹೆಗ್ಗಡೆ ಹಳ್ಳಿಯಲ್ಲಿ ಶಿಲಾಶಾಸನದ ರೂಪದಲ್ಲಿ ಕಂಡು ಬಂದಿದೆ. ಕೊಡಗಿನ ಪ್ರಸಿದ್ಧ ಅರಸನಾದ ಹಾಲೇರಿ ವಂಶದ ದೊಡ್ಡ ವೀರಪ್ಪವೊಡೆಯನು ಧರ್ಮಸ್ಥಳಕ್ಕೆ ತನ್ನ ರಾಜ್ಯದ ಇಪ್ಪತ್ತೊಂಭತ್ತು ಹಳ್ಳಿಗಳನ್ನು ಉಂಬಳಿಯಾಗಿ ಬಿಟ್ಟ ವಿಚಾರವನ್ನು ತಿಳಿಸುವ ಈ ಶಿಲಾಶಾಸನವು ಸಾಕಷ್ಟು ಹೊಸ ಬೆಳಕನ್ನು ಚೆಲ್ಲುತ್ತದೆ. ಮಾತ್ರವಲ್ಲದೆ ಇದರ ಜತೆಯಲ್ಲಿರುವ ಇನ್ನೊಂದು ಶಿಲಾಶಾಸನವು ಮಂಜುನಾಥ ಸ್ವಾಮಿಯ ಸಂಕೇತ ತ್ರಿಶೂಲ ಮತ್ತು ಡಮರುಗ ಎಂದು ತಿಳಿಸುವ ಮುಖಾಂತರ ಒಂದು ಧಾರ್ಮಿಕ ವಿಷಯವನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತದೆ. ಇದನ್ನು ಸಂಬಂಧಿಸಿದವರೂ, ಆಸಕ್ತರೂ ತಿಳಿದುಕೊಳ್ಳುವ ಅಗತ್ಯವಿತ್ತು. ಈ ಎರಡೂ ವಿಚಾರಗಳನ್ನು ಈ ಪುಸ್ತಕದಲ್ಲಿರುವ ಮೊದಲಿನ ಲೇಖನವು ಯಶಸ್ವಿಯಾಗಿ ನಿರ್ವಹಿಸಿದೆ.

ಮೈಸೂರಿನ ಹುಲಿಯೆಂದು ಕರೆಯಲ್ಪಡುವ ಟೀಪು ಸುಲ್ತಾನ್ ಒಬ್ಬ ಕ್ರೂರ, ಮತಾಂಧನಾದ ವ್ಯಕ್ತಿ, ಹಲವಾರು ಬಲಾತ್ಕಾರದ ಮತಾಂತರ ಕಾರ್ಯಗಳನ್ನು ಕೈಗೊಂಡಿದ್ದ -

ಎಂದು ಸಾಮಾನ್ಯವಾಗಿ ನಂಬಲಾಗಿತ್ತು. ಆದರೆ ಆತನ ಯುದ್ಧಗಳು ಮತ್ತು ಇತರ ಕಾರ್ಯಾಚರಣೆಗಳು ರಾಜಕೀಯ ದೃಷ್ಟಿಯಿಂದ ನಡೆದಿದ್ದುವೇ ಹೊರತು, ಧಾರ್ಮಿಕ ಹಿನ್ನೆಲೆಯಿಂದ ಅಲ್ಲ. ಆತ ಹಿಂದೂ ಧಾರ್ಮಿಕ ಹಿನ್ನೆಲೆಯಿಂದ ಅಲ್ಲ. ಆತ ಹಿಂದೂ ಧಾರ್ಮಿಕ ಸಂಸ್ಥೆಗಳ ಬಗ್ಗೆ ಅಪಾರವಾದ ಗೌರವ, ಪೂಜ್ಯ ಭಾವನೆಯನ್ನು ಹೊಂದಿದ್ದ. ಹೆಚ್ಚಿನ ಸಂಖ್ಯೆಯಲ್ಲಿ ಹಿಂದೂ ಅಧಿಕಾರಿಗಳನ್ನೇ ತನ್ನ ಆಡಳಿತದಲ್ಲಿ ನೇಮಿಸಿಕೊಂಡಿದ್ದ. ತನ್ನ ರಾಜ್ಯದಲ್ಲಿದ್ದ ಹಲವಾರು ಹಿಂದು ದೇವಾಲಯಗಳಿಗೆ ದಾನದತ್ತಿಗಳನ್ನು ಇತ್ತದ್ದೇ ಅಲ್ಲದೇ, ಶ್ರೀರಂಗಪಟ್ಟಣದಲ್ಲಿ ತನ್ನ ಅರಮನೆಯ ಬಳಿಯಲ್ಲೇ ಇದ್ದ ರಂಗನಾಥಸ್ವಾಮಿ ದೇವಾಲಯ, ಗಂಗಾಧರೇಶ್ವರ ದೇವಾಲಯಗಳಲ್ಲಿ ನಿತ್ಯದ ವಿಧಿ ವಿಧಾನಗಳು ಸರಿಯಾಗಿ ನಡೆಯುವಂತೆ ನೋಡಿಕೊಂಡದ್ದು ಮಾತ್ರವಲ್ಲದೆ, ತಾನೂ ಪೂಜಾದಿಗಳಲ್ಲಿ ಪಾಲ್ಗೊಳ್ಳುತ್ತಿದ್ದ. ಸಂಶೋಧನೆಯಿಂದ ತಿಳಿದು ಬರುವ ಇಂತಹ ನೂತನ ವಿಚಾರಗಳನ್ನು "ಟೀಪು ಸುಲ್ತಾನ್ ಹಿಂದೂ ದ್ವೇಷಿಯೆ?" ಎಂಬ ಲೇಖನದಲ್ಲಿ ಲೇಖಕ ವೈ. ಉಮಾನಾಥ ಶೆಣೈರವರು ಸಮರ್ಥವಾಗಿ ಪ್ರಸ್ತುತಪಡಿಸಿದ್ದಾರೆ.

"ರಾಜ ದಂಪತಿಗಳ ದುರಂತ", "ಕಾಡಿನ ಮಧ್ಯದಲ್ಲೊಂದು ಕಲ್ಲಿನ ಕೋಟೆ" ಮತ್ತು "ನಂದಾವರದ ಕರುಣ ಕಥೆ" ಎಂಬ ಲೇಖನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಭಾಗಗಳನ್ನು ಆಳಿದ ಬಂಗ ಅರಸುಮನೆತನವು ಅನುಭವಿಸಿದ ದುಃಖಾಂತ್ಯ ಸನ್ನಿವೇಶಗಳನ್ನು ವಿವರಿಸುತ್ತದೆ. ರಾಜಕೀಯ ಇತಿಹಾಸದಲ್ಲಿ ಸುಖ–ದುಃಖ, ಸೋಲು–ಗೆಲುವುಗಳು ಸಾಮಾನ್ಯವಾದರೂ, ಈ ಲೇಖನಗಳಲ್ಲಿ ಬಂದಿರುವ ಐತಿಹಾಸಿಕ ವಿಚಾರಗಳು ಭಾವನಾತ್ಮಕವಾದ ದುಃಖವನ್ನು ಓದುಗರಲ್ಲಿ ಉಂಟುಮಾಡುತ್ತವೆ. ರಾಜ ದಂಪತಿಗಳ ದುರಂತದ ಬಗ್ಗೆ ಈಗಾಗಲೇ ಒಂದು ಕಾದಂಬರಿಯೂ ರಚಿಸಲ್ಪಟ್ಟಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೇತ್ರಾವತಿ ನದಿಯ ದಂಡೆಯ ಮೇಲಿರುವ ನಂದಾವರವು ಕಂಡ ಏಳುಬೀಳು ಹಾಗೂ ಕೊನೆಯ ದುಃಖಕರ ಸನ್ನಿವೇಶವನ್ನು ಇಂದಿಗೂ ಇಲ್ಲಿರುವ ಅಲ್ಪಸ್ವಲ್ಪ ಸ್ಮಾರಕಗಳು ಸಾರಿ ಹೇಳುತ್ತವೆ. ಇವೆಲ್ಲವನ್ನೂ ಕಿವಿಕೊಟ್ಟು ಕೇಳಿ, ಜಿಲ್ಲೆಯ ಇತಿಹಾಸದ ಬಗ್ಗೆ ಇರುವ ಪುಸ್ತಕಗಳನ್ನು ಓದಿ, ಮರೆತುಹೋಗಿದ್ದ ಇತಿಹಾಸವನ್ನು ಪುನಃ ಓದುಗರ ಮುಂದಿಡಲಾಗಿದೆ. ಇದೊಂದು ಶ್ಲಾಘನೀಯ ಪ್ರಯತ್ನ. ಕಾಡು ತುಂಬಿದ್ದು ಇಂದು ಹಿಂಸ್ರ ಕಾಡು ಮೃಗಗಳ ನೆಲೆ ಬೀಡಾಗಿರುವ ಶಿಶಿಲ ಅರಣ್ಯದಲ್ಲಿರುವ ಈ ಕೋಟೆಗೆ ಸಂಬಂಧಿಸಿ ಪ್ರವಾಸ ಕೈಗೊಂಡು, ಅದರ ಇತಿಹಾಸ– ಹಿನ್ನೆಲೆಗಳನ್ನು ಶೋಧಿಸಿ, ಅದರ ಬಗ್ಗೆ ಹೊಸ ಬೆಳಕು ಚೆಲ್ಲಲಾಗಿದೆ. ಮರೆತೇ ಹೋಗಿರುವ ವಿಷಯವೊಂದು ಬೆಳಕಿಗೆ ಬಂದಿದೆ.

ಪ್ರಸಿದ್ಧ ಸಂಸ್ಕೃತ ಕವಿ ಲೀಲಾಶುಕನು ತಮ್ಮ ರಾಜ್ಯದವನೆಂದು ದಕ್ಷಿಣ ಭಾರತದ ಎಲ್ಲಾ ರಾಜ್ಯಗಳ ವಿದ್ವಾಂಸರು ಹೇಳಿಕೊಂಡರೂ ಆತನ ಜೀವಿತದ ವಿವರಗಳು, ಕುರುಹುಗಳು ಮತ್ತು ಆತನ ಸ್ತುತಿಗಳಲ್ಲಿ ಅಡಗಿರುವ ಕವಿಯ ಅಂತರ್ಯದ ಆಶಯಗಳನ್ನು ಗಮನಿಸಿ, ಆತನು ಕರ್ನಾಟಕದವನೆಂದು ನಿರ್ಣಯಿಸಿದ್ದು ಇಲ್ಲಿ ತುಂಬಾ ಮನೋಜ್ಞವಾಗಿದೆ. ಮುಗ್ಧ ಭಕ್ತನಾದ ಬೇಡರ ಕಣ್ಣಪ್ಪನು ತನ್ನ ಕಣ್ಣುಗಳನ್ನು ಕಿತ್ತು ಶಿವನಿಗರ್ಪಿಸಿ ಕರ್ನಾಟಕದಲ್ಲಿ ಪ್ರಸಿದ್ಧನಾದರೂ, ಆತನ ನೆಲೆಯ ಬಗ್ಗೆ, ಯಥಾರ್ಥತೆಯ ಬಗ್ಗೆ ನಾವು ಮರೆತಿದ್ದೇವೆ. ಆದರೆ ಅದನ್ನು ಹುಡುಕುತ್ತಾ

ಹೋದ ಡಾ। ವೈ. ಉಮಾನಾಥ ಶೆಣ್ಯೆಯವರು, ಆತನ ಆ ಶಿವದೇವಾಲಯವನ್ನೂ, ಆತನೇ ಸ್ವತಃ ಪೂಜೆಗೊಳ್ಳುವ ದೇವಾಲಯವನ್ನೂ ಕಂಡು ಹುಡುಕಿ, ನಮಗೆಲ್ಲರಿಗೂ ಪರಿಚಯಿಸಿದ್ದಾರೆ.

"ಕರ್ನಾಟಕದ ಬಾಹುಬಲಿಗಳು", "ನೇತ್ರಾವತಿ", "ಕುಡಾಲ ದೇಶಸ್ಥ ಗೌಡ ಬ್ರಾಹ್ಮಣರು" ಎಂಬ ಲೇಖನಗಳು ಈ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿವೆ. ಇವು ಲೇಖಕರ ವ್ಯಾಪಕ ಅಧ್ಯಯನವನ್ನು ಸೂಚಿಸುತ್ತವೆ. ಜೊತೆಗೆ ಕೆಲವು ಹೊಸ ವಿಚಾರಗಳನ್ನು ಬೆಳಕಿಗೆ ತರುತ್ತವೆ. ನಾವು ತೀರಾ ಸಾಮಾನ್ಯವಾದ ವಿಚಾರಗಳೆಂದು ಭಾವಿಸಿಕೊಂಡರು ಕೂಡಾ ಲೇಖನಗಳನ್ನು ಓದಿದಾಗ ಕೆಲವು ನೂತನ ಮಾಹಿತಿಗಳು ಸಿಗುತ್ತವೆ. ಆದುದರಿಂದ ಈ ಲೇಖನಗಳು ಸಂಗ್ರಾಹ್ಯವಾದುವುಗಳು ಮತ್ತು ಮನನೀಯವಾದುವುಗಳು. ಪ್ರಾದೇಶಿಕ ಇತಿಹಾಸಕ್ಕೆ ಈ ಲೇಖನ ಸಂಗ್ರಹವು ಒಂದು ಉಪಯುಕ್ತ ಕೊಡುಗೆ ಎನ್ನಲು ಅಡ್ಡಿ ಇಲ್ಲ. ಇಲ್ಲಿ ಪ್ರತಿಪಾದಿಸಲ್ಪಟ್ಟ ವಿಚಾರಗಳು ಬಹಳ ವಿಸ್ತಾರವಾದ ಪ್ರದೇಶಕ್ಕೆ ಸಂಬಂಧ ಪಟ್ಟಿದ್ದರೂ, ಅವು ಎಲ್ಲವೂ ಕರ್ನಾಟಕದ ಹಿನ್ನೆಲೆ ಉಳ್ಳವು ಹಾಗೂ ಕರ್ನಾಟಕಕ್ಕೆ ಸಂಬಂಧಿಸಿದವುಗಳು. ಆದುದರಿಂದ ನಮ್ಮ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು ಇವುಗಳನ್ನು ಪ್ರಕಟಿಸುವುದು ತಕ್ಕುದಾದುದೇ ಆಗಿದೆ. ಇದು ಕನ್ನಡ ಸಾರಸ್ವತ ಲೋಕಕ್ಕೆ, ಕನ್ನಡ ಸಾಹಿತ್ಯಕ್ಕೆ ಮತ್ತು ಇತಿಹಾಸಕ್ಕೆ ಒಂದು ಅಮೂಲ್ಯ ಕೊಡುಗೆಯಾಗಿದೆ.

ಡಾ। ವೈ. ಉಮಾನಾಥ ಶೆಣ್ಯೆಯವರು ನಮ್ಮ ಮೈಸೂರು ವಿಶ್ವವಿದ್ಯಾನಿಲಯ ಇತಿಹಾಸ ವಿಭಾಗದ ವಿದ್ಯಾರ್ಥಿ. ಇತ್ತೀಚೆಗೆ ನನ್ನ ಮಾರ್ಗದರ್ಶನದಲ್ಲಿ ಪ್ರಸಿದ್ಧ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಸಂಶೋಧನೆ ನಡೆಸಿ, ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಈಗಾಗಲೇ ಇತಿಹಾಸದ ಮೇಲೆ ನಾಲ್ಕಾರು ಪುಸ್ತಕಗಳನ್ನೂ, ಹತ್ತಾರು ಲೇಖನಗಳನ್ನೂ ಬರೆದು ಪರಿಚಿತರಾಗಿದ್ದಾರೆ. ಇತಿಹಾಸವನ್ನು ವ್ಯಾಪಕವಾಗಿ ಅಧ್ಯಯನ ಮಾಡಬೇಕೆಂಬ ಮತ್ತು ಅದನ್ನು ಇತರರಿಗೆ ತಿಳಿಸಬೇಕೆಂಬ ಇವರ ಆಸಕ್ತಿ ಇನ್ನಷ್ಟು ಬೆಳೆಯಲಿ, ಇದಕ್ಕೆ ಸೂಕ್ತ ಪ್ರೋತ್ಸಾಹ ಸಿಗಲಿ ಮತ್ತು ಇವರಿಂದ ಇಂತಹ ಕೃತಿಗಳು ಇನ್ನು ಮುಂದೆಯೂ ಪ್ರಕಾಶನಗೊಳ್ಳಲಿ ಎಂದು ಆಶಿಸುತ್ತೇನೆ ಮತ್ತು ಹಾರೈಸುತ್ತೇನೆ.

ಮೈಸೂರು
9–6–2004

ಡಾ। ಮಾದೇಗೌಡ
ಮೈಸೂರು ವಿಶ್ವವಿದ್ಯಾನಿಲಯ

ಲೇಖಕನ ಮಾತು

ಇತಿಹಾಸವು ಒಂದು ಮಹಾಸಾಗರವಿದ್ದಂತೆ. ನಿನ್ನೆಯವರೆಗೆ ನಡೆದ ಎಲ್ಲಾ ಘಟನೆಗಳು ಅದರಲ್ಲಿ ತುಂಬಿರುತ್ತವೆ. ಅವುಗಳ ಪೈಕಿ ನಮಗೆ ಬೇಕಾದುದನ್ನು ಅಥವಾ ಪ್ರಸ್ತುತವಾದುದನ್ನು ಹುಡುಕಿ ತೆಗೆದು, ಅದರ ಸತ್ಯಾಸತ್ಯತೆಯನ್ನು ವಿಮರ್ಶಿಸಿ, ತೂಗಿ ನೋಡಿ, ಅದನ್ನು ಯಥಾರ್ಥ ರೂಪದಲ್ಲಿ ಸಮಾಜದ ಮುಂದಿಡುವುದು ಒಬ್ಬ ಇತಿಹಾಸಕಾರನ ಕೆಲಸ. ಅಲ್ಲಿ ಸ್ವಆಸ್ಕ್ತಿಯ ಛಾಯೆ ಇರಬಾರದು. ರಾಗದ್ವೇಷಗಳ ಕಶ್ಮಲವಿರಬಾರದು. ಒಬ್ಬ ಗಣಿತಜ್ಞನಂತೆ ನಿರ್ದಿಷ್ಟತೆಯಿಂದ ತಿಳಿಸುವ ಶ್ರದ್ಧೆ ಇರಬೇಕು.

ನಮ್ಮ ಕರ್ನಾಟಕದಲ್ಲಿ ಅಂತಹ ಸಾವಿರಾರು ಉತ್ತಮೋತ್ತಮ ಘಟನೆಗಳು, ವ್ಯಕ್ತಿಗಳು ಮತ್ತು ಸ್ಥಳಗಳು ಇವೆ. ಇವುಗಳನ್ನು ಸಂಶೋಧನೆಯ ದೃಷ್ಟಿಯಿಂದ ಅಧ್ಯಯನ ಮಾಡುವುದು ಒಂದು ಕುತೂಹಲದ, ಪರಿಶ್ರಮದ ಹಾಗೂ ಆನಂದದ ಕೆಲಸ. ಸಾಕಷ್ಟು ಆಕರಗಳಿಲ್ಲದೆ ಅಧ್ಯಯನದಲ್ಲಿ ನಿರಾಸೆ ಉಂಟಾದರೂ, ಅದನ್ನು ಮುಂದುವರಿಸಿಕೊಂಡು ಹೋಗಬೇಕು. ಅಂತಹ ಪ್ರಯತ್ನದ ಫಲವೇ ನನ್ನ ಈ ಲೇಖನಗಳ ಸಂಗ್ರಹ " ಇತಿಹಾಸದಲ್ಲಿ ಮರೆತು ಹೋದ ಕನ್ನಡದ ಪುಟಗಳು".

ಇದರ ಅಂತರಿಕ ಮೌಲ್ಯ, ಪ್ರತಿಪಾದನೆಗೊಂಡ ವಿಷಯ ಮತ್ತು ಉಪಯುಕ್ತತೆಯನ್ನು ಮನಗಂಡ ನಮ್ಮ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು ಇದನ್ನು ಪ್ರಕಟಿಸಲು ಮುಂದೆ ಬಂದಿದೆ. ಪರಿಷತ್ತಿನ ಪ್ರಕಟಣಾ ಸಮಿತಿಯ ಎಲ್ಲಾ ಮಾನ್ಯ ಸದಸ್ಯರಿಗೆ ಮತ್ತು ಅಧ್ಯಕ್ಷರಾದ ಶ್ರೀ ಹರಿಕೃಷ್ಣ ಪುನರೂರುರವರಿಗೆ ನಾನು ಇದಕ್ಕಾಗಿ ತುಂಬಾ ಆಭಾರಿಯಾಗಿದ್ದೇನೆ. ಇದು ಇತಿಹಾಸಕ್ಕೆ ಅವರು ಮಾಡಿರುವ ಮಹದುಪಕಾರವೆಂದು ನಾನು ಅವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ನನ್ನ ಈ ಶ್ರಮವನ್ನು ಪ್ರೋತ್ಸಾಹಿಸಲೆಂದು ಶುಭಾಶಯಪೂರ್ವಕವಾದ ಮುನ್ನುಡಿಯೊಂದನ್ನು ನನ್ನ ಗುರುಗಳಾದ ಮೈಸೂರು ವಿಶ್ವವಿದ್ಯಾನಿಲಯ ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಡಾ। ಮಾದೇಗೌಡರು ಬರೆದು ಕೊಟ್ಟಿದ್ದಾರೆ. ಮೌಲಿಕವಾದ ವಿಮರ್ಶೆಯೊಂದಿಗೆ ಸದಾಶಯವನ್ನು ವ್ಯಕ್ತಪಡಿಸಿದ್ದಾರೆ. ನಾನು ಅವರಿಗೆ ಗೌರವ ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ನನ್ನ ಸಕಲ ಸತ್ ಶ್ರಮಗಳನ್ನು ಪ್ರಸನ್ನತಾ ಭಾವದಿಂದ ಸದಾ ಹರಸುವವರು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಪದ್ಮಭೂಷಣ ಡಾ। ಡಿ. ವೀರೇಂದ್ರ ಹೆಗ್ಗಡೆಯವರು. ನನ್ನ ಸಾಧನೆಗಳಿಗೆ ಆಶ್ರಯ ಮತ್ತು ಪ್ರೋತ್ಸಾಹ ಮಾತ್ರವಲ್ಲದೆ ಜೀವನಕ್ಕೆ ಹೊಸ ಬೆಳಕನ್ನು ಕೊಟ್ಟವರು.

ಅದೇ ರೀತಿ ಕಾಲೇಜಿನ ನನ್ನ ಕರ್ತವ್ಯ ನಿರ್ವಹಣೆಯಲ್ಲಿ ತಮ್ಮ ಸಂತೃಪ್ತಿಯನ್ನು ವ್ಯಕ್ತ ಪಡಿಸುವುದರ ಜತೆಗೆ ಸಾಹಿತ್ಯಿಕ ಕೆಲಸಗಳಿಗೂ ಪ್ರೋತ್ಸಾಹ ನೀಡುತ್ತಿರುವವರು ನಮ್ಮ ಕಾಲೇಜಿನ ಪ್ರಿನ್ಸಿಪಾಲರಾದ ಡಾ। ಬಿ. ಯಶೋವರ್ಮರು. ಇವರಿಬ್ಬರಿಗೂ ನಾನು ಪ್ರಣಾಮ ಪೂರ್ವಕವಾದ ಕೃತಜ್ಞತೆಗಳನ್ನರ್ಪಿಸುತ್ತೇನೆ.

ನನ್ನ ಸಾಧನೆಗಳಲ್ಲಿ ತನ್ನ ಶ್ರಮವನ್ನೂ ಸೇರಿಸಿ ಕೊಳ್ಳುತ್ತಿರುವ ನನ್ನ ಪತ್ನಿ ಶ್ರೀಮತಿ ವಿಜಯಕುಮಾರಿ ಶೆಣೈ ಕೆ. ಎ. ಎಸ್. ಇವಳಿಗೆ ನನ್ನ ಮೆಚ್ಚುಗೆಯನ್ನೂ ಕೃತಜ್ಞತೆಯನ್ನೂ ಸೂಚಿಸುತ್ತೇನೆ.

ಉಜಿರೆ — **ವೈ. ಉಮಾನಾಥ ಶೆಣೈ**

10–6–2004

ಪರಿವಿಡಿ

ಶ್ರೀ ಧರ್ಮಸ್ಥಳದ ಇತಿಹಾಸಕ್ಕೆ ಸಂಬಂಧಿಸಿದ ಎರಡು ಅಮೂಲ್ಯ ಶಾಸನಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಶ್ರೀ ಕ್ಷೇತ್ರವು ಪ್ರಸಿದ್ಧವಾದ ಒಂದು ಯಾತ್ರಾ ಸ್ಥಳ. ಇಲ್ಲಿರುವ ಶ್ರೀ ಮಂಜುನಾಥ ದೇವಾಲಯ ಸಂದರ್ಶನೀಯವಾದುದು. ಇಲ್ಲಿ ಪ್ರಸನ್ನವಾಗಿ ನೆಲಸಿರುವ ಧರ್ಮ ದೇವತೆಗಳಾದ ಕಾಳರಾಹು, ಕಾಳರ್ಕಾಯಿ, ಕುಮಾರಸ್ವಾಮಿ ಮತ್ತು ಕನ್ಯಾಕುಮಾರಿ ಹಾಗೂ ಅಣ್ಣಪ್ಪ ಸ್ವಾಮಿಯಿಂದಾಗಿ ಈ ಕ್ಷೇತ್ರವು ಬಲಿಷ್ಠವಾದ ದೈವ ಸಾನ್ನಿಧ್ಯವಿರುವ ಕೇಂದ್ರವೆಂದು ನೂರಾರು ವರ್ಷ ಗಳಿಂದ ಪ್ರಸಿದ್ಧ ವಾಗಿದೆ. ಜೀವನದಲ್ಲಿ ಸಂಕಷ್ಟಕ್ಕೊಳಗಾದ ಜನರು ಇಲ್ಲಿಗೆ ಹರಕೆ ಕಾಣಿಕೆಗಳನ್ನು ಒಪ್ಪಿಸಿ, ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳುತ್ತಿದ್ದರು. ವಿವಿಧ ರೀತಿಯ ಸೇವೆಗಳಿಂದ ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳುತ್ತಿದ್ದರು.

ಅದರಿಂದಾಗಿ ಸಮಾಜದ ವಿಭಿನ್ನ ಜನರೂ, ಮತಸ್ಥರೂ ಈ ಕ್ಷೇತ್ರಕ್ಕೆ ವಿವಿಧ ರೀತಿಯ ಕಾಣಿಕೆ ದೇಣಿಗೆಗಳನ್ನು ಸಲ್ಲಿಸುತ್ತಿರುವುದನ್ನು ಕಾಣಬಹುದು. ಹಲವಾರು ಸಾಧು ಸಂತರೂ, ತಪಸ್ವಿಗಳೂ ಇಲ್ಲಿಗಾಗಮಿಸಿ, ಇಲ್ಲಿಯ ದೈವ ದೇವರುಗಳನ್ನು ಪೂಜಿಸಿ, ಕೃತಾರ್ಥರಾಗಿರುವರು. ಕರ್ನಾಟಕದ ಅನೇಕ ರಾಜ ಮಹಾರಾಜರೂ ಇಲ್ಲಿಗೆ ವಿಶಿಷ್ಟವಾದ ಕಪ್ಪಕಾಣಿಕೆಗಳನ್ನು ಕೊಟ್ಟಿದ್ದರು. ಅಂತಹವುಗಳಲ್ಲಿ ಕರ್ನಾಟಕದ ಪ್ರಸಿದ್ಧ ರಾಜ್ಯಗಳ ಪೈಕಿ ಒಂದಾದ ಕೊಡಗು ರಾಜ್ಯವನ್ನಾಳಿದ ಹಾಲೇರಿ ವಂಶದ ಅರಸರಾದ ದೊಡ್ಡ ವೀರಪ್ಪ ಒಡೆಯ (ಕ್ರಿ.ಶ. 1687 -1736) ಶ್ರೀ ಕ್ಷೇತ್ರಕ್ಕೆ ಕೊಟ್ಟ ಭೂದಾನದ ಕಾಣಿಕೆಗಳು ಬಹಳ ಮುಖ್ಯವಾದವುಗಳು. ಈ ಐತಿಹಾಸಿಕ ವಿಷಯವನ್ನು ತಿಳಿಸುವ ಎರಡು ಶಿಲಾಶಾಸನಗಳು ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲೂಕು ಕೂಡಿಗೆ ಬಳಿಯ ಹೆಗ್ಗಡೆ ಹಳ್ಳಿಯ ಒಂದು ಹಳೇ ಬಸವನ ಗುಡಿಯ ಬಳಿಯಲ್ಲಿ ಮಣ್ಣು ಪಾಲಾಗಿ ಬಿದ್ದಿದ್ದವು. ಅವುಗಳನ್ನು ಮೇಲಕ್ಕೆ ತೆಗೆದು, ಒರೆಸಿ, ತೊಳೆದು ಓದಿ ನೋಡಿದಾಗ ಈ ಸಂಬಂಧವಾದ ಹಲವಾರು ಹೊಸ ವಿಷಯಗಳು ಬೆಳಕಿಗೆ ಬಂದವು. ಅವುಗಳ ಪೈಕಿ ಒಂದರಲ್ಲಿ ಧರ್ಮಸ್ಥಳದ ಶ್ರೀ ಮಂಜುನಾಥ ದೇವರ ಹೆಸರಿರುವುದು ಕಂಡು ಬಂತು. ಕೊಡಗನ್ನು ಆಳಿದ ಅರಸರ ಪೈಕಿ ಅತ್ಯಂತ ಪ್ರಸಿದ್ಧನಾದ ಹಾಲೇರಿ ವೀರಪ್ಪ ಒಡೆಯನ ವಿಷಯ ತಿಳಿದುಬಂತು.

ನಮಗೆ ಇತಿಹಾಸದಿಂದ ತಿಳಿದು ಬರುವಂತೆ ಕೊಡಗನ್ನು ಆಳಿದ ರಾಜ ವಂಶಗಳ ಪೈಕಿ, ಹಾಲೇರಿ ವಂಶವು ಬಹಳ ಮುಖ್ಯವಾದುದು. ಇಕ್ಕೇರಿ ನಾಯಕರ ವಂಶದ ರಾಜ

ವರದಿ ಮಾಡಿದ್ದರು. ಆದರೆ ಕಾಲಾನುಕ್ರಮದಲ್ಲಿ ಅದು ಪುನಃ ಮಣ್ಣು ಪಾಲಾಗಿ ಹೋಗಿತ್ತು. (ಎಪಿಗ್ರಾಫಿಯಾ ಕರ್ನಾಟಕ, ಸಂಪುಟ 1, 1972, ಸಂಖ್ಯೆ 41 ಪುಟ 30-31

ಎರಡೂವರೆ ಅಡಿ ಎತ್ತರ ಹಾಗೂ ಎರಡೂವರೆ ಅಡಿ ಅಗಲದ ಈ ಶಿಲಾ ಶಾಸನವನ್ನು ಇತ್ತೀಚೆಗೆ ಮಣ್ಣಿನಿಂದ ಮೇಲಕ್ಕೆತ್ತಿ ನಿರ್ಮಲಗೊಳಿಸಿ ಓದಿ ನೋಡಿದಾಗ ಅದರಲ್ಲಿ ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿಯ ಹೆಸರಿರುವುದನ್ನು ಕಂಡು ಪರಮಾಶ್ಚರ್ಯವೂ, ಅತ್ಯಾನಂದವೂ ಆಯಿತು. ಅದರ ಒಟ್ಟು ೧೦ ಪಂಕ್ತಿಗಳಲ್ಲಿ ಈ ರೀತಿ ಬರೆದಿರುವುದು ಕಂಡು ಬಂತು.

1) ಶ್ರೀ ಸ್ವಸ್ತಿ ಶ್ರೀ ವಿಜಯಾಭ್ಯು

2) ದೆಯ ಶಾಲಿವಾಹನ ಶಕದವರು

3) ಷ ೧೬೫೨ನೆಯ ಸಾಧಾರಣ ಸಂವತ್ಸರದ

4) ಮಾಘ ಬ ೨ ಭಾರ್ಗವಾವಾರ

5) ದಲ್ಲು ಕುಡುಮದ ಮಂಜುನಾಥಸ್ವಾಮಿ

6) ಯವರ ಸಂನಿಧಿಯಲ್ಲು ನಡವ ದೇವತ ಸೇವೆ

7) ಬಗ್ಯೆ ಹಾಲೇರಿ ವೀರಪೂಡೆರು । ಸರ್ವಮಂನ್ಯ

8) ಸಂಕೇತವಾಗಿ ಬಿಟ್ಟ ಹೆಗ್ಗಡಹಳ್ಳಿ ಸಿರಿಂಗಾಲ ॥

9) ಉಭಯ ಗಡಿಗೆ ಸಲುವ ಉಪಗ್ರಾಮ ೨೯ನು ಸಿಲಾ

10) ಸ್ತಾಪಿತ ಮಾಡಿಸಿ ಬಿಟ್ಟು ಕೊಟ್ಟದು

ಶ್ರೀ ಶ್ರೀ

ಈ ಶಾಸನದನುಸಾರ ಶ್ರೀ ಶ್ರೀ ದೊಡ್ಡ ವೀರಪ್ಪ ಒಡೆಯನು ಅವನ ಆಳ್ವಿಕೆಯ ಕೊನೆಯ ಭಾಗದ ಶಾಲಿವಾಹನ ಶಕ 1652ನೇ ಸಾಧಾರಣ ಸಂವತ್ಸರದ ಮಾಘ ಬಹುಳ ಬಿದಿಗೆ (ಕ್ರಿ. ಶ. 1731ನೇ ಇಸವಿ ಫೆಬ್ರುವರಿ ತಿಂಗಳ 12ನೇ ತಾರೀಕು ಶುಕ್ರವಾರ)ಯಂದು ಕುಡುಮದ (ಧರ್ಮಸ್ಥಳ) ಶ್ರೀ ಮಂಜುನಾಥ ಸ್ವಾಮಿ ಸನ್ನಿಧಿಯಲ್ಲಿ ನಡೆಯುವ ಪೂಜಾದಿ ಕಾರ್ಯಗಳಿಗಾಗಿ ತನ್ನ ರಾಜ್ಯದ ಇಪ್ಪತ್ತೊಂಭತ್ತು ಗ್ರಾಮಗಳನ್ನು ದಾನವಾಗಿ ಬಿಟ್ಟುಕೊಟ್ಟಿದ್ದ.

ತನ್ನ ಪ್ರಜೆಗಳಿಗೆ ರಕ್ಷಣೆ, ಸುಖಶಾಂತಿ, ಸಮೃದ್ಧಿಗಳನ್ನು ಒದಗಿಸಿಕೊಟ್ಟಿದ್ದ. ಕೊಡಗು ರಾಜ್ಯದ ಜನ ಜೀವನದ ಮೇಲೆ ಶಾಶ್ವತ ಪರಿಣಾಮ ಬೀರುವಂತಹ ಕಾರ್ಯಕ್ರಮಗಳನ್ನು ಕೈಗೊಂಡಿದ್ದ. ಇದರಿಂದಾಗಿ ಈ ದೊಡ್ಡ ವೀರಪ್ಪ ಒಡೆಯನು ಕೊಡಗು ರಾಜ್ಯದ ಇತಿಹಾಸದಲ್ಲಿ ಚಿರಸ್ಥಾಯಿಯಾದ ಕೀರ್ತಿಯನ್ನು ಪಡೆದಿದ್ದಾನೆ.

ಜನನಾಯಕರ ದಂಗೆ

ಆದರೆ ಅಂದಿನ ರಾಜಕೀಯದಲ್ಲಿ ಕುಹಕಗಳಾಗಿದ್ದ ಬೆಪ್ಪು ನಾಡಿನ ಉತ್ತಮ ನಾಯಕನೆಂಬ ಜನನಾಯಕ ಈತನ ವಿರುದ್ಧ ದಂಗೆ ಎದ್ದ. ಮೈಸೂರಿನ ಮಹಾರಾಜ ಚಿಕ್ಕದೇವರಾಜ (ಕ್ರಿ.ಶ. 1672 -1704)ರೂ, ಕೇರಳದ ಕೋಟಿಂಗಡಿ ವೀರವರ್ಮ ಅರಸನೂ ಈತನ ಮೇಲೆ ದಂಡೆತ್ತಿ ಬರುವಂತೆ ಮಾಡಿ ದಾಂಧಲೆಯೆಬ್ಬಿಸಿದ.

ಇಂತಹ ಸನ್ನಿವೇಶದಲ್ಲಿ ಈ ಪ್ರಬಲರಾದ ಶತ್ರುಗಳನ್ನು ದಮನಿಸಲು ದೊಡ್ಡ ವೀರಪ್ಪ ಒಡೆಯ ಹಲವಾರು ವರ್ಷಗಳ ಕಾಲ ಸೆಣಸಾಡಬೇಕಾಯಿತು. ಈ ಸೋಲು ಗೆಲುವುಗಳ ಹೊಯ್ದಾಟದಲ್ಲಿಯೂ ದೇವರ ಮೇಲೆ ಅಚಲವಾದ ವಿಶ್ವಾಸವನ್ನಿರಿಸಿದ್ದ ವೀರಪ್ಪ ಒಡೆಯನು ಅಂದಿನ ಕಾಲದಲ್ಲಿ ವಿಶೇಷ ದೈವ ಸಾನ್ನಿಧ್ಯದಿಂದಾಗಿ ನಿಗ್ರಹಾನುಗ್ರಹ ಶಕ್ತಿ ಸಂಪನ್ನವಾಗಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿಗೆ ವಿಶೇಷವಾದ ಹರಕೆ ಹೊತ್ತುಕೊಂಡು ಅವರೊಡನೆ ಕಾದಾಡತೊಡಗಿದ. ಈ ರಣರಂಗದಲ್ಲಿ ಕೇರಳದ ವೀರವರ್ಮ ಅರಸ ತನ್ನ ಸೈನ್ಯದಲ್ಲಿ ಉಂಟಾದ ಅಪಾರ ಕಷ್ಟನಷ್ಟಗಳಿಂದಾಗಿ ಹಿಮ್ಮೆಟ್ಟಬೇಕಾಯಿತು. ಯದ್ಧಭೂಮಿಯನ್ನು ಬಿಟ್ಟು ತೊಲಗಬೇಕಾಯಿತು. ಸೈನ್ಯ, ರಾಜ್ಯ ಮತ್ತು ಸಂಪತ್ತಿನಲ್ಲಿ ಎಷ್ಟೋ ಪಾಲು ಹಿರಿಯರಾಗಿದ್ದ ಚಿಕ್ಕದೇವರಾಜ ಒಡೆಯರು ತಮ್ಮ ವಿವೇಚನೆಯನ್ನು ಉಪಯೋಗಿಸಿ ಯುದ್ಧವನ್ನು ನಿಲ್ಲಿಸಿದರು. ಮಾತ್ರವಲ್ಲ ದೊಡ್ಡ ವೀರಪ್ಪ ಒಡೆಯನನ್ನು ಭೇಟಿಯಾಗಿ, ಮುಂದೆ ಸೌಹಾರ್ದದಿಂದಿರುವುದಾಗಿ ವಚನವಿತ್ತರು. ಈ ಅಪೂರ್ವ ಯಶಸ್ಸಿಗೆ ಕಾರಣವಾದ ಶ್ರೀ ಧರ್ಮಸ್ಥಳದ ಮಹಿಮೆಗೆ ಶರಣಾಗಿ, ತನ್ನ ರಾಜ್ಯದ ೨೯ ಉಪಗ್ರಾಮಗಳನ್ನು ಆ ಕ್ಷೇತ್ರಕ್ಕೆ ದಾನವಾಗಿ ಸಮರ್ಪಿಸಿದ. ಇದು ಎಲ್ಲರಿಗೂ ತಿಳಿದಿರಲಿ ಎಂಬ ದೃಷ್ಟಿಯಿಂದ ಒಂದು ಶಿಲಾಶಾಸನವನ್ನು ಬರೆಸಿ ಅದನ್ನು ದಾನಕೊಟ್ಟ ಸ್ಥಳವಾದ ಅದೇ ಹೆಗ್ಗಡ ಹಳ್ಳಿಯಲ್ಲಿದ್ದ ಬಸವನ ಗುಡಿಯ ಬದಿಯಲ್ಲಿ ನೆಟ್ಟು ಬಿಟ್ಟಿದ್ದ. ಇಲ್ಲಿರಿಸಿದರೆ, ಈ ಶಿಲಾಶಾಸನವು ಸುರಕ್ಷಿತವಾಗಿಸಬಹುದೆಂದೂ ಆಶಿಸಿದ್ದ. ಸುಮಾರು 150 ವರ್ಷಗಳ ಬಳಿಕ ಇದನ್ನು ಕರ್ನಾಟಕಾ ಪ್ರಸಿದ್ಧ ಶಾಸನ ತಜ್ಞರಾಗಿದ್ದ ಬೆಂಜಮಿನ್ ಲೂಯಿ ರೈಸ್‌ರವರು ೧೮೯೦ರ ಸುಮಾರಿಗೆ ಓದಿ

ಟೀಪು ಸುಲ್ತಾನ್ ಹಿಂದು ದ್ವೇಷಿಯೇ?

"ಟೀಪು ಸುಲ್ತಾನ್ ಮೈಸೂರಿನ ಹುಲಿ. ಮತಾಂಧನಾದ ಟೀಪುವು ತನ್ನ ರಾಜಕೀಯ ಅಧಿಕಾರವನ್ನು ತನ್ನ ಮತ ಪ್ರಚಾರಕ್ಕೂ, ಬಲಾತ್ಕಾರದ ಮತಾಂತರಕ್ಕೂ, ಬಳಸಿಕೊಂಡ. ಹಿಂದೂ ಪ್ರಜೆಗಳ ಮೇಲೆ ಎಷ್ಟೇ ಕನಿಕರವುಳ್ಳವನಾಗಿದ್ದರೂ ಮಲಬಾರಿನ ನಾಯರ್‌ಗಳ ಮೇಲೆ, ಮಂಗಳೂರಿನ ಕ್ರೈಸ್ತರ ಮೇಲೆ ಹಾಗೂ ಕೊಡಗಿನ ಹಿಂದುಗಳ ಮೇಲೆ ಆತ ಎಸಗಿದ ದೌರ್ಜನ್ಯವನ್ನು ಇತಿಹಾಸದಲ್ಲಿ ಮರೆಯುವಂತಿಲ್ಲ"- ಎಂಬುದು ಒಂದು ವರ್ಗದ ಇತಿಹಾಸಕಾರರ ವಾದ. "ಟೀಪುವಿನ ರಾಜಧಾನಿಯಾದ ಶ್ರೀರಂಗಪಟ್ಟಣದಲ್ಲಿ ಅರಮನೆಯ ಬಳಿಯೇ ಶ್ರೀರಂಗನಾಥ ಸ್ವಾಮಿ, ಶ್ರೀ ನರಸಿಂಹ ಸ್ವಾಮಿ ಹಾಗೂ ಶ್ರೀ ಗಂಗಾಧರೇಶ್ವರ ದೇವಾಲಯಗಳು ಉತ್ತಮ ಸ್ಥಿತಿಯಲ್ಲಿದ್ದುವು. ಬ್ರಾಹ್ಮಣನಾದ ಪೂರ್ಣಯ್ಯನು ಆತನ ದಿವಾನ ನಾಗಿದ್ದ. ಟೀಪುವು ಶೃಂಗೇರಿಯ ಸ್ವಾಮೀಜಿಯವರೊಡನೆ ಸ್ನೇಹಸಂಬಂಧ ಏರಿಸಿಕೊಂಡಿದ್ದ. ಹಲವಾರು ದೇವಾಲಯಗಳಿಗೆ ದಾನದತ್ತಿ ಕೊಟ್ಟಿದ್ದ" ಎಂಬುದು ಇನ್ನೊಂದು ಕಡೆಯ ವಾದ.

ನಿಜವಾಗಿ ಆ ಕಾಲದ ಸಮಕಾಲೀನ ದಾಖಲೆಗಳೂ, ಶಾಸನಗಳೂ, ಟೀಪುವಿನ ಮೇಲಿರುವ ಅಧಿಕೃತ ಇತಿಹಾಸ ಗ್ರಂಥಗಳೂ "ಟೀಪು- ಹಿಂದು ಸಂಬಂಧ"ದ ಕುರಿತು ಬೆಳಕನ್ನು ಚೆಲ್ಲುತ್ತವೆ.

ಟೀಪು ಸುಲ್ತಾನ್ ಕರ್ನಾಟಕದ ಒಬ್ಬ ಸಮರ್ಥ, ಪರಾಕ್ರಮಿ, ಸ್ವಾಭಿಮಾನಿ ಮುಸ್ಲಿಂ ಅರಸ. ತನ್ನ ತಂದೆ ಹೈದರಾಲಿಯಿಂದ ಪಡೆದ ರಾಜ್ಯವನ್ನು ಇನ್ನಷ್ಟು ವಿಸ್ತರಿಸಿ, ಅದನ್ನು ಸುಭದ್ರವಾಗಿ ಕಟ್ಟಿ ಅದಕ್ಕೆ ವಿದೇಶೀಯರಾದ ಇಂಗ್ಲಿಷರಿಂದ ಯಾವುದೇ ಅಪಾಯಗಳು ಬಾರದಂತೆ ರಕ್ಷಿಸಬೇಕೆಂದು ಪಣತೊಟ್ಟು ಅದಕ್ಕಾಗಿ ಹೋರಾಡಿದ ಒಬ್ಬ ಧೀರ. ಧೀಮಂತ ಆಡಳಿತಗಾರ. ತನ್ನ ಯೋಜನೆ ಹಾಗೂ ಕಾರ್ಯಾಚರಣೆಗಳಿಗೆ ಎದುರುಬಂದ ಯಾರನ್ನೇ ಆದರೂ ಆತ ಸಹಿಸುತ್ತಿರಲಿಲ್ಲ. ತನ್ನ ಮೈಸೂರು ರಾಜ್ಯದಲ್ಲಿ ಬಹು ಸಂಖ್ಯೆಯಲ್ಲಿದ್ದ ಹಿಂದುಗಳಿಗಾಗಲೀ, ಅಂದು ಇಡೀ ಭಾರತದ ಸುಮಾರು ಅರ್ಧಭಾಗವನ್ನೇ ಕಬಳಿಸಿ, ಅದರ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದ ಇಂಗ್ಲೀಷರಿಗಾಗಲೀ, ಭಾರತದ ವಿಭಿನ್ನ ಭಾಗಗಳನ್ನು ಆಳುತ್ತಿದ್ದ ಯಾವುದೇ ಪ್ರಬಲ ಮುಸ್ಲಿಂ ಅರಸನಿಗಾಗಲೀ ಟೀಪು ಸುಲ್ತಾನನು ಹೆದರುತ್ತಿರಲಿಲ್ಲ. "ನರಿಯಾಗಿ ನೂರು ವರ್ಷ ಜೀವನ ಮಾಡುವುದಕ್ಕಿಂತ ಸಿಂಹವಾಗಿ ಒಂದು ದಿನ ಬಾಳುವುದು ಶ್ರೇಯಸ್ಕರ" ಎನ್ನುತ್ತಿದ್ದ ಟೀಪು.

ಇದೇ ಬಸವನ ಗುಡಿಯ ಬಳಿಯಲ್ಲಿ ಇನ್ನೊಂದು ಚಿಕ್ಕ ಶಿಲಾಶಾಸನವು ದೊರಕಿದ್ದು ಅದು ಹೀಗೆಂದು ಹೇಳುತ್ತದೆ.

1) ಶ್ರೀ ಕುಡುಮದ ಮಂ

2) ಜುನಾಥಸ್ವಾಮಿಯ

3) ವರ ಸಂಕೇಥ ಶ್ರೀ

(ಕೆಳಗೆ ಡಮರುಗ ತ್ರಿಶೂಲಗಳ ಆಕೃತಿ ಇದೆ)

ಬೇರೆ ಬೇರೆ ಆಯುಧಗಳನ್ನು ಕೈಯಲ್ಲಿ ಹಿಡಿದಿರುವಂತೆ ತೋರಿಸಿ ಶಿವನ ಬೇರೆ ಬೇರೆ ರೂಪಗಳನ್ನು ತೋರಿಸಲಾಗುತ್ತದೆ. ಆದರೆ ಹಿಂದೂ ಪುರಾಣಗಳ ಆಧಾರವಿಲ್ಲದ ಹಾಗೂ ಶಿವನ ಸಹಸ್ರ ನಾಮಗಳಲ್ಲಿ ಉಲ್ಲೇಖಿಸಲ್ಪಡದ ಶ್ರೀ ಮಂಜುನಾಥ ಸ್ವಾಮಿಯ ಕೈಯಲ್ಲಿ ಯಾವ ಆಯುಧಗಳನ್ನು ತೋರಿಸಬೇಕು ಎಂಬ ಬಗ್ಗೆ ಪ್ರಾಯಶಃ ಆ ಕಾಲದಲ್ಲಿ ಸ್ಪಷ್ಟವಾದ ಅಭಿಪ್ರಾಯವಿರಲಿಲ್ಲ. ಈ ಸಂಧಿಗ್ಧತೆಯಲ್ಲಿ ರಾಜನಾದವನು ತನ್ನ ಪ್ರಜಾ ಜನರಿಗೆ ಸ್ಪಷ್ಟವಾದ ನಿರ್ದೇಶನ ಕೊಡಬೇಕಾದ್ದುದರಿಂದ ವೀರಪ್ಪ ಒಡೆಯನು ಈ ಶಾಸನದಲ್ಲಿ ಸ್ಪಷ್ಟವಾಗಿ ಮಂಜುನಾಥ ಸ್ವಾಮಿಯ ಆಯುಧಗಳು ಡಮರುಗ ಮತ್ತು ತ್ರಿಶೂಲ ಎಂದು ಹೇಳಿರುವನು ಮತ್ತು ಅವುಗಳ ಆಕೃತಿಗಳನ್ನು ರೇಖಿಸಿರುವನು. ಇದು ಆತನ ಶಾಸ್ತ್ರಾಭ್ಯಾಸವನ್ನೂ ಆತನಿಗೆ ಧರ್ಮದ ಸ್ಪಷ್ಟತೆಯ ಮೇಲಿದ್ದ ಆಸಕ್ತಿಯನ್ನೂ ತಿಳಿಸುತ್ತದೆ. ಈ ವಿಶೇಷವಾದ ದಾನ ಹಾಗೂ ಈ ಶಾಸ್ತ್ರ ವಿವರಣೆಯಿಂದ ದೊಡ್ಡ ವೀರಪ್ಪ ಒಡೆಯನು ಧರ್ಮಸ್ಥಳದ ಇತಿಹಾಸದಲ್ಲಿ ಚಿರಸ್ಥಾಯಿಯಾದ ಉನ್ನತ ಸ್ಥಾನವನ್ನು ಹೊಂದಿರುವನು. ಈತನ ವ್ಯಕ್ತಿತ್ವ ಸಾಧನೆಗಳು ಕರ್ನಾಟಕ ಇತಿಹಾಸದಲ್ಲಿಯೂ ಬಹಳ ಸುಂದರವಾಗಿ ನಿರೂಪಿತವಾಗಿವೆ.

ಬ್ರಿಟಿಷ್ ಇತಿಹಾಸಕಾರರ ದಾಖಲೆಗಳು

ಆದುದರಿಂದಲೇ ವಿಲ್ಕ್ಸ್ ಎಂಬ ಇತಿಹಾಸಕಾರನು ತನ್ನ 'ಮೈಸೂರಿನ ಇತಿಹಾಸ'ವೆಂಬ ಗ್ರಂಥದಲ್ಲಿ ಟೀಪು ಸುಲ್ತಾನನ ಮತಾಂತರದ ಯತ್ನಗಳನ್ನು ಬಹು ವಿಧವಾಗಿ ವರ್ಣಿಸುತ್ತಾ ಕೊನೆಯಲ್ಲಿ ಆತನು "ಒಬ್ಬ ಪರಮತ ಅಸಹಿಷ್ಣುವಾದ ಮತಾಂಧ, ಧಾರ್ಮಿಕ ಕೊಲೆಗಳು ಕೇವಲ ಇತಿಹಾಸದಲ್ಲಿ ಮಾತ್ರ ಉಳಿದಿದ್ದಾಗ ತನ್ನ ಕಾಲದಲ್ಲಿ ಅತ್ಯಂತ ಭೀಕರ ಧಾರ್ಮಿಕ ಕೊಲೆಗಳನ್ನು ಮಾಡಿಸಿದ" ಎಂದು ಹೇಳಿದ್ದಾನೆ.

1785ರಲ್ಲಿ ಟೀಪು ಮೊಗಲ್ ಚಕ್ರವರ್ತಿಗೆ ಬರೆದ ಒಂದು ಪತ್ರದಲ್ಲಿ ಈ ರೀತಿ ಬರೆದಿದ್ದ: "ದೈವ ಸಹಾಯದಿಂದ ಮತ್ತು ದೇವರ ಆಶೀರ್ವಾದದಿಂದ ನಮ್ಮ ಮತದ ಶತ್ರುಗಳನ್ನು ಪೂರ್ಣವಾಗಿ ಕೊನೆಗೊಳಿಸಿ ನಾಶಗೊಳಿಸುವುದನ್ನು ಪ್ರಾರಂಭಿಸುವುದು ಈಗಿನ ನನ್ನ ಇನ್ನೊಂದು ಬಾರಿಯ ಸಾವಧಾನದ ನಿರ್ಧಾರ."

1784ನೆಯ ಇಸವಿಯ ಮಧ್ಯಭಾಗದಲ್ಲಿ ನರಗುಂದದ ದೇಸಾಯಿಗಳ ಮೇಲೆ ಟೀಪುವಿನ ಸೈನ್ಯವು ಪ್ರಬಲವಾದ ಮುತ್ತಿಗೆ ಹಾಕಿದರೂ ಅದು ಸ್ವಾಧೀನವಾಗದಿದ್ದಾಗ ಟೀಪುವು ಅಲ್ಲಿಯ ಸೈನ್ಯಾಧಿಕಾರಿಗಳಿಗೆ ಬರೆದ ಪತ್ರದ ಮುಖ್ಯಾಂಶವು ಹೀಗಿದೆ. "ನರಗುಂದವನ್ನು ದೂಳೀಪಟಮಾಡುವ ಸನ್ನಿವೇಶ ನಿಮಗೆ ಒದಗಿ ಬಂದಾಗ ಅಲ್ಲಿರುವ ಪ್ರತಿಯೊಂದು ಜೀವಿಯನ್ನು-ಗಂಡಾಗಲೀ, ಹೆಣ್ಣಾಗಲೀ, ಮುದಿಯಾಗಲೀ, ತರುಣ ವಾಗಲೀ 'ಮಗು, ನಾಯಿ, ಬೆಕ್ಕು ಅಥವಾ ಬೇರೆ ಯಾವುದೇ ಆಗಲೀ, ಕಾಲಾ ಪಂಡಿತ ಒಬ್ಬನನ್ನು ಬಿಟ್ಟು ಖಡ್ಗಕ್ಕೆ ಬಲಿ ಕೊಡಬೇಕು...."

ಇನ್ನೊಮ್ಮೆ ಕೊಡಗನ್ನು ಮುತ್ತಿದಾಗ ಟೀಪು ಅಲ್ಲಿ ತನ್ನ ಅಧಿಕಾರಿಯೊಬ್ಬನಿಗೆ ಹೀಗೆಂದು ಆದೇಶವನ್ನು ಕೊಟ್ಟನು: "ನೀವು ಕೊಡಗರ ಮೇಲೆ ಸಾರ್ವತ್ರಿಕ ಆಕ್ರಮಣ ಮಾಡಬೇಕು. ಮತ್ತು ಅವರೆಲ್ಲರನ್ನು ಕೊಂದ ನಂತರ ಅಥವಾ ಬಂಧಿಸಿದ ನಂತರ ಸತ್ತವರನ್ನೂ ಬಂಧಿತರನ್ನೂ ಅವರ ಹೆಂಗಸು ಮತ್ತು ಮಕ್ಕಳೊಡನೆ ಮುಸ್ಲಿಮರನ್ನಾಗಿ ಮಾಡಬೇಕು." ಆದುದರಿಂದ ಈ ಸಂದರ್ಭಗಳಲ್ಲಿ ಟೀಪುವು ಹಿಂದು ದ್ವೇಷಿಯೆಂದು ಕಂಡು ಬರುತ್ತಾನೆ. ಆದರೆ ಇಲ್ಲಿ ರಾಜಕೀಯ ಕಾರಣಗಳೇ ಪ್ರಬಲವಾದ ಕಾರಣಗಳೆಂಬುದೂ ಸತ್ಯ.

ನಿಸ್ಸಹಾಯಕನಾದಾಗ ಟೀಪುವು ತನ್ನ ಸ್ಥಾನ ಭದ್ರತೆಗಾಗಿ ಯಾವಾಗಲೂ ಮೈಸೂರು ರಾಜ್ಯದ ಹಾಗೂ ನೆರೆ ರಾಜ್ಯಗಳ ರಾಜರುಗಳ ಸಹಾಯವನ್ನು ಅಪೇಕ್ಷಿಸುತ್ತಿದ್ದ. ಬ್ರಿಟಿಷರ ಭೀತಿಯಿಂದ ಅವರ ಪಕ್ಷ ವಹಿಸುತ್ತಿದ್ದ. ಅನೇಕ ರಾಜರು ಟೀಪುವಿನ ಪಕ್ಷಕ್ಕೆ ಬರಲು ಒಪ್ಪುತ್ತಿರಲಿಲ್ಲ. ಇದನ್ನು ಮಾತ್ರ ಟೀಪುವಿಗೆ ಸಹಿಸಲಾಗುತ್ತಿರಲಿಲ್ಲ. ತನ್ನ ಅಧಿಕಾರವು ಅಂಥವರ ಮೇಲೆ ಸ್ಥಾಪಿತವಾಗುವವರೆಗೂ ಅವರೊಡನೆ ಯುದ್ಧ ಮಾಡುತ್ತಿದ್ದ.

ಟೀಪು ಸುಲ್ತಾನನಿಗೆ ತನ್ನ ರಾಜ್ಯದ ರಕ್ಷಣೆಯೇ ಒಂದು ಪ್ರಬಲ ಸಮಸ್ಯೆಯಾಗಿತ್ತು. ಅದಕ್ಕೆ ಹಾನಿಯೊಡ್ಡುವ ಇಂಗ್ಲಿಷರನ್ನು ಭಾರತದಿಂದಲೇ ಓಡಿಸಬೇಕೆಂದು ನಿರ್ಧರಿಸಿದ್ದ. ಅದಕ್ಕಾಗಿ ವಿವಿಧ ಉಪಾಯಗಳನ್ನು ಹೂಡಿದ್ದ. ಮರಾಠರೊಡನೆ, ಹೈದರಾಬಾದಿನ ನಿಜಾಮನೊಡನೆ, ಹಾಗೂ ಕೆಲವು ಹಿಂದೂ ರಾಜರೊಡನೆ ಒಪ್ಪಂದಗಳನ್ನು ಮಾಡಿ ಕೊಂಡ. ಆ ಕಾಲದಲ್ಲಿ ಭಾರತದಲ್ಲಿ ಇನ್ನೊಂದು ಯುರೋಪಿಯನ್ ಶಕ್ತಿಯಾಗಿ ಬೆಳೆದಿದ್ದ ಫ್ರೆಂಚರ ಸಹಾಯ ಪಡೆಯಲಿಕ್ಕಾಗಿ ಫ್ರಾನ್ಸ್ ದೇಶದಲ್ಲಿ ತನ್ನ ಪ್ರಬಲ ಶಕ್ತಿಯೊಂದಿಗೆ ಉದಯೋನ್ಮುಖನಾಗಿದ್ದ ನೆಪೋಲಿಯನ್‌ನೊಡನೆ ಪತ್ರ ವ್ಯವಹಾರವನ್ನು ಮಾಡ ತೊಡಗಿದ. ನೆಪೋಲಿಯನನು ತಾನು ಮೈಸೂರಿಗೆ ಬಂದು ಇಂಗ್ಲಿಷರ ವಿರುದ್ಧವಾಗಿ ಟೀಪುವಿಗೆ ಸಹಾಯ ಮಾಡುವುದಾಗಿಯೂ ತಿಳಿಸಿದ್ದ. ಈ ಮಾತಿನಂತೆ ಎಲ್ಲಾ ಸಿದ್ಧತೆ ಗಳನ್ನು ಮಾಡಿಕೊಂಡು ನೆಪೋಲಿಯನನ ದಂಡಾಧಿಕಾರಿಯೊಬ್ಬನು ತನ್ನ ಸೈನ್ಯದೊಂದಿಗೆ ಭಾರತಕ್ಕೆ ಬರುವ ತನ್ನ ಪ್ರಯಾಣದಲ್ಲಿ ಪರ್ಸಿಯಾದವರೆಗೂ ಬಂದಿದ್ದ. (ಜುಲೈ 1798)

ಮಾತ್ರವಲ್ಲದೆ, ಅಫಘಾನಿಸ್ತಾನದ ಚಕ್ರವರ್ತಿ ಶಹ ಝುಮಾನ್‌ನನ್ನು ಭಾರತಕ್ಕೆ ಬರುವಂತೆಯೂ ಇಲ್ಲಿಗೆ ಬಂದು ಡೆಲ್ಲಿಯಲ್ಲಿದ್ದ ಮೊಗಲ್ ಚಕ್ರವರ್ತಿಯನ್ನು ಬ್ರಿಟಿಷರ ಕಪಿ ಮುಷ್ಟಿಯಿಂದ ವಿಮುಕ್ತಗೊಳಿಸುವಂತೆ (ತನ್ನ ಸಹಾಯಕ್ಕಾಗಿ)ಯೂ ಟೀಪು ಪ್ರಾರ್ಥಿಸಿಕೊಂಡ. ಶಹ ಝುಮಾನನು ಕಾಬೂಲನ್ನು ಬಿಟ್ಟು ದೆಹಲಿಗೆ ಬರುತ್ತಾ 1798ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ಲಾಹೋರನ್ನು ತಲುಪಿದ.

ಟೀಪುವಿನ ಈ ಕಾರ್ಯಾಚರಣೆಗಳು ಇಂಗ್ಲಿಷರಲ್ಲಿ ಆತನ ಬಗ್ಗೆ ಇನ್ನಷ್ಟು ದ್ವೇಷವನ್ನು ಹೆಚ್ಚಿಸಿದವು. "ಭಾರತವನ್ನು ಛಿದ್ರಗೈಯಲು ಫ್ರೆಂಚರೆಂಬ ಇನ್ನೊಂದು ಯುರೋಪಿಯನ್ ಶಕ್ತಿಯನ್ನೂ, ಅಫಘಾನರನ್ನೂ ಭಾರತಕ್ಕೆ ಬರಮಾಡಿಕೊಂಡು ಇಲ್ಲಿಯ ಹಿಂದುಗಳಿಗೆ ಇನ್ನಷ್ಟು ಅಶಾಂತಿ, ಅನಿಶ್ಚಿತತೆ ಹಾಗೂ ಅಪಾಯಗಳು ಉಂಟಾಗುವಂತೆ ಮಾಡಿದ"ನೆಂಬ ಆಪಾದನೆಯನ್ನೂ ಹೊರಿಸಿದರು. ಆತನನ್ನೊಬ್ಬ ಹಿಂದು ದ್ವೇಷಿಯೆಂದೂ, ಮತಾಂಧ ನೆಂದೂ ಚಿತ್ರಿಸಿದರು. ಸಮಕಾಲೀನರಾದ ಕೆಲವು ಬ್ರಿಟಿಷ್ ಇತಿಹಾಸಕಾರರು ದಾಖಲಿಸಿ ಕೊಂಡಿರುವಂತೆ ತನ್ನನ್ನು ವಿರೋಧಿಸಿ ಸೋತ ರಾಜರಿಗಾಗಲೀ, ಸೈನಿಕರಿಗಾಗಲೀ ಟೀಪು ಸುಲ್ತಾನನು ತೀವ್ರವಾದ ಶಿಕ್ಷೆಯನ್ನು ಕೊಡುತ್ತಿದ್ದ. ಶ್ರೀರಂಗಪಟ್ಟಣದಲ್ಲಿ ವಿಶೇಷವಾಗಿ ನಿರ್ಮಿಸಲಾಗಿದ್ದ ನೆಲಮಾಳಿಗೆಯಲ್ಲಿ ಸೋತ ಸೈನಿಕರಿಗೆ ಅರೆಮಣೆ ಶಿಕ್ಷೆಯನ್ನು ಕೊಡಲಾ ಗುತ್ತಿತ್ತು. ವಿರೋಧ ಪಕ್ಷದ ಸೈನಿಕರ ಕೈ ಕಾಲುಗಳನ್ನು ಕಟ್ಟಿ ಆನೆಗಳ ಸಹಾಯದಿಂದ ದೊರಗು ನೆಲದ ಮೇಲೆ ಎಳೆಸಿ ಅವರು ಕೊನೆಗಾಣುವುದನ್ನು ನೋಡಲಾಗುತ್ತಿತ್ತು. ಕೆಲವರನ್ನು ಹುಲಿ ಪಂಜರಗಳಲ್ಲಿ ಅವುಗಳ ಆಹಾರಕ್ಕಾಗಿ ಎಸೆಯಲಾಗುತ್ತಿತ್ತು.

ಇನ್ನೊಂದೆಡೆಯಿಂದ,ರಂಗಾನಾಯರ್ ಎಂಬ ಕೊಡಗಿನ ಜನನಾಯಕನೊಬ್ಬನು ಟೀಪುವಿನ ದಾಳಿಯ ಸಮಯದಲ್ಲಿ ಭೂಗತನಾಗಿದ್ದು ಕೆಲವು ಸಮಯದ ನಂತರ ಸಮಾಜದಲ್ಲಿ ತನ್ನ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ತಾನೇ ಇಸ್ಲಾಂ ಮತವನ್ನು ಸ್ವೀಕರಿಸಿದನೆಂಬುದಾಗಿ ಟೀಪು ಸುಲ್ತಾನನ ಆಸ್ಥಾನ ಇತಿಹಾಸಕಾರನಾದ ಹುಸೇನ್ ಆಲಿಖಾನ್ ಕಿರ್ಮಾನಿಯು ಹೇಳುತ್ತಾನೆ.

ಟೀಪು ಸುಲ್ತಾನನ ಈ ಮತಾಂತರಗಳಿಗೆ ಕಾರಣಗಳು ಮೂರು: ಒಂದನೆಯ ದಾಗಿ, ತನ್ನ ಎದುರಾಳಿಗಳನ್ನು ಮತಾಂತರಗೊಳಿಸುವ ಮೂಲಕ ಶಿಕ್ಷಿಸುವುದಕ್ಕಾಗಿ. ಎರಡನೆಯ ದಾಗಿ, ತನ್ನ ಮತಕ್ಕೆ ಸೇರಿಸುವುದರಿಂದ ಆ ಜನರ ವಿಧೇಯತೆಯನ್ನೂ, ಸಹಕಾರವನ್ನೂ ಪಡೆಯಬಹುದೆಂಬ ಆಡಳಿತಗಾರನ ಗುಣದಿಂದ. ಮೂರನೆಯದಾಗಿ ಅಂತಹವರನ್ನು ತನ್ನ ಮತಕ್ಕೆ ಸೇರಿಸುವ ಮೂಲಕ ತನ್ನ ಮತದ ಅನುಯಾಯಿಗಳ ಸಂಖ್ಯೆಯನ್ನು ವೃದ್ಧಿಸಲಿಕ್ಕಾಗಿ.

ಹಿಂದೂ ದೇವಾಲಯಗಳಿಗೆ ದತ್ತಿ - ಕಾಣಿಕೆ

ಟೀಪು ಸುಲ್ತಾನನು ಮಲಬಾರಿನ ನಾಯರ್ ಜನರನ್ನು ಮತಾಂತರಗೊಳಿಸಿದ ಎಂಬಷ್ಟೇ ಪ್ರಬಲವಾದ ರೀತಿಯಲ್ಲಿ ಅವನ ಹಿಂದು ಮೈತ್ರಿಯನ್ನು ತೋರಿಸಿದ ಉದಾಹರಣೆಗಳಿವೆ. ಕೇರಳದ ಪ್ರೊಫೆಸರ್ ಮೊಹಿದ್ದೀನ್ ಷಹಾ ಹೇಳುವಂತೆ ಟೀಪು ಸುಲ್ತಾನನು ಮಲಬಾರಿನಲ್ಲಿ ಬ್ರಾಹ್ಮಣರಿಗೂ, ಹಿಂದೂ ದೇವಾಲಯಗಳಿಗೂ ಆಶ್ರಯ ವನ್ನು ಕೊಟ್ಟಿದ್ದನು. 1789ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ಟೀಪುವು ತಿರುವಾಂಕೂರಿನ ಮುಖಾಂತರ ಹಾದುಹೋಗುವಾಗ ಒಡಕ್ಕುನ್ನಾಥನ್ ದೇವಾ ಲಯದಿಂದ ತನ್ನ ಊಟ ತಯಾರಿಕೆಗೆ ಬೇಕಾದ ಪಾತ್ರೆಗಳನ್ನು ಎರವಲಾಗಿ ತಂದು ಅವನ್ನು ಹಿಂತಿರುಗಿಸುವಾಗ ಅವುಗಳೊಡನೆ ದೇವಾಲಯಕ್ಕೆ ಕಂಚಿನ ದೀಪವೊಂದನ್ನು ಕಾಣಿಕೆಯಾಗಿ ಕೊಟ್ಟ. ಈ ಪ್ರದೇಶದ ವಿವಿಧ ದೇವಾಲಯಗಳ ದಾಖಲೆಗಳು ಟೀಪು ಸುಲ್ತಾನನು ಕೊಟ್ಟಿದ್ದ ವಿವಿಧ ದಾನದತ್ತಿಗಳ ಕುರಿತು ವಿವರಗಳನ್ನೀಯುತ್ತವೆ.

ಪ್ರಸಿದ್ಧವಾದ ಗುರುವಾಯೂರು ವೈಷ್ಣವ ದೇವಾಲಯಕ್ಕೆ ಟೀಪು ಸುಲ್ತಾನನು ಇದೇ ಸಮಯದಲ್ಲಿ ತನ್ನ ರಾಜ್ಯದಿಂದ 504 ಎಕ್ರೆ ಜಮೀನನ್ನು ಉಂಬಳಿಯಾಗಿ ಬಿಟ್ಟಿದ್ದ. ಅದರಂತೆ ಪೊನ್ನಾನಿ ತಾಲೂಕಿನ ವೈಲತ್ತೂರಿನ ಬಳಿಯಿರುವ ತರುವಂಚಿ ಕುಲಂನಲ್ಲಿರುವ ಶಿವಾಲಯಕ್ಕೆ 212 ಎಕ್ರೆ ಜಮೀನನ್ನು ತನ್ನ ರಾಜ್ಯದಿಂದ ಉಂಬಳಿ ಕೊಟ್ಟ. ಹಾಗೆಯೇ ಅದೇ ಪೊನ್ನಾನಿ ತಾಲೂಕಿನ ಕದಿಕಾರ್ ಎಂಬಲ್ಲಿದ್ದ ಪ್ರಸಿದ್ಧ ವೈದಿಕ ಶ್ರೀಕುಮಾರನ್ ನಂಬೂದರಿಪಾಡ್ ಎಂಬವನಿಗೆ 20 ಎಕ್ರೆ ಭೂಮಿಯನ್ನು ಕೊಟ್ಟ. ಈ ಉದಾಹರಣೆಗಳು ಟೀಪು ಸುಲ್ತಾನನು ಕೇರಳದ ಆ ಭಾಗದಲ್ಲಿ ಕೊಟ್ಟ ದಾನ ದತ್ತಿಗಳಲ್ಲಿ ಕೆಲವು ಮಾತ್ರ.

ಈ ಯುದ್ಧಗಳು ಕೇವಲ ಹಿಂದೂ ರಾಜರ ಮೇಲೆ ಮಾತ್ರ ಸೀಮಿತವಾಗಿರಲಿಲ್ಲ. ಯಾರು ಒಪ್ಪಂದಗಳ ಮುಖಾಂತರ ಪಕ್ಷ ವಹಿಸಿ ಸಹಕರಿಸುತ್ತಿದ್ದರೋ, ಅವರಿಗೆ ಟೀಪುವು ಎಂದೂ ತೊಂದರೆ ಕೊಡುತ್ತಿರಲಿಲ್ಲ. ಆದರೆ ತನ್ನ ಮತದವರೇ ಆದರೂ ಈತನ ರಾಜಕೀಯ ತತ್ವಕ್ಕೆ ಒಪ್ಪದಿದ್ದರೆ ಅಂತಹವರ ಮೇಲೆ ಯುದ್ದ ಸಾರಿ ಸರಿಯಾಗಿ ಶಿಕ್ಷಿಸುತ್ತಿದ್ದ. ಉದಾಹರಣೆಗೆ ಮಲಬಾರಿನ ಮಾಪಿಳ್ಳೆಗಳು. ಕಡಪಾ, ಕರ್ನೂಲ್ ಮತ್ತು ಸವಣೂರಿನ ನವಾಬರು ಮುಸ್ಲಿಮರಾಗಿದ್ದರೂ ಹಿಂದುಗಳಿಗೆ ಕೊಡುವ ಶಿಕ್ಷೆಗಳಿಗಿಂತ ಒಂದಿಷ್ಟೂ ಕಡಿಮೆಯಾಗದಂತಹ ಶಿಕ್ಷೆಯನ್ನು ಅವರಿಗೆ ಕೊಟ್ಟಿದ್ದ. ಆದುದರಿಂದ ಈತನ ಯುದ್ಧಗಳು ಹಾಗೂ ಶಿಕ್ಷೆಗಳು ಧಾರ್ಮಿಕ ತಳಹದಿಯ ಮೇಲೆ ನಿರ್ಣಯವಾಗಿರದೆ, ರಾಜಕೀಯ ಹಿನ್ನೆಲೆಯಲ್ಲಿ ನಿರ್ಧರಿಸಲ್ಪಡುತ್ತಿದ್ದವು ಎಂದು ಅರ್ಥವಾಗುತ್ತದೆ.

ಮತಾಂತರದ ಅವಾಂತರ

ಟೀಪು ಸುಲ್ತಾನನು ರಾಷ್ಟ್ರೀಯ ಇತಿಹಾಸರಕಾರರ ತೀವ್ರ ಟೀಕೆಗೆ ಗುರಿ ಯಾಗಿರುವುದು ಆತನು ಮಲಬಾರ್, ಮಂಗಳೂರು ಮತ್ತು ಕೊಡಗುಗಳಲ್ಲಿ ನಡೆಸಿದ ಕಾರ್ಯಾಚರಣೆಗಾಗಿ. 1784ರಲ್ಲಿ ಮಂಗಳೂರನ್ನು ಎರಡನೇ ಬಾರಿಗೆ ವಶಪಡಿಸಿಕೊಂಡ ನಂತರ ಮಂಗಳೂರಿನಲ್ಲಿ ಆಗ ವಾಸಿಸಿಕೊಂಡಿದ್ದ ಸುಮಾರು 30 ಸಾವಿರ ಕ್ರೈಸ್ತರನ್ನು ಬಂಧಿಸಿ ಮೈಸೂರಿಗೆ ಕಳುಹಿಸಿದ. ಯಾಕೆಂದರೆ ಆತನೇ ಹೇಳು ವಂತೆ, ಈ ಕ್ರೈಸ್ತರೂ ಪಶ್ಚಿಮ ಕರಾವಳಿಯುದ್ದಕ್ಕೆ ಹರಡಿದ್ದ ಪೋರ್ಚುಗೀಸರರೂ ಮಂಗಳೂರು ಮತ್ತು ನೆರಕರೆಯ ಊರುಗಳಲ್ಲಿದ್ದ ಮುಸ್ಲಿಮರಿಗೆ ತಮ್ಮ ಮತವನ್ನು ನಿರ್ಭೀತಿಯಿಂದ ಅನುಸರಿಸಿಕೊಂಡು ಬರಲು ಬಿಡುತ್ತಿರಲಿಲ್ಲ. ಇದೇ ಸಮಯದಲ್ಲಿ ಮಂಗಳೂರಿನಲ್ಲಿ ಉಳಿದಿದ್ದ ಹಿಂದುಗಳನ್ನು ಇಸ್ಲಾಂ ಮತಕ್ಕೆ ಮತಾಂತರಿಸಲಾಯಿತು.

ಕೊಡಗಿನಲ್ಲಿ ಟೀಪುವಿನ ವಿರುದ್ಧ ದಂಗೆಗಳಾಗುವಾಗ ಅವರನ್ನು ಇಸ್ಲಾಮಿಗೆ ಬಲಾತ್ಕಾರವಾಗಿ ಮತಾಂತರಗೊಳಿಸುವ ಹೆದರಿಕೆಯನ್ನು ಹುಟ್ಟಿಸಲಾಯಿತು. ಕೆಲವು ಕಡೆಗಳಲ್ಲಿ ಪರಿಸ್ಥಿತಿಯು ಅನಿಯಂತ್ರಿತವಾದಾಗ ಹಲವಾರು ಜನ ನಾಯಕರನ್ನು ಶ್ರೀರಂಗಪಟ್ಟಣಕ್ಕೆ ಕರೆದೊಯ್ದು ಅಲ್ಲಿ ಅವರು ಇಸ್ಲಾಮೀ ರೀತಿಯ ಜೀವನವನ್ನು ನಡೆಸುವಂತೆ ಆಜ್ಞಾಪಿಸಲಾಯಿತು. ಈ ವಿವರಗಳನ್ನು ಬ್ರಿಟಿಷ್ ಇತಿಹಾಸಕಾರರು ತಪ್ಪದೆ ದಾಖಲಿಸಿಕೊಂಡಿದ್ದಾರೆ. ಆದರೆ 'ಸುಲ್ತಾನ್ ಉತ್‌ತವಾರಿಕ್' ಎಂಬ ಗ್ರಂಥವು 70 ಸಾವಿರ ಕೊಡಗರನ್ನು ಮತಾಂತರಗೊಳಿಸಲಾಯಿತು ಎಂದು ಹೇಳಿದೆ. ಆದರೆ ಆಗ ಇಡೀ ಕೊಡಗಿನ ಜನಸಂಖ್ಯೆಯೇ ಅದಕ್ಕಿಂತ ಕಡಿಮೆಯಾಗಿತ್ತು ಎಂಬುದು ಗಮನಿಸಬೇಕಾದ ಅಂಶ.

ಹೆಚ್ಚಿನವು ಟೀಪು ಸುಲ್ತಾನನೇ ಶೃಂಗೇರಿಯ ಸ್ವಾಮೀಜಿಯವರಿಗೆ ಕ್ರಿ. ಶ. 1791 ಮತ್ತು 1798ರ ಅವಧಿಯ ಒಳಗೆ ಬರೆದಿದ್ದ ಪತ್ರಗಳಾಗಿದ್ದವು. ಈ ಪತ್ರಗಳ ಅಧ್ಯಯನದಿಂದ ಹಲವು ವಿಶಿಷ್ಟ ವಿಷಯಗಳು ತಿಳಿದು ಬರುತ್ತವೆ. ಕ್ರಿ. ಶ. 1791ರಲ್ಲಿ ರಘುನಾಥ ರಾವ್ ಪಟವರ್ಧನನ ಮರಾಠ ಅಶ್ವಸೈನ್ಯಾಧಿಕಾರಿಯೊಬ್ಬನು ಶೃಂಗೇರಿಯ ಮೇಲೆ ದಾಳಿ ಮಾಡಿದ. ಬ್ರಾಹ್ಮಣ ಸಮೇತರಾಗಿ ಹಲವಾರು ಜನ ನಿರಪರಾಧಿಗಳನ್ನು ಕೊಂದು ಶೃಂಗೇರಿ ಮಠವನ್ನು ಕೊಳ್ಳೆ ಹೊಡೆದ. ಅಷ್ಟೇ ಅಲ್ಲದೆ, ಶೃಂಗೇರಿಯ ಶ್ರೀ ಶಾರದಾಂಬೆಯ ಮೂರ್ತಿಯನ್ನು ಕಿತ್ತೊಗೆದ. ಈ ದುಷ್ಕೃತ್ಯಗಳಿಂದ ಭೀತರಾದ ಶೃಂಗೇರಿಯ ಸ್ವಾಮಿಗಳು ಟೀಪು ಸುಲ್ತಾನನಿಗೆ ಈ ವಿಷಯವನ್ನು ತಿಳಿಸಿದರು. ಹಿಂದುಗಳ ಈ ಅಮಾನುಷ ಕೃತ್ಯಗಳಿಂದ ಕೋಪಾವಿಷ್ಟನಾದ ಟೀಪು ಸುಲ್ತಾನನು ಆ ಧರ್ಮಪೀಠಕ್ಕೊದಗಿದ ದುಃಸ್ಥಿತಿಗಾಗಿ ದುಃಖಿತನಾಗಿ ಜಗದ್ಗುರುಗಳಿಗೆ ಒಂದು ಪತ್ರವನ್ನು ಬರೆದು ಸಮಾಧಾನ ಗೊಳಿಸಿದ. ಆ ಪತ್ರದಲ್ಲಿ ಒಂದು ಸಂಸ್ಕೃತ ವಾಕ್ಯವು ಈ ರೀತಿ ಇದೆ: "ಹಸದಿಭಿಃ ಕ್ರಿಯತೇ ಕರ್ಮ ರುದಿಭಿರನುಭೂಯತೇ" (ಅಂದರೆ ಜನರು ನೆಗಾಡುತ್ತಾ ತಪ್ಪುಗಳನ್ನು ಮಾಡುತ್ತಾರೆ. ಆದರೆ ಅದರ ಪರಿಣಾಮಗಳನ್ನು ಅಳುತ್ತಾ ಅನುಭವಿಸುತ್ತಾರೆ.)

ಟೀಪು ಸುಲ್ತಾನನು ಶೃಂಗೇರಿಯ ಬಳಿ ಇದ್ದ ತನ್ನ ಬೆದನೂರಿ (ಈಗಿನ ನಗರ)ನ ಅಧಿಕಾರಿಗೆ ಆದೇಶ ಕೊಟ್ಟು, ತತ್ಕ್ಷಣ ಶೃಂಗೇರಿಯ ಸ್ವಾಮೀಜಿಯವರಿಗೆ 200 ಚಿನ್ನದ ನಾಣ್ಯಗಳನ್ನು ಕೊಡಿಸಿದನು. ಕೆಲವು ದಿನಗಳವರೆಗೆ ಖರ್ಚಿಗೆ ಬೇಕಾಗುವಷ್ಟು ಧಾನ್ಯ ವನ್ನೂ, ಇತರ ಸಾಮಾನುಗಳನ್ನೂ ಕೊಡಿಸಿದ. ಕಿತ್ತೊಗೆಯಲ್ಪಟ್ಟಿದ್ದ ಶ್ರೀ ಶಾರದಾಂಬೆಯ ಮೂರ್ತಿಯನ್ನು ಶಾಸ್ತ್ರೋಕ್ತವಾದ ರೀತಿಯಲ್ಲಿ ವೈದಿಕರ ಸಹಾಯದಿಂದ ಪುನರ್ ಪ್ರತಿಷ್ಠಾಪಿಸಿದ. ಈ ಕಾರ್ಯಕ್ರಮದ ಸಂಬಂಧ ದಾನ, ಸಂತರ್ಪಣೆಗಳನ್ನು ಮಾಡಿಸಿ ಸ್ವತಃ ಸ್ವಾಮಿಗಳು ತನ್ನ ಮೈಸೂರು ರಾಜ್ಯದಲ್ಲಿ ಸುಭಿಕ್ಷೆಯುಂಟಾಗುವಂತೆ ಪ್ರಾರ್ಥನೆ ನಡೆಸಬೇಕಾಗಿ ಕೇಳಿಕೊಂಡ. ಈ ಕಾರ್ಯಕ್ರಮದ ಬಳಿಕ ಶೃಂಗೇರೀ ಮಠದಿಂದ ಸುಲ್ತಾನನಿಗೆ ಪ್ರಸಾದವನ್ನೂ, ಶಾಲನ್ನೂ ಗೌರವಯುಕ್ತವಾಗಿ ಕೊಡಲಾಯಿತು. ಇದಕ್ಕೆ ಪ್ರತಿಯಾಗಿ ಟೀಪು ಸುಲ್ತಾನನು ಶ್ರೀ ಶಾರದಾಂಬೆಗೆ ಸೀರೆಯನ್ನೂ, ಸ್ವಾಮಿಗಳಿಗೆ ಒಂದು ಜೊತೆ ಶಾಲುಗಳನ್ನೂ ಕಳುಹಿಸಿಕೊಟ್ಟ.

ಟೀಪು ಸುಲ್ತಾನ ಇನ್ನೊಂದು ಪತ್ರವು 1791ರಲ್ಲಿ ಶೃಂಗೇರಿಯಲ್ಲಿ ನಡೆಯಲಿಕ್ಕಿದ್ದ ಶತಚಂಡಿಜಪ ಮತ್ತು ಸಹಸ್ರಚಂಡಿಜಪ ಎಂಬ ಎರಡು ಧಾರ್ಮಿಕ ಸಮಾರಂಭಗಳಿಗೆ ತಗಲುವ ವೆಚ್ಚದ ಕುರಿತಾಗಿ ಶೃಂಗೇರಿ ಮಠವು ಕಳುಹಿಸಿದ್ದ ವರದಿಗೆ ಟೀಪುವು ತನ್ನ ಒಪ್ಪಿಗೆ ಸೂಚಿಸಿದುದನ್ನು ತಿಳಿಸುತ್ತದೆ. ಅದೇ ಪತ್ರದಲ್ಲಿ ತನ್ನ ಪ್ರಜೆಗಳ ಕಲ್ಯಾಣಕ್ಕಾಗಿ ನಡೆಯಲಿದ್ದ ಆ ಎರಡು ಸಮಾರಂಭಗಳ ಬಗ್ಗೆ ತನ್ನ ಆನಂದವನ್ನು ವ್ಯಕ್ತಪಡಿಸಿದ್ದ. ಅದರಂತೆ ಈ ಕಾರ್ಯಗಳನ್ನು ನಡೆಸುವ ಶೃಂಗೇರಿಯ ಸ್ವಾಮಿಗಳು ಬ್ರಾಹ್ಮಣರಿಗೆ

ಹಿಂದು ಅಧಿಕಾರಿಗಳು

ತನ್ನ ರಾಜ್ಯದಲ್ಲಿ ಹಿಂದುಗಳೇ ಬಹಳ ಸಂಖ್ಯೆಯಲ್ಲಿರುವಾಗ ಅವರನ್ನು ಸಂತೃಪ್ತಿಯಲ್ಲಿಟ್ಟುಕೊಳ್ಳಬೇಕೆಂದೂ, ಅವರ ಸಹಾಯ-ಸಹಕಾರಗಳು ತನ್ನ ಸುಸೂತ್ರ ಆಳ್ವಿಕೆಗೆ ಅಗತ್ಯವೆಂಬುದೂ ಬಹು ಸೂಕ್ಷ್ಮ ಆಡಳಿತಗಾರನಾಗಿದ್ದ ಟೀಪು ಸುಲ್ತಾನನಿಗೆ ತಿಳಿಯದಿರಲಿಲ್ಲ. ಸ್ವಭಾವತಃ ಟೀಪು ಸುಲ್ತಾನನು ತನ್ನ ಮತದವರಾದ ಸ್ವಸಂಬಂಧಿಗಳಿಗಿಂತಲೂ ಹಿಂದುಗಳಲ್ಲೇ ಹೆಚ್ಚು ವಿಶ್ವಾಸವಿರಿಸಿಕೊಂಡಿದ್ದ. ಆದುದರಿಂದಲೇ, ಹಿಂದುವಾಗಿದ್ದ, ಅದರಲ್ಲೂ ಬ್ರಾಹ್ಮಣ ವರ್ಗಕ್ಕೆ ಸೇರಿದ್ದ ಪೂರ್ಣಯ್ಯನನ್ನು ದಿವಾನ ಹುದ್ದೆಯಲ್ಲಿರಿಸಿಕೊಂಡು ತನ್ನ ಅತ್ಯಂತ ನಿಕಟತಿವರ್ತಿಯನ್ನಾಗಿ ಮಾಡಿಕೊಂಡಿದ್ದ.

ಟೀಪು ಸುಲ್ತಾನನ ಹಿಂದೂ ಅಧಿಕಾರಿಗಳು

ಹಿಂದೂ ಅಧಿಕಾರಿಗಳು		ಅವರ ಹುದ್ದೆಗಳು
ದಿವಾನ್ ಪೂರ್ಣಯ್ಯ	:	ದಿವಾನ, ಪ್ರಧಾನಿ
ಕೃಷ್ಣರಾವ್	:	ಖಜಾನೆ
ಶ್ಯಾಮಯ್ಯ ಅಯ್ಯಂಗಾರ್	:	ಅಂಚೆ ಮತ್ತು ಪೊಲೀಸ್ ವಿಭಾಗ
ಶ್ರೀನಿವಾಸ ರಾವ್, ಅಪ್ಪಾಜಿರಾವ್	:	ಆಪ್ತ ಸಲಹೆಗಾರರು, ಸಂಧಿ-ವಿಗ್ರಹಗಳು
ಹರಿದಾಸಯ್ಯ	:	ಕಂದಾಯ
ಮೂಲ್‌ಚಂದ್, ಸುಜನ್‌ರಾವ್ ಮತ್ತು ಮುಕುಂದ ರಾವ್	:	ಮೊಗಲ್ ಆಸ್ಥಾನದಲ್ಲಿ ಟೀಪು ಸುಲ್ತಾನನ ರಾಜಪ್ರತಿನಿಧಿಗಳು
ರಂಗ ಅಯ್ಯಂಗಾರ್ ಮತ್ತು ನರಸಿಂಗ ರಾವ್	:	ಅರಮನೆಯಲ್ಲಿ ಜವಾಬ್ದಾರಿಯುತ ಇತರ ಹುದ್ದೆಗಳು
ನಾಗಪ್ಪಯ್ಯ	:	ಕೊಡಗಿನ ಸೈನ್ಯಾಧಿಕಾರಿ
ರಾಮ ರಾವ್	:	ಅಶ್ವಸೈನ್ಯದ ಮುಖ್ಯಸ್ಥ
ಹರಿಸಿಂಗ್	:	ಅಶ್ವಸೈನ್ಯದ ಹಿರಿಯ ಅಧಿಕಾರಿ
ಶ್ರೀಪತಿ ರಾವ್	:	ಹಿರಿಯ ಸೈನ್ಯಾಧಿಕಾರಿ
ಶಿವಾಜಿ	:	ಮರಾಠಿ ಸೈನ್ಯದ ಅಧಿಕಾರಿ
ನರಸಯ್ಯ ಮುನ್ಶಿ, ಸಂಗಣ ನಾಯ್ಕ	:	ಸೈನ್ಯದ ಇತರ ಹಿರಿಯ ಅಧಿಕಾರಿಗಳು

ಶೃಂಗೇರಿ ಶಾರದಾಪೀಠ ಮತ್ತು ಟೀಪು

ಖ್ಯಾತ ಸಂಶೋಧಕರಾದ ರಾವ್ ಬಹಾದುರ್ ಆರ್. ನರಸಿಂಹಾಚಾರ್ಯರು 1916ರಲ್ಲಿ ಶೃಂಗೇರಿಯ ಮಠದಲ್ಲಿ ಕಂಡು ಹುಡುಕಿದ ಒಂದು ಪುರಾತನ ಪತ್ರಗಳ ಸಂಗ್ರಹದಲ್ಲಿದ್ದ 29 ಪತ್ರಗಳು ಟೀಪು ಸುಲ್ತಾನನಿಗೆ ಸಂಬಂಧ ಪಟ್ಟವುಗಳು. ಅವುಗಳಲ್ಲಿ

ಟೀಪು ಸುಲ್ತಾನನ ಈ ಉದಾರ ಭಾವನೆ ಹಾಗೂ ಹಿಂದೂ ಮೈತ್ರಿ ಕೇವಲ ಶೃಂಗೇರಿ ಪೀಠಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ತನ್ನ ರಾಜ್ಯದಲ್ಲಿದ್ದ ಬೇರೆ ಬೇರೆ ದೇವಾಲಯಗಳಿಗೆ ವಿವಿಧ ರೀತಿಯ ದಾನಗಳನ್ನು ಅವನು ಕೊಟ್ಟಿದ್ದ.

ಕೆಲವು ಇತಿಹಾಸಕಾರರು ಟೀಪು ಸುಲ್ತಾನ ಹಲವಾರು ದೇವಾಲಯಗಳ ಹಾಗೂ ಧಾರ್ಮಿಕ ಸಂಸ್ಥೆಗಳ ಭೂಮಿಯನ್ನು ಅವರಿಂದ ತಪ್ಪಿಸಿ ಸ್ವಾಧೀನ ಪಡಿಸಿಕೊಂಡಿದ್ದನೆಂದು ಟೀಕಿಸಿರುವರು. ನಿಜವಾಗಿಯೂ ಯಾವುದೇ ಅಧಿಕೃತ ದಾಖಲೆಗಳಿಲ್ಲದಿದ್ದ ಭೂಮಿಯನ್ನು ಅನುಭೋಗಿಸಿಕೊಂಡು ಬರುತ್ತಿದ್ದ ಭೂಮಾಲೀಕರಿಂದ ಅವುಗಳನ್ನು ಮಾತ್ರ ತಾನು ಸ್ವಾಧೀನಪಡಿಸಿಕೊಂಡಿದ್ದ. ಅದೇ ಸಂದರ್ಭಗಳಲ್ಲಿ ಆತನು ವೈದಿಕರಿಗೆ ಹೊಸದಾಗಿ ಭೂಮಿಯನ್ನು ದಾನ ಕೊಟ್ಟ ಉದಾಹರಣೆಗಳಿವೆ. ತನ್ನ ರಾಜ್ಯದ ಈಶಾನ್ಯ ಮೂಲೆಯಲ್ಲಿದ್ದ ಪುಷ್ಪಗಿರಿ ಮಠಕ್ಕೆ, ತೂಂಗಪಳ್ಳಿ ಮತ್ತು ಗೊಲ್ಲಪಳ್ಳಿ ಎಂಬ ಎರಡು ಗ್ರಾಮಗಳಿಂದ ಬೊಕ್ಕಸಕ್ಕೆ ಬರುತ್ತಿದ್ದ ಉತ್ಪತ್ತಿಯನ್ನು ಕೊಡುವಂತೆ ತನ್ನ ಕಂದಾಯದ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದ. ಅದರಂತೆ ಕಡಪಾ ಜಿಲ್ಲೆಯ ಕೊತನುಪಾಳ ಗ್ರಾಮವನ್ನು ರಾಮಚಂದ್ರನೆಂಬೊಬ್ಬ ವೈದಿಕನಿಗೆ ಆ ಗ್ರಾಮದ ಬಳಿಯಿದ್ದ ಗಂಜಿಕೋಟೆಯ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಪೂಜೆ ನಡೆಸುವುದಕ್ಕಾಗಿ ಕೊಡಲಾಗಿತ್ತು. ಅದರಂತೆ, ಈಗಿನ ಬಳ್ಳಾರಿ ಜಿಲ್ಲೆಯಲ್ಲಿ ಯಲ್ಲಿರುವ ಕಮಲಾಪುರದ ಕೆಲವು ಜಮೀನುಗಳನ್ನು ವೈದಿಕ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟಿದ್ದ. 1794ರಲ್ಲಿ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿದ್ದ ಮಹಾರಾಜ ಹರಿಪ ಎಂಬ ಬ್ರಾಹ್ಮಣನಿಗೆ ಒಂದು ಸ್ಥಳದ ದತ್ತಿಯನ್ನು ಕೊಟ್ಟಿದ್ದನೆಂದು ತಿಳಿದು ಬರುತ್ತದೆ.

1794ರಲ್ಲಿ ತನ್ನ ಕಂದಾಯದ ಅಧಿಕಾರಿಯಾಗಿದ್ದ ಹರಿದಾಸಯ್ಯ ಎಂಬವನಿಗೆ ದೇವಾದಾಯ ಮತ್ತು ಬ್ರಹ್ಮಾದಾಯವೆಂಬ ಭೂಕಂದಾಯ ಬರುವ ದೇವಾಲಯ ಮತ್ತು ಬ್ರಾಹ್ಮಣರ ಭೂಮಿಯ ಹೊರತು ಇತರ ಎಲ್ಲಾ ಅನಧಿಕೃತ ಭೂಮಿಗಳನ್ನು ಸರಕಾರದ ಸ್ವಾಧೀನ ತಂದುಕೊಳ್ಳಬೇಕೆಂಬ ಆಜ್ಞೆಯನ್ನು ಕೊಟ್ಟಿದ್ದ. ಅದೇ ಸಮಯ ಧರ್ಮಪುರಿ ಎಂಬಲ್ಲಿದ್ದ ನರಸಿಂಹ ಜೋಶಿ ಎಂಬ ವೈದಿಕನಿಗೆ ಪ್ರತಿ ವರ್ಷ 10 ಪಗೋಡ ಎಂಬ ಚಿನ್ನದ ನಾಣ್ಯಗಳನ್ನು ಕೊಡುವಂತೆಯೂ ಟೀಪು ಸುಲ್ತಾನ್ ಆದೇಶವನ್ನು ಕೊಟ್ಟಿದ್ದ.

ಈತನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದ ಕೋಟೆಯೊಳಗೆ ಅರಮನೆಯಿಂದ ಸುಮಾರು 100 ಮೀ. ದೂರದಲ್ಲಿದ್ದ ಶ್ರೀ ರಂಗನಾಥ ಸ್ವಾಮಿ ದೇವಾಲಯದಿಂದ ಕೇಳುತ್ತಿದ್ದ ಘಂಟಾನಾದವನ್ನೂ, ಮಂತ್ರಘೋಷವನ್ನೂ ಬಹು ಗೌರವದಿಂದ ಆಲಿಸುತ್ತಿದ್ದ. ಆ ದೇವಾಲಯಗಳಿಗೆ ಏನೇನೂ ಹಾನಿ ಉಂಟುಮಾಡಲಿಲ್ಲ. ಆದ್ದರಿಂದ ಅವು ಇಂದಿಗೂ ಬಹಳ ಸುಸ್ಥಿತಿಯಲ್ಲಿವೆ. ದೇವಾಲಯದಲ್ಲಿ ನಡೆಯುತ್ತಿದ್ದ ಪೂಜೆಯ

ದಕ್ಷಿಣೆಯನ್ನು ಕೊಡಬೇಕೆಂದೂ ದಿನವಹಿ ಒಂದು ಸಾವಿರ ಜನರಿಗೆ ಊಟವನ್ನು ಹಾಕಬೇಕೆಂದೂ ತಿಳಿಸಿದ್ದ. ಇದಕ್ಕೆ ಬೇಕಾಗಿದ್ದ ಸಕಲ ವಸ್ತುಗಳನ್ನೂ, ಹಣವನ್ನೂ ತನ್ನ ಅಧಿಕಾರಿಗಳಿಂದ ಕೊಡಿಸಿದ್ದ. ಇದರ ನಂತರ ಶೃಂಗೇರಿಗೆ ಬರೆದ ಇನ್ನೊಂದು ಪತ್ರದಲ್ಲಿ ತಾನು ಬೆದನೂರಿನ ಅಧಿಕಾರಿಗೆ ಶ್ರೀ ಶಾರದಾಂಬೆಗಾಗಿ ಒಂದು ಪಲ್ಲಕಿಯನ್ನು ಕಳುಹಿಸುತ್ತಿರುವುದಾಗಿಯೂ ತಿಳಿಸಲಾಗಿತ್ತು. 1792ರಲ್ಲಿ ಬರೆದಿದ್ದ ಇನ್ನೊಂದು ಪತ್ರದಲ್ಲಿ ತಾನು ಸ್ವಾಮಿಗಳ ಉಪಯೋಗಕ್ಕಾಗಿ ಬೆಳ್ಳಿಯ ಹಿಡಿಗಳಿರುವ ಎರಡು ಗಾಳಿ ಬೀಸುವ ಚೌರಿಗಳನ್ನು ಕಳುಹಿಸುತ್ತಿರುವುದಾಗಿ ಟೀಪು ಸುಲ್ತಾನನು ಬರೆದಿದ್ದಾನೆ.

ಈ ಎಲ್ಲಾ ಪತ್ರಗಳನ್ನು ಬರೆಯಲು ಬಳಸಿರುವ ಸುಂದರವಾದ ಹಾಗೂ ಗೌರವ ಸೂಚಕವಾದ ಭಾಷೆಯನ್ನು ಗಮನಿಸಿದರೆ ಟೀಪು ಸುಲ್ತಾನ ಮತಾಂಧನೆಂಬ ಅಥವಾ ಹಿಂದು ದ್ವೇಷಿ ಎಂಬ ಅಸಂಗತ ನಾಮವಿಶೇಷಣವನ್ನು ತೊಡೆದುಹಾಕಬೇಕಾಗುತ್ತದೆ. ತನ್ನ ಅಧೀನ ರಾಜ್ಯದಲ್ಲಿದ್ದ ಶೃಂಗೇರಿಯ ಸ್ವಾಮಿಗಳನ್ನು (ಮೂರನೆಯ ಸಚ್ಚಿದಾನಂದ ಭಾರತೀ ಸ್ವಾಮಿಗಳು) 'ಜಗದ್ಗುರು' ಎಂಬುದಾಗಿ ಸಂಬೋಧಿಸಿರುವುದು ಅವನು ಅವರಿಗೆ ಕೊಡುತ್ತಿದ್ದ ಗೌರವವನ್ನೂ, ಅವನ ಹಿಂದುಪ್ರಿಯತೆಯನ್ನೂ ಸೂಚಿಸುತ್ತದೆ.

ಟೀಪು ಸುಲ್ತಾನನ ಈ ವರ್ತನೆಯನ್ನು ಯುದ್ಧಕಾಲದಲ್ಲಿ ಹಿಂದುಗಳ ಮನ ವೊಲಿಸಲಿಕ್ಕಾಗಿ ಮಾಡಿದ ಜಾಣತನದ ಕಾರ್ಯಗಳೆಂದು ತರ್ಕಿಸಲು ಸಾಧ್ಯವಿದೆ. ಆದರೆ ಈ ಸ್ನೇಹ ಸಂಬಂಧವು ಯಾವುದೇ ಒಂದು ಯುದ್ಧ ಕಾಲಕ್ಕೆ ಮಾತ್ರ ಸೀಮಿತವಾಗಿರದೆ ಟೀಪು ಸುಲ್ತಾನನು 1799ರಲ್ಲಿ ಮರಣ ಹೊಂದುವವರೆಗೂ ಮುಂದುವರಿದಿತ್ತು. ಆ ವರೆಗಿನ ಕಾಲದಲ್ಲಿ ಆಗಾಗ ಸ್ವಾಮಿಗಳ ಆರೋಗ್ಯ ಹಾಗೂ ಶೃಂಗೇರಿಯ ಸ್ಥಿತಿಗತಿಗಳ ಕುರಿತಾಗಿ ವಿಚಾರಿಸುತ್ತಾ ಪತ್ರಗಳನ್ನು ಬರೆದಿದ್ದಾನೆ. 1793ರ ಶಾಂತಿಯ ಕಾಲದಲ್ಲಿ ಸ್ವಾಮೀಜಿಯವರು ತೀರ್ಥಯಾತ್ರೆಗೆ ಹೋಗಿದ್ದಾಗ ಅವರಿಗೆ ಬರೆದ ಪತ್ರದಲ್ಲಿ ಟೀಪುವು ಈ ರೀತಿ ಬರೆದಿದ್ದ. "ನೀವು ಜಗದ್ಗುರುಗಳು. ನೀವು ಜಗತ್ತಿನ ಜನರು ಸಂತೋಷದಿಂದ ಇರುವುದಕ್ಕಾಗಿಯೂ, ಇಡೀ ಜಗತ್ತೇ ಸಮೃದ್ಧವಾಗಿರುವುದಕ್ಕಾಗಿಯೂ ತಪಸ್ಸು ಮಾಡುತ್ತಿರುವವರು. ನಮ್ಮ ಶ್ರೇಯೋಭಿವೃದ್ಧಿಗಾಗಿ ದಯವಿಟ್ಟು ಪ್ರಾರ್ಥಿಸಿರಿ. ನಿಮ್ಮಂತಹ ಪವಿತ್ರಜೀವಿಗಳು ಯಾವ ದೇಶದಲ್ಲಿದ್ದರೂ ಆ ದೇಶವು ಮಳೆ-ಬೆಳೆಗಳಿಂದಾಗಿ ಸಮೃದ್ಧವಾಗಿರುತ್ತದೆ." ಈ ಪತ್ರದ ಧ್ವನಿಯು ಕೇವಲ ರಾಜಕಾರಣದ ಜಾಣತನದ ಬದಲಾಗಿ, ಹಿಂದೂ ಧರ್ಮದ ಮೇಲೆ ಆತ ಇರಿಸಿದ್ದ ವಿಶ್ವಾಸ, ಮಮತೆ ಹಾಗೂ ಗೌರವಗಳನ್ನು ಸೂಚಿಸುತ್ತದೆ.

4

ಬೆಳಕಿಗೆ ತಂದ ವಿವರಗಳು ಟೀಪುವಿನ ಕುರಿತಾಗಿ ಸರಿಯಾಗಿ ವಿವರಗಳನ್ನು ಕೊಡುತ್ತವೆ. ಇದನ್ನು ಬಹಳ ಜನ ಇತಿಹಾಸಕಾರರು ಗಮನಿಸಿಕೊಂಡಿಲ್ಲ. ಮಾತ್ರವಲ್ಲದೇ, ಆತನ ಒಂದು ಧೀರೋದಾತ್ತ ಸುಂದರವಾದ ಚಿತ್ರವನ್ನು ನಮ್ಮಲ್ಲಿ ಒಡಮೂಡಿಸುತ್ತವೆ.

ಟೀಪು ಸುಲ್ತಾನನು ಪರಾಕ್ರಮಶಾಲಿಯಾಗಿದ್ದಂತೆ ಸ್ನೇಹಪರನು. ತನ್ನ ಪ್ರಜೆಗಳನ್ನು ಪ್ರೀತಿಸುತ್ತಿದ್ದುದರಿಂದಲೇ ಬ್ರಿಟಿಷರ ವಿರುದ್ಧ ಹೋರಾಡಿಯಾದರೂ ತನ್ನ ಜನರಿಗೆ ಶಾಂತಿಯನ್ನೂ, ಭದ್ರತೆಯನ್ನೂ, ರಕ್ಷಣೆಯನ್ನೂ ಒದಗಿಸುತ್ತಿದ್ದ. ಆದರೆ ಬ್ರಿಟಿಷರೊಂದಿಗಿನ ತನ್ನ ಹೋರಾಟದಲ್ಲೇ ತನ್ನ ರಾಜ್ಯಕ್ಕಾಗಿ ತನ್ನ ಜನರಿಗಾಗಿ ಪ್ರಾಣಾರ್ಪಣೆ ಮಾಡಿದ. ಅವನನ್ನು ಹಿಂದುಗಳು ವಿರೋಧಿಸಲಿಲ್ಲ. ಅವನೂ ಹಿಂದುಗಳನ್ನು ಮತದ ಹಿನ್ನೆಲೆಯಲ್ಲಿ ವಿರೋಧಿಸಲಿಲ್ಲ, ದ್ವೇಷಿಸಲಿಲ್ಲ. ಆದರೆ ಮೀರ್ ಸಾದಿಕ್‌ನಂತಹ ಸ್ವಧರ್ಮೀಯರ ಘಾತಕೀಯ ಕುತಂತ್ರಕ್ಕೆ ಟೀಪು ಸುಲ್ತಾನನು ಬಲಿಯಾದ ಎಂಬುದು ಮಾತ್ರ ಐತಿಹಾಸಿಕ ಸತ್ಯ.

ಸಮಯದಲ್ಲಿ ಮೌನವಾಗಿರುತ್ತಿದ್ದ. ಅದರಂತೆ ಈ ದೇವಾಲಯದ ನಿತ್ಯ ಧಾರ್ಮಿಕ ವಿಧಿವಿಧಾನಗಳಲ್ಲಿ ಯಾವುದೇ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಅರಮನೆಗೆ ಇನ್ನೂ ಹತ್ತಿರವಿದ್ದ ಶ್ರೀ ನರಸಿಂಹ ಸ್ವಾಮಿ ಮತ್ತು ಶ್ರೀ ಗಂಗಾಧರೇಶ್ವರ ದೇವಾಲಯಗಳಲ್ಲಿ ಯಾವುದೇ ನ್ಯೂನಾತಿರೇಕಗಳಿಲ್ಲದೆ ನಿತ್ಯ ನೈಮಿತ್ತಿಕಗಳು ನಡೆಯುತ್ತಿದ್ದವು. ಆ ದೇವಾಲಯಗಳಲ್ಲಿ ನಡೆಯುತ್ತಿದ್ದ ವಿಶೇಷ ಪೂಜಾ ಸಮಾರಂಭಗಳಿಗೆ ತಾನು ತನ್ನ ಕಾಣಿಕೆಯನ್ನು ಕೊಡುತ್ತಿದ್ದ. ಅದರಂತೆ ಅವುಗಳನ್ನು ನಡೆಸುತ್ತಿದ್ದ ವೈದಿಕರಿಗೂ ಸಾಕಷ್ಟು ಸಂಭಾವನೆಯನ್ನೀಯುತ್ತಿದ್ದ. ಆಂಧ್ರಪ್ರದೇಶದ ಕಡಪ ಜಿಲ್ಲೆಯ ಪುಲ್ಲಿವೆಂಡ್ಲ ಎಂಬಲ್ಲಿದ್ದ ಶ್ರೀ ಆಂಜನೇಯ ದೇವಸ್ಥಾನ ಮತ್ತು ವೆಂಕಟಾಚಲಪತಿ ದೇವಸ್ಥಾನಗಳಲ್ಲಿ ಪೂಜೆಯು ನಿಂತುಹೋಗಿದ್ದಾಗ ಅವುಗಳು ಪುನರಾರಂಭವಾಗುವಂತೆ ಮಾಡಿ ಅದಕ್ಕೆ ಬೇಕಾದ ದಾನದತ್ತಿಗಳನ್ನು ಕೊಟ್ಟು ಅಲ್ಲಿಯ ಧಾರ್ಮಿಕ ಕಾರ್ಯಗಳು ಪುನಃ ಪ್ರಾರಂಭವಾಗುವಂತೆ ಮಾಡಿದ್ದ.

ದೇವಾಲಯಗಳನ್ನೂ ಕಟ್ಟಿಸಿದ

ಇಷ್ಟು ಮಾತ್ರವಲ್ಲದೇ ಟೀಪು ಸುಲ್ತಾನನು ಹಿಂದೂ ದೇವಾಲಯವನ್ನು ಕಟ್ಟಿಸಿದ್ದ ಉದಾಹರಣೆಯೂ ಇದೆ. 1780ರಲ್ಲಿ ಕಾಂಚಿಯನ್ನು ಈತನ ತಂದೆ ಹೈದರಾಲಿಯು ಮುತ್ತಿಗೆ ಹಾಕಿದ್ದಾಗ ಅಲ್ಲೊಂದು ದೇವಾಲಯದ ಗೋಪುರ ನಿರ್ಮಾಣಕ್ಕೆ ಅಸ್ತಿವಾರವನ್ನು ಹಾಕಿದ್ದ. ಟೀಪು ಸುಲ್ತಾನನು 1792ರಲ್ಲಿ ಆ ಕಡೆಗೆ ಪ್ರಯಾಣ ಬೆಳೆಸಿದ್ದಾಗ ಆ ದೇವಾಲಯದ ರಚನಾಕಾರ್ಯವನ್ನು ಪೂರ್ಣಗೊಳಿಸುವುದಕ್ಕಾಗಿ 10 ಸಾವಿರ ಹಣವನ್ನು ಕೊಟ್ಟು ಅದರ ರಚನೆಯ ಎಲ್ಲಾ ಕಾರ್ಯಗಳು ಪೂರ್ಣವಾದ ನಂತರ ಅಲ್ಲಿ ನಡೆದ ರಥೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದ.

ಈ ರೀತಿಯಾಗಿ ಟೀಪುವಿನ ಕಾಲದ ದಾಖಲೆಗಳು ಅವನ ಕುರಿತಾದ ಸ್ಪಷ್ಟವಾದ ಚಿತ್ರವನ್ನು ಕೊಡಲು ಸಮರ್ಥವಾಗಿವೆ. ಈ ದಾಖಲೆಗಳಾವುವನ್ನೂ ಗಮನಿಸದೆ ರಾಜಕೀಯದಲ್ಲಿ ತಮಗೆ ವಿರೋಧಿಯಾಗಿದ್ದ ಟೀಪುವನ್ನು ತಮಗೆ ಮನಬಂದಂತೆ ಬ್ರಿಟಿಷ್ ಇತಿಹಾಸಕಾರರು ಚಿತ್ರಿಸಿದರು. ಅವರ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಟೀಪುವಿನ ಇತಿಹಾಸವನ್ನು ಅಧ್ಯಯನ ಮಾಡಿದ ಭಾರತೀಯ ಇತಿಹಾಸಕಾರರು ಹೆಚ್ಚು ಕಡಿಮೆ ಅದೇ ರೀತಿಯಲ್ಲಿ ಟೀಪುವಿನ ಇತಿಹಾಸವನ್ನು ವಿವರಿಸಿದರು. ಆರ್. ನರಸಿಂಹಾಚಾರ್ಯರಿಂದ ಬೆಳಕಿಗೆ ಬಂದ ಆ ಕಾಲದ ದಾಖಲೆಗಳು, ಆ ಕಾಲದ ಶಾಸನಗಳು, ಕರ್ನಾಟಕ ಹಾಗೂ ಇಂಡಿಯನ್ ಹಿಸ್ಟರಿ ಕಾಂಗ್ರೆಸ್‌ನವರು ವ್ಯಾಪಕ ಶೋಧನೆ ನಡೆಸಿ, ಇತ್ತೀಚೆಗೆ

ಕಾಟಕಾಯಿಯೆಂದು ಕರೆಯಲಾಗುತ್ತದೆ. ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಈ ಘಟನೆಗೆ ಕಾರಣನಾಗಿದ್ದ ಈ ಕಲ್ಯಾಣಪ್ಪನು ಯಾರು? ಈತನು ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿದ ಅಪೂರ್ವವಾದ ತ್ಯಾಗವು ಯಾವುದು?

1834ರಲ್ಲಿ ಬ್ರಿಟಿಷರು ಕೊಡಗು ರಾಜ್ಯವನ್ನು ಸ್ವಾಧೀನಪಡಿಸಿಕೊಂಡು ಆವರೆಗೆ ರಾಜನಾಗಿದ್ದ ಚಿಕ್ಕವೀರ ರಾಜೇಂದ್ರನನ್ನು ಪದಚ್ಯುತಗೊಳಿಸಿದರು. ಅಲ್ಲಿ ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿ ಜನರನ್ನು ನಾನಾ ರೀತಿಯಲ್ಲಿ ಪೀಡಿಸತೊಡಗಿದರು. ಇದ ರಿಂದಾಗಿ ಜನರಿಗೆ ಹಿಂದಿನ ಅರಸು ಮನೆತನದ ಆಳ್ವಿಕೆಯೇ ಪುನಃ ಪ್ರಾರಂಭವಾದರೆ ಒಳ್ಳೆಯದೆಂದು ಕಾಣತೊಡಗಿತು.

ಇದೇ ಸಮಯಕ್ಕೆ ಕೊಡಗಿನಲ್ಲಿ ಅಪರಂಪರ ಸ್ವಾಮಿ ಎಂಬ ಹೆಸರಿನಿಂದ ತರುಣ ಸನ್ಯಾಸಿಯೊಬ್ಬನು ಊರೂರು ಸುತ್ತಾಡುತ್ತಾ ತಾನು ಹಿಂದಿನ ಅರಸ ದೊಡ್ಡ ರಾಜೇಂದ್ರನ ತಮ್ಮನಾಗಿದ್ದು ಅಪ್ಪಾಜಿಯ ಮಗ ವೀರಪ್ಪನೆಂದು ಹೇಳಿಕೊಳ್ಳುತ್ತಿದ್ದ. ವೀರಪ್ಪನು ಆ ಮೊದಲೇ ಸತ್ತು ಹೋಗಿದ್ದ. ಆದ್ದರಿಂದ ಈತನ ಪ್ರಚಾರವು ಬ್ರಿಟಿಷರಲ್ಲಿ ಸಂಶಯವನ್ನು ಮೂಡಿಸಿತ್ತು.

ಹಿಂದಿನ ಅರಸರ ಆಳ್ವಿಕೆಯನ್ನು ಪ್ರಾರಂಭಿಸುವ ಕೊಡಗಿನವರ ಉಪಾಯ ಇದೆಂದು ತಿಳಿದ ಬ್ರಿಟಿಷರು ಆತನನ್ನು ಬಂಧಿಸಿ ಸೆರೆಯಲ್ಲಿಟ್ಟರು. ಆದರೆ ಕೆಲವೇ ದಿನಗಳಲ್ಲಿ ಆಪರಂಪರನ ಶಿಷ್ಯನಾಗಿದ್ದ ಕಲ್ಯಾಣಪ್ಪನೆಂಬವನು ತಾನು ಅರಸು ಕುಮಾರ ವೀರಪ್ಪನ ತಮ್ಮನಾದ ನಂಜುಂಡನೆಂದು ಹೇಳಿಕೊಂಡು ತಾನು ಕೊಡಗಿನ ಸಿಂಹಾಸನಕ್ಕೆ ಹಕ್ಕುದಾರನೆಂದು ಪ್ರಚಾರಗೊಳಿಸತೊಡಗಿದ.

ಆ ಸಮಯಕ್ಕೆ ಭಾರತೀಯರಲ್ಲಿ ಬ್ರಿಟಿಷ್ ವಿರೋಧವು ವ್ಯಾಪಕವಾಗಿ ಹರಡಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಬ್ರಿಟಿಷರ ವಿರುದ್ಧ ಹೋರಾಡಲು ಸಿದ್ಧತೆಗಳು ನಡೆಯುತ್ತಿದ್ದವು. ಇಲ್ಲಿಯ ಸ್ವಾತಂತ್ರ್ಯ ಹೋರಾಟಗಾರರಾದ ಕೆದುಂಬಾಡಿ ರಾಮೇಗೌಡ, ವೀರಣ್ಣ ಬಂಟ, ಕುಂಬಳೆ ಸುಬ್ರಾಯ ಮುಂತಾದವರ ಜೊತೆ 1837ನೇ ಇಸವಿ ಎಪ್ರಿಲ್ ತಿಂಗಳ 6ನೇ ತಾರೀಕಿನಂದು ಕಲ್ಯಾಣಪ್ಪನು ದಕ್ಷಿಣ ಕನ್ನಡ ಜಿಲ್ಲೆಗೆ ಬರುವುದಾಗಿಯೂ ಅದೇ ದಿನ ಆತನ ನಾಯಕತ್ವದಲ್ಲಿ ಎಲ್ಲರೂ ಬ್ರಿಟಿಷರ ವಿರುದ್ಧ ದಂಗೆಯೇಳಬೇಕೆಂದೂ ಪ್ರಚಾರ ಮಾಡತೊಡಗಿದರು. ಆದರೆ, ಈತನ್ಮಧ್ಯೆ ಬ್ರಿಟಿಷರು ಕಲ್ಯಾಣಪ್ಪನನ್ನು ಸೆರೆಹಿಡಿದು ಮೈಸೂರಿಗೆ ರವಾನಿಸಿದರು.

ಇದರಿಂದಾಗಿ ಕಲ್ಯಾಣಪ್ಪನನ್ನು ಹೋಲುವ, ಆದರೆ ಅಷ್ಟೇ ಚಾಕಚಕ್ಯತೆಯಿರುವ ಇನ್ನೊಬ್ಬ ವ್ಯಕ್ತಿಯನ್ನು ಹುಡುಕುವುದು ಅನಿವಾರ್ಯವಾಯಿತು. ಕೊನೆಗೆ, ಕೊಡಗು ಜಿಲ್ಲೆ ಶನಿವಾರ ಸಂತೆಯ ಹತ್ತಿರದ ಹೆಮ್ಮಿಗೆ ಎಂಬಲ್ಲಿಂದ ಕಲ್ಯಾಣಪ್ಪನನ್ನೇ ಹೋಲುವ

ಕಲ್ಯಾಣಪ್ಪನ ಕಾಟಕಾಯಿ

1857ರ ಸ್ವಾತಂತ್ರ್ಯ ಹೋರಾಟಕ್ಕೆ ಮೊದಲೇ ಕೊಡಗು ಮತ್ತು ಕರಾವಳಿ ಕರ್ನಾಟಕದಲ್ಲಿ ಇಂಥದೊಂದು ಬ್ರಿಟಿಷ್ ವಿರೋಧಿ ರಕ್ತಕ್ರಾಂತಿಯ ಅಲೆ ಎದ್ದಿತ್ತು. ಬ್ರಿಟಿಷರ ಅನ್ಯಾಯದ ರಾಜನೀತಿಯಿಂದ ರೊಚ್ಚಿಗೆದ್ದ ಕೊಡಗಿನ ಕಲ್ಯಾಣಪ್ಪನ ನೇತೃತ್ವದಲ್ಲಿ ನಡೆದ ಈ ದಂಗೆಗೆ ಕಲ್ಯಾಣಪ್ಪನ ಕಾಟಕಾಯಿ ಎಂದೇ ಹೆಸರಾಯಿತು. ನಿಜದಲ್ಲಿ ಇದು ಮಲೆನಾಡು ಕರ್ನಾಟಕದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಬಡಿದೆಬ್ಬಿಸಿದ ಶ್ರೀ ಸಾಮಾನ್ಯರ ರೌದ್ರಾವತಾರ.

ವ್ಯಾಪಾರಕ್ಕೆಂದು ಭಾರತಕ್ಕೆ ಬಂದಿದ್ದ ಬ್ರಿಟಿಷರು ಇಲ್ಲಿ ಭದ್ರವಾಗಿ ತಳವೂರಿ ತಮ್ಮ ರಾಜಕೀಯ ಅಧಿಕಾರವನ್ನು ವಿಸ್ತರಿಸ ತೊಡಗಿದರು. ದೇಶವನ್ನು ಆರ್ಥಿಕವಾಗಿ ಶೋಷಿಸಿ, ತಮ್ಮ ದೇಶವನ್ನು ಪ್ರಬಲಪಡಿಸಿಕೊಂಡರು. ಇಲ್ಲಿಯವರನ್ನು ಗುಲಾಮರಂತೆ ನೋಡಿಕೊಳ್ಳತೊಡಗಿದರು. ಇದರಿಂದಾಗಿ ಎಚ್ಚೆತ್ತ ಭಾರತೀಯರು ತಮ್ಮ ಸ್ವಂತಿಕೆ ಹಾಗೂ ಸ್ವಾತಂತ್ರ್ಯಗಳ ರಕ್ಷಣೆಗಾಗಿ ಬ್ರಿಟಿಷರೊಡನೆ ಹೋರಾಡತೊಡಗಿದಾಗ, ಇವರ ಮೇಲೆ ದಬ್ಬಾಳಿಕೆ ನಡೆಸಲಾಯಿತು, ಗುಂಡಿನ ಮಳೆಗರೆಯಲಾಯಿತು.

ಬ್ರಿಟಿಷರ ಈ ಸ್ವಾರ್ಥ ರಾಜಕಾರಣ ಹಾಗೂ ಕುಟಿಲ ತಂತ್ರಗಳಿಂದ ರೋಸಿ ಹೋದ ಭಾರತೀಯರೆಲ್ಲರೂ ಒಂದಾಗಿ 1857ರಲ್ಲೊಮ್ಮೆ ಸ್ವಾತಂತ್ರ್ಯ ಹೋರಾಟವನ್ನು ನಡೆಸಿದರು. ಇದು ತೀವ್ರಗತಿಯೊಂದಿಗೆ ಉತ್ತರ ಭಾರತದಾದ್ಯಂತ ಹರಡಿ ಅಸಂಖ್ಯಾತ ಸಾವು ನೋವುಗಳು ಸಂಭವಿಸಿದವು. ಆದುದರಿಂದ ಭಾರತೀಯ ಇತಿಹಾಸದಲ್ಲಿ ಈ ಘಟನೆಯು ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟ ಎಂಬ ಹೆಸರಿನಿಂದ ಒಂದು ಮರೆಯಲಾಗದ ಘಟನೆಯಾಗಿ ಉಳಿದಿದೆ.

ಬ್ರಿಟಿಷರ ದಬ್ಬಾಳಿಕೆಯ ವಿರುದ್ಧವಾಗಿ ನಡೆಸಿದ ಈ 1857ರ ಹೋರಾಟಕ್ಕಿಂತ ಮೊದಲೇ ಮಲೆನಾಡು ಮತ್ತು ಕರಾವಳಿ ಕರ್ನಾಟಕದಲ್ಲಿ ಇಂಥದೊಂದು ಬ್ರಿಟಿಷ್ ವಿರೋಧಿ ರಕ್ತ ಕ್ರಾಂತಿಯ ಅಲೆ ಎದ್ದಿತ್ತು. ಅಸಂಖ್ಯಾತ ಜನರು ತಮ್ಮ ಜೀವನಾರ್ಪಣೆಗೂ ಹಿಂಜರಿಯದೆ ಸರ್ವತ್ಯಾಗಕ್ಕೂ ಸಿದ್ಧರಾಗಿ ಈ ದಂಗೆಯಲ್ಲಿ ಭಾಗವಹಿಸಿದ್ದರು. ಬ್ರಿಟಿಷ್ ಸರಕಾರದ ಅನ್ಯಾಯ ರಾಜನೀತಿಯಿಂದ ರೊಚ್ಚಿಗೆದ್ದ ಸಾರ್ವಜನಿಕರ ಸಹಾಯದಿಂದ ಕೊಡಗಿನ ಕಲ್ಯಾಣಪ್ಪನು ನಡೆಸಿದ ಈ ದಂಗೆಯನ್ನು ಕಲ್ಯಾಣಪ್ಪನ

ಕಲ್ಯಾಣಪ್ಪನಿಗೆ ಉಪ್ಪಿನಂಗಡಿಯ ಜೈನ ಸಾಹುಕಾರನೊಬ್ಬನು ಒಂದು ನಿಲುವಂಗಿಯನ್ನೂ, ರೇಶ್ಮೆಯ ಅಂಗಶಾಸ್ತ್ರವನ್ನೂ, ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರು ಎರಡು ಫಿರಂಗಿಗಳನ್ನೂ ಕೊಟ್ಟರು. ಕಲ್ಯಾಣಪ್ಪನು ಪುತ್ತೂರಿನ ಪರಿಸರದ ಜನರಿಂದ ಒಂದು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿಕೊಂಡ. ಕಲ್ಯಾಣಪ್ಪನ ಕಾರ್ಯಚಟುವಟಿಕೆಗಳನ್ನು ತಿಳಿದು ಮಂಗಳೂರಿನ ಬ್ರಿಟಿಷ್ ಕಲೆಕ್ಟರನು ತನ್ನ ಶಿರಸ್ತೇದಾರನೊಂದಿಗೆ ಒಂದು ಸಣ್ಣ ಸೈನ್ಯವನ್ನು ಪುತ್ತೂರಿಗೆ ಕಳುಹಿಸಿದನು. ಆದರೆ ನೇರವಾಗಿ ಬ್ರಿಟಿಷರೊಡನೆ ಕಾದಾಡದೆ ಮೊದಲಿಗೆ ಅಡಗಿದ್ದು ಒಮ್ಮೆಯೇ ಅವರ ಸೈನ್ಯದ ಠಾಣೆಗಳ ಮೇಲೆರಗಬೇಕೆಂದು ಕಲ್ಯಾಣಪ್ಪನು ನಿರ್ಣಯಿಸಿದ್ದರಿಂದ ಭಯಭೀತವಾದ ಬ್ರಿಟಿಷ್ ಸೈನ್ಯವು ಪುತ್ತೂರನ್ನು ಬಿಟ್ಟು ಮಂಗಳೂರಿಗೆ ಪಲಾಯನ ಮಾಡಿತು. ಶಿರಸ್ತೇದಾರ ದೇವಪ್ಪಯ್ಯನನ್ನು ಬಂಧಿಸಿ ಕೂಡಲೇ ಪುತ್ತೂರಿನ ಖಜಾನೆಯನ್ನು ದೋಚಲಾಯಿತು.

ಬ್ರಿಟಿಷರ ಧೋರಣೆಯಿಂದ ಅನ್ಯಾಯಕ್ಕೆ ಒಳಗಾಗಿದ್ದ ಪಾಣೆಮಂಗಳೂರಿನ ಬಂಗರಸನಾದ ಲಕ್ಷ್ಮಣಪ್ಪರಸ ಬಂಗನೂ, ಆತನ ಸೈನಿಕರೂ, ಕಲ್ಯಾಣಪ್ಪನ ದಂಡನ್ನು ಸೇರಿಕೊಂಡರು. ಅರಸನು ಒದಗಿಸಿಕೊಟ್ಟ ಔತಣದಿಂದ ಉತ್ಸಾಹಗೊಂಡ ಸೈನಿಕರು ಮಂಗಳೂರಿನತ್ತ ವೀರಾವೇಶದಿಂದ ಧಾವಿಸತೊಡಗಿದರು. ಇದರಲ್ಲಿ ಭಾಗವಹಿಸಿದ್ದ ಸ್ಥಳೀಯ ಕವಿಯೊಬ್ಬನು ವರ್ಣಿಸಿರುವಂತೆ ಕೈಗೆ ಸಿಕ್ಕಿದ ಮಾರಕಾಸ್ತ್ರಗಳನ್ನು ಅವರು ಕೈಗೆತ್ತಿಕೊಂಡರು. ಕೆಲವು ಸೈನಿಕರು ಬಂಟವಾಳದ ಬ್ರಿಟಿಷ್ ಖಜಾನೆಯನ್ನು ಲೂಟಿ ಮಾಡಿ ಹಣವನ್ನು ಸಂಗ್ರಹಿಸಿಕೊಂಡು ಬಂದರು. ಮರುದಿನವೇ ಕೈಗಳಲ್ಲಿ ಕೋವಿಗಳನ್ನೂ ಕತ್ತಿ ದೊಣ್ಣೆಗಳನ್ನೂ ತೆಂಗಿನ ಗರಿಯ ಕೊತ್ತಳಿಂಗೆಗಳನ್ನೂ ಹಿಡಿದುಕೊಂಡಿದ್ದ ಕಲ್ಯಾಣಪ್ಪನ ದಂಡಿನವರು ಮಂಗಳೂರನ್ನು ತಲಪಿದರು. ಇದರಿಂದ ಭೀತರಾದ ಬ್ರಿಟಿಷ್ ಅಧಿಕಾರಿಗಳು ತಮ್ಮ 2ನೇ ರೆಜಿಮೆಂಟಿನೊಂದಿಗೆ ಮಂಗಳೂರನ್ನೂ ಬಿಟ್ಟು ತಮ್ಮನ್ನು ರಕ್ಷಿಸಿಕೊಳ್ಳಲಿಕ್ಕಾಗಿ ಕಣ್ಣಾನೂರಿನ ಕಡೆಗೆ ಹಡಗದಲ್ಲಿ ಪ್ರಯಾಣಿಸತೊಡಗಿದರು. ಕಲ್ಯಾಣಪ್ಪನ ದಂಡು ನೇರವಾಗಿ ಜಿಲ್ಲಾಧಿಕಾರಿಯ ಕಚೇರಿಗೆ ಹೋಗಿ ಅಲ್ಲಿಯ ಜಿಲ್ಲಾ ಖಜಾನೆಯನ್ನು ಒಡೆದು ಹಣವನ್ನು ಸ್ವಾಧೀನಪಡಿಸಿಕೊಂಡಿತು. ಜೈಲಿನ ಕಡೆಗೆ ಹೋಗಿ ಬಂಧಿತರಾಗಿದ್ದ ಖೈದಿಗಳನ್ನು ಬಿಡಿಸಿದರು. ಜೈಲಿನ ಕಾವಲುಗಾರರಾಗಿದ್ದ ಬ್ರಿಟಿಷರನ್ನು ಇರಿದು ಹಾಕಿದರು. ತಡೆಯಲು ಬಂದವರನ್ನು ಬಡಿದುಹಾಕಿದರು. ಕಾಡುವವರನ್ನು ಕೊಂದು ಹಾಕಿದರು. ಮಂಗಳೂರು ನಗರದಲ್ಲಿದ್ದ ಹಲವು ಬ್ರಿಟಿಷರ ಮನೆಗಳಿಗೆ ಕೊಳ್ಳಿಯನ್ನಿಟ್ಟರು. ಕೆಲವರತ್ತ ಗುಂಡನ್ನು ಹಾರಿಸಿದರು.

ಈ ಸನ್ನಿವೇಶದಲ್ಲಿ ಬ್ರಿಟಿಷರ ರಕ್ಷಣೆಗೆ ಬರುವವರು ಯಾರೂ ಇರಲಿಲ್ಲ. ಕಲ್ಯಾಣಪ್ಪನ ಸಶಸ್ತ್ರ ಸೈನ್ಯವೊಂದು ಜಿಲ್ಲಾಧಿಕಾರಿಯ ಕಛೇರಿಯ ಮೇಲಿದ್ದ ಬ್ರಿಟಿಷ್ ಧ್ವಜ (ಯೂನಿಯನ್ ಜ್ಯಾಕ್)ವನ್ನು ಕೆಳಗಿಳಿಸಿ, ಕೊಡಗಿನ ಧ್ವಜವನ್ನು ಹಾರಿಸಿತು.

ಪುಟ್ಟ ಬಸಪ್ಪನೆಂಬವನನ್ನು ಕರೆದು ತಂದು ಆತನನ್ನೇ ಕಲ್ಯಾಣಪ್ಪನೆಂದು ಘೋಷಿಸಲಾಯಿತು. ದಂಗೆಯೇಳಲು ನಿಶ್ಚೈಸಿದ ದಿನಕ್ಕಿಂತ ಸ್ವಲ್ಪ ಮೊದಲೇ ಕಲ್ಯಾಣಪ್ಪನನ್ನು ಕುದುರೆಯ ಮೇಲೆ ಕುಳ್ಳಿರಿಸಿ ದಕ್ಷಿಣ ಕನ್ನಡ ಜಿಲ್ಲೆಗೆ ಕರೆದುಕೊಂಡು ಬಂದು ಮಲೆ ಕುಡಿಯರನ್ನು ಸೇರಿಸಿಕೊಂಡು ಅವನೇ ಕೊಡಗಿನ ಅರಸನೆಂದು ಪಟ್ಟಾಭಿಷೇಕ ವನ್ನೂ ಮಾಡಲಾಯಿತು. ಕೆದುಂಬಾಡಿ ಬಳಿಯ ಪೂಮಲೆ ಬೆಟ್ಟ ಎಂಬಲ್ಲಿ ಗುಡಿಸಲೊಂದನ್ನು ಕಟ್ಟಿ ಅದನ್ನೇ ಆತನ ಅರಮನೆಯೆಂದು ಘೋಷಿಸಲಾಯಿತು. ಕೊಡಗಿನ ಅರಸರ ಅಂಗರಕ್ಷಕರಾಗಿದ್ದ ಚಟ್ಟೆಕುಡಿಯ ಮತ್ತು ಕುರ್ತುಕುಡಿಯ ಎಂಬವರನ್ನು ಆತನ ಅಂಗರಕ್ಷಕರನ್ನಾಗಿ ನೇಮಿಸಿಕೊಳ್ಳಲಾಯಿತು. ಸುತ್ತು ಮುತ್ತಲ ಜನರು ಹೊಸ ರಾಜನಲ್ಲಿಗೆ ಬಂದು ಸೇರಿಕೊಂಡರು. ಕಪ್ಪ ಕಾಣಿಕೆಯನ್ನು ಕೊಟ್ಟರು. ಆತನ ದಂಡು ಬೆಳೆಯತೊಡಗಿತು.

ಬ್ರಿಟಿಷರಿಗೆ ಬೆಂಬಲಿಗನಾಗಿ, ಜನರನ್ನು ನಿರ್ದಾಕ್ಷಿಣ್ಯದಿಂದ ನೋಡಿಕೊಳ್ಳುತ್ತಿದ್ದ ಸುಳ್ಯದ ಅಮಲ್ದಾರ ರಾಮಪ್ಪಯ್ಯನು ಜನ ಸಾಮಾನ್ಯರ ಸ್ವಾತಂತ್ರ್ಯ ಹೋರಾಟದ ಈ ಪ್ರಯತ್ನಗಳಿಗೆ ವಿರೋಧಿ ಆಗಿದ್ದ. ಆದುದರಿಂದ 1837ನೇ ಇಸವಿ ಏಪ್ರಿಲ್ ತಿಂಗಳ ಪ್ರಾರಂಭದಲ್ಲಿ ಅಮಲ್ದಾರ ರಾಮಪ್ಪಯ್ಯನ ಮೇಲೆ ಕಲ್ಯಾಣಪ್ಪನ ನಾಯಕತ್ವ ದಲ್ಲಿ ಧಾಳಿ ಮಾಡಲಾಯಿತು. ಕಾಂತಮಂಗಲವೆಂಬಲ್ಲಿ ಆತನನ್ನು ಕೊಂದು ಆತನ ಮನೆ ಯಲ್ಲಿದ್ದ ಆಹಾರ ಧಾನ್ಯ, ವಸ್ತ್ರ, ಒಡವೆ, ಕೋವಿ, ಕತ್ತಿಗಳನ್ನು ದೋಚಲಾಯಿತು. ಅವನು ಇರಿಸಿಕೊಂಡಿದ್ದ ಸುಳ್ಳು ಸಾಲಪತ್ರ ದಾಖಲೆಗಳಿಗೆ ಬೆಂಕಿಯನ್ನಿಟ್ಟು ಆತನ ಗುಲಾಮರನ್ನು ಸೆರೆಯಿಂದ ಬಿಡಿಸಿ ಕಲ್ಯಾಣಪ್ಪನ ದಂಡಿಗೆ ಸೇರಿಸಿಕೊಳ್ಳಲಾಯಿತು. ಆಗ ದಂಡಿನಲ್ಲಿ ಸುಮಾರು 3 ಸಾವಿರ ಜನ ಕಟ್ಟಾಳುಗಳಿದ್ದರು.

ಈ ಸಶಸ್ತ್ರ ದಂಡು ಬೆಳ್ಳಾರೆಯಲ್ಲಿದ್ದ ಬ್ರಿಟಿಷ್ ಖಜಾನೆಯನ್ನು ಲೂಟಿ ಮಾಡಿ ಸಂಪತ್ತನ್ನು ವಶಪಡಿಸಿಕೊಂಡು, ಇನ್ನು ಮೂರು ವರ್ಷಗಳವರೆಗೆ ಬ್ರಿಟಿಷ್ ಸರಕಾರಕ್ಕೆ ಜನರು ಯಾವ ಕಂದಾಯವನ್ನೂ ಕೊಡುವ ಅಗತ್ಯವಿಲ್ಲವೆಂದು ಕಲ್ಯಾಣಪ್ಪ ಘೋಷಿಸಿದನು. ಅದರಂತೆ ತನ್ನ ಹೋರಾಟಕ್ಕೆ ಜನರು ಕೊಡುವ ವಂತಿಗೆಯನ್ನು ಸಂಗ್ರಹಿಸಲಿಕ್ಕಾಗಿ ದಂಡಿನ ಪ್ರಮುಖರನ್ನು ಬೇರೆ ಬೇರೆ ಊರುಗಳಿಗೆ ಕಳುಹಿಸಿ ಹಣವನ್ನು ಸಂಗ್ರಹಿಸಿಕೊಂಡನು.

ಅನಂತರ ಕಲ್ಯಾಣಪ್ಪನ ದಂಡು ಪುತ್ತೂರನ್ನು ತಲಪಿತು. ಬರುತ್ತಾ ದಾರಿಯಲ್ಲಿ ಹಲವಾರು ಜನ ಸ್ವಾತಂತ್ರ್ಯ ಪ್ರೇಮಿ ಯುವಕರು ಈ ಸೈನ್ಯವನ್ನು ಸೇರಿಕೊಂಡರು. ತಮ್ಮಲ್ಲಿದ್ದ ಅಲ್ಪ ಸ್ವಲ್ಪ ಹಣವನ್ನು ಕಾಣಿಕೆಯಾಗಿ ನೀಡಿದರು. ಕೆಲವು ಅನುಕೂಲಸ್ಥರು ತಮ್ಮಲ್ಲಿದ್ದ ಕತ್ತಿ, ಚೂರಿ, ಖಡ್ಗ ಮತ್ತು ಆನೆ ಕುದುರೆಗಳನ್ನೂ ಕೊಟ್ಟರು. ವೈಯಕ್ತಿಕವಾಗಿ

ರಾಜದಂಪತಿಗಳ ದುರಂತ

ನೇತ್ರಾವತೀ ನದಿ ಕುದುರೆಮುಖ ಪರ್ವತದಲ್ಲಿ ಹುಟ್ಟಿ, ಸಹ್ಯಾದ್ರಿ ತಪ್ಪಲಲ್ಲಿ ನುಸುಳಿ, ಪಶ್ಚಿಮ ಕರಾವಳಿಯಲ್ಲಿ ಹರಿದು ಅರಬೀಸಮುದ್ರ ಸೇರುತ್ತದೆ. ಈ ನದಿಯ ಇಕ್ಕೆಲಗಳಲ್ಲಿರುವ ವಿಸ್ತಾರವಾದ ಭೂಮಿಯನ್ನು ಹಿಂದೆ ಬಂಗರ ರಾಜ್ಯವೆಂದು ಕರೆಯುತ್ತಿದ್ದರು.

ಹೊಯ್ಸಳ ಸಾರ್ವಭೌಮನಾದ ವಿಷ್ಣುವರ್ಧನನ ಕಾಲ (ಕ್ರಿ. ಶ. 1108 - 1152) ದಲ್ಲಿ, ಕೋಲಾರ ಜಿಲ್ಲೆಯ ಬಂಗಾಡಿಯಿಂದ ಆಳುತ್ತಿದ್ದ ಈ ಬಂಗ ಅರಸುಮನೆತನ ದವರು ಆತನೊಡನೆ ಯುದ್ಧದಲ್ಲಿ ಸೋತುದರಿಂದ ರಾಜ್ಯವನ್ನು ಬಿಟ್ಟು, ತಮ್ಮ ರಕ್ಷಣೆಗಾಗಿ ಪಶ್ಚಿಮ ಘಟ್ಟಗಳ ಮೇಲೆ ಹರಡಿರುವ ಕಾಡನ್ನು ಸೇರಿದರು. ಆ ಕಾಡಿನಲ್ಲಿ ಅಲೆಯುತ್ತಾ, ಅಲೆಯುತ್ತಾ ಕೊನೆಗೆ ಈ ಘಟ್ಟಗಳ ಮಗ್ಗುಲಲ್ಲಿ ಹರಿಯುತ್ತಿದ್ದ ನೇತ್ರಾವತಿ ನದಿಯ ಕಿನಾರೆಗೆ ಬಂದು ನೆಲೆಯಾದರು. ಭದ್ರಕೋಟೆಯಂತಿರುವ ಪಶ್ಚಿಮ ಘಟ್ಟಗಳು ಹಾಗೂ ಕುದುರೆಮುಖ ಪರ್ವತಗಳ ಮಧ್ಯದಲ್ಲಿ ವಿಶಾಲವಾಗಿ ಹರಡಿರುವ ಇಲ್ಲಿಯ ಬಂಗಾಡಿಯ ಬಯಲಲ್ಲಿ ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದರು. ಮುಂದೆ ಅರಬೀ ಸಮುದ್ರದವರೆಗೂ ತಮ್ಮ ರಾಜ್ಯ ವಿಸ್ತರಿಸಿಕೊಂಡರು.

ಕರ್ನಾಟಕವನ್ನು ವಿಜಯನಗರದ ಅರಸರು ಆಳುತ್ತಿದ್ದಾಗ ಅವರ ನೆಚ್ಚಿನ ಸಾಮಂತರಾಗಿದ್ದುಕೊಂಡು, ಹೆಚ್ಚಿನ ಸ್ವಾಯತ್ತತೆಯನ್ನು ಪಡೆದ ಈ ಬಂಗ ಅರಸರು ಶಾಂತಿ ಸುಭಿಕ್ಷೆಗಳಿಂದ ರಾಜ್ಯವಾಳತೊಡಗಿದರು. ವಿಜಯನಗರದ ಪ್ರಭು ಇಮ್ಮಡಿ ದೇವರಾಯನ ಕಾಲ (ಕ್ರಿ. ಶ. 1424-1446)ದಲ್ಲಿ ಬಂಗಾಡಿ ಗದ್ಯಾಣಗಳೆಂಬ ತಮ್ಮದೇ ಆದ ಸ್ವತಂತ್ರ ಚಿನ್ನದ ನಾಣ್ಯಗಳನ್ನು ಇವರು ಚಲಾವಣೆಗೆ ತಂದರು. ಪೋರ್ಚುಗೀಸರಿಗೂ ಮುಸಲ್ಮಾನರಿಗೂ ತಮ್ಮ ರಾಜ್ಯದಲ್ಲಿ ಆಶ್ರಯವಿತ್ತು ಅವರಿಗೆ ಪ್ರಾರ್ಥನಾ ಗೃಹಗಳನ್ನು ನಿರ್ಮಿಸಿಕೊಟ್ಟರು. ಬಂಗಾಡಿ, ನಂದಾವರ ಮತ್ತು ಮಂಗಳೂರುಗಳಲ್ಲಿ ತಮ್ಮ ಅರಮನೆಗಳನ್ನು ಕಟ್ಟಿ, ವಿದೇಶೀ ವ್ಯಾಪಾರಗಳಿಂದ ಹೇರಳ ಸಂಪತ್ತು ಗಳಿಸಿ ಶಾಂತಿ ಸಮೃದ್ಧಿಗಳಿಂದ ಆಳುತ್ತಾ ಉನ್ನತ ಸ್ಥಿತಿಯನ್ನು ಮುಟ್ಟಿದರು.

ಕ್ರಿ. ಶ. 16ನೇ ಶತಮಾನದ ಮಧ್ಯಕಾಲ. ಆಗ ಬಂಗಾಡಿಯಿಂದ ಇಮ್ಮಡಿ ಲಕ್ಷ್ಮಪ್ಪರಸ ಬಂಗ(ಕ್ರಿ. ಶ. 1545-1556)ನೆಂಬುವನು ರಾಜ್ಯವಾಳುತ್ತಿದ್ದ. ಕವಿಗಳಿಗೂ ವಿದ್ವಾಂಸರಿಗೂ ತನ್ನ ಅರಮನೆಯಲ್ಲಿ ಆಶ್ರಯ ನೀಡಿದ್ದ. ಮೂಡುಬಿದ್ರೆಯ ಚೌಟರ ಅರಮನೆ ಯಿಂದ ಅಬ್ಬಕ್ಕದೇವಿಯೆಂಬ ರಾಜಕುಮಾರಿಯನ್ನು ವಿವಾಹವಾಗಿ ಈ ಎರಡು

ಕಲ್ಯಾಣಪ್ಪನು ಯಾವ ಗುಡ್ಡೆಯಲ್ಲಿ ಕೊಡಗಿನ ಧ್ವಜವನ್ನು ಹಾರಿಸಿದನೋ ಅದಕ್ಕೆ ಬಾವುಟಗುಡ್ಡೆ ಎಂಬ ಹೆಸರನ್ನು ಕೊಟ್ಟನು. ಇಂದಿಗೂ ಮಂಗಳೂರಿನಲ್ಲಿ ಆ ಗುಡ್ಡೆಯನ್ನು ಬಾವುಟಗುಡ್ಡೆಯೆಂದೇ ಕರೆಯುತ್ತಾರೆ. ಈ ರೀತಿಯಾಗಿ ಬ್ರಿಟಿಷ್ ವಿರೋಧಿ ವಿಧ್ವಂಸಕ ಕೃತ್ಯವನ್ನು ಕೈಗೊಳ್ಳುತ್ತಾ ಮಂಗಳೂರು ನಗರದ ಮೇಲೆ ಕಲ್ಯಾಣಪ್ಪನು 13 ದಿನಗಳವರೆಗೆ ತನ್ನ ಪ್ರಭುತ್ವವನ್ನು ಇರಿಸಿಕೊಂಡಿದ್ದನು.

ಆ ಸಮಯಕ್ಕೆ ಕಣ್ಣಾನೂರಿಗೆ ಓಡಿ ಹೋಗಿದ್ದ ಬ್ರಿಟಿಷರು, ತಮ್ಮ ಹೆಚ್ಚಿನ ಸೈನ್ಯದೊಂದಿಗೆ ಹಿಂದಿರುಗಿ ಬಂದರು. ಕಲ್ಯಾಣಪ್ಪನ ಸಹಾಯಕ್ಕಾಗಿ ಬರುತ್ತಿದ್ದ ಕುಂಬಳೆಯ ಸುಬ್ರಾಯನ ಕಡೆಯವರನ್ನು ಮದ್ದುಗುಂಡುಗಳ ಸಹಾಯದಿಂದ ನಾಶಗೊಳಿಸಿ, ಉಳಿದವರನ್ನು ನೇತ್ರಾವತಿ ನದಿಯಲ್ಲಿ ಮುಳುಗಿಸಿ ಕೊಲ್ಲಿಸಿದರು. ಸಶಸ್ತ್ರ ಬ್ರಿಟಿಷ್ ಸೈನ್ಯ ಜಿಲ್ಲಾಧಿಕಾರಿಯ ಕಛೇರಿಯತ್ತ ಆಗಮಿಸಿತು. ಈ ಸೇನಾಬಲವನ್ನು ನೋಡಿ ಕಲ್ಯಾಣಪ್ಪನ ದಂಡಿನವರು ಚದುರತೊಡಗಿದರು. ಕಲ್ಯಾಣಪ್ಪನೂ ಕಣ್ಮರೆಯಾಗಿ ಹೋದ.

ಕಲ್ಯಾಣಪ್ಪನನ್ನು ಹೇಗಾದರೂ ಮಾಡಿ ಮುಗಿಸಬೇಕೆಂದಿದ್ದ ಕೊಡಗಿನ ಬ್ರಿಟಿಷ್ ಸೈನ್ಯಾಧಿಕಾರಿ, ಕ್ಯಾಪ್ಟನ್ ಲೀಹಾರ್ಡಿಯು, ಆತನನ್ನೂ ಆತನ ಸಹಾಯಕರನ್ನೂ ಹುಡುಕಿಸತೊಡಗಿದ. ಅದೇ ಸಮಯಕ್ಕೆ ಕಲ್ಯಾಣಪ್ಪನನ್ನು ಹಿಡಿದು ಕೊಟ್ಟವರಿಗೆ ಹತ್ತು ಸಾವಿರ ರೂಪಾಯಿ ಬಹುಮಾನವನ್ನು ಬ್ರಿಟಿಷ್ ಅಧಿಕಾರಿಗಳು ಘೋಷಿಸಿದರು. ವೇಷಪಲ್ಲಟ ಮಾಡಿಕೊಂಡು ಕಾಡುದಾರಿಯಾಗಿ ಸಾಗಿದ ಕಲ್ಯಾಣಪ್ಪನು ಸಕಲೇಶಪುರದ ಮಂಜಿರಾಬಾದಿಗೆ ಬಂದು ಹೇಗಾದರೂ ತನ್ನ ಹಳ್ಳಿಯನ್ನು ಆಗಲೇ ಸೇರಿಬಿಟ್ಟಿದ್ದನು.

ಆದರೆ ಹಣದ ಆಸೆಗೆ ಬಲಿಯಾದ ಕರಿಬಸವಯ್ಯನೆಂಬವನು, ಬ್ರಿಟಿಷರಿಗೆ ಕಲ್ಯಾಣಪ್ಪನ ಸುಳಿವನ್ನು ಕೊಟ್ಟ. ಇದರಿಂದಾಗಿ 1837ನೇ ಇಸವಿ ಮೇ ತಿಂಗಳ 2ನೇ ವಾರದಲ್ಲಿ ಕಲ್ಯಾಣಪ್ಪನೂ ಆತನ ಕಾಟಕಾಯಿಯ ಹೆಚ್ಚಿನ ಎಲ್ಲಾ ನಾಯಕರೂ ಬಂಧಿತರಾದರು. ವಿಚಾರಣೆಯನ್ನು ನಡೆಸಿ ಅವರನ್ನು ಬಂಡುಕೋರರೆಂದೂ ರಾಷ್ಟ್ರದ್ರೋಹಿಗಳೆಂದೂ ತೀರ್ಮಾನಿಸಿ, ಕಲ್ಯಾಣಪ್ಪನನ್ನೂ, ಲಕ್ಷ್ಮಪ್ಪರಸ ಬಂಗನನ್ನೂ ಅದೇ ತಿಂಗಳ ಕೊನೆಯ ಭಾಗದಲ್ಲಿ ಮಂಗಳೂರಿನ ಬಿಕರ್ನಕಟ್ಟೆಯಲ್ಲಿ ಗಲ್ಲಿಗೇರಿಸಲಾಯಿತು. ರಾಷ್ಟ್ರಭಕ್ತಿ ಹಾಗೂ ಸ್ವಾತಂತ್ರ್ಯ ಪ್ರೇಮದಿಂದ ಉಕ್ಕಿ ಹರಿಯುತ್ತಿದ್ದ ಅವರ ಬಿಸಿ ರಕ್ತವು ಬ್ರಿಟಿಷರ ಇತಿಹಾಸದ ಮೇಲೆ ಚಿಮ್ಮಿಕ್ಕಿ, ಎಂದೂ ಅಳಿಸಲಾದ ಕಲೆಯಾಗಿ ಉಳಿಯಿತು.

ಬಂಗನು ಐದಾರು ವರ್ಷಗಳ ಕಾಲ ಸುಖದಾಂಪತ್ಯ ಜೀವನ ನಡೆಸಿದ. ಆದರೆ ಅವರಿಗೆ ಮಕ್ಕಳಾಗಲೇ ಇಲ್ಲ.

ಇದರಿಂದಾಗಿ ಬಂಗಾಡಿ ಬಸದಿಯ ಶ್ರೀ ಶಾಂತಿನಾಥರಿಗೆ, ಶ್ರವಣಕುಂಡದ ಬ್ರಹ್ಮದೇವರಿಗೆ ಹಾಗೂ ಅರಮನೆ ಬಸದಿಯ ಶ್ರೀ ಆದೀಶ್ವರ ಸ್ವಾಮಿಗೆ ವಿಶೇಷ ಪೂಜೆ, ಅಭಿಷೇಕಾದಿಗಳು ದಿನನಿತ್ಯ ನಡೆಯತೊಡಗಿದವು. ರಾಜದಂಪತಿಗಳು ಹಲವಾರು ವ್ರತ ನೋಂಪಿಯನ್ನು ಕೈಗೊಳ್ಳಲು ನಿರ್ಧರಿಸಿಕೊಂಡರು. ಅದರಂತೆ ಕ್ರಿ. ಶ. 1555ರ ರಾಕ್ಷಸ ನಾಮ ಸಂವತ್ಸರದ ಚೈತ್ರ ಮಾಸದ ಒಂದು ಶುಭದಿನದಂದು ನೋಂಪಿಯ ಕಾರ್ಯಕ್ರಮ ಪ್ರಾರಂಭವಾಯಿತು. ಆಗ ಬೈಲಂಗಡಿಯ ಅರಸುಕುಮಾರಿ ಸೋಮಲಾದೇವಿಯು ತಾನು ನೋಂಪಿಯ ಮುಖ್ಯವ್ಯಕ್ತಿಯಾದ ಒಬ್ಬ ಅರಸನಂತೆ ಎಲ್ಲರ ಬಲತುದಿಗೆ ಕುಳಿತುಕೊಳ್ಳುವುದಾಗಿ ಹಟಹಿಡಿದಳು. ಇದಕ್ಕೆ ಹಿರಿಯ ಪತ್ನಿ ಅಬ್ಬಕ್ಕದೇವಿ ಸಮ್ಮತಿಸಲಿಲ್ಲ. ತಾನು ಕುಳಿತುಕೊಳ್ಳಬೇಕಾದ ಸ್ಥಳದಲ್ಲಿ ತನ್ನ ಪತ್ನಿಯು ಕುಳಿತುಕೊಳ್ಳುವುದನ್ನು ಅರಸನೂ ಇಷ್ಟಪಡಲಿಲ್ಲ. ಈಕೆಯೂ ಹಟವನ್ನು ಬಿಡಲಿಲ್ಲ. ಅರಮನೆಯ ಹಿರಿಯರು ರಾಣಿಯ ಈ ದುರಾಗ್ರಹವನ್ನು ವಿರೋಧಿಸಿದರು. ಇದು ತನಗೆ ಎಸಗಿದ ಅಪಮಾನವೆಂದು ಭಾವಿಸಿಕೊಂಡ ರಾಣಿ ಸೋಮಲಾ ಅರಮನೆಯಿಂದ ಹೊರಗೆ ನಡೆದು ಕೋಪಾವಿಷ್ಟಳಾಗಿ ತನ್ನ ಬೈಲಂಗಡಿ ರಾಜ್ಯದಲ್ಲಿ ಹೊಸತೊಂದು ಬಸದಿಯನ್ನು ಕಟ್ಟಿಕೊಂಡೇ ನೋಂಪಿಯನ್ನು ಮುಂದುವರಿಸುವುದಾಗಿಯೂ, ಇಲ್ಲಿಗೆ ತನ್ನ ಹಾಗೂ ಗಂಡನ ಸಂಬಂಧ ಮುಗಿಯಿತೆಂದೂ, ಮುಂದೆ ಬಂಗರ ಅರಮನೆಯವರಾರೂ ತನ್ನ ಬೈಲಂಗಡಿಯ ಅರಮನೆಗೆ ಬರಕೂಡದೆಂದೂ ಅರ್ಭಟಿಸಿ, ಆಣೆಇಟ್ಟು, ಅದೇ ಸಿಟ್ಟು ಸಿಡುಕುಗಳಿಂದ ಬಂಗಾಡಿಯನ್ನು ತೊರೆದು, ಬೈಲಂಗಡಿ ಅರಮನೆಗೆ ನಡೆದಳು.

ಬೈಲಂಗಡಿಗೆ ಬಂದವಳೇ ತರಾತುರಿಯಲ್ಲಿ ತನ್ನ ಅರಮನೆಯಿಂದ ಸುಮಾರು 2 ಕಿ. ಮೀ. ದೂರದಲ್ಲಿರುವ ಒಂದು ಪ್ರಶಸ್ತಿ ಸ್ಥಳದಲ್ಲಿ ಶ್ರೀ ಪಾರ್ಶ್ವನಾಥ ಸ್ವಾಮಿ ಬಸದಿಯನ್ನು ಕಟ್ಟಿಸಿಕೊಂಡಳು. ಪತಿಯನ್ನು ತೊರೆದು ಬಂದುದರಿಂದ, ಅರಮನೆಯವರು ಕೊಡಬಹುದಾದ ಕಿರುಕುಳ, ಟೀಕೆಗಳಿಂದ ದೂರವಿರುವುದಕ್ಕಾಗಿ ಕೆಲವು ದಿನಗಳ ಕಾಲ ಅದೇ ಬಸದಿಯಲ್ಲಿದ್ದು ತನ್ನ ನೋಂಪಿಯನ್ನು ಪೂರೈಸಿ ಕೊಂಡಳು. ಆ ಬಳಿಕ ತನ್ನ ಬೈಲಂಗಡಿಯ ಅರಮನೆಯನ್ನು ಸೇರಿ, ಹಿಂದಿನ ಸವಿ ದಿನಗಳು ಮನಸ್ಸಿನಲ್ಲಿ ಮರುಕಳಿಸುತ್ತಿದ್ದರೂ ಯಾರಿಗೂ ತೋರಗೊಡದೆ ವಿಚಲಿತ ಳಾಗದವಳಂತೆ ನಟಿಸುತ್ತಾ ಛಲದಿಂದ ಆಳ್ವಿಕೆಯನ್ನು ಮುಂದುವರಿಸಿಕೊಂಡು ಹೋದಳು.

ಈ ಕಡೆ ಬಂಗಾಡಿಯಲ್ಲಿ, ಲಕ್ಷ್ಮಪ್ಪರಸ ಬಂಗನು ತನ್ನ ಪತ್ನಿಯ ದುಡುಕಿಗೆ ಸಿಟ್ಟುಗೊಂಡರೂ, ಕ್ರಮೇಣ ಆಕೆಯ ಬಗ್ಗೆ ಸಹಾನುಭೂತಿಯನ್ನು ತಂದುಕೊಂಡ. ಮಕ್ಕಳಿಲ್ಲದ

ಅರಸುಮನೆತನಗಳೊಡನೆ ಇದ್ದ ವೈಷಮ್ಯವನ್ನು ಕೊನೆಗೊಳಿಸಿದ. ಇದೇ ಸಮಯಕ್ಕೆ ಬೆಳ್ತಂಗಡಿ ತಾಲೂಕಿನ ಇನ್ನೊಂದು ಮೂಲೆಯಿಂದ ರಾಜ್ಯವಾಳುತ್ತಿದ್ದ ಬೈಲಂಗಡಿಯ ಮೂಲರೆಂಬ ಜೈನರ ಅರಮನೆಯಲ್ಲಿ ರಾಜ ಕುಮಾರಿ ಸೋಮಲಾದೇವಿ (ಶಂಕರದೇವಿ) ಪ್ರಾಯ ಪ್ರಬುದ್ಧೆಯಾಗಿದ್ದಳು. ಆಕೆಯ ರೂಪಲಾವಣ್ಯದ ಕುರಿತು ಲಕ್ಷ್ಮಪ್ಪರಸ ಬಂಗನು ಕೇಳಿ ತಿಳಿದಿದ್ದ. ಆದರೆ, ಆ ಚಿಕ್ಕ ಅರಸುಮನೆತನದೊಡನೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿಕೊಳ್ಳುವುದು ತನ್ನ ಘನತೆಗೆ ಯೋಗ್ಯವಾದುದಲ್ಲ ಎಂದು ಭಾವಿಸಿಕೊಂಡಿದ್ದರೂ ಒಂದುದಿನ ತನ್ನ ಸೇನಾನಿಯಾಗಿದ್ದ ಪೆರಿಂಜೆಗುತ್ತು ದೇವಪೂಂಜನೆಂಬವನಿಂದ ಆಕೆಯ ಗುಣನಡತೆಗಳನ್ನು ತಿಳಿದುಕೊಂಡ. ರಾಣೀವಾಸದ ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದು ಕೋಮಲೆಯಾಗಿದ್ದರೂ, ರಾಜ ಕುಮಾರಿ ಸೋಮಲಾದೇವಿಯು ವೀರೋಚಿತ ಗುಣಗಳನ್ನು ಮೈಗೂಡಿಸಿಕೊಂಡಿದ್ದಳು. ಶೌರ್ಯ ಸಾಹಸಗಳನ್ನು ಮೆಚ್ಚುತ್ತಿದ್ದಳು. ಲಕ್ಷ್ಮಪ್ಪರಸ ಬಂಗನು ವೇಣೂರಿನ ಅರಸ ತಿಮ್ಮಣ್ಣಾಜಿಲನನ್ನು ಯುದ್ಧದಲ್ಲಿ ಸೋಲಿಸಿದ್ದ ವಾರ್ತೆಯನ್ನು ಕೇಳಿ, ಆತನ ಕುರಿತು ಬಹಳ ಮೆಚ್ಚುಗೆಯನ್ನು ಹೊಂದಿದ್ದಳು. ವೀರನೂ, ಛಲವಂತನೂ, ಮಾನವೀಯ ಅಂತಃಕರಣವುಳ್ಳವನೂ ಆಗಿದ್ದ ಲಕ್ಷ್ಮಪ್ಪಬಂಗರಸನೇ ತನಗೆ ಯೋಗ್ಯನಾದ ಪತಿಯೆಂದು ನಿಶ್ಚಯಿಸಿಕೊಂಡು, ಒಂದು ದಿನ ತನ್ನ ಹೆತ್ತವರಿಗೂ ಅದನ್ನು ತಿಳಿಸಿಬಿಟ್ಟಳು. ಆದರೆ ಬಂಗರ ಅರಮನೆಗೆ ಹೆಣ್ಣು ಕೊಡಲು ನಮ್ಮ ಅಂತಸ್ತು ಸಾಲದೆಂದು ತನ್ನ ತಂದೆ ಬುದ್ಧಿ ಹೇಳಿದರೂ, ರಾಜಕುಮಾರಿ ಕೇಳಲಿಲ್ಲ. ತನ್ನ ಛಲವನ್ನು ಬಿಡಲೇ ಇಲ್ಲ. ತಾನು ಮದುವೆಯಾಗುವುದಿದ್ದರೆ, ಅದು ಲಕ್ಷ್ಮಪ್ಪರಸ ಬಂಗನೊಡನೆ ಮಾತ್ರ ಎಂದು ಘೋಷಿಸಿಕೊಂಡಳು.

ಬಂಗರಸನ ಸೇನಾನಿ ದೇವಪೂಂಜನು ಮಧ್ಯಸ್ಥಿಕೆ ವಹಿಸಿ ಈ ಎರಡೂ ಕಡೆಯವರನ್ನು ಒಲಿಸಿಕೊಂಡನು. ಅದರಂತೆ, ಅರಸನ ಸಾಹಸದ ಗುಣಗಳನ್ನೇ ಮೆಚ್ಚಿಕೊಂಡು ಒಲಿದು ಬಂದ ಈ ರಾಜಕುಮಾರಿಗೆ ಸವತಿ ಮಾತ್ಸರ್ಯದ ಪೀಡೆ ಬರಕೂಡದೆಂದೂ, ಅವಳಿಗೆ ಪಟ್ಟ ಮಹಿಷಿಯ ಸ್ಥಾನ ಕೊಡಬೇಕೆಂದೂ ಅರಸನಲ್ಲಿ ಪ್ರಾರ್ಥಿಸಿಕೊಂಡನು. ಆತ್ಮೀಯನಾದ ದೇವಪೂಂಜನ ಈ ಮಾತಿಗೆ ಲಕ್ಷ್ಮಪ್ಪರಸ ಬಂಗ ಒಪ್ಪಿದ. ಸಂತೋಷ ಭರಿತಳಾದ ರಾಜಕುಮಾರಿ ಸೋಮಲಾದೇವಿ ತನ್ನ ಅರಮನೆಯ ಬಂಧುಗಳೊಡನೆ ಬಂಗಾಡಿಗೆ ಬಂದು ಶ್ರೀ ಶಾಂತಿನಾಥ ಬಸದಿಯ ರಾಜಾಂಗಣದಲ್ಲಿ ಲಕ್ಷ್ಮಪ್ಪರಸ ಬಂಗನನ್ನು ವಿವಾಹವಾಗಿ, ಆತನ ಎರಡನೇ ಪತ್ನಿಯಾಗಿ ಅರಮನೆ ಸೇರಿದಳು. ಸುಖ ಸಂತೋಷಗಳಿಂದ ದಿನಗಳು ಉರುಳತೊಡಗಿದವು. ತನ್ನ ಪತ್ನಿಯರಾದ ಚೌಟ ಅರಮನೆಯ ಅಬ್ಬಕ್ಕ ದೇವಿಯೊಡನೆಯೂ, ನೂತನ ಪತ್ನಿ ಬೈಲಂಗಡಿಯ ಸೋಮಲಾದೇವಿಯೊಡನೆಯೂ ತನ್ನ ಪ್ರೀತಿಯನ್ನು ಸಮಾನವಾಗಿ ಹಂಚಿಕೊಳ್ಳುತ್ತಾ, ಲಕ್ಷ್ಮಪ್ಪರಸ

ಅಸ್ತಂಗತನಾದನು. ಬೈಲಂಗಡಿ ಅರಮನೆಯ ಜ್ಯೋತಿಯೂ ನಂದಿತು. ಎಲ್ಲೆಡೆಯೂ ಕತ್ತಲು ಕವಿಯಿತು. ಬೈಲಂಗಡಿಯ ಕಾಡಿನಿಂದ ನರಿ, ಗೂಗೆಗಳು ಬೊಬ್ಬಿಡತೊಡಗಿದವು. ಬಂಗರಸ ರಾಜವಂಶದ ಪುಣ್ಯ ಜೀವವೊಂದು ಈ ರೀತಿ ಹತ್ಯೆಯಾದುದನ್ನೂ ಪಶ್ಚಾತ್ತಾಪದಲ್ಲಿ ಬೆಂದು ಆತ್ಮಹತ್ಯೆ ಮಾಡಿಕೊಂಡರೂ ಸೋಮಲಾದೇವಿ ಸುಮಂಗಲಿಯಾಗಿಯೇ ಗತಿಸಿದುದನ್ನೂ ತಿಳಿದು ಇಡೀ ಬಂಗರಾಜ್ಯ ದುಃಖ ಸಾಗರದಲ್ಲಿ ಮುಳುಗಿತು. ಆದರೆ ಇವರಿಬ್ಬರ ಅಮರ ಪ್ರೇಮವನ್ನು ಕಂಡು ಅಶ್ರುತರ್ಪಣವನ್ನು ಅರ್ಪಿಸಿತು.

ಈ ರಾಜ ದಂಪತಿಗಳ ಶವ ಸಂಸ್ಕಾರವಾದ ಸ್ಥಳದಲ್ಲಿ ಎರಡು ಶಿಲಾ ಮಂಟಪಗಳನ್ನು ಕಟ್ಟಿಸಲಾಗಿದೆ. ಅರಮನೆಯ ಎದುರೇ ಕಟ್ಟಿಸಿದ್ದ ಈ ಸಮಾಧಿಗಳನ್ನು ನಾವು ಇಂದಿಗೂ ಇಲ್ಲಿ ಕಾಣಬಹುದು. ರಾಜದಂಪತಿಗಳ ಈ ದುರಂತ ಕ್ರಿ. ಶ. 1556ರಲ್ಲಿ ನಡೆಯಿತೆಂದು ಕೆಲವು ಸಾಹಿತ್ಯಕೃತಿ ಹಾಗೂ ಶಾಸನಗಳ ಅಧ್ಯಯನದಿಂದ ನಿರ್ಣಯವಾಗುತ್ತದೆ.

ಸೋಮಲಾದೇವಿಯ ಮರಣಾನಂತರ ಬೈಲಂಗಡಿ ಅರಮನೆಯ ಆಳ್ವಿಕೆ ಅವನತಿಯನ್ನು ಕಂಡಿತು; ಅದನ್ನು ಮುಂದುವರಿಸಲು ಗಂಡು ಸಂತಾನವಿಲ್ಲದೆ, ಒಮ್ಮೆಗೆ ಇಡೀ ರಾಜಧಾನಿಯೇ ಕಳ್ಳಕಾಕರ ಸೂರೆಯ ನೆಲೆಯಾಯಿತು. ಸಮೀಪದ ಕಾಡಿನಿಂದ ಇಳಿದು ಬಂದು ಮಲೆಕುಡಿಯರು ಸಿಕ್ಕಿದ್ದನ್ನು ದೋಚಿಕೊಂಡು ಹೋದರು. ಸೈನಿಕರು ದಿಕ್ಕಾಪಾಲಾದರು. ಅರಮನೆ, ಕೋಟೆ, ಬಸದಿ, ಉಗ್ರಾಣ. ಉದ್ಯಾನಗಳೆಲ್ಲವೂ ಜೀರ್ಣವಾಗಿ ಬೀಳತೊಡಗಿದವು. ಕ್ರಮೇಣ ಅರಮನೆ ಇದ್ದ ಸ್ಥಳವು ಒಂದು ದೊಡ್ಡ ಮಣ್ಣಿನ ದಿನ್ನೆಯಾಗಿ ರೂಪುಗೊಂಡಿತು.

ಆದರೆ, ಈ ಶತಮಾನದ ಪ್ರಾರಂಭದಲ್ಲೊಮ್ಮೆ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ಮಂಜಯ್ಯ ಹೆಗ್ಗಡೆಯವರು ಈ ಸ್ಥಳಕ್ಕೆ ಆಗಮಿಸಿದ್ದಾಗ ಇಲ್ಲಿಯ ಸ್ಥಿತಿಯನ್ನು ಕಂಡು, ಬೇಸರಪಟ್ಟು ನಾಶದ ಅಂಚಿನಲ್ಲಿದ್ದ, ರಾಜದಂಪತಿಗಳು ಉರುಳಿಬಿದ್ದಿದ್ದ ಈ ಮೆಟ್ಟಿಲ ಸಾಲುಗಳನ್ನು ಪುನಃ ದುರಸ್ತಿಮಾಡಿ ಕಟ್ಟಿಸಿದರು. ಮುಂದೆ ಇಲ್ಲಿರುವ ಎರಡು ದೇವಸ್ಥಾನಗಳೂ ಭದ್ರವಾಗಿ ಕಟ್ಟಲ್ಪಟ್ಟವು. ಆದರೆ ಸುಮಾರು 448 ವರ್ಷಗಳು ಕಳೆದರೂ ಆ ರಾಜದಂಪತಿಗಳ ಸ್ಮಾರಕಗಳು ಮಾತ್ರ ಇಂದಿಗೂ ಈ ಕರುಣಕಥೆಗೆ ಸಾಕ್ಷಿಯಾಗಿ ನಿಂತಿವೆ.

ಕೊರಗೂ, ಪತ್ನಿಯ ವಿರಹ ವೇದನೆಯೂ ಆತನನ್ನು ಬಹಳ ದುಃಖಕ್ಕೀಡು ಮಾಡಿತು. ಆದುದರಿಂದ ಮೊದಲಿನ ಘಟನೆ ನಡೆದ ಸುಮಾರು ಒಂದು ವರ್ಷದ ಬಳಿಕ ತನ್ನ ಪತ್ನಿಯನ್ನು ಕಾಣುವುದಕ್ಕಾಗಿ ಲಕ್ಷ್ಮಪ್ಪರಸನು ಬೈಲಂಗಡಿಯತ್ತ ಹೊರಟ. ಆಗ ಮನದಲ್ಲಿ ಯಾಕೋ ದುಃಖ ಉಮ್ಮಳಿಸಿ ಬಂದುದರಿಂದ ತನ್ನ ಸಹೋದರಿಯ ಮಗನಾದ ಕಾಮರಾಯನನ್ನು ಕರೆದು ಮಕ್ಕಳಿಲ್ಲದ ತನಗೆ ಆತನೇ ಮಗನೆಂದೂ, ತಾನು ಬೈಲಂಗಡಿಯಿಂದ ಹಿಂದಿರುಗಿ ಬರುವವರೆಗೆ ಚಿಕ್ಕ ಪ್ರಾಯದವನಾದರೂ ಆಡಳಿತವನ್ನು ನೋಡಿಕೊಳ್ಳುವಂತೆಯೂ ಆತನಿಗೆ ಹೇಳಿ ಅರಮನೆಯ ದಕ್ಷಿಣದ ಬಾಗಿಲಿನಿಂದ ಹೊರಟು ಹೋದನು. ಬೈಲಂಗಡಿಗೆ ಹೋಗಲು ಕಾಡುದಾರಿಯೇ ಸಮೀಪದ ದಾರಿಯಾಗಿದ್ದುದರಿಂದ ಅದೇ ದಾರಿಯನ್ನು ಅನುಸರಿಸಿದನು. ಇದನ್ನು ಕಂಡ ಅರಮನೆಯ ಸೈನಿಕರು ಆತನ ರಕ್ಷಣೆಗಾಗಿ ಆತನನ್ನು ಹಿಂಬಾಲಿಸಿಕೊಂಡು ಹೋದರು. ಏರ್ಕಲ್ಲು ಗುಡ್ಡ ಮತ್ತು ಚಿಬಿದ್ರೆ ಗುಡ್ಡಗಳನ್ನು ದಾಟಿ ಬೈಲಂಗಡಿಯ ರಾಜಾಂಗಣದ ಬಳಿಗೆ ಬಂದಾಗ ಅವರ ಗುಂಪನ್ನು ಕಂಡ ಸೋಮಾಲಾದೇವಿಯು, ತನ್ನ ಗಂಡನು ಸೈನ್ಯವನ್ನು ತೆಗೆದುಕೊಂಡು ತನ್ನೊಡನೆ ಯುದ್ಧ ಸಾರುವುದಕ್ಕಾಗಿ ಬರುತ್ತಿರುವನೆಂದು ಭಾವಿಸಿ ತನ್ನ ಅರಮನೆಯ ಕಟ್ಟಾಳುಗಳನ್ನು ಕರೆದು ರಾಜಾಂಗಣದಿಂದ ಅರಮನೆಗೆ ಏರಿ ಬರುವ ಮೆಟ್ಟಿಲುಗಳ ಸಾಲುಗಳಲ್ಲಿ ನಿಲ್ಲಿಸಿ ಯಾರೇ ಆದರೂ ಈ ಮೆಟ್ಟಿಲುಗಳನ್ನು ಏರಿ ಬಂದರೆ ಕಡಿದು ಕೊಂದುಬಿಡಿರೆಂದು ಆಜ್ಞಾಪಿಸಿ ಅರಮನೆಯ ಅಂತಃಪುರಕ್ಕೆ ಹೋದಳು.

ಪತ್ನಿಯ ಅರಮನೆಯನ್ನು ಕಂಡು ಸಂತೋಷಗೊಂಡ ಲಕ್ಷ್ಮಪ್ಪರಸ ಬಂಗ ರಾಜನು ತನ್ನೊಡನೆ ಬಂದಿದ್ದ ಸೈನಿಕರನ್ನು ರಾಜಾಂಗಣದಲ್ಲಿ ನಿಲ್ಲಿಸಿ ತಾನೊಬ್ಬನೇ ಅರಮನೆಯ ಮೆಟ್ಟಿಲನ್ನೇರತೊಡಗಿದ. ಮತ್ತು ಪ್ರೀತಿ ತುಂಬಿದ ಧ್ವನಿಯಿಂದ ತನ್ನ ಪತ್ನಿಯನ್ನು ಕೂಗಿ ಕರೆದ. ಈ ಸವಿಯಾದ ಕರೆಯನ್ನು ಕೇಳಿ ತನ್ನ ದುರಹಂಕಾರವನ್ನೆಲ್ಲ ಮರೆತು, ತನ್ನ ಗಂಡನನ್ನು ಎದುರುಗೊಳ್ಳಲಿಕ್ಕಾಗಿ ಸರ್ವಾಂಗ ಭೂಷಿತೆಯಾಗಿ ರಾಣಿಯು ಹೊರಕ್ಕೆ ಧಾವಿಸಿ ಬಂದಳು. ಆದರೆ ಆಗಲೇ ಆಕೆಯ ನಾಲ್ಕಾರು ಆಳುಗಳು ರಾಣಿಯ ಹಿಂದಿನ ಆಜ್ಞೆಯನುಗಾರ ಮುತ್ತಿಗೆ ಹಾಕಿ ರಾಜನನ್ನು ತಮ್ಮ ಖಡ್ಗಗಳಿಂದ ಇರಿದು ಹಾಕಿದ್ದರು. ಮೆಟ್ಟಿಲುಗಳ ಮೇಲಿಂದ ಕೆಳಗೆ ಉರುಳಿ ಉರುಳಿ ರಾಜಾಂಗಣದಲ್ಲಿ ಬಿದ್ದಿದ್ದ ರಾಜನ ದೇಹವು ರಕ್ತದ ಮಡು ವಿನಲ್ಲಿ ಕೊನೆಯ ಉಸಿರಾಟಕ್ಕಾಗಿ ಚಡಪಡಿಸುತ್ತಿತ್ತು.

ಹಿಂದಿನದೆಲ್ಲವನ್ನು ಮರೆತು ಪ್ರೀತಿಯಿಂದ ತನ್ನಲ್ಲಿಗೆ ಆಗಮಿಸಿದ್ದ ತನ್ನ ಪತ್ನಿಯ ಹತ್ಯೆಗೆ ತಾನೇ ಕಾರಣಳಾದೆ ಎಂಬ ದುಃಖಾಗ್ನಿಯಲ್ಲಿ ಬೆಂದ ರಾಣಿಯು ಬೊಬ್ಬಿಡುತ್ತಾ ಆಕ್ರಂದನದೊಂದಿಗೆ ಅದೇ ಖಡ್ಗಗಳಿಂದ ತನ್ನನ್ನೂ ಸೀಳಿಕೊಂಡಳು. ಅದೇ ಮೆಟ್ಟಿಲುಗಳಿಂದ ಕೆಳಗುರುಳಿ ಆಕೆಯ ಮೃತ ದೇಹವೂ ರಾಜಾ ಲಕ್ಷ್ಮಪ್ಪರಸ ಬಂಗನ ಬಳಿಯಲ್ಲೇ ಬಂದು ಬಿದ್ದಿತು. ಇಲ್ಲಿಗೆ ಬಂಗರ ಅರಮನೆಯ ವೈಭವದ ಸೂರ್ಯನು

ನೇತ್ರಾವತಿ
ಅಂದು, ಇಂದು, ಮುಂದು

ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಬರುವ ಯಾತ್ರಿಕರು ಇಲ್ಲಿಯ ನೇತ್ರಾವತಿ ನದಿಯಲ್ಲಿ ಸ್ನಾನ ಮಾಡಲು ಬಯಸುತ್ತಾರೆ. ಆದ ಕಾರಣ ಶ್ರೀ ಕ್ಷೇತ್ರದಿಂದ ಒಂದೂವರೆ ಕಿಲೋ ಮೀಟರ್ ದೂರದಲ್ಲಿ ಹರಿಯುವ ಈ ನದಿಯಲ್ಲಿ ನೂರಾರು ಜನರು ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ ಸ್ನಾನ ಮಾಡುತ್ತಿರುವುದನ್ನು ಇಲ್ಲಿ ಸದಾ ಕಾಲದಲ್ಲಿಯೂ ಕಾಣ ಬಹುದು. ನೀಲವರ್ಣದ ಪರಿಶುದ್ಧ ನೀರಿನೊಂದಿಗೆ ಹರಿಯುವ ನೇತ್ರಾವತಿಯು ಪಶ್ಚಿಮ ಘಟ್ಟಗಳ ಗಿರಿವನಗಳ ಮುಖಾಂತರ ಹರಿದು ಬಂದು ವಿಭಿನ್ನ ಖನಿಜಗಳ ಶಕ್ತಿಯನ್ನೂ, ಗಿಡ ಮೂಲಿಕೆಗಳ ಔಷಧೀಯ ಸತ್ವವನ್ನೂ ಒಳಗೊಂಡಿರುತ್ತದೆ. ಬಂಡೆಕಲ್ಲುಗಳ ಎಡೆಯಿಂದ ಹರಿಯುವಾಗ ಮಂಜುಳನಾದವನ್ನುಂಟುಮಾಡಿ ದಡದಲ್ಲಿರುವ ನೂರಾರು ವನ ಪಕ್ಷಿಗಳ ಕಲರವದ ಸ್ವಾಗತ ಗೀತೆಗಳೊಂದಿಗೆ ಮುಂದುವರಿಯುತ್ತಾ ಗಿಡಮರಗಳಿಗೆ ನೀರುಣಿಸುತ್ತಾ ಶ್ರೀ ಕ್ಷೇತ್ರ ಧರ್ಮಸ್ಥಳದ ಸಾಮೀಪ್ಯವನ್ನು ಸೇರುತ್ತದೆ. ಪಶ್ಚಿಮ ಘಟ್ಟದ ಹರಿದ್ವರ್ಣದ ಗಿಡಮರಗಳ ಮೇಲಿಂದ ಹರಿದು ಬರುವ ನೇತ್ರಾವತಿಯಲ್ಲಿ ಪೇಟೆ ಪಟ್ಟಣದ ಧೂಳು, ಕೊಳೆ, ಕಶ್ಮಲಗಳು ಇಲ್ಲದಿರುವುದರಿಂದ ಸದಾಕಾಲದಲ್ಲಿಯೂ ನಿರ್ಮಲ ವಾಗಿರುತ್ತದೆ. ಸ್ನಾನ ಮಾಡಲು ಆಕರ್ಷಕವಾಗಿರುತ್ತದೆ.

ಇದು ಸಹ್ಯಾದ್ರಿ ಶ್ರೇಣಿಯ ಪಶ್ಚಿಮಕ್ಕೆ ಹಾಗೂ ಕುದುರೆ ಮುಖ ಬೆಟ್ಟಗಳ ಪೂರ್ವಕ್ಕೆ ಹರಡಿರುವ ನಿಡಿದಾದ ವರಾಹ ಪರ್ವತದಲ್ಲಿ ಉಗಮಿಸಿ ದಕ್ಷಿಣಕ್ಕೆ ಹರಿದು, ಮುಂದೆ ಪಶ್ಚಿಮಗಾಮಿನಿಯಾಗಿ ಹರಿಯುತ್ತಾ ಮುಂದುವರಿದಂತೆ ಮೃತ್ಯುಂಜಯ ಹೊಳೆ, ಸುಸಾಲ ಹೊಳೆ, ಬಂಡಾಜೆ ಹೊಳೆ, ಅಣಿಯೂರು ಹೊಳೆ, ಕಪಿಲಾ ನದಿ, ನೆರಿಯ ಹೊಳೆ, ಏರುಮಲೆ ಹೊಳೆ ಹಾಗೂ ಕುಮಾರ ಧಾರಾ ನದಿಯನ್ನು ಸೇರಿಕೊಂಡು ಪಶ್ಚಿಮದ ಅರಬೀಸಮುದ್ರವನ್ನು ಸೇರುತ್ತದೆ. ಒಟ್ಟು 160 ಕಿಲೋ ಮೀಟರ್ ಉದ್ದವಿರುವ ಈ ನದಿಯ ದಡದಲ್ಲಿ ಹಲವಾರು ದೇವಾಲಯಗಳಿವೆ. ಅದು ಘಟ್ಟದಿಂದ ಬಯಲಿಗೆ ಇಳಿದೊಡನೆ ಸಿಗುವ ಬಂಗಾ ಡಿಯು ಬಂಗರೆಂಬ ಜೈನ ಅರಸರ ರಾಜಧಾನಿಯಾಗಿತ್ತು. ಕುಮಾರಧಾರಾ ನದಿ ಸೇರುವ ಸಂಗಮ ಸ್ಥಳವಾದ ಉಪ್ಪಿನಂಗಡಿಯು ದಕ್ಷಿಣಕಾಶಿ ಎಂದು ಕರೆಯಲ್ಪಟ್ಟು ಪುಣ್ಯಕ್ಷೇತ್ರವಾಗಿದೆ. ಅದರಂತೆ ಪಾಣೆಮಂಗಳೂರಿನ ಬಳಿ ಸಿಗುವ ನಂದಾವರವು ಹಿಂದೆ ಅದೇ ಬಂಗರಸರ ಇನ್ನೊಂದು ರಾಜಧಾನಿಯಾಗಿತ್ತು. ಅರಬೀ ಸಮುದ್ರವನ್ನು ಸೇರುವಾಗ ಬಹಳ ಅಗಲವಾಗುವ ನೇತ್ರಾವತಿಯು ಸಾಗರದ ಹಿನ್ನೀರನ್ನು

ಕ್ರಿ. ಶ. 1556ರಲ್ಲಿ ಈ ಲಕ್ಷ್ಮಪ್ಪರಸ ಬಂಗನ ಸಹೋದರಿಯ ಮಗನಾದ ಮುಮ್ಮಡಿ ಕಾಮರಾಯನು (ಕ್ರಿ. ಶ. 1556 - 1612) ಬಂಗಾಡಿಯಲ್ಲಿ ಪಟ್ಟವನ್ನೇರಿದ್ದರಿಂದ ಈ ಬಂಗ ವಂಶವು ಮುಂದೆ ಸುಮಾರು 350 ವರ್ಷಗಳ ಕಾಲ ಆಳ್ವಿಕೆ ನಡೆಸಿತು. ಸೋಮಲಾದೇವಿಯು ತರಾತುರಿಯಲ್ಲಿ ಕಟ್ಟಿಸಿದ್ದ ಬೈಲಂಗಡಿಯ ಶ್ರೀ ಪಾರ್ಶ್ವನಾಥ ಬಸದಿಯು ಜೀರ್ಣವಾಗ ತೊಡಗಿದಾಗ, ಇದೇ ಮುಮ್ಮಡಿ ಕಾಮರಾಯ ಬಂಗನ ಪ್ರಧಾನಿಯಾಗಿದ್ದ ಈಶ್ವರಸೇನಬೋವ ಎಂಬಾತನು ಪ್ರೇಮ ದುರಂತಕ್ಕೊಳಗಾದ ಲಕ್ಷ್ಮಪ್ಪ ರಸ-ಸೋಮಲಾದೇವಿ ರಾಜದಂಪತಿಗಳಿಗೆ ಸದ್ಗತಿಯುಂಟಾಗಲೆಂದು ಈ ಬಸದಿಯನ್ನು ಕ್ರಿ. ಶ. 1611ರಲ್ಲಿ ಜೀರ್ಣೋದ್ಧಾರಗೊಳಿಸಿ ಪುರ್ನನಿರ್ಮಿಸಿದನು. ಈ ಐತಿಹಾಸಿಕ ಸಂಗತಿಯು ಈ ಬಸದಿಯ ಭದ್ರ ಮಂಟಪದ ಬಲ ದಿಕ್ಕಿನಲ್ಲಿರುವ ಕಂಬದ ತಳಭಾಗದಲ್ಲಿ ಒಂದು ಶಾಸನದ ರೂಪದಲ್ಲಿ ಬರೆಯಲ್ಪಟ್ಟಿದೆ. ವರ್ಷಗಳು ಉರುಳಿದರೂ, ಪ್ರೇಮ ದುರಂತದ ಈ ಕಣ್ಣೀರ ಕಥೆಯನ್ನು ಇಂದಿಗೂ ಇದು ಸಾರಿ ಹೇಳುತ್ತಿದೆ.

ಇಷ್ಟಾರ್ಥಗಳನ್ನು ಈಡೇರಿಸುತ್ತಾ ಕ್ಷೇತ್ರಕ್ಕೆ ವಿಶೇಷವಾದ ದೈವಸಾನ್ನಿಧ್ಯವನ್ನು ತಂದೊದಗಿಸಿದರು. ತಾನೇ ಆರಾಧಿಸಲ್ಪಡುತ್ತಿರುವ ಈ ಕ್ಷೇತ್ರದಲ್ಲಿ ತನ್ನ ಪರಿವಾರದ ಧರ್ಮ ದೇವತೆಗಳು ನೆಲೆಸಿರುವುದನ್ನು ಕಂಡು, ಸಂತೋಷಗೊಂಡ ಸಾಕ್ಷಾತ್ ಪರಮೇಶ್ವರನ ನೇತ್ರಗಳಿಂದ ಜಲಧಾರೆಯು ಹರಿಯ ತೊಡಗಿತು. ಬೇರೆ ಜಲ ಮೂಲಗಳೊಂದಿಗೆ ಕೂಡಿಕೊಂಡ ಈ ನೇತ್ರಧಾರೆಯು "ನೇತ್ರಾವತಿ" ಎಂಬ ಹೆಸರಿನಿಂದ ಲೋಕಪೂಜ್ಯ ನದಿಯಾಯಿತು. ಶಿವಸಾನ್ನಿಧ್ಯದಿಂದ ಹರಿದು ಬಂದ ಈ ಪುಣ್ಯ ವಾಹಿನಿಯಲ್ಲಿ ಮಿಂದು ಶ್ರೀ ಮಂಜುನಾಥ ನನ್ನು ಅರ್ಚಿಸಿ ಪೂಜಿಸುವುದು ನಿತ್ಯ ಪದ್ಧತಿಯಲ್ಲಿ ಬೆಳೆಯಿತು. ಇದು ವಿಶೇಷ ಫಲದಾಯಕವೂ, ಪುಣ್ಯಪ್ರದವೂ ಆಯಿತು. ಬಹು ಪ್ರಾಚೀನ ಕಾಲ ದಿಂದಲೇ ನೇತ್ರಾವತಿ ನದಿಯಿಂದ ನೀರನ್ನು ತಂದು ಅದನ್ನು ಅಭಿಮಂತ್ರಿಸಿ ಶ್ರೀ ಮಂಜುನಾಥ ದೇವರಿಗೆ ಅಭಿಷೇಕ ಮಾಡುವ ಪದ್ಧತಿಯು ಬೆಳೆದು ಬಂದಿದೆ. ಇದು ಶ್ರೀ ಕ್ಷೇತ್ರದಲ್ಲಿ ಇಂದಿಗೂ ನಡೆಯುತ್ತಿದೆ. ಬಂದಿದೆ. ಶ್ರೀ ಮಂಜುನಾಥ ಸ್ವಾಮಿಗೆ ಅಭಿಷೇಕ ಮಾಡುವ ಈ ಪುಣ್ಯವತಿ ನೇತ್ರಾವತೀ ತೀರ್ಥದಲ್ಲಿ ನಾವೂ ಸ್ನಾನ ಮಾಡುವುದು ನಿಜವಾಗಿಯೂ ಮನುಷ್ಯ ಜನ್ಮದ ಭಾಗ್ಯ ವಿಶೇಷವೇ ಸರಿ.

ಹಿಂದೊಮ್ಮೆ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಶ್ರೀ ಮನ್ಮಧ್ವಾಚಾರ್ಯ ಪರಂಪರೆಯ ಸೋದೆ ಮಠದ ಶ್ರೀ ವಾದಿರಾಜ ಸ್ವಾಮಿಗಳು ಚಿತ್ತೈಸಿದ್ದರು. ಶ್ರೀ ಕ್ಷೇತ್ರದ ದೈವ ಸಾನ್ನಿಧ್ಯವನ್ನೂ, ಮನೋಹರತೆಯನ್ನೂ ಕಂಡು ಆನಂದಪಟ್ಟು ಬಳಿಯಲ್ಲಿ ಹರಿಯುವ ನೇತ್ರಾವತಿ ನದಿಯನ್ನು ಮೆಚ್ಚಿ ತಮ್ಮ ಗೌರವ ಸಲ್ಲಿಸಿದ್ದರು. ಅದನ್ನು ನಾವು ಅವರ ತೀರ್ಥ ಪ್ರಬಂಧ ಎಂಬ ಗ್ರಂಥದ ಒಂದನೇ ಭಾಗವಾದ ಪಶ್ಚಿಮ ಪ್ರಬಂಧದಲ್ಲಿ ಕಾಣಬಹುದು. ಸ್ವಾಮಿಗಳು ಹೇಳುವಂತೆ:-

ವರಾಹನಯನಾನಂದಧಾರಾ ನೇತ್ರಾವತೀ ಸರಿತ್।
ಶುಷ್ಕಂ ತದ್ಭಕ್ತಿಲತಿಕಾಂ ಪುಷ್ಣಾತಿ ಕಥಮನ್ಯಥಾ॥ 22॥
ಕೋಲಲೋಲಕೃಪಾಶೀಲಲೋಚನಾಂಬುಜ ಚುಂಬನೀ।
ಮಜ್ಜನ್ನೇತ್ರಾವತೀತೊ ಯೇ ತದ್ದಯೇಕಾಸ್ಪದಂನಕಃ॥ 23 ॥

(ಅಂದರೆ - ಮನೋಹರವಾದ ಹಾಗೂ ಭಕ್ತರಲ್ಲಿ ದಯಾಪೂರ್ಣರಾದ ವರಾಹ ದೇವರ ಕಣ್ಣುಗಳ ನೀರೇ ನೇತ್ರಾವತಿ. ಆ ನೇತ್ರಾವತಿಯ ಜಲದಲ್ಲಿ ಮುಳುಗಿ ಸ್ನಾನ ಮಾಡುವಾಗ ವರಾಹದೇವರ ಕರುಣಾಪೂರ್ಣವಾದ ನೋಟವು ನಮ್ಮ ಮೇಲೆ ಬೀಳುತ್ತದೆ. ಇದರಿಂದ ನಾವು ಪುನೀತರಾಗುತ್ತೇವೆ. ಈ ಕಾರಣದಿಂದಾಗಿ ದಯಾಮಯನಾದ

ಒಳಗೊಂಡಿರುವುದರಿಂದ ಸದಾ ನೀಲವರ್ಣದಿಂದ ಕಂಗೊಳಿಸುತ್ತದೆ. ಹಲವಾರು ಜಿನಾಲಯ ದೇವಾಲಯಗಳಿಂದ ಇಳಿದು ಬರುವ ತೀರ್ಥವು ಈ ನದಿಯನ್ನು ಸೇರುವುದರಿಂದ ಇದರಲ್ಲಿ ಸ್ನಾನ ಮಾಡುವುದು ಪುಣ್ಯದಾಯಕವೆಂದೇ ನಂಬಲಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ಬಳಿ ವನಪ್ರದೇಶದಲ್ಲಿ ಮಂದಗಾಮಿನಿಯಾಗಿ ಹರಿಯುವ ನೇತ್ರಾವತಿ ನದಿಯಲ್ಲಿ ಸ್ನಾನ ಮಾಡುವುದು ಒಂದು ವಿಶೇಷವಾದ ಅನುಭವವೇ ಹೌದು. ಹುಡಿಕಲ್ಲುಗಳ ಮೇಲಿನಿಂದ ಹರಿದು ಶುಭ್ರವಾಗಿ ಕಾಣುವ ಈ ನೀರು ಸ್ನಾನಕ್ಕೆ ಜನರನ್ನು ಆಕರ್ಷಿಸುತ್ತದೆ. ಈಜುವವರಿಗೆ ಇಲ್ಲಿ ಸಾಕಷ್ಟು ಆಳವಾದ ಜಲರಾಶಿಯಿದೆ. ಆದುದರಿಂದಲೇ ಶ್ರೀ ಕ್ಷೇತ್ರಕ್ಕೆ ಬರುವ ಎಲ್ಲಾ ಯಾತ್ರಿಕರು ಈ ನದಿಯಲ್ಲಿ ಮಿಂದು ಶ್ರೀ ಮಂಜುನಾಥ ಸ್ವಾಮಿಯ ಪೂಜಾದಿ ಸೇವಾ ಕಾರ್ಯಗಳಿಗೆ ಹೋಗುತ್ತಾರೆ. ತನ್ಮೂಲಕ, ಭಗವಂತನ ಕೃಪಾಶ್ರಯವನ್ನು ಪಡೆಯುತ್ತಾರೆ. ನೇತ್ರಾವತಿ ನದೀ ಸ್ನಾನದಿಂದ ಜನ್ಮಜನ್ಮಾಂತರಗಳ ಪಾಪವು ಕಳೆದು ಹೋಗಿ ಜೀವವು ಪರಿಶುದ್ಧವಾಗುತ್ತದೆ ಎಂದು ನಂಬಲಾಗಿದೆ.

ನೇತ್ರಾವತಿ ನದಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಶಿಲಾಶಾಸನಗಳು ಉಲ್ಲೇಖಿಸಿ ತಮ್ಮ ಗೌರವವನ್ನು ಸೂಚಿಸಿವೆ. ಅವುಗಳ ಪೈಕಿ ಬಂಟ್ವಾಳದಲ್ಲಿರುವ ಶ್ರೀ ತಿರುಮಲ ವೆಂಕಟರಮಣ ದೇವಾಲಯದ ಧ್ವಜಾರೋಹಣ ಸ್ತಂಭದ ಕೆಳಗಡೆಯಿರುವ 1823ನೇ ಇಸವಿಯ ಒಂದು ಸಂಸ್ಕೃತ ಶಿಲಾಶಾಸನದಲ್ಲಿ ನೇತ್ರಾವತಿ ನದಿಯನ್ನು "ತಿರುಮಲ ಬೆಟ್ಟದಂತಿರುವ ವರಾಹ ಪರ್ವತದ ಕರುಣೆಗೆ ಪಾತ್ರವಾಗಿ ಹರಿಯುವ ನೇತ್ರಾವತಿ ನದಿಯು ಪಾವನವಾದುದು" ಎಂದು ಹೇಳಲಾಗಿದೆ. (ಶ್ರೀಮದ್ವೆಂಕಟ ಭೂಧರೇಶಕರುಣಾ ಪಾತ್ರಾಂಕಿತಂ ಪಾವನಂ)

ಶ್ರೀ ಕ್ಷೇತ್ರ ಧರ್ಮಸ್ಥಳದ ಸ್ಥಳ ಪುರಾಣದಲ್ಲಿ ಹೇಳಿರುವಂತೆ, ಪುರಾಣ ಕಾಲದಲ್ಲೊಂದು ದಿನ ಕೈಲಾಸ ಪರ್ವತದ ಮೇಲೆ ಶಿವಸಾನ್ನಿಧ್ಯದಲ್ಲಿ ಪಾವನ ಮೂರ್ತಿಗಳಾಗಿ ಮೆರೆಯುತ್ತಿದ್ದ ಧರ್ಮದೇವತೆಗಳು ಶಿವ ಭಕ್ತರ ರಕ್ಷಣೆಗಾಗಿಯೂ, ಅವರ ಉದ್ಧಾರಕ್ಕಾಗಿಯೂ ಈ ಭೂಲೋಕಕ್ಕೆ ಇಳಿದು ಬಂದರು. ತಮಗೆ ಸೂಕ್ತವಾದ ಸ್ಥಳವನ್ನು ಹುಡುಕುತ್ತಾ ಲೋಕದಲ್ಲಿ ನಡೆಯುತ್ತಿದ್ದ ಅಧರ್ಮ, ಅನಾಚಾರಗಳಿಂದ ಬೇಸರಗೊಂಡು ಕೊನೆಗೆ ಭರತ ಖಂಡದ ದಕ್ಷಿಣಾ ಪಥದ ಪಶ್ಚಿಮ ಕರಾವಳಿಯಲ್ಲಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಆಗಮಿಸಿದರು. ಇಲ್ಲಿ ಹೆಗ್ಗಡೆಯವರೆಂಬ ಜೈನ ಮನೆತನದವರು ನಡೆಸುತ್ತಿದ್ದ ದಾನ ಧರ್ಮಗಳನ್ನೂ, ಅನುಸರಿಸುತ್ತಿದ್ದ ಧಾರ್ಮಿಕ ಹಾಗೂ ದೈವ ಭಕ್ತಿಪರವಾದ ಜೀವನವನ್ನೂ ಕಂಡು ಸಂತಸಗೊಂಡು ಇಲ್ಲಿಯೇ ಶಾಶ್ವತ ನೆಲೆಸಿದರು. ಈ ಕ್ಷೇತ್ರದ ಅಧಿದೇವತೆಯಾದ ಶ್ರೀ ಮಂಜುನಾಥ ಸ್ವಾಮಿಗೆ ಬೆಂಗಾವಲಾಗಿ ನಿಂತು ಇಲ್ಲಿಯ ಭಕ್ತರ

ವರಾಹ ಸ್ವಾಮಿಯು ಪಶ್ಚಿಮಾಂಬುಧಿಯ ನೀಲ ಮನೋಹರತೆಯನ್ನು ಕಂಡು ಪ್ರಸನ್ನನಾದನು. ಆಗ ಆತನ ನೇತ್ರಗಳಿಂದ ಆನಂದಾಶ್ರುವು ಹರಿಯಿತು. ನೇತ್ರಗಳಿಂದ ಹರಿದ ಈ ಅಮೃತ ಜಲವು ನೇತ್ರಾವತಿ ನದಿಯಾಗಿ ಹರಿಯಿತು.

ಆ ಶುಭ ಸನ್ನಿವೇಶದಲ್ಲಿ ಅಲ್ಲಿ ಸನ್ನಿಹಿತರಾಗಿದ್ದ ಅಶ್ವಿನಿ ದೇವತೆಗಳು ನೇತ್ರಾವತಿಯಲ್ಲಿ ಮಿಂದವರಿಗೆ ರೋಗ ನಿವಾರಣೆಯಾಗಲೆಂದೂ, ಯಮನು ಮೃತ್ಯು ಪರಿಹಾರವಾಗಲೆಂದೂ, ಶನಿಯು ಶನಿ ಪೀಡೆ ತೊಲಗಲೆಂದೂ ಅಭಯವನ್ನಿತ್ತರು. ಈ ಸಂತಸದಿಂದ ಮುದಗೊಂಡ ನೇತ್ರಾವತಿಯು ವರಾಹ ಪರ್ವತದಿಂದ ಧುಮ್ಮಿಕ್ಕಿ ತೆರೆನೊರೆಗಳೊಂದಿಗೆ ಗಂಭೀರ ಮಂದಗಮನೆಯಾಗಿ, ಮಂಜುಳನಾದದೊಂದಿಗೆ ಪ್ರವಹಿಸುತ್ತಾ ನರ್ತಿಸಿ ಲಾಸ್ಯವಾಡುತ್ತಾ ಶ್ರೀ ಕ್ಷೇತ್ರ ಧರ್ಮಸ್ಥಳದ ಸನಿಹದಿಂದ ಪುಣ್ಯ ವಾಹಿನಿಯಾಗಿ ಹರಿಯತೊಡಗಿದಳು. ಈ ಪುರಾಣ ಪುಣ್ಯದ ಕಥೆಯನ್ನು ತಿಳಿದ ಭಕ್ತಭಾವುಕರು ನೇತ್ರಾವತಿ ನದಿಯಲ್ಲಿ ಮಿಂದು ಪುನೀತರಾದರು. ರೋಗರುಜಿನಾದಿಗಳನ್ನು ಕಳೆದುಕೊಂಡು, ಶನಿ ಹಾಗೂ ಮೃತ್ಯು ಭಯದಿಂದ ವಿಮುಕ್ತರಾಗಿ ಶ್ರೀ ಮಂಜುನಾಥ ಸ್ವಾಮಿಯ ವಿಶೇಷ ಕೃಪಾಕಾರುಣ್ಯಕ್ಕೆ ಭಾಜನರಾದರು.

ಭಕ್ತವತ್ಸಲೆಯಾದ ನೇತ್ರಾವತಿಯು ಪರಶುರಾಮ ಕ್ಷೇತ್ರವಾದ ತುಳುನಾಡಿನಲ್ಲಿ ಹರಿಯುತ್ತಾ ಹೋಗುತ್ತಿದ್ದ ಸ್ಥಳಗಳಲ್ಲಿ ಹಲವಾರು ಶಿವಾಲಯಗಳೂ, ಜಿನಾಲಯಗಳೂ ನಿರ್ಮಾಣವಾದುವು. ಅರಮನೆ, ಕೋಟೆ ಕೊತ್ತಲಗಳು ಬೆಳೆದು ನಿಂತವು. ಜನನಿವಾಸಗಳು ವೃದ್ಧಿಯಾದವು. ಕೃಷಿ ಕೃಷ್ಯುತ್ಪನ್ನಗಳು ವಿಪುಲವಾದವು. ಹೀಗೆ ಜನ ಜೀವನದ ಆಧಾರಸ್ತಂಭವಾಗಿ ಬೆಳೆದ ನೇತ್ರಾವತಿಯು ಪ್ರತಿಭಾವಂತರಿಗೆ ವಿಭಿನ್ನ ರೂಪದಿಂದ ಕಂಗೊಳಿಸಿತು. ಬಂಗರ ರಾಜಧಾನಿಯಾದ ಬಂಗಾಡಿಯಲ್ಲಿದ್ದ ಕವಿ ಚಂದ್ರಶೇಖರನು ನೇತ್ರಾವತಿ ನದಿಯನ್ನು "ಪರಮಾತ್ಮನು ಪ್ರಕೃತಿ ಕನ್ನಿಕೆಗಿತ್ತ ಮಂಗಳಸೂತ್ರ"ವೆಂದು ವರ್ಣಿಸಿದ್ದಾನೆ. ಕ್ರಿ. ಶ. 1700ರ ಸುಮಾರಿಗೆ ಇದ್ದ ಈ ಜೈನ ಕವಿಯು ನೇತ್ರಾವತಿ ನದಿಯ ಚೆಲುವನ್ನು ಕಂಡು ಅದಕ್ಕೆ ಮನಸೋತು ಶ್ರೀರಾಮಚಂದ್ರ ಚರಿತ ಎಂಬ ತನ್ನ ಕಾವ್ಯದ ರಚನೆಗೆ ಸ್ಫೂರ್ತಿಯನ್ನೂ ಪಡೆದನು.

ಬಂಟ್ವಾಳ ತಾಲೂಕಿನ ಪಾಣೆಮಂಗಳೂರಿಗೆ ಕ್ರಿ. ಶ. 1830ರಲ್ಲಿ ಬಂದಿದ್ದ ಮೂಡಬಿದ್ರೆಯ ಜೈನ ಕವಿ ಚದುರ ಚಂದಯ್ಯನು ಇಲ್ಲಿಯ ನೇತ್ರಾವತಿ ನದಿಗೆ ಬಂದು ಅದಕ್ಕೆ ತನ್ನ ಗೌರವವನ್ನು ಸೂಚಿಸಿದ್ದಾನೆ. ಪಶ್ಚಿಮ ಸಮುದ್ರವನ್ನು ಸೇರಿಕೊಳ್ಳಲು ಇಲ್ಲಿ ಮಂದಗಮನೆಯಾಗಿ ಹರಿಯುವ ನೇತ್ರಾವತಿಯು ಹಾಲಿನ ಸಮುದ್ರದಂತೆ ಕಂಡು ಬರುವುದೆಂದು ವರ್ಣಿಸಿರುವನು. ಈ ನದಿಯ ದಡದಲ್ಲಿ ಪಾಣೆ ಮಂಗಳೂರಿನ ಶ್ರೀ ಅನಂತನಾಥ ಸ್ವಾಮಿಯ ಜಿನಾಲಯದಂತೆ ಇನ್ನೂ ಹಲವಾರು ಜಿನಾಲಯಗಳೂ,

ಭಗವಂತನ ಈ ನೇತ್ರಧಾರೆಯು ಎಂದೂ ಒಣಗದೆ, ನಿರಂತರ ಭಕ್ತಿಯ ಬಳ್ಳಿಯೋ ಪಾದಿಯಲ್ಲಿ ತುಂಬಿ ಹರಿಯುತ್ತದೆ.) ಈ ವರಾಹ ಪರ್ವತದಿಂದ ನೇತ್ರಾವತಿ ನದಿಯು ಇಳಿದು ಬಂದ ಬಗ್ಗೆ ನಮ್ಮ ಭಾಗವತ, ವಾಯುಪುರಾಣ, ಲಿಂಗಪುರಾಣ, ಮತ್ಸ್ಯಪುರಾಣ ಮತ್ತು ಪದ್ಮಪುರಾಣಗಳಲ್ಲಿ ಒಂದು ಸುಂದರವಾದ ಕಥೆಯು ಹೇಳಲ್ಪಟ್ಟಿದೆ.

ಈ ಪುರಾಣ ಕಥೆಗಳ ಅನುಸಾರ, ವೈವಸ್ವತ ಮನ್ವಂತರದ ಶ್ವೇತವರಾಹ ಕಲ್ಪದಲ್ಲಿ ಒಮ್ಮೆ ಮಹಾಮುನಿಯಾದ ಕಶ್ಯಪನಿಗೆ ದೈತ್ಯರಾದ ಹಿರಣ್ಯಾಕ್ಷ ಮತ್ತು ಹಿರಣ್ಯ ಕಶಿಪು ಎಂಬ ಇಬ್ಬರು ಮಕ್ಕಳು ಜನಿಸಿದರು. ಕಠೋರ ತಪಸ್ಸಿನ ಮುಖಾಂತರ ಬ್ರಹ್ಮನನ್ನು ಮೆಚ್ಚಿಸಿ ಅನೇಕ ವರಗಳನ್ನು ಪಡೆದು ಬಳಿಕ ಅವರು ತಮ್ಮ ಅನಾಚಾರಗಳಿಂದ ಲೋಕ ಕಂಟಕರಾದರು. ಅವರಲ್ಲಿ ಹಿರಿಯನಾದ ಹಿರಣ್ಯಾಕ್ಷನು ಅತೀ ವ್ಯಾಮೋಹದಿಂದ ಒಮ್ಮೆ ಭೂಮಿಯನ್ನು ಅಪಹರಿಸಿ ಪಾತಾಳಕ್ಕೊಯ್ದನು. ಆಗ ಅದರಲ್ಲಿ ವಾಸಿಸುತ್ತಿದ್ದ ಸಮಸ್ತ ಜೀವರಾಶಿಗಳು ರೋದಿಸುತ್ತಾ ರಕ್ಷಣೆಗಾಗಿ ಮಹಾ ವಿಷ್ಣುವನ್ನು ಮೊರೆಹೊಕ್ಕರು. ಲೋಕದಲ್ಲಿ ಧರ್ಮವು ಗ್ಲಾನಿಯಾದಾಗ ಧರ್ಮಸಂಸ್ಥಾಪನಾರ್ಥವಾಗಿ ಯುಗ ಯುಗ ಗಳಲ್ಲಿಯೂ ಅವತರಿಸಿ ಬರುವೆನೆಂದು ಅಭಯವಿತ್ತಿದ್ದ ಮಹಾ ವಿಷ್ಣುವು ವರಾಹ ರೂಪವನ್ನು ತಾಳಿ ರೋಷಾವೇಶದಿಂದ ಅರ್ಭಟಿಸುತ್ತಾ ಸಾಗರದ ಆಳಕ್ಕೆ ಧುಮುಕಿ, ಆ ದಾನವನನ್ನು ಕೊಂದು, ಭೂಮಿಯನ್ನು ಉದ್ಧರಿಸಿದನು. ವೀರಾವೇಶದಿಂದ ಭಯಂಕರ ವಾಗಿ ಕಾಣುತ್ತಿದ್ದ ವರಾಹನು ಇನ್ನೂ ವಿಕೃತ ಸ್ವರಗಳಿಂದ ಅರ್ಭಟಿಸುತ್ತಾ ತನ್ನ ಭೂಮ ಗಾತ್ರದ ಮಹಾ ಶರೀರವನ್ನು ನೆಲೆಗೊಳಿಸುವುದಕ್ಕಾಗಿ ಭರತಖಂಡದ ಪಶ್ಚಿಮಾಂಬುಧಿಗೆ ಸನಿಹದಲ್ಲಿದ್ದ ಸಹ್ಯಾದ್ರಿ ಪರ್ವತಗಳಿಗೆ ಬಂದು, ಅಲ್ಲಿದ್ದ ವೇದಪಾದ ಎಂಬ ಬೃಹತ್ ಶಿಲಾ ಪರ್ವತದ ಮೇಲೆ ಸ್ತಂಭೀಭೂತನಾಗಿ ನಿಂತುಕೊಂಡನು. ಈ ರುದ್ರಾಕಾರವನ್ನೂ, ರೋಷಾವೇಶವನ್ನೂ ಕಂಡು ಬ್ರಹ್ಮಾದಿ ದೇವತೆಗಳು ಅಲ್ಲಿ ಗಾಗಮಿಸಿ ವರಾಹನನ್ನು ಸ್ತುತಿಸತೊಡಗಿದರು. ಕೃತಯುಗದಲ್ಲಿ ವೇದೋದ್ಧಾರ ಮಾಡಿದ ಮತ್ಸ್ಯಾವತಾರ ಸ್ವಾಮಿಯೂ, ಸಮುದ್ರ ಮಥನ ಕಾಲದಲ್ಲಿ ಮಂದರಗಿರಿಗೆ ಆಧಾರವಾಗಿ ನಿಂತ ಕೂರ್ಮಾವತಾರ ಮೂರ್ತಿಯೂ ಆದ ಶಾಂತಗುಣ ಸಂಪನ್ನನಾದ ಮಹಾವಿಷ್ಣುವು ಲೋಕದ ಕ್ಷೇಮಕ್ಕಾಗಿ ಈಗ ಪ್ರಸನ್ನನಾಗಬೇಕೆಂದು ಪ್ರಾರ್ಥಿಸಿಕೊಂಡರು.

ಆಗ ಮದೋನ್ಮತ್ತನಾದ ವರಾಹದ ಕೋರೆದಾಡೆಗಳಿಂದ ಇಳಿದ ಮದಜಲವು ತುಂಗ ಪ್ರಮಾಣದಲ್ಲಿ ಹರಿದು ತುಂಗಾ ಎಂಬ ನದಿಯಾಯಿತು. ಇನ್ನೊಂದು ಕೋರೆದಾಡೆಯಿಂದ ಹರಿದ ಮದಜಲವು ಭದ್ರ ಪರಿಣಾಮಕಾರಿಯಾಗಿ ಭದ್ರಾ ಎಂಬ ಇನ್ನೊಂದು ನದಿಯಾಗಿ ಹರಿಯಿತು. ಅಶ್ವಿನಿ ದೇವತೆ, ಶನಿ, ಯಮ ಮೊದಲಾದ ದೇವತೆಗಳಿಂದ ಸ್ತುತಿಸಲ್ಪಟ್ಟ

ಈ ಬೃಹತ್ ಯೋಜನೆಗೆ ತಗಲುವ ಒಟ್ಟು ಖರ್ಚು, ಇದನ್ನು ಅನುಷ್ಠಾನಗೊಳಿಸುವಾಗ ಪಶ್ಚಿಮ ಘಟ್ಟಗಳಲ್ಲಿ ಉಂಟಾಗಬಹುದಾದ ಅರಣ್ಯನಾಶ ಮತ್ತು ಪರಿಣಮಿಸಬಹುದಾದ ಪಾರಿಸರಿಕ ಅಸಮತೋಲನ ಇತ್ಯಾದಿಗಳನ್ನು ಭಾವಿಸಿ ಕೊಂಡರೆ ಈ ಯೋಜನೆಯಿಂದ ಆಗಬಹುದಾದ ಪ್ರಯೋಜನಕ್ಕಿಂತ ನಿಷೇಧಾತ್ಮಕ ಬದಲಾವಣೆಗಳೇ ಹೆಚ್ಚು ಎಂಬುದು ಯಾರಿಗೂ ಮನವರಿಕೆಯಾಗಬಹುದು. ಆದುದರಿಂದ ನೂರಾರು ವರ್ಷಗಳ ಹಿಂದೆ ಶ್ರೀ ವಾದಿರಾಜ ಸ್ವಾಮಿಗಳೂ, ಭವಿಷ್ಯದ ಬಗ್ಗೆ ಕಾಳಜಿ ಇರುವ ಇಂದಿನ ಹಿರಿಯ ವ್ಯಕ್ತಿಗಳೂ ಬಯಸುವಂತೆ ನೇತ್ರಾವತಿ ನದಿಯು ಭಕ್ತಿಯ ಬಳ್ಳಿಯಂತೆ ಸದಾ ತನ್ನ ನಿಜಮಾರ್ಗದಲ್ಲಿ ನಿರಂತರ ತುಂಬಿ ಹರಿಯುತ್ತಿರಬೇಕು.

ದೇವಾಲಯಗಳೂ ಮೆರೆಯುತ್ತಿರುವುದನ್ನು ಕಂಡು ಸಂತೋಷ ಪಟ್ಟಿರುವನು. ಸುಂದರ ನೇತ್ರಾವತಿಯು ಭಕ್ತಭಾವುಕರಿಗೆ ಪುಣ್ಯವಾಹಿನಿಯಾಗಿರು ವಂತೆ ಪ್ರತಿಭಾವಂತರಿಗೆ ಸ್ಫೂರ್ತಿಯ ಶರಧಿಯಾಗಿ ಮೆರೆಯುತ್ತಿರುವುದು. ಕಾಶೀ ವಿಶ್ವನಾಥನಿಗೆ ಅಮರ ಗಂಗಾ ನದಿಯಂತೆ ಧರ್ಮಸ್ಥಳ ಶ್ರೀ ಮಂಜುನಾಥನಿಗೆ ನೇತ್ರಾವತಿ ಎಂಬ ಈ ಪುಣ್ಯ ನದಿಯು ಯುಗಯುಗಗಳಿಂದ ನಿರಂತರವಾಗಿ ಪ್ರವಹಿಸುತ್ತಾ ಜನರನ್ನೂ, ಜಗವನ್ನೂ ಪಾವನ ಗೊಳಿಸುತ್ತಿದೆ. ಇದರ ಜಲಸ್ಪರ್ಶ ದಿಂದ ಜನ್ಮಜನ್ಮಾಂತರಗಳ ಪಾಪಗಳು ಕಳೆದು, ರೋಗರುಜಿನಾದಿ ಪೀಡೆಗಳು ಪರಿಹಾರ ಹೊಂದಿ, ಶಿವಕಾರುಣ್ಯವೂ, ಶಿವಸಾನ್ನಿಧ್ಯವೂ ಪ್ರಾಪ್ತವಾಗುವುದು ಎಂದು ಶ್ರದ್ಧೆಯಿಂದ ನಂಬಲಾಗಿದೆ.

ಈ ಪೌರಾಣಿಕ ಹಿನ್ನೆಲೆಯಷ್ಟೇ ಮಹತ್ವವು ಈ ನದಿಯ ಆರ್ಥಿಕ ಉಪಯುಕ್ತತೆಗೂ ಇದೆ. ಇದು ಬೆಳ್ತಂಗಡಿ, ಪುತ್ತೂರು, ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳ ವಿಸ್ತಾರವಾದ ಕೃಷಿ ಭೂಮಿಗೆ ನಿರಂತರ ನೀರನ್ನು ಒದಗಿಸುವ ಏಕಮಾತ್ರ ಆಕರವಾಗಿದೆ. ಧರ್ಮಸ್ಥಳ, ಬೆಳ್ತಂಗಡಿ, ಉಪ್ಪಿನಂಗಡಿ, ಪುತ್ತೂರು, ಪಾಣೆಮಂಗಳೂರು, ಬಂಟವಾಳ, ಬಿ. ಸಿ. ರೋಡ್, ಫರಂಗಿಪೇಟೆ, ಮಂಗಳೂರು ವಿಶ್ವವಿದ್ಯಾನಿಲಯದ ಆವರಣ, ಉಲ್ಲಾಳ ಮತ್ತು ಮಂಗಳೂರು ನಗರಗಳಿಗೆ ನೀರನ್ನು ಒದಗಿಸುವ ಆಕರವೂ ಆಗಿದೆ. ಆದುದರಿಂದ ಇದು ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗದ ಜೀವ ನದಿ ಎಂದು ಗಣಿಸಲ್ಪಟ್ಟಿದೆ. ಆದರೆ ಈ ನದಿಯನ್ನು ಇತರ ಕೆಲವು ಪಶ್ಚಿಮ ವಾಹಿನಿ ನದಿಗಳಂತೆ, ಪೂರ್ವಕ್ಕೆ ಹರಿಸುವ ಪ್ರಯತ್ನಗಳೂ ಸರಕಾರದಿಂದ ನಡೆದಿವೆ. ಇದಕ್ಕೆ ಕೊಡುವ ಒಂದೇ ಒಂದು ಸಬೂಬು ಎಂದರೆ ಮಳೆಗಾಲದಲ್ಲಿ ಈ ನದಿಯಲ್ಲಿ ಹರಿಯುವ ಬೃಹತ್ ಪ್ರಮಾಣದ ನೀರು ನಿಷ್ಪ್ರಯೋಜಕವಾಗಿ ಸಮುದ್ರವನ್ನು ಸೇರಿ ವ್ಯರ್ಥವಾಗುತ್ತದೆ ಎಂಬುದು. ಈ ನೀರನ್ನು ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟುವ ಮುಖಾಂತರ ಸಂಗ್ರಹಿಸಿ, ಕಡಿಮೆ ಮಳೆ ಬರುತ್ತಿರುವ ಘಟ್ಟದ ಮೇಲಿನ ಜಿಲ್ಲೆಗಳಿಗೆ ಹರಿಸಬಹುದೆಂಬುದು ಸರಕಾರದ ಮುಂದಿರುವ ಯೋಜನೆ. ಇದನ್ನು ಅಯಸ್ಕಾಂತ ಶಕ್ತಿಯ ಬಲದಿಂದ ಮೇಲಕ್ಕೆ ಎತ್ತಿ, ಕಡಿಮೆ ನೀರಿನ ಪ್ರದೇಶಗಳಿಗೆ ಸರಬರಾಜು ಮಾಡಬಹುದೆಂಬ ಹವಣಿಕೆಯೂ ಇದೆ. ಆದರೆ ಈ ಯೋಜನೆಯನ್ನು ಅನುಷ್ಠಾನಗೊಳಿಸಿದರೆ ಅದರಿಂದ ನೇತ್ರಾವತಿ ನದೀ ಪಾತ್ರದಲ್ಲಿ ಉಂಟಾಗಬಹುದಾದ ವ್ಯತ್ಯಯಗಳು ಮತ್ತು ದುಷ್ಪರಿಣಾಮಗಳ ಬಗ್ಗೆ ದೂರಾಲೋಚನೆ ಯಾರಿಗೂ ಇಲ್ಲದಂತೆ ಕಾಣುತ್ತಿದೆ. ಇದರ ನೀರನ್ನೇ ಅವಲಂಬಿಸಿರುವ ಮಂಗಳೂರು ಮಹಾನಗರ ಸಹಿತವಾಗಿ ಇತರ ಹಲವು ನಗರಗಳ ಜನಜೀವನದ ಸ್ಥಿತಿ ಹೇಗಾಗಬಹುದೆಂಬುದನ್ನು ಊಹಿಸಿಕೊಳ್ಳುವುದೂ ಕಷ್ಟ. ಇಲ್ಲಿಯ ಪರಿಸರ, ಜೀವ ಸಂಕುಲ, ಸಸ್ಯವರ್ಗ- ಇತ್ಯಾದಿಗಳ ಸ್ಥಿತಿಯನ್ನು ಕಲ್ಪಿಸಿಕೊಂಡಂತೆಯೂ ಕಂಡು ಬರುವುದಿಲ್ಲ.

ಎದುರು ಯಾವಾಗಲೂ ಒಂದು ದೀಪವನ್ನು ಹಚ್ಚಿಡಲಾಗುತ್ತದೆ. ಈ ಮೂರ್ತಿಗೂ ಕೆಳಗಡೆ ಶ್ರೀ ಕಾಳಹಸ್ತೀಶ್ವರನ ಗರ್ಭಗೃಹದ ಎದುರುಗಡೆಯ ಕಣ್ಣಪ್ಪನ ಮೂರ್ತಿಯಂತೆ ಪ್ರತಿದಿನ ನೀರಿನಿಂದ ತೊಳೆದು ದೇಶ ಪದ್ಧತಿಯಂತೆ ಬಟ್ಟೆಯನ್ನು ಉಡಿಸಿ ವಿಭೂತಿಯನ್ನು ಲೇಪಿಸಿ ಸರಳವಾದ ರೀತಿ ಯಲ್ಲಿ ಅಲಂಕಾರಗೊಳಿಸಿ ನೈವೇದ್ಯವನ್ನು ಅರ್ಪಿಸಲಾಗುತ್ತದೆ. ಆದರೆ ದೇವತಾ ಬಿಂಬದಂತೆ ಇದಕ್ಕೆ ಅಭಿಷೇಕ ಅರ್ಚನಾದಿಗಳಿಲ್ಲ. ಗುಡ್ಡದ ಮೇಲಿರುವ ಗುಡಿಯ ಕಣ್ಣಪ್ಪನನ್ನು ಅಲ್ಲಿಯ ಬೇಡ ಜನಾಂಗದವರು ಶ್ರೀ ರಾಮ, ಕೃಷ್ಣರಂತೆ ಅವತಾರ ಪುರುಷನೆಂದು ಆರಾಧಿಸುತ್ತಾರೆ.

ಈ ಗುಡಿಯ ಬಳಿಯಲ್ಲಿ ಇತ್ತೀಚೆಗೆ ಸಿಮೆಂಟಿನಿಂದ ಒಂದು ಶಿವಲಿಂಗವನ್ನೂ ಅದಕ್ಕೆ ತನ್ನ ಕಣ್ಣುಗಳನ್ನು ಅರ್ಪಿಸುತ್ತಿರುವ ಬೇಡರ ಕಣ್ಣಪ್ಪನ ವಿಗ್ರಹವನ್ನೂ ಮಾಡಿಡಲಾಗಿದೆ. ಇವು ಬಣ್ಣದಿಂದ ಅಲಂಕೃತವಾಗಿದ್ದರೂ ಗುಡಿಯೊಳಗಿನ ಮೂರ್ತಿ ಯಷ್ಟು ಸುಂದರವಾಗಿಲ್ಲ. ಈ ಸ್ಥಳದಿಂದ ಕೆಳಗೆ ನೋಡಿದರೆ ಶ್ರೀ ಕಾಳಹಸ್ತೀಶ್ವರ ದೇವಾಲಯದ ಪೂರ್ಣನೋಟವನ್ನು ಪಡೆಯಬಹುದು. ಇಲ್ಲಿಂದ ಮೆಟ್ಟಿಲಿಳಿದು ಕೆಳಗೆ ಬಂದಾಗ ಗೋಡೆಯ ಮೇಲೆ ಕಣ್ಣಪ್ಪನು ಶಿವನಿಗೆ ಮಾಂಸಾಹಾರ ಅರ್ಪಿಸುತ್ತಿರುವುದನ್ನೂ, ಬಾಯಿಯಲ್ಲಿ ತಂದ ನೀರಿನಿಂದ ಅಭಿಷೇಕ ಮಾಡುತ್ತಿರುವುದನ್ನೂ ತೋರಿಸುವ ಸಿಮೆಂಟಿನ ಆಕೃತಿಗಳನ್ನು ಕಾಣಬಹುದು. ಆದರೆ ಇವು ಅಷ್ಟೊಂದು ಚೆನ್ನಾಗಿಲ್ಲ. ಈ ಎಲ್ಲಾ ಪುರಾವೆಗಳು ಇದುವೇ ಬೇಡರ ಕಣ್ಣಪ್ಪನು ತನ್ನ ಕಣ್ಣುಗಳನ್ನು ಶಿವನಿಗರ್ಪಿಸಿದ ಪುಣ್ಯ ಕ್ಷೇತ್ರವೆಂಬುದನ್ನು ಸ್ಪಷ್ಟಪಡಿಸುತ್ತವೆ.

ಈ ಊರಿನ ಹೆಸರೇ ಶ್ರೀ ಕಾಳಹಸ್ತಿ ಎಂಬುದು. ಇಲ್ಲಿಯ ಉದ್ಭವ (ಸ್ವಯಂಭೂ) ಲಿಂಗರೂಪಿ ಶಿವನನ್ನು ಶ್ರೀ ಕಾಳಹಸ್ತೀಶ್ವರನೆಂದೇ ಕರೆಯಲಾಗುತ್ತದೆ. ಏಕೆಂದರೆ ಬಹಳ ಪ್ರಾಚೀನ ಕಾಲದಲ್ಲಿ ಇಲ್ಲಿ ಶಿವನನ್ನು ಶ್ರೀ (ಜೇಡರಹುಳ) ಕಾಳ (ಸರ್ಪ) ಹಸ್ತಿ (ಆನೆ) ಪೂಜಿಸುತ್ತಿದ್ದುದರಿಂದ ಶ್ರೀ ಕಾಳಹಸ್ತೀಶ್ವರ ಎಂದು ಕರೆಯಲಾಯಿತು. ಈ ಮೂರು ಜೀವಿಗಳ ಒಕ್ಕೂಟದ ಒಂದು ಚಿತ್ರವನ್ನು ಈ ದೇವಾಲಯದೊಳಗೆ ಅಲ್ಲಲ್ಲಿ ಕಾಣಬಹುದು.

ಈ ದೇವಾಲಯದ ಗರ್ಭಗೃಹದಲ್ಲಿ ಶ್ರೀ ಕಾಳಹಸ್ತೀಶ್ವರನ ಬಳಿಯಲ್ಲೇ ಶಿವಪತ್ನಿ ಯಾದ ಪಾರ್ವತಿಯು ಶ್ರೀ ಜ್ಞಾನಪ್ರಸೂನಾಂಬಿಕಾ ಅಥವಾ ಜ್ಞಾನಪ್ರಸನ್ನಾಂ ಬಿಕಾ ಎಂಬ ಹೆಸರುಗಳಿಂದ ಸನ್ನಿಹಿತಳಾಗಿರುವಳು.

ದಕ್ಷಿಣಕಾಶಿ

ಶ್ರೀ ಕಾಳಹಸ್ತಿ ಕ್ಷೇತ್ರವನ್ನು ದಕ್ಷಿಣಕಾಶಿ ಎಂದೂ ಕರೆಯುತ್ತಾರೆ. ದೇವಾಲಯದ ಬಳಿಯಲ್ಲಿ ಹರಿಯುತ್ತಿರುವ ಸ್ವರ್ಣಮುಖಿ ನದಿಯು ಕಾಶಿಯಲ್ಲಿ ಗಂಗಾನದಿ

ಬೇಡರ ಕಣ್ಣಪ್ಪನ ದೇವಾಲಯ ಎಲ್ಲಿದೆ?

ಬೇಡರ ಕಣ್ಣಪ್ಪ!

ಈ ಭಕ್ತನ ಕಥೆ ಯಾರಿಗೆ ಗೊತ್ತಿಲ್ಲ? ಆದರೆ ಪುರಾಣ ಪ್ರಸಿದ್ಧನಾದ ಈತನ ಭಕ್ತಿಯ ಪರೀಕ್ಷೆ ನಡೆದ ಸ್ಥಳ, ಭಕ್ತನ ಮೂರ್ತಿಯೇ ಈಗ ಪೂಜೆಗೊಳ್ಳುತ್ತಿರುವ ವಿಷಯ ದೇವಾಲಯದ ಎಷ್ಟು ಮಂದಿಗೆ ಗೊತ್ತು?

ಬೇಡರ ಕಣ್ಣಪ್ಪ ಶಿವಲಿಂಗಕ್ಕೆ ತನ್ನ ಕಣ್ಣುಗಳನ್ನೇ ನೀಡಿದ, ಅದಕ್ಕೆ ಪ್ರಸನ್ನನಾದ ಶಿವ ಪ್ರತ್ಯಕ್ಷನಾದ. ಈ ಘಟನೆ ನಡೆದುದು ಶ್ರೀ ಕಾಳಹಸ್ತಿಯಲ್ಲಿ. ಅದು ಈಗಿನ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿದೆ. ಇಂದಿಗೂ ಆ ಶಿವಾಲಯ ಸುಪ್ರಸಿದ್ಧ. ದೇವಾಲಯದ ಪರಿಸರ ಇಂದು ಬೃಹದಾಕಾರವಾಗಿ ಬೆಳೆದು ಭಕ್ತರ ಆಕರ್ಷಣೆಯ ಕೇಂದ್ರವಾಗಿದೆ. ಶ್ರೀ ಕಾಳಹಸ್ತೀಶ್ವರನಿಗೆ ಪೂಜೆ ಸಂದಂತೆ ಬೇಡರ ಕಣ್ಣಪ್ಪನ ಮೂರ್ತಿಗೂ ಅಲ್ಲಿ ಪೂಜೆ ಸಲ್ಲುತ್ತಲಿದೆ.

ಹಲವು ರಾಜ ಮಹಾರಾಜರ ಆಳ್ವಿಕೆಗೆ ಒಳಪಟ್ಟ ಚಿತ್ತೂರಿನ ಶ್ರೀ ಕಾಳಹಸ್ತೀಶ್ವರ ಶಿವಾಲಯದ ವಿಸ್ತರಣೆ ಕಾರ್ಯ ಅವ್ಯಾಹತವಾಗಿ ನಡೆದಿತ್ತು. ಈಗ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಬೃಹದಾಕಾರದ ಎತ್ತರದ ಗೋಪುರಗಳಿವೆ. ಇವುಗಳ ಮಧ್ಯದಲ್ಲಿ ಗರ್ಭ ಗೃಹವೊಂದರಲ್ಲಿ ಬೇಡರ ಕಣ್ಣಪ್ಪನು ತನ್ನ ಕಣ್ಣುಗಳನ್ನು ಅರ್ಪಿಸಿದ್ದ ಶ್ರೀ ಕಾಳಹಸ್ತೀಶ್ವರ ಶಿವಲಿಂಗವಿದೆ.

ಬೇಡರ ಕಣ್ಣಪ್ಪನು ವಿವಿಧ ರೀತಿಯ ಸೇವಾರ್ಚನೆಗಳನ್ನು ಗೈದು ತನ್ನ ಕಣ್ಣು ಗಳನ್ನರ್ಪಿಸಿದ್ದನಷ್ಟೆ? ಶಿವಲಿಂಗದ ಎದುರಿಗೆ ಗೋಪುರದ ಜಗಲಿಯಲ್ಲಿ ಬಿಲ್ಲು ಬಾಣ ಗಳನ್ನು ಹಿಡಿದಿರುವ ಬೇಡರ ಕಣ್ಣಪ್ಪನ ಮನುಷ್ಯ ಗಾತ್ರದ ಒಂದು ಶಿಲಾ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಅದೇ ರೀತಿ ಗರ್ಭಗೃಹದ ಒಳಗೂ ಬೇಡರ ಕಣ್ಣಪ್ಪನ ಮೂರ್ತಿ ಯೊಂದಿದೆ.

ಶ್ರೀ ಕಾಳಹಸ್ತೀಶ್ವರ ದೇವಾಲಯದ ಹಿಂದುಗಡೆ ಚಿಕ್ಕ ಬಂಡೆಕಲ್ಲುಗಳಿರುವ ಒಂದು ಪರ್ವತವಿದೆ. ಇದನ್ನು ಕೈಲಾಸಗಿರಿಯೆಂದು ಕರೆಯುತ್ತಾರೆ. ಇದರ ತುದಿಯಲ್ಲಿ ಬೇಡರ ಕಣ್ಣಪ್ಪನ ಚಿಕ್ಕದೊಂದು ಗುಡಿಯಿದೆ. ಒಳಗೆ ಧನುರ್ಧಾರಿಯಾಗಿ ಸುಂದರ ಮುಖಭಾವವುಳ್ಳ ಮನುಷ್ಯ ಗಾತ್ರದ ಬೇಡರ ಕಣ್ಣಪ್ಪನ ಮೂರ್ತಿಯೊಂದಿದೆ. ಇದರ

ಪಟ್ಟಿರು. ಇವುಗಳು ಆಂಧ್ರದಲ್ಲಿ ಹೆಚ್ಚು ಬಳಕೆಯಲ್ಲಿರುವುದರಿಂದಲೂ ವೆಂಗಾಗ್ರಣಿ ಎಂಬ ಪ್ರಾಚೀನ ತೆಲುಗು ಕವಿಯೊಬ್ಬನು ಇವುಗಳನ್ನು ತೆಲುಗಿಗೆ ಭಾಷಾಂತರಿಸಿದ್ದುದರಿಂದಲೂ ಈತನು ಆಂಧ್ರದವನೇ ಇರಬೇಕೆಂದು ನಂಬಲಾಯಿತು. ಆದರೆ ಇದಕ್ಕೆ ಪುರಾವೆಗಳೇನೂ ಇಲ್ಲ. ಎರಡನೆಯದಾಗಿ, ಪ್ರಾಚೀನ ತಮಿಳು ರಚನೆಗಳಂತೆ ಲೀಲಾಶುಕನ ಈ ಸ್ತುತಿಗಳಲ್ಲಿ ಆದಿಪ್ರಾಸ ಮತ್ತು ವೃತ್ಯನುಪ್ರಾಸಗಳು ಅಧಿಕವಾಗಿ ಬಳಸಲ್ಪಟ್ಟಿರುವುದರಿಂದ (ಕನ್ನಡದಲ್ಲಿಯೂ ಇಂತಹ ರಚನೆಗಳು ರೂಢಿಯಲ್ಲಿವೆ ಎಂಬುದನ್ನು ನಿರ್ಲಕ್ಷಿಸಿ) ಈತನು ತಮಿಳುನಾಡಿನವನೇ ಇರಬೇಕೆಂದು ಘೋಷಿಸ ಲಾಯಿತು. ಮೂರನೆಯದಾಗಿ, ದಕ್ಷಿಣ ಕೇರಳದ ತಿರುವನಂತಪುರ (ಟ್ರಿವೆಂಡ್ರಂ) ದೇವಾಲಯದಲ್ಲಿ ಹಾಗೂ ಕೇರಳದ ಉತ್ತರ ಭಾಗದಲ್ಲಿರುವ ಅನಂತಪುರ ದೇವಾಲಯದಲ್ಲಿ ಈತನಿಗೆ ಸಂಬಂಧಿಸಿದ ಪರಂಪರೆಯ ಸಾಕ್ಷಿಗಳಿರುವುದರಿಂದ ಹಾಗೂ ಎಡನೀರು ಮಠದ ಇಷ್ಟದೇವರ ಧ್ಯಾನ ಶ್ಲೋಕ ಈತನದ್ದೇ ರಚನೆಯಾಗಿ ರುವುದರಿಂದ ಈತನು ಕೇರಳದವನೆಂದೂ ಹೇಳಲಾಯಿತು.

ಮೇಲೆ ಹೇಳಿರುವ ಕೇರಳದ ಎರಡೂ ದೇವಾಲಯಗಳ ಸಂಬಂಧದಲ್ಲಿ ಪ್ರಚಲಿತವಿರುವ ಒಂದು ಕಥೆಯಂತೆ- ಮೊದಲು ಬಿಲ್ವಮಂಗಲ ಮುನಿಯೆಂದು ಕರೆಯಲ್ಪಡುತ್ತಿದ್ದ ಈ ಲೀಲಾಶುಕನು ಅನಂತಪುರ ದೇವಾಲಯದಲ್ಲಿರುವಾಗ ಭಕ್ತಿಯ ಜೊಂಪಿನಿಂದಾಗಿ ಅನಂತಪದ್ಮನಾಭ ಸ್ವಾಮಿಯನ್ನು ಬಾಲಕೃಷ್ಣನೆಂದು ಪರಿಭಾವಿಸಿ ಆತನೊಡನೆ ಆಟವಾಡುತ್ತಿದ್ದನು. ಇಬ್ಬರಲ್ಲಿ ಗಾಢವಾದ ಮೈತ್ರಿ ಬೆಳೆದಿತ್ತು. ಆದರೆ ಒಂದು ದಿನ ಕೃಷ್ಣನ ತುಂಟಾಟವನ್ನು ತಾಳಲಾರದೆ ಕುಪಿತನಾಗಿ ಲೀಲಾಶುಕ ಆತನನ್ನು ತಿರಸ್ಕರಿಸಿಬಿಟ್ಟ. ಕೃಷ್ಣನು ಅದೃಶ್ಯನಾಗಿ ತಿರುವನಂತಪುರದ ದೇವಾಲಯಕ್ಕೆ ಹೋಗಿ ಅಲ್ಲಿ ನೆಲೆಸಿದ. ತನ್ನ ಆತ್ಮೀಯ ಸ್ವಾಮಿಯನ್ನು ಕಳೆದುಕೊಂಡ ಮುನಿ ಅತ್ಯಂತ ಖಿನ್ನನಾಗಿ, ಪ್ರಲಾಪಿಸುತ್ತಾ ಊರೂರು ಅಲೆಯತೊಡಗಿದ. ಕೊನೆಗೊಂದು ದಿನ ತಿರುವನಂತಪುರ ದೇವಾಲಯದಲ್ಲಿ ತನ್ನ ಸ್ವಾಮಿಯನ್ನು ಕಂಡು, ಆನಂದ ತುಂದಿಲನಾಗಿ ಪಶ್ಚಾತ್ತಾಪದ ಅಗ್ನಿಯಿಂದಲೇ ಆರತಿಯೆತ್ತಿ ಅಷ್ಟವಿಧಾರ್ಚನೆಯಿಂದ ಪ್ರಸನ್ನಗೊಳಿಸಿ ತನ್ನ ಕೈಯಲ್ಲಿದ್ದ ಸಾಮಾನ್ಯವಾದ ಒಂದು ಮಾವಿನ ಹಣ್ಣನ್ನೇ ತೆಂಗಿನ ಚಿಪ್ಪಿನಲ್ಲಿರಿಸಿ ಅದನ್ನೇ ನೈವೇದ್ಯವನ್ನಾಗಿ ಅರ್ಪಿಸಿದ. ಇದರಿಂದ ಸಂತುಷ್ಟನಾದ ಸ್ವಾಮಿಯು ತಾನು ಅಲ್ಲೇ ನೆಲೆಸುವುದಾಗಿಯೂ, ಜೀವನ ಪರ್ಯಂತ ಆತನೂ, ಮುಂದೆ ಆತನ ವಂಶದವರೂ ತನ್ನನ್ನು ಅರ್ಚಿಸಬೇಕೆಂಬ ಆದೇಶವನ್ನಿತ್ತ.

ಇದರಂತೆ ಮುನಿಯ ಕಾಲಾನಂತರ ಆತನ ವಂಶದವರಾದ ತುಳುನಾಡ ಕೊಕ್ಕಡದಲ್ಲಿರುವ ಶಿವಳ್ಳಿ ಬ್ರಾಹ್ಮಣರನ್ನೇ ಪೂಜೆಗಾಗಿ ಕರೆತರಲಾಯಿತು. ಈ ಪದ್ಧತಿ ಇಂದಿಗೂ ಮುಂದುವರಿಯುತ್ತಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ದಕ್ಷಿಣ

ಹರಿಯುತ್ತಿರುವಂತೆ ದಕ್ಷಿಣದಿಂದ ಉತ್ತರಾಭಿಮುಖವಾಗಿ ಹರಿಯುತ್ತದೆ. ಇಲ್ಲಿರುವ ತಿರುಮಂಜನಂ ಗೋಪುರದ ಬಳಿ ಇರುವ ಸ್ನಾನಘಟ್ಟವನ್ನು ಕಾಶಿಯಲ್ಲಿರುವಂತೆ ಮಣಿಕರ್ಣಿಕಾ ಘಟ್ಟವೆಂದು ಕರೆಯಲಾಗುತ್ತದೆ. ಕಾಶಿಯ ಬಳಿ ಗಂಗಾ ನದಿಯಲ್ಲಿ ಸ್ನಾನ ಮಾಡುವವರ ಗತಪಿತೃಗಳ ಕಿವಿಯಲ್ಲಿ ಶಿವನು ತಾರಕ ಮಂತ್ರವನ್ನೂದಿ ಮೋಕ್ಷ ವನ್ನು ಕರುಣಿಸುವಂತೆ ಇಲ್ಲಿಯೂ ಸ್ನಾನಗೈಯುವವರ ಪಿತೃಗಳು ಆ ಮಂತ್ರ ಪ್ರಭಾವ ದಿಂದ ಸ್ವರ್ಗಾರೋಹಣಗೈಯುತ್ತಾರೆ ಎಂಬ ನಂಬಿಕೆ ಇದೆ.

ಈ ಕ್ಷೇತ್ರಕ್ಕೆ ಉನ್ನತವಾದ ಪೌರಾಣಿಕ ಹಿನ್ನೆಲೆಯಿರುವಂತೆ ಸಾಕಷ್ಟು ಆಧಾರ. ಪುರಾವೆಗಳಿರುವ ಇತಿಹಾಸವೂ ಇದೆ. ಈ ಪ್ರದೇಶವನ್ನು ಆಳಿದ ಕುಲೋತ್ತುಂಗ ಚೋಳನ ಕಾಲ (ಕ್ರಿ. ಶ. 1071-1122)ದಲ್ಲಿ ಸೆಕ್ಕಿಲಾರ್ ಎಂಬ ಸಂತ ತಮಿಳು ಕವಿಯು 'ಪೆರಿಯ ಪುರಾಣ' ಎಂಬ ಗ್ರಂಥವನ್ನು ಬರೆದು ಅದರಲ್ಲಿ ಶ್ರೀ ಕಾಳಹಸ್ತಿ ಮಹಾತ್ಮೆಯನ್ನೂ ಬೇಡರ ಕಣ್ಣಪ್ಪನ ಪೂರ್ಣ ವೃತ್ತಾಂತವನ್ನೂ ಕೊಟ್ಟಿರುವನು. ತಮಿಳು ಸಂಗಂ ಸಾಹಿತ್ಯದ ಯುಗದಿಂದಲೇ ಭಕ್ತ ಕವಿಗಳಾದ ಸಂತ ಅಪ್ಪಾರ್, ತಿರುಜ್ಞಾನ ಸಂಬಂಧರ್, ಮಾಣಿಕ್ಯ ವಾಚಕರ್, ಮಹಾಕವಿ ಸೆಕ್ಕಿಲಾರ್ ಮೊದಲಾದವರು ಈ ಕ್ಷೇತ್ರಕ್ಕಾಗಮಿಸಿ ಶ್ರೀ ಕಾಳಹಸ್ತೀಶ್ವರನ ಮಹಿಮೆಯನ್ನು ಹಾಡಿಹೊಗಳಿರುವರು. ಪಲ್ಲವ ಅರಸರು ತಮ್ಮ ತೊಂಡೈಮಂಡಲ ಸಂಸ್ಥಾನದಲ್ಲಿ ಈ ಕ್ಷೇತ್ರವನ್ನು ಬಹಳ ವಿಸ್ತೃತವಾಗಿ ಬೆಳೆಸಿದ್ದರು. ಚೋಳ ಅರಸರ ಕಾಲದ ಹಲವಾರು ತಮಿಳು ಶಾಸನಗಳು ಈ ದೇವಾಲಯದ ಪರಿಸರದಲ್ಲಿದ್ದು ಅಮೂಲ್ಯ ಐತಿಹಾಸಿಕ ವಿವರಗಳನ್ನೀಯುತ್ತವೆ.

ಆದಿಶಂಕರಾಚಾರ್ಯರು (ಕ್ರಿ. ಶ. 788-820) ಕಾಂಚಿ ಕಾಮಕೋಟಿ ಪೀಠಕ್ಕೆ ಆಗಮಿಸುತ್ತಿದ್ದಾಗ ಇಲ್ಲಿಗೂ ಚಿತ್ತೈಸಿ ಇಲ್ಲಿಯ ಸ್ವಾಮಿಯನ್ನು ಅರ್ಚಿಸಿ ಜ್ಞಾನ ಪ್ರಸನ್ನಾಂಬೆಯ ಎದುರು ಶ್ರೀ ಚಕ್ರವನ್ನು ಪ್ರತಿಷ್ಠಾಪಿಸಿದರು. ಚೋಳರ ಆಳ್ವಿಕೆಯ ಕಾಲದಲ್ಲಿ ಯಾದವ ವಂಶದ ದೊರೆ ನರಸಿಂಹ ದೇವನೆಂಬವನು ಈ ದೇವಾಲಯಕ್ಕೆ ವಿಶೇಷ ಕೊಡುಗೆಯನ್ನಿತ್ತುದಾಗಿ ಇಲ್ಲಿಯ ಒಂದು ಕನ್ನಡ ಶಾಸನದಿಂದ ತಿಳಿದು ಬರುತ್ತದೆ.

ಕೃಷ್ಣದೇವರಾಯನ ಕೊಡುಗೆ

ಪ್ರಾಯಶಃ ಶ್ರೀ ಕಾಳಹಸ್ತೀಶ್ವರ ದೇವಾಲಯಕ್ಕೆ ಅತ್ಯಂತ ಹೆಚ್ಚು ಕೊಡುಗೆ ಯನ್ನಿತ್ತವನು ವಿಜಯನಗರದ ಚಕ್ರವರ್ತಿ ಶ್ರೀ ಕೃಷ್ಣದೇವರಾಯ (ಕ್ರಿ. ಶ. 1509-1529). ಈ ದೇವಾಲಯದ ಮೂರನೆಯ ಪ್ರಾಕಾರದ ಪಶ್ಚಿಮ ಗೋಡೆಯಲ್ಲಿರುವ ಕ್ರಿ. ಶ. 1513ರ ಎರಡು ಶಾಸನಗಳು ಆತ ಕೊಟ್ಟ ಕೊಡುಗೆಗಳ ಬಗ್ಗೆ ಹೇಳುತ್ತವೆ. ಅದರಂತೆ ಉತ್ತರ ಗೋಪುರದಲ್ಲಿರುವ ಕ್ರಿ. ಶ. 1514ರ ದೀರ್ಘವಾದ ಸಂಸ್ಕೃತ ಶಾಸನ ಹಾಗೂ

ಪಶ್ಚಿಮ ಗೋಡೆಯ ಮೇಲಿರುವ ಕ್ರಿ. ಶ. 1517ರ ಕನ್ನಡ ಶಾಸನದ ಅನುಸಾರ ಈ ಚಕ್ರವರ್ತಿಯು ಇನ್ನಷ್ಟು ಕೊಡುಗೆಯನ್ನು ಇತ್ತುದಲ್ಲದೆ ಇಂದಿಗೂ ಭವ್ಯವಾಗಿ ಕಾಣುತ್ತಿರುವ ಪ್ರಸಿದ್ಧವಾದ ಗಾಳಿಗೋಪುರವನ್ನೂ ನೂರ್ಕಾಲು ಎಂಬ ಮಂಟಪವನ್ನೂ ಕ್ರಿ. ಶ. 1516ರಲ್ಲಿ ನಿರ್ಮಿಸಿದ್ದನೆಂದೂ ಸಾರುತ್ತವೆ.

ಅನಂತರ ಪಟ್ಟವೇರಿದ್ದ ಅಚ್ಯುತರಾಯ (ಕ್ರಿ. ಶ. 1530-1542)ನು ವಿಶೇಷ ದೈವಭೀತಿಯಿಂದಾಗಿ ಇಲ್ಲೇ ತನ್ನ ಪಟ್ಟಾಭಿಷೇಕವನ್ನು ಏರ್ಪಡಿಸಿಕೊಂಡು ದಾಗಿಯೂ ತನ್ನ ಹೆಸರಲ್ಲೊಂದು ಮಂಟಪವನ್ನು ಕಟ್ಟಿಸಿದುದಾಗಿಯೂ ತನ್ನ ಪತ್ನಿ ವರದಾಂಬಿಕೆಯ ಪುತ್ರ ಚಿಕ್ಕವೆಂಕಟಾದ್ರಿಗೆ ಈ ದೇವ ಸನ್ನಿಧಿಯಲ್ಲಿ ತುಲಾಭಾರವನ್ನು ನಡೆಸಿದ್ದುದಾಗಿಯೂ ಇಲ್ಲಿಯ ಮೂರನೆಯ ಪ್ರಾಕಾರದ ಪಶ್ಚಿಮ ಗೋಡೆಯಲ್ಲಿ ರುವ ಕ್ರಿ. ಶ. 1532ರ ಸಂಸ್ಕೃತ ಹಾಗೂ ಕನ್ನಡ ಶಾಸನಗಳು ಹೇಳುತ್ತವೆ.

ಅನೇಕ ತಮಿಳು ಕವಿಗಳು ಈ ಕ್ಷೇತ್ರದ ಮಹಿಮೆಯನ್ನು ಸ್ತುತಿಸಿರುವಂತೆ ವಿಜಯ ನಗರದ ಶ್ರೀ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಅಷ್ಟದಿಗ್ಗಜಗಳ ಪೈಕಿ ಒಬ್ಬನಾದ ತೆಲುಗು ಕವಿ ದೂರ್ಜಟಿಯು ಮತ್ತೇಭ ಮತ್ತು ಶಾರ್ದೂಲ ವಿಕ್ರೀಡಿತ ವೃತ್ತಗಳಲ್ಲಿ 'ಶ್ರೀ ಕಾಳಹಸ್ತೀಶ್ವರ ಶತಕ'ವನ್ನು ರಚಿಸಿರುವನು. ಅದರಂತೆ ಪೌರಾಣಿಕ ಹಿನ್ನೆಲೆಯನ್ನೂ ಬೇಡರ ಕಣ್ಣಪ್ಪನ ಕಥೆಯನ್ನೂ ಹೇಳಲಿಕ್ಕಾಗಿ 'ಶ್ರೀ ಕಾಳಹಸ್ತಿಮಹಾತ್ಮ್ಯಮ್' ಎಂಬ ತೆಲುಗು ಕಾವ್ಯವನ್ನೂ ಬರೆದಿರುವನು. ಕನ್ನಡದ ಕವಿ ಹರಿಹರನು ತನ್ನ ರಗಳೆಗಳಲ್ಲಿ ಕ್ಷೇತ್ರದ ಔನ್ನತ್ಯವನ್ನು ಅಲ್ಲಲ್ಲಿ ಉಲ್ಲೇಖಿಸಿದ್ದಾನೆ. ಅದರಂತೆ ಕನ್ನಡದ ಷಡಕ್ಷರದೇವ ಕವಿಯು ತನ್ನ ವೃಷಭೇಂದ್ರ ವಿಜಯ (ಕ್ರಿ. ಶ. 1676) ಎಂಬ ಚಂಪೂ ಕಾವ್ಯದಲ್ಲಿ ಈ ಕ್ಷೇತ್ರದ ಮಹಿಮೆಯನ್ನು ಕೊಂಡಾಡಿದ್ದಾನೆ.

ಶ್ರೀ ಕಾಳಹಸ್ತಿಯು ಬೇಡರ ಕಣ್ಣಪ್ಪನ ಮುಗ್ಧ ಭಕ್ತಿಯಿಂದ ಪ್ರಸಿದ್ಧವಾಗಿರುವಂತೆ ಹಲವಾರು ಕನ್ನಡ, ತೆಲುಗು ಹಾಗೂ ತಮಿಳು ಸಂತ ಕವಿಗಳಿಂದ ಸ್ತುತಿಸಲ್ಪಟ್ಟು, ರಾಜಮಹಾರಾಜರಿಂದ ಪೋಷಿಸಲ್ಪಟ್ಟು,ಸರ್ವರ ಮನ್ನಣೆಗೆ ಪಾತ್ರವಾಗಿದೆ. ಸುತ್ತಲೂ ಗೋಪುರದಲ್ಲಿ ನೂರಾರು ಶಿವಲಿಂಗಗಳನ್ನೂ, ಆಳ್ವಾರ್, ನಾಯನಾರ್ ಎಂಬ ಹತ್ತಾರು ಭಕ್ತರ ಸುಂದರ ಶಿಲಾವಿಗ್ರಹಗಳನ್ನೂ ಹೊಂದಿ ಪಲ್ಲವ, ಚೋಳ ಹಾಗೂ ವಿಜಯನಗರದ ಸುಂದರ ಶಿಲ್ಪವಿನ್ಯಾಸದಿಂದ ಕಂಗೊಳಿಸುತ್ತಿದೆ. ಉನ್ನತ ಗೋಪುರಗಳಿಂದಲೂ ಸುತ್ತಲ ಪ್ರಕೃತಿ ಸೌಂದರ್ಯದ ದೃಶ್ಯಾವಳಿಗಳಿಂದಲೂ ಎಲ್ಲ ವರ್ಗದ ಜನರನ್ನು ತನ್ನೆಡೆಗೆ ಇಂದಿಗೂ ಪ್ರೀತಿಯಿಂದ ಕೈಬೀಸಿ ಕರೆಯುತ್ತಿದೆ.

೦೦೦

ಲೀಲಾಶುಕ ಕರ್ನಾಟಕದವನೇ ?

ಶ್ರೀ ವೆಂಕಟೇಶ್ವರ ಸುಪ್ರಭಾತದಂತೆ, ದಕ್ಷಿಣ ಭಾರತದ ಅಸಂಖ್ಯಾತ ಮನೆ ಮಂದಿರಗಳಲ್ಲಿ ಮಕ್ಕಳು, ಹಿರಿಯರು ಹಾಗೂ ಮನೆ ಕೆಲಸ ಮಾಡುತ್ತಿರುವ ಹೆಂಗಸರು ಇನಿದನಿಯಿಂದ "ಕಸ್ತೂರೀ ತಿಲಕಂ ಲಲಾಟ ಫಲಕೇ ವಕ್ಷಃಸ್ಥಲೇ ಕೌಸ್ತುಭಂ । ನಾಸಾಗ್ರೇ ನವ ಮೌಕ್ತಿಕಂ ಕರತಲೇ ವೇಣುಂ ಕರೇ ಕಂಕಣಂ । ಸರ್ವಾಂಗೇ ಹರಿಚಂದನಂ ಚ ಕಲಯನ್ ಕಂಠೇ ಚ ಮುಕ್ತಾವಲಿಂ... ।।" ಅಥವಾ- "ಅತ್ಯಂತ ಬಾಲಮತಸೀ ಕುಸುಮ ಪ್ರಕಾಶಂ । ದಿಗ್ವಾಸಸಂ ಕನಕಭೂಷಣ ಭೂಷಿತಾಂಗಂ...।।" ಅಥವಾ "ಮಧುರಮಧುರಬಿಂಬೇ ಮಂಜುಲಂ ಮಂದಹಾಸೇ । ಶಿಶಿರಮಮೃತನಾದೇ ಶೀತಲಂ ದೃಷ್ಟಿಪಾತೇ । ವಿಪುಲಮರುಣನೇತ್ರೇ ವಿಶ್ರುತಂ ವೇಣುನಾದೇ...।।" ಮೊದಲಾದ ಶ್ಲೋಕಗಳನ್ನು ಅತ್ಯಂತ ಸಹಜವಾದ ರೀತಿಯಲ್ಲಿ ತನ್ಮಯತೆಯಿಂದ ಹಾಡುತ್ತಿರುವುದನ್ನು ಕೇಳಬಹುದು. ಪದಗಳ ಕೋಮಲತೆ, ಲಾಲಿತ್ಯ, ಸ್ವರ ವಿನ್ಯಾಸ, ಅಲಂಕಾರ ಹಾಗೂ ಪ್ರಾಸಾನುಪ್ರಾಸಗಳಿಂದ ಎಂಥವರನ್ನೂ ಆಕರ್ಷಿಸಬಲ್ಲ ರಚನೆಗಳಿವು. ದೇವರ ಸುಂದರಾಕೃತಿಯನ್ನು ಕಣ್ಣೆದುರಿಗೆ ನಿಲ್ಲಿಸುವ ಶಕ್ತಿ ಯುಳ್ಳವುಗಳು. ಇಂತಹ ಸುಮಾರು ಮುನ್ನೂರು ಶ್ಲೋಕಗಳ ಒಂದು ಸಂಗ್ರಹವಿದೆ. ಇದನ್ನು'ಶ್ರೀ ಕೃಷ್ಣ ಕರ್ಣಾಮೃತಂ' ಎಂಬ ಹೆಸರಿನಿಂದ ಕರೆಯಲಾಗಿದೆ.

ಪರಿಪರಿಯ ಬಾಲಲೀಲೆಗಳನ್ನಾಡುವ ಶಿಶುಕೃಷ್ಣ, ತುಂಟಾಟವಾಡಿ ಯಶೋದೆ ಯನ್ನು ರೇಗಿಸುವ ಬಾಲಕೃಷ್ಣ, ಗೋವು-ಗೋಪಿಯರೊಡನೆ ಆಟವಾಡುವ ಗೋಪಾಲಕೃಷ್ಣ, ಧರ್ಮ ಸಂಸ್ಥಾಪನೆಗೆ ಧರೆಗಿಳಿದು ಬಂದ ಶ್ರೀ ಕೃಷ್ಣಾವತಾರದ ಭಗವಾನ್ ಕೃಷ್ಣ - ಮೊದಲಾದ ರೂಪಿನ ಸುಂದರಾಂಗ ಕೃಷ್ಣನೊಡನೆ ಭಕ್ತಿ ಪರವಶತೆಯಿಂದ ತಾದಾತ್ಮ್ಯವನ್ನು ಅನುಭವಿಸಿ, ಆನಂದವನ್ನುಂಡು ಅದನ್ನೇ ಸರಳ ಸುಂದರ ಸಂಸ್ಕೃತದಲ್ಲಿ ಕರ್ಣಾನಂದ ಕರವಾಗುವಂತೆ ವರ್ಣಿಸಿದ ಕವಿ, ಭಾಗವತೋತ್ತಮನಾದ ಲೀಲಾಶುಕ. ವಿದ್ವಾಂಸರ ಅಭಿಪ್ರಾಯದಂತೆ ಮುಕುಂದಮಾಲೆಯ ಕುಲಶೇಖರಾಳ್ವಾರ್, ಗೀತಗೋವಿಂದದ ಕವಿ ಜಯದೇವನಿಗಿಂತಲೂ ಹೆಚ್ಚಾಗಿ ಶ್ರೀಕೃಷ್ಣನಲ್ಲಿ ದೈವಿಕ ಚೆಲುವು, ಭಕ್ತಪರಾಧೀನತೆ ಮನೋಹರತೆ, ಮಾಧುರ್ಯ, ಶೃಂಗಾರಾದಿಗಳನ್ನು ಕಂಡು ಅವುಗಳನ್ನು ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ವರ್ಣಿಸಿ, ಅತ್ಯುನ್ನತ ರಸಾನುಭವವನ್ನುಂಟು ಮಾಡುವವನು.

ತೆಲುಗು ವಿದ್ವಾಂಸ ಶ್ರೀ ವಾವಿಳ್ಳ ರಾಮಸ್ವಾಮಿ ಶಾಸ್ತ್ರುಲು ಈ ಶ್ಲೋಕಗಳನ್ನು ಸಂಪಾದಿಸಿ ಪ್ರಕಟಿಸುವಾಗ ಈತನು ಆಂಧ್ರಪ್ರದೇಶದವನಿರಬೇಕೆಂದು ಅಭಿಪ್ರಾಯ

ಪಟ್ಟಿರು. ಇವುಗಳು ಆಂಧ್ರದಲ್ಲಿ ಹೆಚ್ಚು ಬಳಕೆಯಲ್ಲಿರುವುದರಿಂದಲೂ ವೆಂಗಾಗ್ರಣಿ ಎಂಬ ಪ್ರಾಚೀನ ತೆಲುಗು ಕವಿಯೊಬ್ಬನು ಇವುಗಳನ್ನು ತೆಲುಗಿಗೆ ಭಾಷಾಂತರಿಸಿದ್ದುದರಿಂದಲೂ ಈತನು ಆಂಧ್ರದವನೇ ಇರಬೇಕೆಂದು ನಂಬಲಾಯಿತು. ಆದರೆ ಇದಕ್ಕೆ ಪುರಾವೆಗಳೇನೂ ಇಲ್ಲ. ಎರಡನೆಯದಾಗಿ, ಪ್ರಾಚೀನ ತಮಿಳು ರಚನೆಗಳಂತೆ ಲೀಲಾಶುಕನ ಈ ಸ್ತುತಿಗಳಲ್ಲಿ ಆದಿಪ್ರಾಸ ಮತ್ತು ವೃತ್ಯನುಪ್ರಾಸಗಳು ಅಧಿಕವಾಗಿ ಬಳಸಲ್ಪಟ್ಟಿರುವುದರಿಂದ (ಕನ್ನಡದಲ್ಲಿಯೂ ಇಂತಹ ರಚನೆಗಳು ರೂಢಿಯಲ್ಲಿವೆ ಎಂಬುದನ್ನು ನಿರ್ಲಕ್ಷಿಸಿ) ಈತನು ತಮಿಳುನಾಡಿನವನೇ ಇರಬೇಕೆಂದು ಘೋಷಿಸ ಲಾಯಿತು. ಮೂರನೆಯದಾಗಿ, ದಕ್ಷಿಣ ಕೇರಳದ ತಿರುವನಂತಪುರ (ಟ್ರಿವೆಂಡ್ರಂ) ದೇವಾಲಯದಲ್ಲಿ ಹಾಗೂ ಕೇರಳದ ಉತ್ತರ ಭಾಗದಲ್ಲಿರುವ ಅನಂತಪುರ ದೇವಾಲಯದಲ್ಲಿ ಈತನಿಗೆ ಸಂಬಂಧಿಸಿದ ಪರಂಪರೆಯ ಸಾಕ್ಷಿಗಳಿರುವುದರಿಂದ ಹಾಗೂ ಎಡನೀರು ಮಠದ ಇಷ್ಟದೇವರ ಧ್ಯಾನ ಶ್ಲೋಕ ಈತನದ್ದೇ ರಚನೆಯಾಗಿ ರುವುದರಿಂದ ಈತನು ಕೇರಳದವನೆಂದೂ ಹೇಳಲಾಯಿತು.

ಮೇಲೆ ಹೇಳಿರುವ ಕೇರಳದ ಎರಡೂ ದೇವಾಲಯಗಳ ಸಂಬಂಧದಲ್ಲಿ ಪ್ರಚಲಿತವಿರುವ ಒಂದು ಕಥೆಯಂತೆ- ಮೊದಲು ಬಿಲ್ವಮಂಗಲ ಮುನಿಯೆಂದು ಕರೆಯಲ್ಪಡುತ್ತಿದ್ದ ಈ ಲೀಲಾಶುಕನು ಅನಂತಪುರ ದೇವಾಲಯದಲ್ಲಿರುವಾಗ ಭಕ್ತಿಯ ಜೊಂಪಿನಿಂದಾಗಿ ಅನಂತಪದ್ಮನಾಭ ಸ್ವಾಮಿಯನ್ನು ಬಾಲಕೃಷ್ಣನೆಂದು ಪರಿಭಾವಿಸಿ ಆತನೊಡನೆ ಆಟವಾಡುತ್ತಿದ್ದನು. ಇಬ್ಬರಲ್ಲಿ ಗಾಢವಾದ ಮೈತ್ರಿ ಬೆಳೆದಿತ್ತು. ಆದರೆ ಒಂದು ದಿನ ಕೃಷ್ಣನ ತುಂಟಾಟವನ್ನು ತಾಳಲಾರದೆ ಕುಪಿತನಾಗಿ ಲೀಲಾಶುಕ ಆತನನ್ನು ತಿರಸ್ಕರಿಸಿಬಿಟ್ಟ. ಕೃಷ್ಣನು ಅದೃಶ್ಯನಾಗಿ ತಿರುವನಂತಪುರದ ದೇವಾಲಯಕ್ಕೆ ಹೋಗಿ ಅಲ್ಲಿ ನೆಲೆಸಿದ. ತನ್ನ ಆತ್ಮೀಯ ಸ್ವಾಮಿಯನ್ನು ಕಳೆದುಕೊಂಡ ಮುನಿ ಅತ್ಯಂತ ಖಿನ್ನನಾಗಿ, ಪ್ರಲಾಪಿಸುತ್ತಾ ಊರೂರು ಅಲೆಯತೊಡಗಿದ. ಕೊನೆಗೊಂದು ದಿನ ತಿರುವನಂತಪುರ ದೇವಾಲಯದಲ್ಲಿ ತನ್ನ ಸ್ವಾಮಿಯನ್ನು ಕಂಡು, ಆನಂದ ತುಂದಿಲನಾಗಿ ಪಶ್ಚಾತ್ತಾಪದ ಅಗ್ನಿಯಿಂದಲೇ ಆರತಿಯೆತ್ತಿ ಅಷ್ಟವಿಧಾರ್ಚನೆಯಿಂದ ಪ್ರಸನ್ನಗೊಳಿಸಿ ತನ್ನ ಕೈಯಲ್ಲಿದ್ದ ಸಾಮಾನ್ಯವಾದ ಒಂದು ಮಾವಿನ ಹಣ್ಣನ್ನೇ ತೆಂಗಿನ ಚಿಪ್ಪಿನಲ್ಲಿರಿಸಿ ಅದನ್ನೇ ನೈವೇದ್ಯವನ್ನಾಗಿ ಅರ್ಪಿಸಿದ. ಇದರಿಂದ ಸಂತುಷ್ಟನಾದ ಸ್ವಾಮಿಯು ತಾನು ಅಲ್ಲೇ ನೆಲೆಸುವುದಾಗಿಯೂ, ಜೀವನ ಪರ್ಯಂತ ಆತನೂ, ಮುಂದೆ ಆತನ ವಂಶದವರೂ ತನ್ನನ್ನು ಅರ್ಚಿಸಬೇಕೆಂಬ ಆದೇಶವನ್ನಿತ್ತ.

ಇದರಂತೆ ಮುನಿಯ ಕಾಲಾನಂತರ ಆತನ ವಂಶದವರಾದ ತುಳುನಾಡ ಕೊಕ್ಕಡದಲ್ಲಿರುವ ಶಿವಳ್ಳಿ ಬ್ರಾಹ್ಮಣರನ್ನೇ ಪೂಜೆಗಾಗಿ ಕರೆತರಲಾಯಿತು. ಈ ಪದ್ಧತಿ ಇಂದಿಗೂ ಮುಂದುವರಿಯುತ್ತಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ದಕ್ಷಿಣ

ದಂಚಿನಲ್ಲಿರುವ ಕೊಕ್ಕಡದ ಶಿವಳ್ಳಿ ಬ್ರಾಹ್ಮಣ ವಂಶದವರೇ ಇಂದೂ ಅಲ್ಲಿ ಪುರೋಹಿತರಾಗಿರುವರು. ಆದುದರಿಂದ ಲೀಲಾಶುಕನು ಕೊಕ್ಕಡದವನೇ ಎಂದಾಯಿತು! ಈ ಕೊಕ್ಕಡಕ್ಕೆ 1986ರಲ್ಲಿ ಹೋಗಿ ವಿಚಾರಿಸಿದಾಗ ಅಲ್ಲಿಯ ಶ್ರೀ ವೈದ್ಯನಾಥ ದೇವಾಲಯದ ಪರಿಸರದಲ್ಲಿ ಬಹಳ ಹಿಂದೆ ದಿವಾಕರ ಮುನಿಯೆಂ ಬೊಬ್ಬ ಸಾಧಕನಿದ್ದನೆಂದೂ ಆತ ಮುಂದೆ ಸನ್ಯಾಸಿಯಾಗಿ ಕೇರಳದ ತಿರುವನಂತಪುರ ದೇವಾಲಯಕ್ಕೆ ಹೋಗಿ ಅರ್ಚಕನಾದುದರಿಂದ ಮುಂದೆ ಆತನ ಮನೆತನಕ್ಕೆ ಸೇರಿದ ಈ ಕೊಕ್ಕಡದವರೇ ಅಲ್ಲಿ ಪುರೋಹಿತರಾಗಿ ಹೋಗುವ ಪದ್ಧತಿ ಬೆಳೆಯಿತೆಂದೂ ಈಗಲೂ ಇಲ್ಲಿಯವರೇ ಅಲ್ಲಿ ಪುರೋಹಿತರಾಗುವರೆಂದೂ ತಿಳಿದು ಬಂತು.

ಆದರೆ ಈ ದಿವಾಕರ ಮುನಿಯೇ ಬಿಲ್ವಮಂಗಲನಾಗಿ ಮುಂದೆ ಲೀಲಾಶುಕನಾದನೇ? -ಎಂಬ ಪ್ರಶ್ನೆ ಹಾಗೆಯೇ ಉಳಿಯಿತು. ಕೊಕ್ಕಡದಲ್ಲಿ ಇದಕ್ಕೆ ಉತ್ತರ ದೊರೆಯಲಿಲ್ಲ. ಆದರೆ ಜೊತೆಗೇ ಲೀಲಾಶುಕನೇ ದಿವಾಕರ ಮುನಿ, ಆ ದಿವಾಕರ ಮುನಿಯೇ ತಮ್ಮ ಊರಿನವನೆಂದು ನಿರ್ಣಯಿಸಲು ಇವರು ಪ್ರಯತ್ನಪಟ್ಟಿಲ್ಲ ಎಂಬ ಸಮಾಧಾನವೂ ಸಿಕ್ಕಿತು. ಆದುದರಿಂದ ಇವರ ಮೊದಲಿನ ಮಾತು ವಿಶ್ವಾಸಾರ್ಹವೆನಿಸಿತು.

ಈ ಮೂರು ಹೆಸರಿನ ವ್ಯಕ್ತಿ ಒಬ್ಬನೇ? ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಿದ್ದಾಗ ಮಂಜೇಶ್ವರದ ಕಾಸರಗೋಡು ತಾಲೂಕು ಕನ್ನಡ ಲೇಖಕರ ಸಂಘದವರು ಪ್ರಕಟಿಸಿದ 'ಸಾಹಿತ್ಯ ಧ್ವನಿ', ಮೂರನೇ ಸ್ಮರಣ ಸಂಚಿಕೆ (1980)ಯಲ್ಲಿ ಒಂದು ಉತ್ತರ ದೊರಕಿತು. ಭಾಷಾಂತರಿಸಿದ್ದನೆಂದು ಹಿಂದೆಯೇ ತಿಳಿಸಿರುವ. ವೆಂಗಾಗ್ರಣಿ ಕ್ರಿ. ಶ. ಸುಮಾರು 11ನೇ ಶತಮಾನದವನು. ಆದುದರಿಂದ ಲೀಲಾಶುಕನು ಅದಕ್ಕಿಂತ ಹಿಂದೆ ಜೀವಿಸಿರಬೇಕು. ಹೇಗಿದ್ದರೂ ಪ್ರಾರಂಭದಲ್ಲಿ ಈತ ವಾಸ್ತವ್ಯವಿದ್ದ ಕೊಕ್ಕಡದ ದೇವಾಲಯ ವಾಸ್ತುಶಿಲ್ಪದ ಅಧ್ಯಯನದಿಂದ 10ನೇ ಶತಮಾನದ ನಿರ್ಮಾಣವೆಂದು ನಿರ್ಣಯವಾಗಿದೆ. ಆ ಕಾಲದಲ್ಲಿ ಕೊಕ್ಕಡವು ಒಂದು ಪ್ರಸಿದ್ಧ ಸಂಸ್ಕೃತ ಶಿಕ್ಷಣ ಕೇಂದ್ರವೂ ಆಗಿತ್ತು. ನಾರಾಯಣ ಪಂಡಿತಾಚಾರ್ಯ ವಿರಚಿತ ಶ್ರೀಮತ್ ಮಧ್ವ ವಿಜಯದ 16ನೇ ಸರ್ಗದಲ್ಲಿ ಹೇಳಿರುವಂತೆ ಶ್ರೀ ಮಧ್ವಾಚಾರ್ಯರು ಕೊಕ್ಕಡದ ಶ್ರೀ ವೈದ್ಯನಾಥ ದೇವಾಲಯಕ್ಕೆ ಬಂದು 'ಶ್ರೀಕೃಷ್ಣಾಮೃತ ಮಹಾರ್ಣವ' ಎಂಬ ಗ್ರಂಥವನ್ನು ರಚಿಸಿದ್ದರು. ಲೀಲಾಶುಕನು ಹಿಂದೆ ಇಲ್ಲಿ 'ಶ್ರೀಕೃಷ್ಣ ಕರ್ಣಾಮೃತಂ' ಎಂಬ ಗ್ರಂಥವನ್ನು ರಚಿಸಿದ್ದುದರಿಂದ ಶ್ರೀ ಮಧ್ವಾಚಾರ್ಯರು ಇಲ್ಲಿ 'ಶ್ರೀಕೃಷ್ಣಾಮೃತ ಮಹಾರ್ಣವ' ಎಂಬ ಗ್ರಂಥವನ್ನು ರಚಿಸಿರಬೇಕು.

ನಂದಾವರದ ಕರುಣ ಕಥೆ

'ನಂದರಾಯನ ಬದುಕು ನರಿನಾಯಿ ತಿಂದು ಹೋಯ್ತು' ಎಂಬ ನಾಣ್ಣುಡಿಯ ಹಿಂದಿರುವ ದುಃಖದ ಕಥೆ ಇಲ್ಲಿದೆ. ಇತಿಹಾಸ ಚಕ್ರದ ಏಳುಬೀಳುಗಳಿಗೆ ಮೂಕಸಾಕ್ಷಿಯಾಗಿ ನಿಂತ ನಂದಾವರ, ಹಾಳು ಹಂಪೆಯಾದ ಐತಿಹಾಸಿಕ ಹಿನ್ನೆಲೆಯನ್ನು ವಿಭಿನ್ನ ಪ್ರಾಚೀನ ದಾಖಲೆಗಳಿಂದ ಸಂಗ್ರಹಿಸಿ ಇಲ್ಲಿ ಪರಿಚಯಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನಲ್ಲಿ ನೇತ್ರಾವತೀ ನದಿಯ ದಡದ ಮೇಲಿರುವ ಈ ನಂದಾವರವು ಹಲವಾರು ಶತಮಾನಗಳ ಕಾಲ ಒಂದು ಐತಿಹಾಸಿಕ ಕೇಂದ್ರವಾಗಿ ಮೆರೆದ ಸ್ಥಳ. ಇಲ್ಲಿದ್ದ ಅರಮನೆಗಳು, ದೇವಾಲಯಗಳು, ಎರಡು ಕೋಟೆಗಳು, ಮೂರು ಜಿನಾಲಯಗಳು ಮತ್ತು ಪುರಜನರ-ಪರಿಜನರ ಮನೆಗಳೆಲ್ಲ ನಾಶವಾಗಿ, ಈಗ ಕೆಲವು ನಿರ್ಜೀವ ಸ್ಮಾರಕಗಳು ಮಾತ್ರ ಕಂಡು ಬರುತ್ತಿವೆ. ಉಳಿದುಳಿದ ಈ ಕುರುಹುಗಳು ಇಲ್ಲಿಯ ಗತ ಇತಿಹಾಸವನ್ನು ತಿಳಿಸುವ ಮೂಕ ಸಾಕ್ಷಿಗಳು. ಅವು ತಮ್ಮ ಕರುಣ ಕಥೆಯನ್ನು ಸಂದರ್ಶಕರಿಗೆ ವಿವರಿಸುತ್ತ ಕಣ್ಣೀರಿಡುತ್ತಿವೆ.

ಹೆಸರಿನ ಮೂಲ

ನಂದಾವರ ಎಂಬ ಹೆಸರು ನಂದ+ಪುರ ಎಂಬ ಎರಡು ಪದಗಳಿಂದ ಉತ್ಪತ್ತಿಯಾಗಿದೆ (ಬಾಣ+ಪುರ=ಬಾಣಾವರ, ಬ್ರಹ್ಮ+ಪುರ=ಬ್ರಹ್ಮಾವರ ಆದಂತೆ) ಇಲ್ಲಿ ನಂದನೆಂಬ ಕೀರ್ತಿಶಾಲಿಯಾದ ಒಬ್ಬ ವ್ಯಕ್ತಿಯಾಗಲೀ, ನಂದರೆಂಬ ಒಂದು ಜನಾಂಗವಾಗಲೀ ಇದ್ದಿರಬಹುದೆಂದೂ ಅದರಿಂದಾಗಿ ಈ ಹೆಸರು ಬಂದಿರಬಹುದೆಂದೂ ನಾವು ಊಹಿಸಿಕೊಳ್ಳಬಹುದು.

ಆದರೆ ನಿಜವಾಗಿ, ಪ್ರಾಚೀನ ಕಾಲದಲ್ಲಿ ಈ ನಂದಾವರದಲ್ಲಿ ನಂದರೆಂಬ ಮೂಲ ನಿವಾಸಿಗಳು ತಮ್ಮ ಅರಮನೆಯನ್ನು ಕಟ್ಟಿಕೊಂಡು ರಾಜ್ಯವಾಳುತ್ತಿದ್ದರು. ಅವರು ಹರಿಜನ ಜಾತಿಯವರಾಗಿದ್ದರೆಂದು ಈಗಲೂ ಇಲ್ಲಿಯ ಜನರು ಹೇಳುತ್ತಾರೆ. ಅರಮನೆಯಂತೆ, ಮಂತ್ರಿಗಳ, ಅಧಿಕಾರಿಗಳ, ಪರಿಚಾರಕರ, ಸೈನಿಕರ, ವ್ಯಾಪಾರಿಗಳ ಮುಂತಾದವರ ಮನೆಗಳು ಇಲ್ಲಿ ಕಟ್ಟಲ್ಪಟ್ಟಿದ್ದರಿಂದ ನಂದರ ಈ ಊರು ಒಂದು ಪುರ (ಪಟ್ಟಣ)ವಾಗಿ ಬೆಳೆದಿತ್ತು. ನಂದಪುರ ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು.

ನಂದ ಅರಸರು

ಈ ನಂದ ಅರಸರ ಮೂಲದ ಬಗ್ಗೆ ಅಧಿಕೃತವಾಗಿ ನಮಗೇನೂ ತಿಳಿದು ಬರುವುದಿಲ್ಲ. ಆದರೂ ಕ್ರಿ. ಶ. ೧೫ನೇ ಶತಮಾನದ ಪ್ರಾರಂಭದವರೆಗೆ ಅವರು ಇಲ್ಲಿ ಅಧಿಕಾರವನ್ನು ಹೊಂದಿದ್ದರೆಂಬುದು ಸ್ಪಷ್ಟ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಬಂಗಾಡಿಯಿಂದ ಆಳ್ವಿಕೆಯನ್ನು ನಡೆಸುತ್ತಿದ್ದ ಒಂದನೇ ಲಕ್ಷ್ಮಪ್ಪರಸ ಬಂಗರಾಜನೆಂಬವನು ಹದಿನೈದನೇ ಶತಮಾನದಲ್ಲೊಂದು ದಿನ ಮುಂಜಾನೆ ಐದು ಘಂಟೆಯ ಹೊತ್ತಿಗೆ ನಂದಾವರದ ಬಳಿಯಿಂದ ಮಂಗಳೂರಿಗೆ ದೋಣಿಯಲ್ಲಿ ಪ್ರಯಾಣಿಸುತ್ತಿದ್ದ. ಆಗ ಇಲ್ಲಿಯ ಗಣಪತಿ ದೇವಾಲಯದ ಪೂರ್ವದಿಕ್ಕಿಗೆ ಸ್ವಲ್ಪ ದೂರದಲ್ಲಿದ್ದ ಮಣ್ಣಿನ ದಿಬ್ಬದ ಮೇಲಿಂದ ಜೋಡಿ ಕವಡೆ ಹಕ್ಕಿಗಳು ಕೂಗುತ್ತಿದ್ದುವು. ಅರಸನ ಜೊತೆಯಲ್ಲಿದ್ದ ಜೋಯಿಸನು ಆ ಸಮಯದಲ್ಲಿ ಜೋಡಿ ಕವಡೆ ಹಕ್ಕಿಗಳು ಕೂಗುತ್ತಿದ್ದರೆ ಆ ಸ್ಥಳದಲ್ಲಿ ನಿಧಿಯ ನಿಕ್ಷೇಪವಿದೆ ಎಂದೂ ಅದು ಅರಮನೆ ಕಟ್ಟಲು ಯೋಗ್ಯ ಸ್ಥಳವೆಂದೂ ಸೂಚಿಸಿದನು. ಅದರ ಅನುಸಾರ ಸಜಿಪ ಸೀಮೆಯ ನಂದಿರಾಯ ಬಲ್ಲಾಳನ ಸಹಾಯದಿಂದ ಬಂಗರಸನು ಇಲ್ಲಿ ತನ್ನ ಅರಮನೆಯನ್ನು ಕಟ್ಟಿಸಿದನೆಂದು ದಿ। ಗಣಪತಿ ಐಗಳ್ ರವರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ ಎಂಬ ಗ್ರಂಥದಲ್ಲಿ ಹೇಳಿರುವರು.

ಬಂಗ ಅರಸನು ಇಲ್ಲಿ ತನ್ನ ಅರಮನೆಯನ್ನು ಕಟ್ಟಿಸುವ ಸಂದರ್ಭದಲ್ಲಿ ಇಲ್ಲಿಂದ ಆಳುತ್ತಿದ್ದ ನಂದರಾಯನೊಡನೆ ಯುದ್ಧ ಹೂಡಿದನು. ಜನಬೆಂಬಲವೂ ಇಲ್ಲದ, ಅಂದಿನ ಮಟ್ಟಿಗೆ ಕೀಳು ಜಾತಿಯವನೂ ಆಗಿದ್ದ ನಂದರಾಯನ ಸಹಾಯಕ್ಕೆ ಯಾರೂ ಬಂದಿರಲಿಲ್ಲ. ಇದರಿಂದಾಗಿ, ಜೀವವನ್ನು ಕಳೆದುಕೊಂಡ ನಂದರಾಯನ ಸಂಪತ್ತನ್ನು ಯಾರಾರೋ ದೋಚಿಕೊಂಡುಹೋದರು; ತಿಂದು ಹಾಕಿದರು. ಹೀಗೆ "ನಂದರಾಯನ ಬದುಕು ನರಿ ನಾಯಿ ತಿಂದುಹೋಯ್ತು" ಎಂಬ ನಾಣ್ನುಡಿ ರೂಢಿಗೆ ಬಂತು. ಹೀಗೆ ದಾರುಣವಾಗಿ ನಂದ ವಂಶವು ಅಸ್ತಂಗತವಾಗಿ ಈ ನಂದಪುರದಲ್ಲಿ ದುಃಖದ ಕತ್ತಲು ಕವಿಯಿತು.

ಬಂಗರಸರ ಏಳುಬೀಳುಗಳು

ನಂದರನ್ನು ನಿರ್ನಾಮ ಮಾಡಿ ಕ್ರಿ. ಶ. ೧೪೧೭ರಲ್ಲಿ ನಂದಾವರದಲ್ಲಿ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿದ ಬಂಗ ಅರಸನು, ತನ್ನ ಅರಮನೆಯ ಸುತ್ತಲೂ ಒಂದು ಎತ್ತರವಾದ ಮಣ್ಣಿನ ಕೋಟೆಯನ್ನೂ ಅದರೊಳಗೆ ವೀರಭದ್ರನ ಒಂದು ಗುಡಿಯನ್ನೂ

ವೃಷಭನಾಥ ತೀರ್ಥಂಕರ ಬಸದಿಯನ್ನೂ ಕಟ್ಟಿಸಿದನು. ಆದರೆ ಆತನಿಗೂ ಆತನ ಉತ್ತರಾಧಿಕಾರಿಗಳಿಗೂ ಇಲ್ಲಿಂದ ಸುಖ ಶಾಂತಿಯಿಂದ ರಾಜ್ಯವಾಳಲು ಸಾಧ್ಯವಾಗುತ್ತಿರಲಿಲ್ಲ. ಇವರಿಗೂ ನೆರೆಯ ಅರಸರಾದ ಚೌಟರಿಗೂ ವಿಟ್ಲದ ಡೊಂಬ ಹೆಗ್ಗಡೆ ಅರಸರಿಗೂ ಆಗಾಗ ಕಲಹಗಳೂ ಯುದ್ಧಗಳೂ ನಡೆಯುತ್ತಿದ್ದುವು. ವಿದೇಶೀಯರಿಂದಲೂ ಶತ್ರುಗಳಿಂದಲೂ ನಂದಾವರದಲ್ಲಿ ಆಗಾಗ ಕೊಲೆ, ಸುಲಿಗೆ, ದರೋಡೆಗಳು ನಡೆಯುತ್ತಿದ್ದು ಅಶಾಂತಿ ಹಾಗೂ ಅರಾಜಕತೆಗಳು ನೆಲೆಗೊಳ್ಳ ತೊಡಗಿದವು.

ಹೈದರಾಲಿಯು ೧೭೬೩ರಲ್ಲಿ ಬಿದನೂರನ್ನು ವಶಪಡಿಸಿಕೊಂಡು ನಂದಾವರದ ಕಡೆಗೆ ಬಂದನು. ಆಗ ಇಲ್ಲಿಂದ ಆಳುತ್ತಿದ್ದ ನಾಲ್ಕನೇ ಲಕ್ಷ್ಮಪ್ಪರಸ ಬಂಗನೆಂಬವನು ಆತನನ್ನು ತನ್ನಲ್ಲಿಗೆ ಆದರದಿಂದ ಬರಮಾಡಿಕೊಂಡು ಕಪ್ಪ ಕಾಣಿಕೆಯನ್ನಿತ್ತನು. ಆದರೂ ಕೆಲವು ವರ್ಷಗಳಲ್ಲಿ ನಂದಾವರವು ಹೈದರಾಲಿಯ ಅಧಿಕಾರಿಯಾಗಿದ್ದ ಶೇಕಾಲಿಯ ಸುಲಿಗೆಗೆ ಒಳಗಾಗಿ ಸಂಕಷ್ಟಕ್ಕೆ ಗುರಿಯಾಯಿತು. ಈ ವ್ಯಸನದಲ್ಲೇ ೧೭೬೭ರಲ್ಲಿ ಬಂಗರಸ ತೀರಿಕೊಂಡ.

ಮತ್ತೊಮ್ಮೆ ಕೊಡಗಿನ ಅರಸನ ಕಡೆಯವನಾದ ಗೋಪ ಗೌಡನೆಂಬವನು ದಕ್ಷಿಣ ಕನ್ನಡ ಜಿಲ್ಲೆಯ ಮೇಲೆ ದಾಳಿಯಿಟ್ಟು, ೧೭೯೯ನೇ ಇಸವಿ ಎಪ್ರಿಲ್ ತಿಂಗಳಲ್ಲಿ ನಂದಾವರಕ್ಕೆ ಬಂದು ಇಲ್ಲಿಯ ಅರಸ ನಾಲ್ಕನೇ ಕಾಮಪ್ಪರಸನನ್ನು ಬಂಧಿಸಿ, ಅರಮನೆಯ ಸಂಪತ್ತನ್ನೆಲ್ಲಾ ಸೂರೆ ಮಾಡಿ, ಅರಮನೆಗೆ ಬೆಂಕಿಯಿಟ್ಟನು. ಅರಮನೆಯೊಂದಿಗೆ ಅರಸನೂ ದಹಿಸಲ್ಪಟ್ಟ.

ದೇಶಕ್ಕಾಗಿ ನಂದಾವರ ಅರಸರ ಪ್ರಾಣಾರ್ಪಣೆ

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸ್ವಾತಂತ್ರ್ಯ ಹೋರಾಟವು ಬಿರುಸಿನಿಂದ ನಡೆಯುತ್ತಿದ್ದಾಗ, ಕೊಡಗು ದೇಶದಿಂದ ಕಲ್ಯಾಣಪ್ಪನೆಂಬವನು ತನ್ನ ಕಾಟಕಾಯಿ (ದಂಗೆ)ಯನ್ನು ಪ್ರಾರಂಭಿಸಿ, ಸುಳ್ಯ, ಪುತ್ತೂರುಗಳನ್ನು ದಾಟಿ, ೧೮೩೭ನೇ ಇಸವಿ ಎಪ್ರಿಲ್ ತಿಂಗಳಲ್ಲಿ ನಂದಾವರದತ್ತ ಧಾವಿಸಿ ಬಂದ. ಸ್ವಾತಂತ್ರ್ಯ ಹೋರಾಟದ ಕೆಚ್ಚಿನ ಜನರೆಲ್ಲರೂ ಸೇರಿ ಕಲ್ಯಾಣಪ್ಪನನ್ನು ನಂದಾವರಕ್ಕೆ ಬರಮಾಡಿಕೊಂಡರು. ಎರಡೂ ಕಡೆಯ ಯೋಧರು ಕೋಟೆ ಹನುಮಂತ ದೇವಾಲಯದ ಬಳಿ ಸೇರಿ ರಾಜಾ ಲಕ್ಷ್ಮಪ್ಪರಸನನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆಯೂ, ಪೂರ್ಣ ಆರ್ಥಿಕ ಸಹಕಾರವನ್ನು ಕೊಡುವಂತೆಯೂ ಕೇಳಿಕೊಂಡರು. ಮರುದಿನ ಸಾರ್ವಜನಿಕ ಭೋಜನ ಕೂಟವೊಂದನ್ನು

ನಂದಾವರ ರಾಜಾಂಗಣದಲ್ಲಿ ಏರ್ಪಡಿಸಿ, ಮುಂದೆ ಬಂಟವಾಳಕ್ಕೂ ಮಂಗಳೂರಿಗೂ ಧಾಳಿಯಿಟ್ಟು ಬ್ರಿಟಿಷ್ ಖಜಾನೆಯನ್ನು ದೋಚುವುದಾಗಿ ನಿರ್ಣಯಿಸಲಾಯಿತು.

ಆ ಕಾಲದ ನಂದಾವರದ ಕವಿಯೊಬ್ಬನು ಹಾಡಿರುವಂತೆ, ಸ್ವಾತಂತ್ರ್ಯಾವೇಶದಿಂದ ರೊಚ್ಚಿಗೆದ್ದ ಇಲ್ಲಿಯ ಜನ ಮರುದಿನವೇ ಕೈಯಲ್ಲಿ ಕೊತ್ತಳಿಂಗೆ (ತೆಂಗಿನ ಮರದ ಗರಿಯ ಕಾಂಡ)ಗಳನ್ನೂ ಕಲ್ಲು ಗುಂಡುಗಳನ್ನೂ ತೆಗೆದುಕೊಂಡು ಬಂಟವಾಳಕ್ಕೆ ಓಡಿ ಅಲ್ಲಿಯ ಬ್ರಿಟಿಷ್ ಸುಬೇದಾರನನ್ನು ಕೊಂದು ಖಜಾನೆಯನ್ನು ದೋಚಿದರು. ಮುಂದೆ ಮಂಗಳೂರಿನಲ್ಲಿಯೂ ಬ್ರಿಟಿಷ್ ಖಜಾನೆಯನ್ನು ದೋಚಿ, ಬ್ರಿಟಿಷರ ಮನೆಗಳಿಗೆ ಬೆಂಕಿ ಇಟ್ಟರು. ಈ ಎಲ್ಲಾ ಗಲಭೆಗಳಿಗೆ ಕಲ್ಯಾಣಪ್ಪನೂ ನಂದಾವರದ ಲಕ್ಷ್ಮಪ್ಪರಸ ಬಂಗನೂ ಕಾರಣರೆಂದು ತಿಳಿದ ಬ್ರಿಟಿಷರು ಇವರನ್ನು ದೇಶದ್ರೋಹಿಗಳೆಂದು ತೀರ್ಮಾನಿಸಿ ಅದೇ ೧೮೩೭ರ ಮೇ ತಿಂಗಳಲ್ಲಿ ಮಂಗಳೂರಿನ ಬಿಕರ್ನಕಟ್ಟೆಯಲ್ಲಿ ಗಲ್ಲಿಗೇರಿಸಿದರು. ಇದರಿಂದಾಗಿ, ನಂದಾವರವು ಇನ್ನೊಮ್ಮೆ ಆಳುವ ಅರಸನಿಲ್ಲದೆ ಅನಾಥವಾಯಿತು.

ನಂದಾವರಕ್ಕೆ ದುಃಖಾಂತ್ಯ

ಜನಸಂಖ್ಯೆಯನ್ನೂ ಸಂಪತ್ತನ್ನೂ ರಾಜನನ್ನೂ ಕಳೆದುಕೊಂಡು ನಂದಾವರವು ದುರ್ಬಲವಾಗಿದ್ದಾಗ, ಇದೇ ಬಂಗ ವಂಶದ ಐದನೇ ಕಾಮರಾಯ ಮತ್ತು ಲಕ್ಷ್ಮಪ್ಪರಸ ಪದ್ಮರಾಜ ಬಂಗ ಎಂಬವರು ಇಲ್ಲಿಂದ ಆಳಲು ಪ್ರಾರಂಭಿಸಿದರು. ಆದರೆ ಯಾವುದೋ ಕಾರಣದಿಂದ ಇವರು ಜನಪ್ರಿಯರಾಗಲಿಲ್ಲ. ೧೮೯೩ರಿಂದ ಇವರನ್ನು ಇಲ್ಲಿಂದ ಓಡಿಸುವ ಪ್ರಯತ್ನಗಳು ನಡೆಯತೊಡಗಿದವು. ಇವರಲ್ಲಿ ಕೊನೆಯವನಾದ ಲಕ್ಷ್ಮಪ್ಪರಸ ಪದ್ಮರಾಜ ಬಂಗನು ೧೮೯೮ರಲ್ಲಿ ನಂದಾವರವನ್ನು ಬಿಟ್ಟು ತನ್ನ ಪೂರ್ವಜರ ರಾಜಧಾನಿಯಾಗಿದ್ದ ಬಂಗಾಡಿಗೆ ಹೋಗಿ ಅಲ್ಲಿ ನೆಲೆಯಾದನು.

ಈ ಕಡೆ, ಬಂಗರಸರ ನಂದಾವರದ ಇಡೀ ಭೂಮಿಯು ಹರಾಜು ಹಾಕಲ್ಪಟ್ಟು ಹರಿಹಂಚಾಗಿ ಹೋಯಿತು. ಇಂದಿನ ಗಣಪತಿ ದೇವಾಲಯದಿಂದ 150 ಮೀಟರ್ ಪೂರ್ವ ದಿಕ್ಕಿಗಿರುವ ದಿನ್ನೆಯ ಮೇಲಿದ್ದ ಬಂಗರ ಅರಮನೆಯು ಪೂರ್ಣ ನಾಶವಾಗಿ ಗುರುತಿಲ್ಲದಂತಾಯಿತು. ರಾಜಾಂಗಣವು ಭತ್ತ ಬೆಳೆಸುವ ಗದ್ದೆಯಾಯಿತು. ಇಲ್ಲಿದ್ದ ಶಾಂತಿನಾಥ ಬಸದಿ, ವೃಷಭನಾಥ ಬಸದಿ, ಪದ್ಮಾವತಿ ಬಸದಿಗಳು ನೆಲಸಮವಾದುವು. ಇಂದು ಅವುಗಳಿಗಿದ್ದ ಜಾಗವನ್ನೂ ಗುರುತಿಸಲೂ ಸಾಧ್ಯವಾಗುವುದಿಲ್ಲ. ವೀರಭದ್ರನ ಗುಡಿಯು ದುಷ್ಕರ್ಮಿಗಳ ಚೆಲ್ಲಾಟದ ಕೇಂದ್ರವಾದುದರಿಂದ ವೀರಭದ್ರನು ರಕ್ಷಣೆಗಾಗಿ

ಬಂಟ್ವಾಳದ ಶ್ರೀ ವೆಂಕಟ್ರಮಣ ಸ್ವಾಮಿ ಕಾಲೇಜನ್ನು ಸೇರಬೇಕಾಯಿತು. ನಂದಾವರದ ಎರಡು ಕೋಟೆಗಳು ಜರಿದು ಬಿದ್ದು ಆಡು ಕುರಿಗಳ ಮೇವಿನ ಮೈದಾನವಾಯಿತು. ಅರಮನೆ ಬಸದಿಗಳಿಂದ ತೀಡುತ್ತಿದ್ದ ಸುಮಧುರ ಸುವಾಸನೆಯ ನಂದಾವರವು ಇಂದು ಹೊಲಸಿನ ಗಾಳಿಯಿಂದ ತುಂಬಿ ಕಾಲಿಡಲೂ ಅಸಹ್ಯವಾಗಿದೆ. ಒಂದು ಕಾಲದಲ್ಲಿ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದ ಶ್ರೀಮಂತ ಬಂಗ ಅರಸರ ರಾಜಧಾನಿ ನಂದಾವರವು ಇಂದು ಮಾನವನ ಬರ್ಬರತೆಗೆ ಬಲಿಯಾಗಿ ಎಲ್ಲವನ್ನೂ ಕಳೆದುಕೊಂಡು ತುಳುನಾಡಿನ ಹಾಳು ಹಂಪೆಯೆನಿಸಿ ಕಣ್ಣೀರಿಡುತ್ತಿದೆ.

ಕುಡಾಳ ದೇಶಸ್ಥ ಗೌಡ ಬ್ರಾಹ್ಮಣರು

ಕುಡಾಳ ದೇಶಸ್ಥ ಗೌಡ ಬ್ರಾಹ್ಮಣರು ಗೌಡ ಸಾರಸ್ವತ ಬ್ರಾಹ್ಮಣರಿಗಿಂತ ಸ್ವಲ್ಪ ಭಿನ್ನವಾಗಿರುವ ಒಂದು ಅಲ್ಪಸಂಖ್ಯಾಕ ಸಮಾಜ. ಯಾವುದೋ ಕಾರಣದಿಂದ ಇವರು ಕರ್ನಾಟಕ-ಮಹಾರಾಷ್ಟ್ರಗಳಲ್ಲಿ ಹರಿಹಂಚಾಗಿ ಹೋಗಿ ಇಂದು ಪರಸ್ಪರ ತಮ್ಮ ಬಂಧುಗಳನ್ನೇ ಗುರುತಿಸಿಕೊಳ್ಳಲಾಗದ ಸ್ಥಿತಿಯಲ್ಲಿದ್ದಾರೆ.

ಕುಡಾಳ ದೇಶಸ್ಥ ಗೌಡ ಬ್ರಾಹ್ಮಣರ ಪಂಗಡ ಇಂದು ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಹರಿಹಂಚಾಗಿ ಹೋಗಿರುವ ಒಂದು ಸಮಾಜ. ಇವರ ಮಾತೃಭಾಷೆ ಮರಾಠಿಯ ಒಂದು ಪ್ರಭೇದವಾದ ಕುಡಾಳಿ ಎಂಬುದು. ಇದರಲ್ಲಿಯೂ ಪ್ರಾದೇಶಿಕ ಪ್ರಭೇದಗಳಿವೆ. ಮಂಗಳೂರು, ಪುತ್ತೂರಿನಲ್ಲಿರುವವರು ಉಡುಪಿ, ಬೆಳಗಾಂನಲ್ಲಿರುವ ತಮ್ಮ ಬಂಧುಗಳೊಡನೆ ನಿರರ್ಗಳವಾಗಿ ಮಾತನಾಡಲಾರರು. ಆದುದರಿಂದ ಪ್ರಾದೇಶಿಕ ಭಾಷೆಯಾದ ಕನ್ನಡವನ್ನೇ ಹೆಚ್ಚು ನೆಚ್ಚಿಕೊಂಡಿರುವರು. ಇವರೆಲ್ಲರನ್ನೂ ಪರಸ್ಪರ ಪರಿಚಯಿಸಿ ಒಂದುಗೂಡಿಸುವ ಪ್ರಯತ್ನವೂ ಈ ತನಕ ನಡೆದಿಲ್ಲ. ಬೇರೆ ಎಷ್ಟೋ ಸಮಾಜಗಳು ತಮ್ಮವರನ್ನು ಅರಿತು ಏಕತೆಯನ್ನು ಸಾಧಿಸಿರುವಾಗ ಈ ಸಮಾಜದವರು ಇತ್ತೀಚೆಗಷ್ಟೇ ಜಾಗೃತರಾಗುತ್ತಿರುವುದು ಕಂಡುಬರುತ್ತಿದೆ. ಆದರೆ ಮಹಾರಾಷ್ಟ್ರದಲ್ಲಿರುವ ಈ ಸಮಾಜದವರು ಎಲ್ಲ ರಂಗಗಳಲ್ಲಿಯೂ ಉನ್ನತಿಯನ್ನು ಸಾಧಿಸಿದ್ದಾರೆ.

ಮಹಾರಾಷ್ಟ್ರದ ಮುಂಬಯಿ, ಕೋಲ್ಹಾಪುರ, ಗೋರೆಗಾಂ, ಪೂನಾ, ಸತಾರ, ರತ್ನಗಿರಿ, ಮಾಹಿಮ್, ಬಾಂದ್ರ ಮೊದಲಾದ ಕಡೆ ಇರುವವರು ಉಚ್ಚ ವಿದ್ಯಾಭ್ಯಾಸವನ್ನು ಪಡೆದು ಉನ್ನತ ಸ್ಥಾನಾಪನ್ನರಾಗಿರುವರು. ಹಿಂದೆ ಕೇಂದ್ರದ ನೆಹರೂ ಸಂಪುಟದಲ್ಲಿ ರೈಲ್ವೆ ಸಚಿವರಾಗಿದ್ದ ಎಸ್. ಕೆ. ಪಾಟೀಲರು ಈ ಸಮಾಜದ ಒಬ್ಬ ಹಿರಿಯ ವ್ಯಕ್ತಿ. ಅವರಂತೆ 1981ರಲ್ಲಿ ಮಹಾರಾಷ್ಟ್ರದಲ್ಲಿ ಸಚಿವರಾಗಿದ್ದ ದಿನೇಶ್ ದೇಸಾಯಿಯವರು ಈ ಸಮಾಜದ ಒಬ್ಬ ಧುರೀಣ. ಪ್ರಸಿದ್ಧ ಸಂಗೀತ ನಿರ್ದೇಶಕ ಪದ್ಮಶ್ರೀ ವಸಂತ ದೇಸಾಯಿಯವರು ಮತ್ತು ಚಿತ್ರ ನಿರ್ಮಾಪಕ ದತ್ತಾ ಸಾಮಂತರು ಈ ಸಮಾಜದವರು. ಈ ಸಮಾಜದ ಪದ್ಮವಿಭೂಷಣ ಡಾ| ನಾರಾಯಣ ಭಿಕಾಜಿ ಪರೂಳೇಕರ್ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ನಡೆಸಿ ಪೂನಾದಲ್ಲಿ 'ಸಕಾಳ್' ಎಂಬ ಪತ್ರಿಕೆಯನ್ನು ನಡೆಸಿದ್ದರು. ಇವರಂತೆ ಬೆಳಗಾಂವ್‌ನ 'ತರುಣ ಭಾರತ್' ಪತ್ರಿಕೆಯ ಸಂಪಾದಕ ಕಿರಣ್ ಠಾಕೂರ್ ಈ ಸಮಾಜದವರೇ. ಈ ಸಮಾಜದ ಇನ್ನುಳಿದ ಕೆಲವು ಪ್ರಮುಖ ವ್ಯಕ್ತಿಗಳೆಂದರೆ

ಶ್ರೀಧರ್ ಶಾಂತಾರಾಂ ಪ್ರಭು ಅಜ್‌ಗಾಂವ್‌ಕರ್ (ಭಾರತೀಯ ಮಧುಮೇಹದ ಮಂಡಳಿಯ ಸಂಸ್ಥಾಪಕರು), ಅನಂತಶಿವಾಜಿ ದೇಸಾಯಿ ಟೋಪಿವಾಲ (ಟೋಪಿವಾಲ ಸಂಸ್ಥೆಗಳ ಸ್ಥಾಪಕ), ಡಾ। ಪಂಡರಿನಾಥ ಹರಿಪ್ರಭು (ಅಂತಾರಾಷ್ಟ್ರ ಖ್ಯಾತಿಯ ಮನಃಶಾಸ್ತ್ರಜ್ಞ) ಮೊದಲಾದವರು.

ಗೌಡಸಾರಸ್ವತರಂತೆ ಈ ಸಮಾಜದವರು ಬಹು ಪ್ರಾಚೀನ ಕಾಲದಲ್ಲಿ ಗೌಡದೇಶ (ಬಂಗಾಳ)ದಲ್ಲಿದ್ದವರು. ಕ್ರಿ. ಶ. ಸುಮಾರು 8ನೇ ಶತಮಾನದಲ್ಲಿ ಯಾವುದೋ ಒತ್ತಡಕ್ಕೆ ಒಳಗಾಗಿ ಕೆಲವು ಕುಟುಂಬಗಳು ವಾಯುವ್ಯ ದಿಕ್ಕಿಗೆ ಪ್ರಯಾಣಿಸುತ್ತಾ ಸರಸ್ವತೀ ನದಿ ಹರಿಯುವ ಪ್ರದೇಶಕ್ಕೆ ಹೋಗಿ ಅಲ್ಲಿ ನೆಲೆಸಿ ಗೌಡ ಸಾರಸ್ವತ ರೆನಿಸಿಕೊಂಡರು. ಇನ್ನೂ ಕೆಲವು ಕುಟುಂಬಗಳು ಪಶ್ಚಿಮಕ್ಕೆ ಪ್ರಯಾಣ ಮಾಡುತ್ತಾ ದಕ್ಷಿಣಕ್ಕೆ ಬಂದು ಮಹಾರಾಷ್ಟ್ರದ ಕುಡಾಳ ಸಂಸ್ಥಾನ (ಈಗಿನ ಸಿಂಧುದುರ್ಗ ಜಿಲ್ಲೆಯ ಮಧ್ಯಭಾಗ)ಕ್ಕೆ ಬಂದು ನೆಲೆಸಿ ಕುಡಾಳ ದೇಶಸ್ಥ ಗೌಡ ಬ್ರಾಹ್ಮಣ ರೆನಿಸಿಕೊಂಡರು. ಮುಂದೆ ತಾವು ನೆಲೆಸಿದ ಕುಡಾಳ ಪ್ರಾಂತ್ಯ ಮಾತ್ರವಲ್ಲದೆ ಸಾವಂತವಾಡಿ, ರತ್ನಗಿರಿ, ದೇವಗಡ, ಮರ್ಮಗೋವಾ ಮೊದಲಾದ ಪ್ರದೇಶಗಳ ಮೇಲೆ ಅಧಿಕಾರವನ್ನು ಸ್ಥಾಪಿಸಿ ಕ್ರಿ. ಶ. 8ನೇ ಶತಮಾನದಿಂದ 1280ರವರೆಗೂ ದೇವಗಿರಿಯ ಯಾದವರ ಮತ್ತು ಕಲ್ಯಾಣಿಯ ಚಾಲುಕ್ಯರ ಸಾಮಂತರಾಗಿ ಆಳಿದರು. ಆದುದರಿಂದ ಈ ಸಮಾಜದಲ್ಲಿ ಇಂದಿಗೂ ಸಾಮಂತ ಎಂಬ ಕುಟುಂಬವಾಚಕ ಹೆಸರಿನ ವ್ಯಕ್ತಿಗಳಿದ್ದಾರೆ. ಅಧಿಕಾರಕ್ಕೆ ತಕ್ಕಂತೆ ಇನ್ನು ಕೆಲವರು ಠಾಗೋರ್, ಪಾಟೀಲ್ ಮತ್ತು ದೇಸಾಯಿ ಎಂಬ ವೃತ್ತಿವಾಚಕ ಹೆಸರುಗಳನ್ನು ಪಡೆದು ಕೊಂಡರು. ಈ ನಾಲ್ಕು ಜಾತಿವಾಚಕ ಹೆಸರುಗಳು ಈ ಕುಡಾಳ ದೇಶಸ್ಥ ಗೌಡ ಬ್ರಾಹ್ಮಣ ಸಮಾಜದಲ್ಲಿ ಹೆಚ್ಚಾಗಿದ್ದು ಉಳಿದ ಹೆಚ್ಚಿನ ಎಲ್ಲಾ ಹೆಸರುಗಳು ಗೌಡ ಸಾರಸ್ವತ ಬ್ರಾಹ್ಮಣ ಸಮಾಜದಲ್ಲಿರುವಂತೇ ಇವೆ.

ಕ್ರಿ. ಶ. 1347ರಲ್ಲಿ ಮುಸ್ಲಿಂ ಬಹಮನಿ ಸಾಮ್ರಾಜ್ಯವು ಸ್ಥಾಪಿಸಲ್ಪಟ್ಟಿದ್ದರಿಂದ ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗದ ಕುಡಾಳ ದೇಶಸ್ಥ ಗೌಡ ಬ್ರಾಹ್ಮಣ ಸಮಾಜದ ಕೆಲವು ಕುಟುಂಬಗಳು ತಮ್ಮ ಊರನ್ನು ಬಿಟ್ಟು ಉತ್ತರಕ್ಕೆ ಹೋಗಿ ಮರಾಠರ ಜತೆಗೂಡಿ ಮುಂಬಯಿ, ಥಾನಾ, ಕೊಲ್ಹಾಪುರ, ಪೂನಾ ಮೊದಲಾದೆಡೆ ನೆಲೆಸಿದವು. ಇನ್ನು ಕೆಲವು ಕುಟುಂಬಗಳು ತಮ್ಮ ಧರ್ಮ ರಕ್ಷಣೆಗೆ ಸೂಕ್ತವಾದ ಸ್ಥಳಗಳನ್ನು ಹುಡುಕುತ್ತಾ ಕ್ರಿ. ಶ. 1725ರ ಸುಮಾರಿಗೆ ನೇರವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಿ ಶಾಂತಿಯಿಂದ ಜೀವನವನ್ನು ಮುಂದುವರಿಸಿದವು. ಸ್ವದೇಶ ಪ್ರೇಮಿಗಳಾದ ಮರಾಠರು ಪ್ರಬಲರಾಗಿ ಅರಸೊತ್ತಿಗೆ ಸ್ಥಾಪಿಸಿದಾಗ ಅವರ ಬೆಂಬಲದಿಂದ ಕೆಲವು ಕುಟುಂಬಗಳು ಬೇಸಿನ್, ಗೋರೆಗಾಂ, ಬೆಳಗಾಂ, ಕೊಲ್ಹಾಪುರ ಮೊದಲಾದ ಕಡೆ ನೆಲೆಸಿದ್ದವು. ಈ ರೀತಿಯಾಗಿ ಬೇರೆ ಬೇರೆ ಕಾಲಗಳಲ್ಲಿ ತಮ್ಮ ಊರನ್ನು ಬಿಟ್ಟು ಹರಿಹಂಚಾಗಿ ಹೋದ ಈ

ಸಮಾಜದವರು ಮತ್ತೆ ಒಂದಾಗುವ ಶುಭ ಕಾಲ ಒದಗಿಬರಲಿಲ್ಲ. ಭಾಷಾ ಭೇದ, ಸಾಸ್ಕೃತಿಕ ವ್ಯತ್ಯಾಸ, ಪ್ರಾದೇಶಿಕ ಪ್ರಭಾವ ಇವುಗಳಿಂದಾಗಿ ಇವರಿಗೆ ಪರಸ್ಪರ ಗುರುತಿಸಿಕೊಳ್ಳುವುದೂ ಸಾಧ್ಯವಾಗದೆ ಹೋಯಿತು.

ಸಮಾಜದ ಮಠ

ಕುಡಾಳ ದೇಶಸ್ಥ ಗೌಡ ಬ್ರಾಹ್ಮಣ ಸಮಾಜದ ಮಠವು ಮಹಾರಾಷ್ಟ್ರ ರಾಜ್ಯದ ಸಿಂಧುದುರ್ಗ ಜಿಲ್ಲೆಯ ವೆಂಗುರ್ಲಾ ತಾಲೂಕಿನ ದಾಭೋಲಿಯಲ್ಲಿದೆ. ಗೋವಾ ದಿಂದ ಇಲ್ಲಿಗೆ ಸುಮಾರು 90 ಕಿ.ಮೀ. ದೂರ. ಈ ಊರು ಪಶ್ಚಿಮ ಘಟ್ಟ ಪ್ರದೇಶದಲ್ಲಿರುವುದರಿಂದ ಸಂಚಾರ ಸಾಗಾಟದ ವ್ಯವಸ್ಥೆಯೂ ಅಷ್ಟೊಂದು ಚೆನ್ನಾಗಿಲ್ಲ. ಈ ಸಮಾಜದ ರಾಜಕೀಯ ಅಧಿಕಾರದ ಹಸ್ತಾಂತರಗೊಂಡಂತೆ ಮಠ ಸಂಸ್ಥಾನದಲ್ಲಿಯೂ ಬದಲಾವಣೆಗಳು ಆಗಿ ಕೊನೆಗೆ ಕ್ರಿ. ಶ. 1745ರಲ್ಲಿ ಪ್ರಸ್ತುತ ದಾಭೋಲಿ ಮಠವು ಸ್ಥಾಪಿಸಲ್ಪಟ್ಟಿತು. ಇದರ ಮೊದಲ ಗುರು ಶ್ರೀಮತ್ ಪೂರ್ಣಾನಂದ ಸ್ವಾಮಿಗಳು. ಇವರ ಬಳಿಕ ಕ್ರಿ. ಶ. 1763ರಲ್ಲಿ ಈ ಧರ್ಮ ಪೀಠವನ್ನೇರಿದ ಶ್ರೀಮತ್ ಚಿದಾನಂದರು ಶಿಷ್ಯ ಸ್ವೀಕಾರಕ್ಕಿಂತ ಮೊದಲೇ ಸಮಾಧಿಸ್ಥರಾದುದರಿಂದ ಶೃಂಗೇರಿ ಸ್ವಾಮೀಜಿಯವರು ಈ ಸಮಾಜದ ಬಾಲಕನೊಬ್ಬನಿಗೆ ದೀಕ್ಷೆ ಕೊಟ್ಟು ಶ್ರೀ ಕೃಷ್ಣಾಶ್ರಮ ಎಂಬ ಹೆಸರಿಟ್ಟು ಪೀಠಕ್ಕೇರಿಸಿದರು.

ಈಪರಂಪರೆಯಲ್ಲಿ ಹದಿನೈದು ಮಠಾಧೀಶರಾದ ಬಳಿಕ ಪೀಠವೇರಿದ ಹದಿನಾರನೆಯ ಶ್ರೀಮತ್ ವಿಮಲಾನಂದ ಸ್ವಾಮಿಗಳವರು ಸಮಾಜದ ಒಳಿತಿಗಾಗಿ ಬಹಳ ಶ್ರಮಿಸಿದರು. ಅಸಾಮಾನ್ಯ ತಪಸ್ವಿಗಳಾಗಿ ಅಕಾಲದಲ್ಲಿ ಮಳೆಬರಿಸುವಂತಹ, ನದಿಯ ಅಣೆಕಟ್ಟು ಒಡೆಯುತ್ತಿರುವಾಗ ಅದನ್ನು ನಿಲ್ಲಿಸುವಂತಹ, ಆತ್ಮಶಕ್ತಿಯನ್ನು ಹೊಂದಿದ್ದರೆಂದು ಹೇಳಲಾಗಿದೆ. ಚತುರ್ವೇದಗಳಲ್ಲಿ ವಿದ್ವಾಂಸರಾಗಿದ್ದುದಲ್ಲದೆ ಮಹಾರೋಗಗಳನ್ನು ಗುಣಪಡಿಸುವ ಬಿಷಗ್‌ರತ್ನರೂ ಆಗಿದ್ದರು. ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ತಮ್ಮ ಶಿಷ್ಯರಿಗೆ ಸೂಕ್ತ ಮಾರ್ಗದರ್ಶನವನ್ನಿತ್ತು, ಸಮಾಜದ ಉನ್ನತಿಗೆ ಕಾರಣರಾಗಿದ್ದರು. 1911ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಿ ಬಂಟ್ವಾಳ ತಾಲೂಕಿನ ಕಶೆಕೋಡಿ ಎಂಬಲ್ಲಿ ಒಂದು ವೇದಪಾಠ ಶಾಲೆಯನ್ನು ಸ್ಥಾಪಿಸಿದರು. ಅಲ್ಲಿಯ ವಿದ್ಯಾರ್ಥಿಗಳ ಪೈಕಿ ವೇದಭೂಷಣ ವೆಂಕಟೇಶ ದೇವರಾಯ ಮಾಳ್‌ಗಾಂವಕರ್ (ಯಲಿಕ್ಕ ವೆಂಕಟೇಶ ಭಟ್ಟರು) ಉತ್ತಮ ವೈದಿಕರೆಂದೂ, ಜ್ಯೋತಿಷಿಗಳೆಂದೂ ಪ್ರಸಿದ್ಧರಾದರು.

ಶ್ರೀ ವಿಮಲಾನಂದ ಸ್ವಾಮಿಗಳ ಬಳಿಕ ಶ್ರೀ ಬ್ರಹ್ಮಾನಂದ ಸ್ವಾಮಿಗಳು 1993ರಲ್ಲಿ ಈ ಪೀಠವನ್ನೇರಿ ಇಂದೂ ವಿರಾಜಮಾನರಾಗಿರುವ ಶ್ರೀಮತ್ ಪ್ರದ್ಯುಮ್ನಾನಂದ ಸ್ವಾಮಿಗಳವರೂ ಬಹಳ ಪ್ರಸಿದ್ಧರಾಗಿದ್ದಾರೆ.

ಸಾಮಾಜಿಕ ಸ್ಥಿತಿ

ಸ್ವಧರ್ಮ ರಕ್ಷಣೆಗಾಗಿ ಆಶ್ರಯವನ್ನು ಹುಡುಕುತ್ತಾ ತಮ್ಮ ಮಾತೃದೇಶವನ್ನು ಬಿಟ್ಟು ಬಂದ ಈ ಸಮಾಜದ ಕೆಲವು ಕುಟುಂಬಗಳು ದ. ಕ. ಜಿಲ್ಲೆಯ ಉಡುಪಿ, ಬಾರ್ಕೂರು, ಚೇರ್ಕಾಡಿ, ಪೇತ್ರಿ, ಪರ್ಕಳ, ಶಿವಪಾಡಿ, ಕಲ್ಯಾಣಪುರ, ಕಾರ್ಕಳ ತಾಲೂಕಿನ ಮುದ್ರಾಡಿ, ಬಂಟ್ವಾಳ ತಾಲೂಕಿನ ಸಿದ್ಧಕಟ್ಟೆ, ಸೋರ್ನಾಡ್, ಕಲ್ಲಡ್ಕ, ಪಾಣೆಮಂಗಳೂರು, ಅಮ್ಮೆಂಬಳ, ವೀರಕಂಭ, ಬಾಳ್ತಿಲ, ಕಾರಿಂಜ ಬಳಿಯ ಪ್ರದೇಶಗಳು, ಮಂಗಳೂರಿನ ಮರೋಳಿ, ಕೊಂಚಾಡಿ, ಕೊಟ್ಟಾರ, ಇನೋಳಿ, ಬೆಳ್ತಂಗಡಿ ತಾಲೂಕಿನ ವೇಣೂರು, ಪಣಕ್ಕಜೆ, ಮದ್ದಡ್ಕ, ಪುತ್ತೂರು ತಾಲೂಕಿನ ಉಪ್ಪಿನಂಗಡಿ, ಕೋಡ್ಯಾಡಿ, ನರಿಮೊಗರು, ಶಾಂತಿಗೋಡು, ವೀರಮಂಗಲ ಮೊದಲಾದ ಪ್ರದೇಶಗಳಲ್ಲಿ ನೆಲೆನಿಂತರು. ಯಾರೂ ಕೇರಳ ರಾಜ್ಯಕ್ಕೆ ಹೋಗಲಿಲ್ಲ. ಇವರು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿ ಕೃಷಿಯನ್ನು ಅವಲಂಬಿಸ ತೊಡಗಿದರು. ಮುಂದೆ ಹಲವರು ಉದ್ಯೋಗ ಪಡೆದು ಪುನಃ ಹುಟ್ಟೂರನ್ನು ಬಿಟ್ಟು ದೂರಕ್ಕೆ ಹೋದರು. ಇನ್ನೂ ಕೆಲವರು ಹೊಟೇಲ್ ಉದ್ಯಮ ಪ್ರಾರಂಭಿಸಿ ಆಂಧ್ರ ಪ್ರದೇಶದ ರಾಜಮಹೇಂದ್ರಿಯಲ್ಲೂ ಉದ್ಯೋಗ ವ್ಯವಹಾರಕ್ಕಾಗಿ ಬೆಂಗಳೂ ರಿನಲ್ಲೂ ನೆಲೆಸಿದರು. ಇಲ್ಲೇ ನಿಂತವರೊಳಗೂ ಭಾಷೆ ಮತ್ತು ಆಚಾರ ವಿಚಾರಗಳಲ್ಲಿ ಸ್ವಲ್ಪ ವ್ಯತ್ಯಾಸವಿದ್ದುದರಿಂದ ಈವರೆಗೂ ಸಮಾಜದ ಏಕತೆಯನ್ನು ಸಾಧಿಸಲು ಸಾಧ್ಯವಾಗಿರಲಿಲ್ಲ. ಆದರೆ ಕ್ರಿ. ಶ. 1911ರಲ್ಲಿ ಶ್ರೀ ವಿಮಲಾನಂದ ಸ್ವಾಮಿಗಳೂ 1964ರಲ್ಲಿ ಶ್ರೀ ಬ್ರಹ್ಮಾನಂದ ಸ್ವಾಮಿಗಳೂ ಮತ್ತು 1974ರಲ್ಲಿ ಶ್ರೀ ರಮಾನಂದ ಸ್ವಾಮಿಗಳೂ ದ. ಕ. ಜಿಲ್ಲೆಗೆ ಆಗಮಿಸಿದಾಗ ಒಮ್ಮೆ ಎಲ್ಲರೂ ಸೇರಿದರೂ ಅದು ಅಷ್ಟೊಂದು ಫಲಕಾರಿಯಾಗದ್ದರಿಂದ ಪ್ರಸ್ತುತ ಶ್ರೀ ಪ್ರದ್ಯುಮ್ನಾನಂದ ಸ್ವಾಮಿಗಳವರು ಸಮಗ್ರ ಸಮಾಜದ ಏಕತೆಗೆ ಪ್ರಯತ್ನಿಸುತ್ತಿದ್ದಾರೆ.

ಈ ಸಮಾಜದಲ್ಲಿ ವೈಷ್ಣವ-ಶೈವ ಎಂಬ ಎರಡೂ ಪದ್ಧತಿಗಳು ಜಾರಿಯಲ್ಲಿವೆ. ಶಕ್ತ್ಯಾರಾಧನೆಯೂ ಬಳಕೆಯಲ್ಲಿದೆ. ಆದರೆ, ಉಪನಯನ, ವಿವಾಹಾದಿ ಸಂಸ್ಕಾರಗಳಲ್ಲಿ ಶುದ್ಧ ವೈದಿಕ ಸಂಪ್ರದಾಯವನ್ನೇ ಇಂದಿಗೂ ಅನುಸರಿಸುತ್ತಿದ್ದಾರೆ. ಅಷ್ಟು ಮಾತ್ರವಲ್ಲದೆ, ಆಹಾರ ಪದ್ಧತಿ, ಸಾಮಾಜಿಕ ನಡವಳಿಕೆ, ಸಂಸ್ಕಾರಗಳ ವಿಧಾನ, ಬಂಗಾಳದಲ್ಲಿ ಇವರ ಪೂರ್ವಿಕರು ಅನುಸರಿಸಿದ ವೃತ್ತಿ-ಇವುಗಳಿಂದಾಗಿ ಇವರು ಬ್ರಾಹ್ಮಣ ವರ್ಗದಲ್ಲಿ ಬಹಳ ಉನ್ನತ ಶಾಖೆಗೆ ಸೇರಿದವರೆನ್ನಬಹುದು.

ಸಮಾಜ ಬಂಧುಗಳ ಪರಿಚಯವೇ ಇಲ್ಲದಿದ್ದ ಕಾಲದಲ್ಲಿ ಉಡುಪಿಯಲ್ಲಿದ್ದ ಈ ಸಮಾಜದವರು 'ದಿ ಕೆನರಾ ಕುಡಾಳ ದೇಶಸ್ಥ ಆದ್ಯ ಗೌಡ ಬ್ರಾಹ್ಮಣ ವಿದ್ಯಾ ಪ್ರಸಾರಕ ಮಂಡಲ'ವನ್ನು 1928ರಲ್ಲಿ ಸ್ಥಾಪಿಸಿ ಮುಂದೆ ಚೇರ್ಕಾಡಿಯಲ್ಲಿ ಆರ್. ಕೆ. ಪಾಟ್ಕರ್ ಶಾರದಾ ಹಾಯರ್ ಎಲಿಮೆಂಟರಿ ಶಾಲೆಯನ್ನೂ 1960ರಲ್ಲಿ ಅಲ್ಲೇ ಶಾರದಾ ಹೈಸ್ಕೂಲನ್ನೂ ಸ್ಥಾಪಿಸಿದರು. ಅದಕ್ಕಿಂತ ಮೊದಲೇ 1926ರಲ್ಲಿ ಬಂಟ್ವಾಳ ತಾಲೂಕಿನ ಕರ್ಪೆ ಗ್ರಾಮದಲ್ಲಿ ಕೃಷ್ಣಪ್ಪ ನಾಯಕರೂ ಈ ಶತಮಾನದ ಐದನೇ ದಶಕದಲ್ಲಿ ಬಂಟ್ವಾಳ ತಾಲೂಕಿನ ಡೆಚ್ಚಾರು ಎಂಬಲ್ಲಿ ತೋಟ ಅಪ್ಪಯ್ಯ ಎಂಬವರೂ ತಮ್ಮ ಸ್ವಶ್ರಮದಿಂದ ಒಂದೊಂದು ಪ್ರಾಥಮಿಕ ಶಾಲೆಯನ್ನೂ ಸ್ಥಾಪಿಸಿದರು. 1962ರಲ್ಲಿ ಉಡುಪಿಯ ಕುಂಜಾಲಿನಲ್ಲಿ ರಘುನಾಥ ಪ್ರಭುಗಳು ಸ್ವದೇಶಿ ಔಷಧ ಭಂಡಾರವನ್ನು ಸ್ಥಾಪಿಸಿದ್ದು ಇಂದು ಅದು ಬಹಳ ಪ್ರಸಿದ್ಧವಾಗಿದೆ. ಸಮಾಜದ ಏಕತೆಯನ್ನೂ ಉನ್ನತಿಯನ್ನೂ ಸಾಧಿಸುವ ದೃಷ್ಟಿಯಿಂದ 1961ರಲ್ಲಿ ದ. ಕ. ಜಿಲ್ಲೆಯ ದಕ್ಷಿಣ ಬಾಗದವರು ಕುಡಾಳ ದೇಶಸ್ಥ ಗೌಡ ಬ್ರಾಹ್ಮಣ ಸಂಘವನ್ನು ಸ್ಥಾಪಿಸಿ ಕೆಲವು ಕಾರ್ಯಕ್ರಮಗಳನ್ನು ಕೈಗೊಂಡಿರುವರು. 1990ರಲ್ಲಿ ಈ ಸಮಾಜದ ಯುವಕರನೇಕರು ಸೇರಿ ಉಡುಪಿಯ ಚೇರ್ಕಾಡಿಯಲ್ಲಿ ಒಂದು ಯುವ ಸಮ್ಮೇಳನವನ್ನು ನಡೆಸಿದ್ದರು. ಪ್ರಸ್ತುತ ಬೆಂಗಳೂರಿನಲ್ಲಿ ಗೌಡ ಬ್ರಾಹ್ಮಣ ಯುವ ಬಳಗವು ಅಸ್ತಿತ್ವಕ್ಕೆ ಬಂದು ಒಂದು ಬೃಹತ್ ಸಮ್ಮೇಳನಗಳನ್ನು ಏರ್ಪಡಿಸಿಕೊಳ್ಳುತ್ತಿದೆ.

ದೇಗುಲಗಳು

ಈ ಸಮಾಜದ ದೇವಾಲಯಗಳ ಪೈಕಿ ಮಣಿಪಾಲದ ಬಳಿಯ ಶಿವಪಾಡಿ ಯಲ್ಲಿರುವ ಶ್ರೀ ಉಮಾಮಹೇಶ್ವರ ದೇವಾಲಯವೂ ಒಂದು. ಡಾ। ಗುರುರಾಜ ಭಟ್ಟರ ಅಭಿಪ್ರಾಯದಂತೆ ಕ್ರಿ. ಶ. ಸುಮಾರು 11ನೇ ಶತಮಾನದ ಲಕ್ಷಣಗಳುಳ್ಳ ಈ ದೇವಾಲಯವನ್ನು ಸ್ಥಳೀಯರು ಜೀರ್ಣೋದ್ಧಾರಗೊಳಿಸಿ ಉನ್ನತ ಸ್ಥಿತಿಗೆ ತಂದಿದ್ದಾರೆ. ಬಂಟ್ವಾಳ ತಾಲೂಕಿನ ಮುಲಾರ್‌ನಲ್ಲಿರುವ ಶ್ರೀ ಮಹಮ್ಮಾಯಿ ದುರ್ಗಾಪರಮೇಶ್ವರಿ ದೇವಾಲಯ ಮತ್ತು ಕರ್ಪೆಯಲ್ಲಿರುವ ಶ್ರೀ ಗಣಪತಿ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ಆದರೆ ಬಹಳ ನಾಶಗೊಂಡಿ ದ್ದರೂ ಈಗ ಪುನರ್‌ನಿರ್ಮಾಣಗೊಂಡಿರುವ ಕಶೆಕೋಡಿಯ ಶ್ರೀ ಲಕ್ಷ್ಮೀವೆಂಕಟರಮಣ ದೇವಾಲಯವು ಈ ಸಮಾಜದ ಒಂದು ಹಿರಿಯ ದೇವಾಲಯ.

ಈ ದೇವಾಲಯವು ಬಂಟ್ವಾಳ ತಾಲೂಕಿನ ಬಾಳ್ತಿಲ ಗ್ರಾಮದ ಕಶೆಕೋಡಿ ಎಂಬಲ್ಲಿ ಹಸುರಾದ ಸುಂದರ ಪ್ರಕೃತಿಯ ಮಧ್ಯದಲ್ಲಿದೆ. ಪ್ರಾಂಗಣದವರೆಗೂ ರಸ್ತೆಯಿದ್ದು

ಭಕ್ತಾದಿಗಳಿಗೆ ಬರಲು ಅನುಕೂಲಕರವಾಗಿದೆ. ಈ ದೇವಾಲಯವು ಕ್ರಿ. ಶ. 18ನೇ ಶತಮಾನದಲ್ಲಿ ನಿರ್ಮಾಣವಾಗಿದ್ದಂತೆ ತಿಳಿದುಬರುತ್ತದೆ. ಇದರ ಗರ್ಭಗೃಹದಲ್ಲಿ ವಿರಾಜಮಾನವಾಗುತ್ತಿರುವ ಭೂದೇವಿ, ಲಕ್ಷ್ಮಿ ಮತ್ತು ವೆಂಕಟರಮಣ ದೇವರ ವಿಗ್ರಹಗಳು ಬಹಳ ಸುಂದರವಾಗಿದ್ದವು. ಇವರ ಕಿರೀಟಗಳು ಪಂಢರಾಪುರದ ವಿಟ್ಠಲನ ಕಿರೀಟವನ್ನೇ ಹೋಲುತ್ತಿದ್ದವು. ಆದುದರಿಂದ ಪ್ರಾಚೀನ ಕಾಲದಲ್ಲಿ ಈ ಮೂರ್ತಿಗಳನ್ನು ಅರ್ಚಿಸುತ್ತಿದ್ದ ಕುಟುಂಬಗಳು ತಮ್ಮ ಧರ್ಮ ರಕ್ಷಣೆಗಾಗಿ ಈ ಕಡೆಗೆ ವಲಸೆ ಬರುವಾಗ ಇವುಗಳನ್ನು ಜತೆಯಲ್ಲಿ ತಂದು ಇಲ್ಲಿ ಪ್ರತಿಷ್ಠಾಪಿಸಿ ಪೂಜಿಸಿರಬೇಕೆಂದು ಹೇಳಬೇಕಾಗುತ್ತದೆ. ಆದರೆ ಇಂದು ಈ ಅಮೂಲ್ಯ ಮೂರ್ತಿಗಳು ಕಳವಾಗಿ ಹೋಗಿವೆ.

ಪ್ರಾಚೀನ ಕಾಲದಲ್ಲಿ ಒಂದೇ ಕಡೆ ಶಾಂತಿ ಸೌಹಾರ್ದಗಳಿಂದ ನೆಲೆಸಿದ್ದ ಈ ಗೌಡ ಬ್ರಾಹ್ಮಣ ಕುಟುಂಬಗಳು ಭೌಗೋಳಿಕ ಅಥವಾ ರಾಜಕೀಯ ಒತ್ತಡಕ್ಕೆ ಒಳಗಾಗಿ ಬೇರೆ ಬೇರೆ ಕಡೆ ಚದುರಿ ಹೋಗಿ ಮತ್ತೆ ಸ್ವಧರ್ಮ ರಕ್ಷಣೆಗಾಗಿ ವಲಸೆ ಹೋಗಿ ಹರಿ ಹಂಚಾಗಿ ತಮ್ಮವರನ್ನೇ ತಾವು ಗುರುತಿಸಿಕೊಳ್ಳಲಾಗದ ಸ್ಥಿತಿಗೆ ಬಂದು ಮುಟ್ಟಿದ್ದರು. ಆದರೂ ನೆಲೆಸಿದ ಸ್ಥಳಗಳಿಗೆ ಹೊಂದಿಕೊಂಡು ಜೀವನ ನಡೆಸಿದರು. ಸ್ವಪ್ರಯತ್ನದಿಂದ ಉನ್ನತಿಯನ್ನು ಸಾಧಿಸಿಕೊಂಡರು. ಇವರೆಲ್ಲರನ್ನು ಪರಸ್ಪರ ಪರಿಚಯಿಸುವ ಕೆಲವು ಪ್ರಯತ್ನಗಳೂ ನಡೆದಿವೆ. ಇತ್ತೀಚೆಗೆ ಈ ಸಮಾಜದ ಜನರಲ್ಲಿ ತಮ್ಮ ಪೂರ್ವಿಕರು, ಮಠ ಸಂಸ್ಥಾನ, ತಮ್ಮವರು ಸಾಧಿಸಿಕೊಳ್ಳುತ್ತಿರುವ ಉನ್ನತಿ ಹಾಗೂ ತಮ್ಮೊಳಗೆ ಸಾಧಿಸಲ್ಪಡಬೇಕಾದ ಏಕತೆಯ ಬಗ್ಗೆ ಬಹಳ ಜಾಗೃತಿ ಉಂಟಾಗುತ್ತಿದೆ.

ಕಾಡಿನ ಮಧ್ಯದಲ್ಲೊಂದು ಕಲ್ಲಿನ ಕೋಟೆ

ಕೋಟೆಯ ಮಧ್ಯದಲ್ಲಿ ಅರಮನೆಯ ಕುರುಹು. ಬಳಿಯೆ ರಾಜಕುಮಾರಿಯರು ಜಲಕ್ರೀಡೆಯಾಡುತ್ತಿದ್ದ ಕೆರೆ, ಹೂತೋಟವಿದ್ದ ಜಾಗ. ಈಗ ಈ ಕೆರೆಯ ನೀರನ್ನು ಕಾಡುಪ್ರಾಣಿಗಳು ಕುಡಿಯುತ್ತವೆ, ಹೂತೋಟದ ತುಂಬ ಕಾಡಿನ ಪೊದರು ಗಿಡಗಳು! ಗೊಂಡಾರಣ್ಯ! ಹಿಂಸ್ರ ಮೃಗಗಳು!

ಯಾವುದೋ ಒಂದು ಹಳೆಯ ಕೋಟೆ, ಅರಮನೆ, ನಿಶಿಧಿ, ಸ್ಮಾರಕವನ್ನು ಕಂಡಾಗ ಸಹಜವಾಗಿ ನಮ್ಮಲ್ಲಿ ಅವುಗಳ ಹಿಂದಿರುವ ಐತಿಹಾಸಿಕ ಕಥೆಯನ್ನು ತಿಳಿದುಕೊಳ್ಳುವ ಕುತೂಹಲ ಉಂಟಾಗುತ್ತದೆ. ಅವುಗಳ ಬಗ್ಗೆ ಇನ್ನಷ್ಟು ನಿಖರವಾಗಿ ತಿಳಿದುಕೊಳ್ಳುವ ಆಸಕ್ತಿಯು ಸಹಜವಾಗಿ ಕೆರಳುತ್ತದೆ.

ಇದೇ ರೀತಿಯ ಜಿಜ್ಞಾಸೆಯಿಂದ ಇತ್ತೀಚೆಗೆ ನಾನೊಮ್ಮೆ ದಕ್ಷಿಣ ಕನ್ನಡ ಜಿಲ್ಲೆಯ ಮೂಡಣ ಗಡಿಪ್ರದೇಶದಲ್ಲಿರುವ ಶಿಶಿಲಕ್ಕೆ ಹೋಗಿದ್ದೆ. ಹತ್ತಿರದಲ್ಲಿಯೇ ಎತ್ತರವಾದ ಪಶ್ಚಿಮ ಘಟ್ಟದ ಪರ್ವತಗಳು. ಮಗ್ಗುಲಲ್ಲಿ ದಟ್ಟವಾದ ಕಾಡು. ಬದಿಯಲ್ಲಿ ನುಸುಳಿ ಹರಿಯುವ ಕಪಿಲಾ ನದಿ. ಇಲ್ಲಿಗೆ ಹೋಗುವುದೂ ಕಷ್ಟ. ಆದರೆ, ಇಲ್ಲಿರುವ ಕೆಲವು ಪ್ರಾಚೀನ ಸ್ಮಾರಕಗಳು ಸಂದರ್ಶನೀಯ. ಹಿಂದೆ ಪ್ರಸಿದ್ಧ ಇತಿಹಾಸ ಸಂಶೋಧಕರೊಬ್ಬರು ಇತಿಹಾಸ ಪ್ರಸಿದ್ಧ ಶ್ರೀಶೈಲವೇ ಈ ಶಿಶಿಲವೆಂದು ಘೋಷಿಸಿದ್ದರು. ಕರ್ನಾಟಕದ ಮೊತ್ತ ಮೊದಲ ಅಚ್ಚ ಕನ್ನಡ ದೊರೆ ಮಯೂರ ಶರ್ಮನಿಗೆ ಆಶ್ರಯವನ್ನಿತ್ತ ಈ ಶಿಶಿಲವನ್ನು ಸಂದರ್ಶಿಸುವುದು ಇತಿಹಾಸದ ದೃಷ್ಟಿ ಯಿಂದ ಬಹಳ ಉಪಯುಕ್ತವಾದುದೆಂದು ಭಾವಿಸಿಕೊಂಡೇ ನಾನು ಶಿಶಿಲಕ್ಕೆ ಹೋದೆ. ಆಗ ಅಲ್ಲಿಯ ಒಬ್ಬ ವಿದ್ಯಾವಂತ ತರುಣನೂ ನನ್ನನ್ನು ಸೇರಿಕೊಂಡು ನಾವು ಒಟ್ಟಾಗಿ, ಅವರಿವರು ಹೇಳುತ್ತಿದ್ದ ಕಥೆಗಳಿಗೆ ಸಂಬಂಧಪಟ್ಟ ಸ್ಮಾರಕಗಳನ್ನು ಹುಡುಕುತ್ತಾ ಶಿಶಿಲದ ಗೊಂಡಾರಣ್ಯದ ಕಾಡು ದಾರಿಯಲ್ಲೇ ಮುಂದುವರಿಯುತ್ತಾ ಹೋದೆವು.

ತುಂಬಿದ ಪೊದರುಗಳಿಂದಾಗಿ ದಾರಿಯೂ ದುರ್ಗಮವಾಗತೊಡಗಿತು. ದಾರಿ ತೋರಿಸಲಿಕ್ಕಾಗಿ ನಮ್ಮೊಡನೆ ಬಂದಿದ್ದ ರೈತಾಪಿ ಹುಡುಗನೊಬ್ಬ ನಮಗಿಂತ ಧೀರನೆನಿಸಿಕೊಂಡು, ಪೊದರುಗಳನ್ನು ಸವರುತ್ತಾ ದಾರಿಯನ್ನು ಮಾಡಿಕೊಂಡು ನಮ್ಮನ್ನು ಮುಂದುಮುಂದಕ್ಕೆ ಕರೆದೊಯ್ಯುತ್ತಿದ್ದ. ಆತನಿಗೆ ಕಾಡಿನಲ್ಲಿ ಹೆದರಿಕೆ ಎಂಬುದೇ ಇರಲಿಲ್ಲ. ನಮ್ಮನ್ನು ಇನ್ನು ಯಾವ ಗುಹೆಗೆ ಕರೆದುಕೊಂಡು ಹೋಗು ತ್ತಾನೋ ಎಂಬ

ಭೀತಿ ನಮಗೆ. ಆದರೆ ಒಮ್ಮೆಯೇ ಆತ ನಿಂತು ಬಿಟ್ಟು "ಅಗೋ ನೋಡಿ, ಅಲ್ಲಿ ಪಾಂಡವರ ಕೋಟೆ" ಎಂದು ಚೀರಿದ. ನಾವು ನಿಬ್ಬೆರಗಾದೆವು. ಆ ಕಾಡಿನ ಮಧ್ಯದಲ್ಲಿ ಹತ್ತಾರು ಆಳೆತ್ತರದ ಕಲ್ಲಿನ ಕೋಟೆ. ಹರಿದು ಮುರಿದು ಬಿದ್ದಿದ್ದರೂ ಹಳೆಯ ಕಥೆಯನ್ನು ನೆನಪಿಸುತ್ತಾ ಭೀತಿ ಹುಟ್ಟಿಸುವಂತೆ ನಿಡಿದಾಗಿ ನಿಂತುಕೊಂಡಿದೆ. ಕೋಟೆಯ ಸಂದಿನಿಂದ ಹುಲಿಯೋ ಮರದ ಮೇಲಿನಿಂದ ಹೆಬ್ಬಾವೋ ನೆಲದ ಮೇಲಿನಿಂದ ತೋಳಗಳೋ ನಮ್ಮನ್ನು ಮುತ್ತಿಗೆ ಹಾಕಬಹು ದೆಂಬ ಭಯ ನಮಗೆ, ನಾವಿರುವುದು ಮೂರೇ ಮಂದಿ!

ನಮ್ಮ ಸ್ಥಿತಿಯನ್ನು ಕಂಡ ಹುಡುಗ "ಇಲ್ಲಿ ಹಗಲಲ್ಲಿ ಏನೂ ಹೆದರಿಕೆ ಇಲ್ಲ. ಹುಲಿ, ಆನೆಗಳು ಬರುವುದಿಲ್ಲ. ಆದರೆ ಇಷ್ಟರವರೆಗೆ ನಾನು ರಾತ್ರಿ ಇಲ್ಲಿಗೆ ಬಂದಿಲ್ಲ. ಮಧ್ಯರಾತ್ರಿಗೆ ಇಲ್ಲಿಂದ ಒಂದು ಪ್ರೇತವೋ ಪಿಶಾಚಿಯೋ ಬೊಬ್ಬಿಡುತ್ತದೆ. ಶುಕ್ರವಾರ, ಮಂಗಳವಾರ ಸ್ವಲ್ಪ ಹೆಚ್ಚು. ಈ ಕೋಟೆಯೊಳಗೆ ಹೋದ ಜನ ಮಾಯವಾಗಿ ಬಿಡುತ್ತಾರೆ..."

ಕೋಟೆ ಏರಿದೆವು

ಇತಿಹಾಸ ಸಂಶೋಧನೆಯ ಆಸಕ್ತಿಯಿಂದ ಹೊರಟ ನಾವು ಸುಳ್ಳು ಕಥೆಗಳಿಗೆ ಗಮನ ಕೊಡದೆ ಆ ಹಳೆ ಕೋಟೆಯನ್ನು ಏರತೊಡಗಿದೆವು. ಕೋಟೆಯ ಒಳಗೆ ಏನಿರಬಹುದೋ ಎಂಬ ಕುತೂಹಲ. ಶ್ರಮ ದಣಿವುಗಳ ಅರಿವು ನಮಗಿರಲಿಲ್ಲ. ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಎನ್ನುವಂತೆ ಕೋಟೆಯ ಕಲ್ಲುಗಳನ್ನು ಆಧಾರವಾಗಿ ಹಿಡಿದುಕೊಂಡು ಏರುತ್ತಾ-ಜಾರುತ್ತಾ ಮೇಲೇರುತ್ತಿದ್ದೆವು. ನಮ್ಮಂತೆ ಎಷ್ಟು ಜನರ ಏಳು-ಬೀಳುಗಳನ್ನು ಈ ಕಲ್ಲುಗಳು ಕಂಡಿವೆಯೋ ಏನೋ? ನಮಗೆ ಪ್ರತಿಯೊಂದು ಕಲ್ಲೂ ಒಂದು ಕಥೆಯನ್ನು ಹೇಳಬಹುದೆಂದೆಣಿಸಿತು. ಯಾವ ರಾಜ ರಾಣಿಯರು, ರಾಜಕುಮಾರ - ಕುಮಾರಿಯರು, ಗೂಢಚರರು, ಕುಹಕಿಗಳು, ದಾಳಿಕೋರರು ಈ ಕೋಟೆಯ ಕಲ್ಲುಗಳನ್ನು ಕಂಡಿರಲಿಕ್ಕಿಲ್ಲ ಎಂದು ಆಲೋಚಿಸುತ್ತಿದ್ದಂತೆ ನಾವು ಕೋಟೆಯನ್ನು ಏರಿಯಾಗಿತ್ತು.

ಒಳಗಡೆ ನೋಡಿದರೆ ಪೊದರುಗಳು ತುಂಬಿರುವ ದೊಡ್ಡದೊಂದು ಮೈದಾನ. ಅಲ್ಲಲ್ಲಿ ದೈತ್ಯಾಕಾರದ ಮರಗಳು, ಮೈದಾನದ ಮಧ್ಯದಲ್ಲಿ ಬಿದ್ದ ಗೋಡೆಗಳ ದೊಡ್ಡದೊಂದು ಅರಮನೆಯ ಕುರುಹು. ಬಳಿಯೇ ರಾಜಕುಮಾರಿಯರು ಜಲಕ್ರೀಡೆ ಆಡುತ್ತಿದ್ದ ಕೆರೆ. ಹೂತೋಟವಿದ್ದ ಜಾಗ. ಅಲ್ಲಿಂದ ಕೆಳಗೆ ಮೆಟ್ಟಲಿಳಿದು ಬಂದರೆ ಇನ್ನೊಂದು ಕೋಟೆಯ ಆವರಣ. ಅಲ್ಲಿಯೂ ಹಲವಾರು ಮನೆಯ ಕುರುಹುಗಳು. ಅಲ್ಲಿಂದ ಮೆಟ್ಟಲಿಳಿದರೆ ಕಪಿಲಾ ನದಿಗೆ ನೇರವಾದ ದಾರಿ. ಎಲ್ಲೆಲ್ಲೂ ಗಂಭೀರತೆ, ಶ್ಮಶಾನ ಮೌನ. ಭಯಹುಟ್ಟಿಸುವ ಪರಿಸರ.

ಇಷ್ಟು ವ್ಯವಸ್ಥಿತವಾಗಿ ಕಟ್ಟಿದ ಕೋಟೆಯಿಂದ ಆಳಿದ ಅರಸರು ಯಾರಿರ ಬಹುದು? ಯಾವ ವಂಶದವರಿರಬಹುದು? ಯಾವ ಕಾಲದಲ್ಲಿ ಆಳಿರಬಹುದು? -ಇದುವೇ ನಮ್ಮ ಚಿಂತೆ. ನಮ್ಮೊಡನಿದ್ದ ಹುಡುಗ ತಟ್ಟನೆ ಹೇಳಿದ, "ನನಗೆ ಗೊತ್ತಿದೆ. ಇದು ಹನುಮಂತನ ಕೋಟೆ. ಇಲ್ಲಿದ್ದ ಹನುಮಂತನ ಮೂರ್ತಿಯನ್ನು ಶಿಶಿಲೇಶ್ವರ ದೇವಾಲಯದ ಬಳಿ ಇಟ್ಟಿದ್ದಾರೆ. ಓ ಅಲ್ಲಿ, ಕಾಡಿನಲ್ಲಿ ಬಿದ್ದ ಬಸದಿಯಲ್ಲಿಯೂ ಇಂತಹ ಹಲವು ಮೂರ್ತಿಗಳಿದ್ದವು. ಈಗ ಎಲ್ಲವೂ ಕಾಣೆಯಾಗಿವೆ." ಮುಗ್ಧ ಹುಡುಗನ ಈ ಮಾತುಗಳು ನಮಗೆ ಕೆಲವು ಸುಳಿವನ್ನು ಕೊಟ್ಟವು. ನಮ್ಮ ಬುದ್ಧಿಯೂ ಚುರುಕುಗೊಂಡಿತು.

ಶಿಶಿಲೇಶ್ವರ ದೇವಾಲಯಕ್ಕೆ ಹೋದಾಗ, ಅದು ವಿಜಯನಗರ ಶಿಲ್ಪ ವಿನ್ಯಾಸ ದಲ್ಲಿ ಕಟ್ಟಲ್ಪಟ್ಟಿರುವುದು ಕಂಡುಬಂತು. ಕೋಟೆಯ ಬಳಿ ಜೈನ ಬಸದಿಯ ಕುರುಹುಗಳೂ ಇದ್ದುದರಿಂದ ಈ ಕೋಟೆಯಿಂದ ಯಾರೋ ಜೈನ ಅರಸರು ಆಳುತ್ತಿದ್ದಿರಬಹುದೆಂಬ ಊಹೆಯೂ ಬಲಗೊಂಡಿತು. ನಿಜವಾಗಿ, ವಿಜಯನಗರ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಈ ಭಾಗದ ಮೇಲೆ ಅಧಿಕಾರ ಹೊಂದಿದ್ದ ಜೈನ ಅರಸರೆಂದರೆ ಬೆಳ್ತಂಗಡಿ ತಾಲೂಕಿನ ಬಂಗಾಡಿಯಿಂದ ಆಳುತ್ತಿದ್ದ ಬಂಗರಸರು.

ಸರಿ, ಕೆಲವೇ ದಿನಗಳಲ್ಲಿ ನಾನು ಬಂಗಾಡಿಯ ಅರಮನೆಗೆ ಹೋಗಿ ಈ ವಿಷಯವನ್ನು ತಿಳಿಸಿ ಈ ನಿಟ್ಟಿನಲ್ಲಿ ನನಗೆ ಸಹಕಾರವನ್ನೀಯುವಂತೆ ಕೇಳಿಕೊಂಡೆನು. ಕೂಡಲೇ ಅರಮನೆಯವರು ತಮ್ಮಲ್ಲಿದ್ದ ಹಲವಾರು ತಾಡಪತ್ರ ಗ್ರಂಥಗಳನ್ನೂ ಲಿಖಿತ ತಾಡಪತ್ರಗಳು ತುಂಬಿದ್ದ ಕೆಲವು ಬುಟ್ಟಿಗಳನ್ನೂ ತಂದು ಮುಂದಿಟ್ಟರು. ಆ ಪತ್ರಗಳನ್ನು ಓದಿದಾಗ ಅಲ್ಲಿದ್ದ ಕೆಲವು ಐತಿಹಾಸಿಕ ಘಟನೆಗಳು ನನ್ನನ್ನು ಎಲ್ಲೆಲ್ಲೋ ಕರೆದುಕೊಂಡು ಹೋದವು. ಒಂದರ ಹಿಂದೆ ಒಂದರಂತೆ ಹೊಸ ಹೊಸ ಐತಿಹಾಸಿಕ ಸಂಗತಿಗಳು ಬೆಳಕಿಗೆ ಬಂದುವು.

ಒಟ್ಟಿನಲ್ಲಿ ನಾವು ಸಾಹಸದಿಂದ ಏರಿದ ಶಿಶಿಲದ ಈ ಕೋಟೆಯು ಬಂಗಾಡಿಯ ಬಂಗರಸರ ನೆಂಟರಾಗಿದ್ದ ಬೈಲಂಗಡಿಯ ಮೂಲರೆಂಬ ಜೈನ ಅರಸರಿಗೆ ಸಂಬಂಧ ಪಟ್ಟದ್ದೆಂದುತಿಳಿಯಿತು. ಈ ಮೂಲ ಅರಸರು ಈಗಿನ ಬೆಳ್ತಂಗಡಿಯ ಆಗ್ನೇಯ ದಿಕ್ಕಿಗಿರುವ ಬೈಲಂಗಡಿಯಿಂದ ಆಳುತ್ತಿದ್ದರು. ಅವರೇ ಶಿಶಿಲದಲ್ಲಿ ಈ ಕೋಟೆಯನ್ನು ಕಟ್ಟಿಕೊಂಡು ಇಲ್ಲಿಂದಲೂ ಆಳುತ್ತಿದ್ದರು. ಘಟ್ಟದ ಮೇಲಿನ ಊರುಗಳೊಂದಿಗೆ ವ್ಯಾಪಾರ ವಹಿವಾಟು ನಡೆಸುತ್ತಿದ್ದರಿಂದ ಕೆಳದಿಯ ನಾಯಕ ಅರಸರೊಡನೆ ನೇರ ಸಂಪರ್ಕವನ್ನು ಹೊಂದಿದ್ದರು. ಒಮ್ಮೆ ಕೆಳದಿಯ ಅರಸ ವೀರಭದ್ರ ನಾಯಕನೆಂಬವನು ಬೈಲಂಗಡಿಯ ಮೂಲ ಶಂಕರದೇವಿ(ಸೋಮಲಾದೇವಿ)ಯೊಂದಿಗೆ ಶಾಂತಿ ಒಪ್ಪಂದವನ್ನು ಮಾಡಿಕೊಂಡಿದ್ದನೆಂದೂ ತಿಳಿದು ಬಂತು. ಆದರೆ ಈ ಕೋಟೆಯನ್ನು ಕಟ್ಟಿದವರಾರೆಂದು ತಿಳಿಯಲಿಲ್ಲ.

ಆದರೆ, ಸ್ವಪ್ರತಿಷ್ಠೆ ಯಾವುದೋ ಕಾರಣದಿಂದಾಗಿ ಈ ಶಂಕರದೇವಿಯು ಒಮ್ಮೆ ತನ್ನ ಪತಿ ವೀರನರಸಿಂಹ ಲಕ್ಷ್ಮಪ್ಪರಸ ಬಂಗನೊಂದಿಗೆ ವಿರೋಧ ಕಟ್ಟಿಕೊಂಡಿದ್ದಳು. ಗಂಡನನ್ನು ತೊರೆದು, ಬೈಲಂಗಡಿಯ ತನ್ನ ತವರು ಮನೆಗೆ ಬಂದು ಇರತೊಡಗಿದಳು. ಆದರೆ, ವಿರಹ ವೇದನೆಯನ್ನು ತಾಳಲಾರದೆ, ಕೊನೆಗೊಂದು ದಿನ ಕ್ರಿ. ಶ. ೧೫೫೬ರಲ್ಲಿ ಲಕ್ಷ್ಮಪ್ಪರಸನು ತನ್ನ ಪತ್ನಿಯನ್ನು ಕಾಣುವುದಕ್ಕಾಗಿ ಬೈಲಂಗಡಿಗೆ ಬಂದ. ಕಾಡು ದಾರಿಯಲ್ಲೇ ಬರಬೇಕಾದ್ದುದರಿಂದ ತನ್ನೊಡನೆ ಕೆಲವು ಆಳುಗಳನ್ನೂ ಕರೆದು ಕೊಂಡು ಬಂದಿದ್ದ. ಇದನ್ನು ದೂರದಿಂದ ಕಂಡ ರಾಣಿ ತನ್ನ ಗಂಡ, ತನ್ನೊಡನೆ ಯುದ್ಧಕ್ಕೆ ಬರುತ್ತಿರುವನೆಂದು ಭಾವಿಸಿ ಯಾರೇ ಆದರೂ ಅರಮನೆಯ ಮೆಟ್ಟಿಲೇರಿ ಬಂದರೆ ಕೊಂದು ಬಿಡಿರಿ - ಎಂದು ತನ್ನ ಬಾಗಿಲು ಕಾಯುವವರಿಗೆ ಹೇಳಿ, ತಾನು ಅಂತಃಪುರಕ್ಕೆ ನಡೆದಳು. ಅರಸನು ಮೆಟ್ಟಿಲೇರಿ ಅರಮನೆಗೆ ಬರುತ್ತಿದ್ದಂತೆ, ಆಳುಗಳು ಆತನನ್ನು ಕತ್ತಿಗಳಿಂದ ತಿವಿದು ಕೊಂದುಬಿಟ್ಟರು. ಆದರೆ ತನ್ನಿಂದಲೇ ತನ್ನ ಗಂಡನ ಹತ್ಯೆಯಾದುದಕ್ಕೆ ಪಶ್ಚಾತ್ತಾಪಗೊಂಡ ರಾಣಿಯು ಕೂಡಲೇ ಖಡ್ಗದಿಂದ ತನ್ನನ್ನು ತಾನೇ ಇರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಳು. ಗಂಡು ಮಕ್ಕಳಿಲ್ಲದ ಈಕೆಯ ಅಕಾಲ ಮರಣದಿಂದಾಗಿ ಮೂಲ ಅರಸರ ಆಳ್ವಿಕೆಯು ಇಲ್ಲಿಗೇ ಕೊನೆಗೊಂಡಿತು. ಈ ಘಟನೆಗೆ ಸಂಬಂಧಿಸಿದ ಶಿಲಾಶಾಸನವೊಂದು ಬೈಲಂಗಡಿಯ ಶ್ರೀ ಪಾರ್ಶ್ವನಾಥ ಬಸದಿಯಲ್ಲಿ ಈಗಲೂ ಇದೆ. ಬೈಲಂಗಡಿಯಂತೆ, ಶಿಶಿಲದ ಈ ಕೋಟೆಯೂ ಅಂದಿನಿಂದ ಅನಾಥವಾಯಿತು. ಉಸ್ತುವಾರಿಯಿಲ್ಲದೆ ಅರಮನೆಯೂ ಬಿದ್ದುಹೋಯಿತು. ಸಾವಿರಾರು ಜನರು ವಾಸವಾಗಿದ್ದ ಶಿಶಿಲ ನಗರವು ನಿರ್ಜನವಾಗತೊಡಗಿತು. ಕಾಡು ಮೃಗಗಳು ನಿರ್ಭಯವಾಗಿ ತಿರುಗಾಡಲಾರಂಭಿಸಿ ಸಿಕ್ಕಿದ್ದನ್ನು ತಿನ್ನುತ್ತಾ ಹಾಳುಗೆಡವುತ್ತಾ ನಗರವನ್ನು ನಿರ್ನಾಮಗೊಳಿಸಿದವು. ಕ್ರಮೇಣ ನಗರವು ಸುತ್ತಲೂ ಬೆಳೆದಿದ್ದ ಗೊಂಡಾರಣ್ಯಕ್ಕೆ ಸೇರಿಕೊಂಡಿತು.

ಪ್ರಾಚೀನ ಇತಿಹಾಸ

ಈ ಕೋಟೆಯ ಸ್ಥಿತಿ ಈಗ ದಾರುಣವಾಗಿದೆ. ನಾವೆಲ್ಲ ಕಪಿಲಾ ನದಿಗಿಳಿದು ಅಲ್ಲೇ ಮುಂದುವರಿದೆವು. ಬರೇ ಬಂಡೆ ಕಲ್ಲುಗಳಿಂದ ತುಂಬಿರುವ ಈ ನದಿಯಲ್ಲಿ ನಮ್ಮ ಪ್ರಯಾಣವು ತ್ರಾಸದಾಯಕವಾಗದಿರಲೆಂದು ನನ್ನೊಡನೆ ಇದ್ದ ನನ್ನ ಗೆಳೆಯರಿಗೆ, ಶಿಶಿಲದ ಪ್ರಾಚೀನ ಇತಿಹಾಸವನ್ನು ನಾನು ವಿವರಿಸತೊಡಗಿದೆ.

ಸುಮಾರು ೧೬೦೦ ವರ್ಷಗಳ ಹಿಂದೆ ಇದೇ ಶಿಶಿಲಕ್ಕೆ ಮಾನವ್ಯ ಗೋತ್ರ ಹಾಗೂ ಹಾರೀತ ಪುತ್ರ ವಂಶಕ್ಕೆ ಸೇರಿದ್ದ ಬ್ರಾಹ್ಮಣೋತ್ತಮನಾದ ಕದಂಬ ಮಯೂರ ಶರ್ಮನೆಂಬ ರಾಜಕುಮಾರನು ಬಂದಿದ್ದ. ಈತನೇ ಕರ್ನಾಟಕದಲ್ಲಿ ಅಚ್ಚ ಕನ್ನಡಿಗರ ಆಳ್ವಿಕೆಯನ್ನು ಪ್ರಾರಂಭಿಸಿದ ಮೊತ್ತ ಮೊದಲ ದೊರೆ. ಶಿವಮೊಗ್ಗ ಜಿಲ್ಲೆಯ

ತಾಳಗುಂದದಲ್ಲಿ ಸಿಕ್ಕಿದ್ದ ಶಿಲಾಶಾಸನದಲ್ಲಿ "ಪಲ್ಲವಾಶ್ವ ಸಂಸ್ಥೇನ ಕಲಹೇನ ತೀವ್ರೇಣ ರೋಷಿತಃ" ಎಂದು ಹೇಳಿರುವ ಈ ರಾಜಕುಮಾರನು ಕಾಂಚಿಯ ಪಲ್ಲವ ರಾಜನ ಅಶ್ವಸೈನಿಕನೊಬ್ಬನಿಂದ ಅವಮಾನಿತನಾಗಿ ರೋಷಗೊಂಡು ವೈದಿಕ ಬ್ರಾಹ್ಮಣರು ದರ್ಭೆಯನ್ನು ಮಡಿಚುವುದು ಮಾತ್ರವಲ್ಲದೆ, ಶಸ್ತ್ರಾಸ್ತ್ರಗಳನ್ನು ಹಿಡಿದು ರಾಜ್ಯವನ್ನೂ ಕಟ್ಟಬಲ್ಲರೆಂಬುದನ್ನು ತೋರಿಸಲು ಪಣ ತೊಟ್ಟ. ಸದಾ ಹೋಮ, ಧೂಮದಲ್ಲೇ ಅದೃಶ್ಯರಾಗುತ್ತಿದ್ದ, ತೀರ್ಥಸ್ನಾನದಿಂದಲೇ ಒದ್ದೆ ತಲೆಯುಳ್ಳ ವರಾಗಿದ್ದ ವೈದಿಕ ಕುಟುಂಬಕ್ಕೆ ಸೇರಿ ಸ್ವಾಭಿಮಾನಿಯಾಗಿದ್ದ ಮಯೂರಶರ್ಮನು ಪಲ್ಲವ ಸಾಮ್ರಾಜ್ಯದಷ್ಟೇ ಪ್ರಬಲವಾದ ಸ್ವರಾಜ್ಯವನ್ನು ಕಟ್ಟಬೇಕೆಂಬ ಸಂಕಲ್ಪ ದಿಂದ, ಅವರ ಸಾಮ್ರಾಜ್ಯದ ಹೊರಗಿದ್ದ, ಆಗ ಶ್ರೀಶೈಲವೆಂದು ಕರೆಯಲ್ಪಡುತ್ತಿದ್ದ ಈ ಶಿಶಿಲ ಗ್ರಾಮಕ್ಕೆ ಬಂದಿದ್ದ.

ಇಲ್ಲಿಯ ತ್ರಿಕೂಟ ಪರ್ವತದಲ್ಲಿ ನೆಲೆಸಿ ಸುತ್ತಮುತ್ತಲಿನ ಜನರಲ್ಲಿ ಸ್ವಾಭಿಮಾನವನ್ನು ಜಾಗೃತಗೊಳಿಸಿ, ಒಂದು ಸೈನ್ಯವನ್ನು ಸಿದ್ಧಗೊಳಿಸಿದ. ಕಾಡು ಜನರೂ ಈತನಿಗೆ ಸಹಾಯವನ್ನಿತ್ತರು. ಪ್ರಬಲ ಜನನಾಯಕನಾಗಿ ಮೇಲೆ ಬರುತ್ತಿದ್ದ ಮಯೂರ ಶರ್ಮನಿಗೆ ಹೆದರಿ ಕಾಂಚಿಯ ಪಲ್ಲವರು ಪಶ್ಚಿಮ ಸಮುದ್ರ (ಅರಬೀ ಸಮುದ್ರ)ದ ಕರಾವಳಿಯಿಂದ ಮಲಪ್ರಭಾ ನದಿಯವರೆಗಿನ ಪ್ರದೇಶವನ್ನು ಬಿಟ್ಟುಕೊಟ್ಟರು. ಇಷ್ಟು ಶಕ್ತಿ ಸಂಪನ್ನನಾದ ಮಯೂರನು ಈಗಿನ ಉತ್ತರ ಕನ್ನಡ ಜಿಲ್ಲೆಯ ಬನವಾಸಿ (ವೈಜಯಂತಿ)ಗೆ ಹೋಗಿ ಅಲ್ಲಿ ಕ್ರಿ. ಶ. ೩೪೫ರಲ್ಲಿ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿದ. ಮುಂದೆ ಇದುವೇ ಕದಂಬ ಸಾಮ್ರಾಜ್ಯವೆಂದು ಕರ್ನಾಟಕ ಇತಿಹಾಸದಲ್ಲಿ ಪ್ರಸಿದ್ಧವಾಯಿತು. ಹೀಗೆ ಕನ್ನಡದ ಮೊತ್ತ ಮೊದಲ ದೊರೆಗೆ ಆಶ್ರಯವನ್ನು ಕೊಟ್ಟ ವಿಶೇಷವಾದ ಕೀರ್ತಿ ಈ ನಮ್ಮ ಊರಿಗಿದೆ ಎಂದು ವಿವರಣೆಗೆ ಮಂಗಳ ಹಾಡಿದೆ.

ಇಷ್ಟೆಲ್ಲ ವಿವರಿಸುವಾಗ ನಾವು ನದಿಯಲ್ಲೇ ಪಯಣಿಸಿ ಶಿಶಿಲೇಶ್ವರ ದೇವಾಲಯವನ್ನು ತಲುಪಿದ್ದೆವು. ದೂರದಲ್ಲಿ ಕಾಣುತ್ತಿರುವ ಅಮ್ಮೆದಿಕಲ್ಲು ಎಂಬ ಪರ್ವತ ಪ್ರದೇಶವೇ ಮಯೂರ ಶರ್ಮ ನೆಲೆಸಿದ್ದ ಸ್ಥಳವಾಗಿರಬೇಕು. ಇದೇ ದೇವಾಲಯದ ಪೂರ್ವ ದಿಕ್ಕಿಗೆ, ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಕಾಣುವ ಮೂರು ಉನ್ನತ ಪರ್ವತ ಶಿಖರಗಳೇ ಆ ತ್ರಿಕೂಟಾಚಲವಾಗಿರಬೇಕು. ಶ್ರೀ ಶಿಶಿಲೇಶ್ವರನಿಗೆ ಪೂಜೆಯಾಗುತ್ತಿರುವಂತೆ ಅವನ ಸನ್ನಿಧಿಯಲ್ಲಿ ಇಲ್ಲಿಯ ಭವ್ಯ ಇತಿಹಾಸವನ್ನು ಇನ್ನೊಮ್ಮೆ ಸ್ಮರಿಸಿಕೊಂಡೆ.

ಕರ್ನಾಟಕದ ಬಾಹುಬಲಿಗಳು

ಬಾಹುಬಲಿಯನ್ನು ಗೋಮಟೇಶ್ವರ, ಗೊಮಟೇಶ್ವರ, ಗೊಮ್ಮಟ, ಗುಮ್ಮಟ - ಎಂದೆಲ್ಲ ಕರೆಯುತ್ತಾರೆ. ಗೊಮ್ಮಟ ಅಥವಾ ಗುಮ್ಮಟ ಎಂದರೆ ಸುಂದರ, ಚೆಲುವ, ಮನ್ಮಥ ಎಂದು ಅರ್ಥವಿದೆ. ಪ್ರಾಕೃತಿಕ ಭಾಷೆಯಲ್ಲಿ ಗುಮ್ಮಡ, ಗುಮ್ಮ ಎಂಬ ಪದಗಳಿಗೆ ಮೋಹಗೊಳ್ಳು, ಮೋಹಗೊಳಿಸು - ಎಂಬ ಅರ್ಥವಿದೆ. ಆದು ದರಿಂದ ಗುಮ್ಮಡಗೊಳಿಸುವ ಈ ವಿಗ್ರಹವನ್ನು ಗುಮ್ಮಡ, ಗುಮ್ಮಟ ಗೊಮ್ಮಟೇಶ್ವರ- ಎಂದು ಕರೆಯಲಾರಂಭಿಸಿರಬೇಕು.

ಗುಮ್ಮಟ ಅಥವಾ ಗೊಮ್ಮಟ ಎಂಬ ಪದವು ವಿಗ್ರಹ, ಮೂರ್ತಿ, ಬೊಂಬೆ ಎಂಬ ಅರ್ಥವನ್ನೂ ಕೊಡುತ್ತದೆ. ಶ್ರವಣಬೆಳಗೊಳವೇ ಮೊದಲಾದ ಸ್ಥಳಗಳಲ್ಲಿ ಪ್ರತಿಷ್ಠೆಗೊಂಡ ಬಾಹುಬಲಿಯ ಮೂರ್ತಿಯನ್ನು ' ಬಾಹುಬಲಿಯ ಗುಮ್ಮಟ' ಮತ್ತು ಕಾಲಕ್ರಮದಲ್ಲಿ ಗೊಮ್ಮಟ, ಗೊಮ್ಮಟೇಶ್ವರ - ಎಂದೇ ಕರೆಯುವುದು ರೂಢಿಯಲ್ಲಿ ಬಂದಿರಬಹುದು.

ಜೈನ ಪುರಾಣಗಳಲ್ಲಿ ಬಾಹುಬಲಿಯನ್ನು 'ಗೊಮ್ಮಟ' ಎಂದು ಕರೆದಿರುವುದು ಕಂಡು ಬರುವುದಿಲ್ಲ. ಕ್ರಿ. ಶ. 981ರಲ್ಲಿ ಚಾವುಂಡರಾಯನಿಂದ ಶ್ರವಣ ಬೆಳ್ಗೊಳದಲ್ಲಿ ಈ ಗೋಮಟೇಶ್ವರ ಮೂರ್ತಿಯು ಪ್ರತಿಷ್ಠಾಪಿಸಲ್ಪಡುವ ಮೊದಲು ಬಾಹುಬಲಿಯನ್ನು ಈ ಹೆಸರಿನಿಂದ ಕರೆದಿರುವುದು ಶಾಸನಗಳಲ್ಲಾಗಲೀ, ಸಾಹಿತ್ಯ ದಲ್ಲಾಗಲೀ ಕಂಡುಬಂದಿಲ್ಲ. ಕ್ರಿ. ಶ. 941ರಲ್ಲಿ ಪಂಪ ಮಹಾಕವಿಯು ಬರೆದ 'ಆದಿಪುರಾಣ' ದಲ್ಲಿಯೂ ಬಾಹುಬಲಿಯನ್ನು ಈ ಹೆಸರಿನಿಂದ ಕರೆದಿರುವುದಿಲ್ಲ. ಇದರಿಂದಾಗಿ, ಬಾಹುಬಲಿಗೆ ಈ ಹೆಸರು ಶ್ರವಣಬೆಳಗೊಳದ ಗೊಮಟೇಶ್ವರ ಮೂರ್ತಿಯು ಪ್ರತಿಷ್ಠಾಪನೆಗೊಂಡ ನಂತರವೆ ಪ್ರಚಲಿತವಾಯಿತು. ಈ ಮಹಾನ್ ಕೃತಿಗೆ ಕಾರಣನಾದವನು ಗಂಗವಂಶದ ಅರಸನಾದ ರಾಚಮಲ್ಲ IV (ಕ್ರಿ. ಶ. 977 -985) ನ ಮಹಾಮಂತ್ರಿಯೂ ದಂಡನಾಯಕನೂ ಆಗಿದ್ದ ಚಾವುಂಡರಾಯನು. ಇವನಿಗೆ 'ಗೊಮ್ಮಟರಾಯ' ಎಂಬ ಹೆಸರಿತ್ತು. ಗೊಮ್ಮಟರಾಯನು ಪ್ರತಿಷ್ಠಾಪಿಸಿ ಪೂಜಿಸಿದ ಕಾರಣ ಈ ಬೃಹತ್ ಮೂರ್ತಿಯನ್ನು ಗೊಮ್ಮಟನ ಈಶ್ವರ (ದೇವರು) - ಆದ್ದರಿಂದ ಗೊಮ್ಮಟೇಶ್ವರ ಅಥವಾ ಗೋಮಟೇಶ್ವರ ಎಂದು ಕರೆಯಲಾಯಿತು. ಜೊತೆಗೆ, ಗೊಮ್ಮಟೇಶ್ವರ ಸ್ಥಾಪನೆಯ ಆ ಶುಭ ಸಮಾರಂಭದಲ್ಲಿ ಚಾವುಂಡರಾಯನ ಗುರುಗಳಾದ ಆಚಾರ್ಯ ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಪ್ರಾಕೃತ ಭಾಷೆಯಲ್ಲಿ ರಚಿಸಿದ

'ಶ್ರೀ ಗೋಮಟೇಸ ಥುಯಿ' ಎಂಬ ಎಂಟು ಶ್ಲೋಕಗಳ ಸಂಗ್ರಹದಲ್ಲಿ ಪ್ರತೀ ಶ್ಲೋಕದ ನಾಲ್ಕನೆ ಚರಣದಲ್ಲಿ ಗೋಮಟೇಸಂ' ಎಂಬ ಪದವನ್ನು ನಾವು ಕಾಣುತ್ತೇವೆ. ಅವರು ಇದೇ ಹೆಸರಿನಿಂದ ಬಾಹುಬಲಿಯನ್ನು ಸಂಬೋಧಿಸಿರುವರು.

" ತಂ ಗೋಮಟೇಸಂ ಷಣಮಾಮಿ ಣಿಚ್ಚಂ!" (ತ್ವಂ ಗೋಮಟೇಶಂ ಪ್ರಣಮಾಮಿ ನಿತ್ಯಮ್)

ಆದುದರಿಂದ ಈ ಆಚಾರ್ಯರ ಶ್ಲೋಕ ರಚನೆಯನಂತರವೇ ಗೋಮಟೇಸ (ಶ) ಎಂಬ ಹೆಸರು ರೂಢಿಯಲ್ಲಿ ಬಂದಿರಬೇಕು.

ಹೀಗೆ ಬಾಹುಬಲಿ ಎಂಬ ಹೆಸರಿನ ಬದಲು ಗೋಮಟೇಶ್ವರ - ಎಂಬ ಹೆಸರೇ ಹೆಚ್ಚು ರೂಢಿಯಲ್ಲಿ ಬಂತು. ಅನಂತರದಲ್ಲಿ ಇದೇ ಹೆಸರನ್ನು ಧಾರಾಳವಾಗಿ ಉಪಯೋಗಿಸಿರುವುದು ಕಂಡುಬರುತ್ತದೆ. ಉದಾಹರಣೆಗೆ ಕ್ರಿ. ಶ. 1180 ರ ಸುಮಾರಿಗೆ ಬೊಪ್ಪಣ ಪಂಡಿತನು ತನ್ನ 'ಗೊಮ್ಮಟ ಸ್ತುತಿ' ಯಲ್ಲಿ "ಗೊಮ್ಮಟೇಶ್ವರ ಜಿನ ಶ್ರೀ ಮೂರ್ತಿಯಂ ಕೀರ್ತಿಸಲ್"- ಎಂದು ಮುಂತಾಗಿ ಹೇಳಿರುವನು. ಶ್ರವಣಬೆಳಗೊಳದ ಮೂರ್ತಿಯು ಸ್ಥಾಪಿಸಲ್ಪಟ್ಟ ನಂತರದ ಕಾಲದಲ್ಲಿ ಕಾರ್ಕಳ, ವೇಣೂರು, ಧರ್ಮಸ್ಥಳ ಇತ್ಯಾದಿ ಕಡೆಗಳಲ್ಲಿ ಆ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವುದರಿಂದ ಈ ಹೆಸರಿನಿಂದಲೇ ಅವುಗಳನ್ನು ಕರೆಯಲಾಯಿತು.

ಗೋಮಟೇಶ್ವರ ಮೂರ್ತಿಯನ್ನು ಗುರುತಿಸುವುದು ಹೇಗೆ?

ಜೈನ ತೀರ್ಥಂಕರರೆಲ್ಲರ ವಿಗ್ರಹಗಳೂ ಹೊರನೋಟಕ್ಕೆ ಏಕ ಪ್ರಕಾರವಾಗಿರುತ್ತವೆ. ಆ ವಿಗ್ರಹಗಳು ಕಾರ್ಯೋತ್ಸರ್ಗ ಅಂದರೆ ಖಡ್ಗಾಸನ (ನಿಂತು ಕೊಂಡಿರುವ ಭಂಗಿ) ದಲ್ಲಿಯೂ, ಪರ್ಯಂಕಾಸನ ಅಂದರೆ ಪದ್ಮಾಸನದಲ್ಲಿಯೂ ಇರುವುದು ನಮಗೆ ಕಂಡುಬರುತ್ತದೆ. ಆದರೆ ವಿಗ್ರಹಗಳ ಕೆಳಗಡೆ (ಪೀಠದಲ್ಲಿ) ಇರುವ ಲಾಂಛನಗಳ ಸಹಾಯದಿಂದ ತೀರ್ಥಂಕರರನ್ನು ಸುಲಭವಾಗಿ ಗುರುತಿಸಿ ಕೊಳ್ಳಬಹುದು. ಉದಾಹರಣೆಗೆ, ವರ್ಧಮಾನ ಮಹಾವೀರರಿಗೆ ಸಿಂಹವು ಲಾಂಛನ, ಇನ್ನೊಂದು ಗುರುತೆಂದರೆ, ಅವರ ಎರಡೂ ಪಾರ್ಶ್ವಗಳಲ್ಲಿ ಯಕ್ಷ, ಯಕ್ಷಿಯರು ಇರುತ್ತಾರೆ. ಉದಾಹರಣೆಗೆ, ವರ್ಧಮಾನ ಮಹಾವೀರರಿಗೆ ಒಂದು ಪಾರ್ಶ್ವದಲ್ಲಿ ಗಜಾರೂಢನಾಗಿರುವ ಮಾತಂಗ ಯಕ್ಷನೂ ಇನ್ನೊಂದು ಪಾರ್ಶ್ವದಲ್ಲಿ ಸಿಂಹಾ ರೂಢಳಾಗಿರುವ ಸಿದ್ಧಾಯಿನಿ ಯಕ್ಷಿಯೂ ಇರುವರು.

ಬಾಹುಬಲಿಯ ಎಲ್ಲಾ ವಿಗ್ರಹಗಳು ದಿಗಂಬರವಾಗಿ, ಖಡ್ಗಾಸನದಲ್ಲಿ (ನಿಂತಿ ರುವ ಭಂಗಿ) ಇರುವುವು. ನಿಂತಿರುವ ಪದ್ಮಪೀಠದಲ್ಲಿ, ತೀರ್ಥಂಕರರಿಗೆ ಇರುವಂತೆ ಯಾವುದೇ

ಲಾಂಛನವಿರುವುದಿಲ್ಲ. ಪಾದಪ್ರದೇಶದಲ್ಲಿ ಹುತ್ತವೂ ಅದರಿಂದ ಹೊರಬರುವ ಸರ್ಪಗಳೂ, ಅಲ್ಲಿಂದಲೇ ಎದ್ದುಬಂದು ಬಾಹುಬಲಿಯ ಕಾಲು ತೋಳುಗಳನ್ನು ಸುತ್ತಿರುವ ಮಾಧವೀ ಲತೆಗಳೂ ಕಂಡುಬರುತ್ತವೆ. ಬಾಹುಬಲಿಯ ವಿಗ್ರಹದ ಪಾರ್ಶ್ವಗಳಲ್ಲಿ ಯಕ್ಷ ಯಕ್ಷಿಯರೂ ಇರುವುದಿಲ್ಲ. ತೀರ್ಥಕರರ ವಿಗ್ರಹಗಳ ಪ್ರಭಾವಳಿಗಳಲ್ಲಿ ಅಲಂಕಾರಕ್ಕಾಗಿ ಮಾಡಿದ ಸುಂದರವಾದ ರಚನೆಗಳು ಸರ್ಪತೋರಣಗಳು, ಲತಾತೋರಣಗಳು, ಸಿಂಹಲಲಾಟಗಳು, ಮಕರ ತೋರಣಗಳು ಕಂಡುಬರುತ್ತವೆ. ಆದರೆ ಬಾಹುಬಲಿಯ ವಿಗ್ರಹದ ಸುತ್ತಲು ಇದು ಯಾವುದು ಕಂಡುಬರುವುದಿಲ್ಲ.

ಉತ್ತರ ದಿಕ್ಕಿಗೆ ಮುಖಮಾಡಿರುವುದೇಕೆ?

ನಾವು ಕಾಣುವಂತೆ ಗೋಮಟೇಶ್ವರ ಮೂರ್ತಿಗಳನ್ನು ಉತ್ತರಕ್ಕೆ ಮುಖಮಾಡಿ ಪ್ರತಿಷ್ಠಾಪಿಸಲಾಗಿದೆ. ಇದೊಂದು ವಿಶೇಷವಾದ ಅಂಶ. ಇದಕ್ಕೆ ಎರಡು ಕಾರಣಗಳಿವೆ. ಜೈನ ಸಂಪ್ರದಾಯದಂತೆ ತೀರ್ಥಂಕರರ ಮತ್ತು ಬಾಹುಬಲಿಯಂತಹ ಕೇವಲಿಗಳ ವಿಗ್ರಹಗಳನ್ನು ಉತ್ತರಕ್ಕೇ ಮುಖಮಾಡಿ ಪ್ರತಿಷ್ಠಾಪಿಸಬೇಕು. ಎರಡನೆಯದಾಗಿ ಭಗವಾನ್ ಬಾಹುಬಾಲಿಯು ತಂದೆ ಪ್ರಥಮತೀರ್ಥಂಕರ ಶ್ರೀ ವೃಷಭದೇವನು ಹಿಮವತ್ ಪರ್ವತದಲ್ಲಿ ಧ್ಯಾನದಿಂದ ಮುಕ್ತಿಯನ್ನು ಪಡೆದದ್ದು. ಈ ಪರ್ವತವು ಉತ್ತರಕ್ಕೆ ಇರುವುದರಿಂದ ಬಾಹುಬಲಿಯು ಅದೇ ಉತ್ತರದಿಕ್ಕಿಗೆ ಮುಖಮಾಡಿ ತಂದೆಯ ಕಡೆಗೆ ನೋಡುತ್ತ ನಿಂತಂತೆ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ.

ಬಾಹುಬಾಲಿಯು ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಹೆಚ್ಚು ಜನಪ್ರಿಯ. ಬಹುಶಃ ಇದಕ್ಕೆ ಬಾಹುಬಾಲಿಯು ಒಬ್ಬ ತೀರ್ಥಂಕರನಲ್ಲನೆಂಬುದೂ ಕಾರಣವಾಗಿರ ಬಹುದು. ಬಾಹುಬಲಿಯು ಒಬ್ಬ 'ಕೇವಲಿ' (ಕೇವಲ ಜ್ಞಾನವನ್ನು ಪಡೆದವನು) ಜೈನಪರಂಪರೆಯಲ್ಲಿ ಹಲವಾರು ಕೇವಲಿಗಳಿದ್ದಾರೆ. ಬಾಹುಬಲಿಯ ಅಣ್ಣನಾದ ಭರತನು ಒಬ್ಬ ಕೇವಲಿಯಾಗಿದ್ದನು. ಮೌರ್ಯದೊರೆ ಚಂದ್ರಗುಪ್ತನೊಡನೆ ಶ್ರವಣಬೆಳಗೊಳಕ್ಕೆ ಬಂದಿದ್ದ ಶ್ರುತ ಕೇವಲಿಗಳಾಗಿದ್ದ ಭದ್ರಬಾಹುಮುನಿಗಳು ಮುಂದೆ ಕೇವಲಿಗಳಾದರು.

ಮಹಾಮಸ್ತಕಾಭಿಷೇಕ

ಮಹಾಮಸ್ತಕಾಭಿಷೇಕವು ಭಗವಾನ್ ಬಹುಬಾಲಿಗೆ ನಡೆಸುವ ಒಂದು ವಿಶೇಷ ಪೂಜಾ ಸಮಾರಂಭ. ದೇವೇಂದ್ರನು ಬಾಹುಬಲಿಗೆ ಜ್ಞಾನೋದಯವಾದ ನಂತರ,

ಗೌರವಾರ್ಥವಾಗಿ ಅಭಿಷೇಕಮಾಡಿದ್ದನಂತೆ. ಇದನ್ನು ಭಕ್ತರಾದ ಜನರೂ ಮುಂದುವರೆಸಿ ಕೊಂಡು ಬಂದರು. 'ಚಾವುಂಡರಾಯ ಪುರಾಣ'ದಲ್ಲಿ ಹೇಳಿದಂತೆ "ಅಭಿಷೇಕವೆಂಬುದು ಪರಮ ಜನ್ಮಾಭಿಷೇಕಂ... ಪತ್ತುವಿಟ್ಟು ತಪಶ್ಚರಣಂ ಗೈಯೊಡೆ ದಿವ್ಯ ವಿಜಯ ಪರಮಾಭಿಷೇಕ ಪ್ರಾಪ್ತಿಯುಕ್ಕುಂ."

ಮಹಾಮಸ್ತಕಾಭಿಷೇಕದಲ್ಲಿ 1008 ಕುಂಭಗಳಿಂದ ಪವಿತ್ರ ಜಲವನ್ನು ಅಭಿಷೇಕ ಮಾಡಲಾಗುವುದು. ಅನಂತರ ಕ್ರಮವಾಗಿ ಎಳನೀರು, ಇಕ್ಷುರಸ (ಕಬ್ಬಿನ ಹಾಲು), ತುಪ್ಪ, ಹಾಲು, ಮೊಸರುಗಳನ್ನು ಮಸ್ತಕದ ಮೇಲಿಂದ ಮೂರ್ತಿಗೆ ಅಭಿಷೇಕ ಮಾಡಲಾಗುವುದು. ಆ ಬಳಿಕ ಕೇಸರಿ, ಕುಂಕುಮ ಮತ್ತು ಶ್ರೀಗಂಧವನ್ನು ಗೋಮಟೇಶ್ವರ ವಿಗ್ರಹದ ಮೇಲೆ ಅಭಿಷೇಕ ಮಾಡಲಾಗುವುದು. ಇದರ ಮೊದಲು ಹಲವಾರು ಹಣ್ಣುಗಳ ರಸವನ್ನು ಅಭಿಷೇಕ ಮಾಡುತ್ತಾರೆ. ಕೊನೆಯಲ್ಲಿ ಚಿನ್ನದ ನಾಣ್ಯಗಳನ್ನೂ ಅಭಿಷೇಕ ಮಾಡಲಾಗುವುದು. ಈ ರೀತಿಯಾಗಿ ಹದಿನೈದು ಮಂಗಳ ದ್ರವ್ಯಗಳಿಂದ ಅಭಿಷೇಕವಾದ ಬಳಿಕ ಗಂಗೋದಕವೆಂದು ತೀರ್ಥಜಲವನ್ನು ಅಭಿಷೇಕ ಮಾಡಿ ಗೋಮಟೇಶ್ವರನಿಗೆ ಮಹಾ ಮಂಗಳಾರತಿಯನ್ನು ಬೆಳಗುವರು.

ಶ್ರವಣಬೆಳಗೊಳದ ಗೋಮಟೇಶ್ವರ

ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿರುವ ವಿಂಧ್ಯಗಿರಿ ಅಥವಾ ಇಂದ್ರಗಿರಿ ಎಂಬ ದೊಡ್ಡಬೆಟ್ಟದ ತುದಿಯಲ್ಲಿ ಈ ಗೋಮಟೇಶ್ವರ ವಿಗ್ರಹವು ಸುಮಾರು ಕ್ರಿ. ಶ.981 ರಲ್ಲಿ ಚಾವುಂಡರಾಯನಿಂದ ಪ್ರತಿಷ್ಠಾಪಿಸಲ್ಪಟ್ಟಿತು. ಇದರ ಎತ್ತರ 57 ಅಡಿಗಳು. ಏಕಶಿಲಾ ವಿಗ್ರಹಗಳಲ್ಲಿ ಇದು ಅತ್ಯಂತ ದೊಡ್ಡದಾಗಿದೆ. ಇದು ಪದ್ಮಪೀಠದ ಮೇಲೆ ಖಡ್ಗಾಸನದಲ್ಲಿ ಉತ್ತರಕ್ಕೆ ಮುಖಮಾಡಿ ನಿಂತಿದೆ. ಈ ವಿಗ್ರಹವನ್ನು ಇಲ್ಲೇ ಇದ್ದ ಶಿಲೆಯಲ್ಲಿ ಭೇದಿಸಿ ಕಡೆದು ಮಾಡಲಾಗಿದೆ. ಈ ಬೃಹತ್ ಮೂರ್ತಿಯನ್ನು ನಿರ್ಮಿಸಿದ ಶಿಲ್ಪಿ ಯಾರೆಂದು ತಿಳಿದು ಬರುವುದಿಲ್ಲ.

ಕಾರ್ಕಳದ ಗೋಮಟೇಶ್ವರ

ಕಾರ್ಕಳ ಪೇಟೆಯಿಂದ ಸುಮಾರು ಎರಡು ಕಿಲೋಮೀಟರ್ ದೂರದಲ್ಲಿರುವ ಬೆಟ್ಟದ ಮೇಲೆ ಈ ಗೋಮಟೇಶ್ವರ ಮೂರ್ತಿಯನ್ನು ಕಾರ್ಕಳದಲ್ಲಿ ಆಳುತ್ತಿದ್ದ ಭೈರವರಸರಲ್ಲಿ ಒಬ್ಬನಾದ ವೀರಪಾಂಡ್ಯನು ಕ್ರಿ. ಶ. 1432 ರಲ್ಲಿ ಪ್ರತಿಷ್ಠಾಪಿಸಿದನು. ಇದರ ಎತ್ತರ 42 ಅಡಿಗಳು. ಈ ವಿಗ್ರಹವನ್ನು ಐದು ಅಡಿ ಎತ್ತರದ ಕಲ್ಲಿನ ಪೀಠದ ಮೇಲೆ ಇರುವ ಪದ್ಮಪೀಠದ ಮೇಲೆ ನಿಲ್ಲಿಸಲಾಗಿದೆ.

ವೇಣೂರಿನ ಗೋಮಟೇಶ್ವರ

ಈ ಶಿಲಾಮೂರ್ತಿಯನ್ನು ವೇಣೂರಿನ ಅಜಿಲ ಅರಸನಾದ ತಿಮ್ಮರಾಜ ಅಜಿಲನು 1604ರಲ್ಲಿ ಪ್ರತಿಷ್ಠಾಪಿಸಿದನು. ಇದರ ಎತ್ತರ 35 ಅಡಿಗಳು. ಇದನ್ನು ಕಾರ್ಕಳದ ಗೋಮಟೇಶ್ವರನ ಮಾದರಿಯಲ್ಲೇ ತಯಾರಿಸಲಾಗಿದೆ. ಈ ವಿಗ್ರಹವನ್ನು ಸುಮಾರು 5 ಅಡಿ ಎತ್ತರದ ಪೀಠದ ಮೇಲಿರುವ 6 ದಳಪಂಕ್ತಿ ಇರುವ ಪದ್ಮಪೀಠದ ಮೇಲಿರಿಸಲಾಗಿದೆ. ಹಿಂದಿರುವ ಶಿಲಾಫಲಕದಲ್ಲಿ ಸಂಪ್ರದಾಯದ ಹುತ್ತ, ಸರ್ಪಗಳು, ಮಾಧವೀಲತೆ ಇವುಗಳ ಜೊತೆಗೆ, ಎರಡೂ ಬದಿಗಳಲ್ಲಿ ಮೂರು ತಲೆಗಳಿರುವ ದೊಡ್ಡ ಸರ್ಪಗಳು ಎದ್ದು ನಿಂತಿವೆ. ತಳಭಾಗದಲ್ಲಿ 'ಕುಕ್ಕುಟ ಸರ್ಪ'ಗಳು ಹೆಡೆ ಬಿಚ್ಚಿವೆ. ಮಾಧವೀಲತೆಯು ಬೇರೆ ಕಡೆಗಳಿಗಿಂತ ಭಿನ್ನವಾಗಿದ್ದು ತ್ರಿಕೋಣಾಕಾರದ ಎಲೆಗಳುಳ್ಳದ್ದಾಗಿದೆ.

ಧರ್ಮಸ್ಥಳದ ಗೋಮಟೇಶ್ವರ

ಶ್ರೀ ಕ್ಷೇತ್ರ ಧರ್ಮಸ್ಥಳದ ಮಹಾದ್ವಾರದ ಬಲ ಬದಿಯಲ್ಲಿರುವ ಬೆಟ್ಟದ ಮೇಲೆ ಇನ್ನೊಂದು ಹೊಸ ಗೋಮಟೇಶ್ವರ ಮೂರ್ತಿಯನ್ನು ಕಾಣುತ್ತೇವೆ. ಈ ಮಹಾಕಾರ್ಯವನ್ನು ಪ್ರಾರಂಭಿಸಿದವರು ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳಾಗಿದ್ದ ದಿ। ರತ್ನವರ್ಮ ಹೆಗ್ಗಡೆಯವರು, 1967ರಲ್ಲಿ ಅವರ ಸುಪುತ್ರರಾದ ಡಾ। ಡಿ. ವೀರೇಂದ್ರ ಹೆಗ್ಗಡೆಯವರು ಇದನ್ನು 1982ರಲ್ಲಿ ಪ್ರತಿಷ್ಠಾಪಿಸಿ ಮಹಾಮಸ್ತಕಾಭಿಷೇಕವನ್ನು ನಡೆಸಿದರು. ಈ ಏಕಶಿಲಾ ವಿಗ್ರಹದ ಎತ್ತರ 38 ಅಡಿಗಳು.

ಫಿರೋಜಾಬಾದ್‌ನ ಗೋಮಟೇಶ್ವರ

ಬಾಹುಬಲಿಯ ಐದು ಉನ್ನತ ಶಿಲಾಮೂರ್ತಿಗಳಲ್ಲಿ ಇದೂ ಒಂದು. ಈ ಮೂರ್ತಿಯ ಪ್ರಾಮುಖ್ಯ ಎಂದರೆ ಇದು ನಮ್ಮ ಕರ್ನಾಟಕದಿಂದ ಉತ್ತರ ಭಾರತಕ್ಕೆ ಹೋದುದು. ಇದನ್ನು ಶ್ರೀಯುತ ಛದಾಮಿಲಾಲ್ ಜೈನ್ ಅವರ ನಾಯಕತ್ವದ ಟ್ರಸ್ಟ್‌ನವರು 1975ನೇ ಇಸವಿ ಫೆಬ್ರುವರಿ ತಿಂಗಳಲ್ಲಿ 3,500 ಕಿಲೋಮೀಟರ್ ದೂರದ ಆಗ್ರಾದ ಬಳಿಯ ಫಿರೋಜಾಬಾದ್‌ಗೆ ತೆಗೆದುಕೊಂಡು ಹೋದರು. ಇದೂ ಶ್ರೀ ರೆಂಜಾಳ ಗೋಪಾಲ ಶೆಣ್ಯೆಯವರ ಕೃತಿ. ಈ ವಿಗ್ರಹದ ಎತ್ತರ 35 ಅಡಿಗಳು. ರಚನೆಯಲ್ಲಿ ಇದು ಧರ್ಮಸ್ಥಳದ ಮೂರ್ತಿಯನ್ನೇ ಹೋಲುತ್ತದೆ.

ಬಸ್ತಿಹಳ್ಳಿಯ ಗೋಮಟೇಶ್ವರ

ಕರ್ನಾಟಕದಲ್ಲಿಯೇ ಇರುವ ಇನ್ನೊಂದು ಗೋಮಟೇಶ್ವರ ಶಿಲಾ ಪ್ರತಿಮೆಯನ್ನು ನಾವು ಮೈಸೂರು ಜಿಲ್ಲೆಯ ಕೃಷ್ಣರಾಜ ನಗರದ ಬಸ್ತಿಹಳ್ಳಿಯಲ್ಲಿ ಕಾಣುತ್ತೇವೆ. ಇದನ್ನು

ದ್ವಾರಸಮುದ್ರದ ಹೊಯ್ಸಳರಲ್ಲಿ ಸುಪ್ರಸಿದ್ಧನಾಗಿದ್ದ ರಾಜಾ ವಿಷ್ಣುವರ್ಧನನ (1108-1152) ಕಾಲದಲ್ಲಿ ಸ್ಥಾಪಿಸಲಾಯಿತು. ಇದರ ಸ್ಥಾಪನೆಗೆ ಕಾರಣನಾದವನು ವಿಷ್ಣುವರ್ಧನನ ದಂಡನಾಯಕರಲ್ಲಿ ಒಬ್ಬನಾದ ಪುಣಿಸಮಯ್ಯ ಎಂಬವನು. ಈ ವಿಗ್ರಹದ ಎತ್ತರ 20 ಅಡಿಗಳು.

ಇತರ ಕಡೆಗಳಲ್ಲಿ

ಮೈಸೂರು ತಾಲೂಕಿನ ಗೊಮ್ಮಟಗಿರಿಯಲ್ಲಿ ಇನ್ನೊಂದು ಗೋಮಟೇಶ್ವರ ವಿಗ್ರಹವಿದೆ. ಇದರ ಎತ್ತರ 18 ಅಡಿಗಳು. ಬಿಜಾಪುರ ಜಿಲ್ಲೆಯ ಬಾದಾಮಿಯ ಪರ್ವತ ಗುಹೆಗಳ ಪೈಕಿ ನಾಲ್ಕನೇ ಗುಹೆಯಲ್ಲಿ ತೀರ್ಥಂಕರರ ಮಧ್ಯದಲ್ಲಿ ಒಂದು ಗೋಮಟೇಶ್ವರ ವಿಗ್ರಹವಿದೆ. ಇದರ ಎತ್ತರ 7 ಅಡಿ 6 ಇಂಚುಗಳು. ಇದರ ಕೇಶ ವಿನ್ಯಾಸ ಬಹು ಸುಂದರವಾಗಿದೆ. ಮಂಡ್ಯ ಜಿಲ್ಲೆಯ ಚೆನ್ನಪಟ್ಟಣದ ಬಳಿ ಇರುವ ಬಸ್ತಿತಿಪ್ಪೂರು (ಅರೆತಿಪ್ಪೂರು) ಎಂಬ ಹಳ್ಳಿಯ ಸಮೀಪದ ಗುಡ್ಡದ ಮೇಲೆ 14 ಅಡಿ ಎತ್ತರದ ಬಾಹುಬಲಿ ವಿಗ್ರಹವು ಸಿಕ್ಕಿರುತ್ತದೆ. ಬೊಂಬಾಯಿಯ ಪ್ರಿನ್ಸ್ ಆಫ್ ವೇಲ್ಸ್ ವಸ್ತುಸಂಗ್ರಹಾಲಯದಲ್ಲಿ ಇಟ್ಟಿರುವ ಕ್ರಮಸಂಖ್ಯೆ 105ರ ಬಾಹುಬಲಿಯ ಕಂಚಿನ ವಿಗ್ರಹವು ಕೇವಲ ಒಂದೂವರೆ ಅಡಿ ಎತ್ತರದ್ದಾದರೂ ಅದರ ಚೆಲುವಿನಿಂದಾಗಿ ಉಲ್ಲೇಖನೀಯವಾದುದು.

ಬೊಂಬಾಯಿಯ ಬೋರ್‌ವಿಲಿ ನ್ಯಾಷನಲ್ ಪಾರ್ಕ್‌ನಲ್ಲಿ ಇರುವ ಬಾಹುಬಲಿಯ ಅಮೃತಶಿಲೆಯ ವಿಗ್ರಹವು ಸುಮಾರು 18 ಅಡಿ ಎತ್ತರವಿದೆ. ಇದು ಇತ್ತೀಚೆಗಿನ ಸ್ಥಾಪನೆಯಾಗಿದ್ದು ಮಧ್ಯದಲ್ಲಿ ಋಷಭದೇವ ತೀರ್ಥಂಕರರ ವಿಗ್ರಹವೂ ಒಂದು ಪಾರ್ಶ್ವದಲ್ಲಿ ಬಾಹುಬಲಿಯ ಹಾಗೂ ಇನ್ನೊಂದು ಪಾರ್ಶ್ವದಲ್ಲಿ ಭರತನ ವಿಗ್ರಹವೂ ಇವೆ. ಥಾನಾದಲ್ಲಿ ರೈಲ್ವೆ ಮಾರ್ಗದ ಬಳಿಯಲ್ಲಿ ಇನ್ನೊಂದು ವಿಗ್ರಹವನ್ನು ಕಾಣಬಹುದು. ಖಜುರಾಹೋದಲ್ಲಿ ಪಾರ್ಶ್ವನಾಥ ಮಂದಿರದ ದಕ್ಷಿಣ ದಿಕ್ಕಿನ ಗೋಡೆಯಲ್ಲಿ ಬಾಹುಬಲಿಯ ಒಂದು ಬೃಹತ್ ಉಬ್ಬು ಶಿಲಾಮೂರ್ತಿ ಇದೆ. ಮಹಾರಾಷ್ಟ್ರದ ಕೊಲ್ಹಾಪುರದ ಬಳಿಯಿರುವ ಕುಂಭೋಜ ಎಂಬಲ್ಲಿ ಬಾಹುಬಲಿಯ ಶಿಲಾಮೂರ್ತಿಯೊಂದು ಕಂಡುಬರುತ್ತದೆ. ಬಿಹಾರದ ಆರಾದಲ್ಲಿ, ಮಧ್ಯಪ್ರದೇಶದ ಸಾಗರದಲ್ಲಿ, ಉತ್ತರಪ್ರದೇಶದ ಹಸ್ತಿನಾಪುರದಲ್ಲಿ ಇಂತಹ ಶಿಲಾಮೂರ್ತಿಗಳನ್ನು ಕಾಣಬಹುದು. ಸೊಬಗಿನ ದೃಷ್ಟಿಯಿಂದ, ಮೂಡುಬಿದ್ರೆಯ ಹೊಸಬಸದಿಯಲ್ಲಿರುವ ಬಾಹುಬಲಿಯ ಕಂಚಿನ ವಿಗ್ರಹವೂ, ಬಂಗಾಡಿಯ ಶಾಂತಿನಾಥ ಬಸದಿಯಲ್ಲಿರುವ ಕಂಚಿನ ವಿಗ್ರಹಗಳೂ ಉಲ್ಲೇಖನೀಯವಾದವುಗಳು.

ಕಲ್ಯಾಣಕೀರ್ತಿ ಎಂಬ ಕನ್ನಡದ ಕವಿ

ಕಲ್ಯಾಣಕೀರ್ತಿ ಎಂಬ ಹೆಸರು, ಚಾರುಕೀರ್ತಿ, ಲಲಿತಕೀರ್ತಿ, ದೇವೇಂದ್ರ ಕೀರ್ತಿ, ಭುವನಕೀರ್ತಿ ಎಂಬಂತಹ ಜೈನ ಮಠಾಧೀಶರ ಹೆಸರಿನಂತೆ ಕಂಡು ಬಂದರೂ ಆತನೊಬ್ಬ ಜೈನದೀಕ್ಷೆ ಪಡೆದಿದ್ದ ವೈರಾಗ್ಯವಂತನೆಂದು ತಿಳಿದುಕೊಳ್ಳಲು ಅವಕಾಶವಿದೆ. ಆದರೆ ಈ ಹೆಸರಿನ ಒಂದು ಜೈನ ಪೀಠವಿರಲಿಲ್ಲ. ಆತನ ಮಾತಿಗೆ ಸಮಕಾಲೀನ ಸಮಾಜದಲ್ಲಿ ಬಹಳ ಬೆಲೆಯಿತ್ತೆಂದೂ, ಆತನ ಶಿಷ್ಯವರ್ಗಕ್ಕೆ ಸೇರಿದವರು ಅದನ್ನು ನಡೆಸಿಕೊಡುತ್ತಿದ್ದರೆಂದೂ ಕಂಡು ಬರುತ್ತದೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆ ಕಾರ್ಕಳ ತಾಲೂಕಿನ ನೆಲ್ಲಿಕಾರು ಎಂಬಲ್ಲಿರುವ ಒಂದು ಜಿನಾಲಯವನ್ನು ಆತನ ಆದೇಶದ ಅನುಸಾರ ಸ್ಥಳೀಯ ಅರಸರು ನಿರ್ಮಿಸಿದರೆಂದು ಹೇಳಲಾಗುತ್ತಿದೆ. ಅದೇ ಜಿನಾಲಯದ ನಮಸ್ಕಾರ ಮಂಟಪದ ಹಿಂಬದಿಯ ಕಂಬದ ಮೇಲೆ ಈ ರೀತಿ ಬರೆದಿರುವುದನ್ನು ಇಂದಿಗೂ ಕಾಣಬಹುದು: "ಅಕಾರಯದಿದಂ ಚೈತ್ಯಾವಾಸ ಭಾಸುರ ಮಂದಿರಂ ಕಲ್ಯಾಣ ಕೀರ್ತಿ ಕಲಿತೋ ಮಂಜಣ: ಕೊಂಣ ಭೂಪತಿಃ" ಈ ಚಿಕ್ಕ ಸಂಸ್ಕೃತ ಬರವಣಿಗೆಯಿಂದ ತಿಳಿದು ಬರುವುದೇನೆಂದರೆ ಕಲ್ಯಾಣ ಕೀರ್ತಿಯ ಮಾತಿನಂತೆ ಮಂಜಣ ಎಂಬ ಕೊಣ್ಣ ಅರಸನು ಈ ಸುಂದರ ಜಿನಮಂದಿರವನ್ನು ಮಾಡಿಸಿದ. ಈ ಪರಿಸರದಲ್ಲಿರುವ ಪಣಪ್ಪಿಲ ಎಂಬಲ್ಲಿಂದ ಕೊಣ್ಣ ಎಂಬ ಹೆಸರಿನ ಜೈನ ಅರಸು ಮನೆತನದವರು ಆಳ್ವಿಕೆ ನಡೆಸುತ್ತಿದ್ದುದು ಐತಿಹಾಸಿಕ ಸತ್ಯ. ಅವರಲ್ಲೊಬ್ಬನಾದ ಮಂಜಣ ಎಂಬ ಅರಸನು ಈ ಜಿನಾಲಯವನ್ನು ನಿರ್ಮಿಸಿದ್ದ ಎಂಬುದು ಈ ಶಿಲಾಲೇಖದ ತಾತ್ಪರ್ಯ. ಆದರೆ ಪ್ರೇರಣೆ ದೊರಕಿದುದು ಈ ಕಲ್ಯಾಣ ಕೀರ್ತಿ ಎಂಬ ಈ ವ್ಯಕ್ತಿಯಿಂದ. ಈತ ಅರಸರ ಮೇಲೆ ಪ್ರಭಾವ ಬೀರುವಷ್ಟು ಉನ್ನತ ಸ್ಥಾನದಲ್ಲಿದ್ದಂತೆ ಈ ಶಿಲಾ ಲೇಖದಿಂದ ಅರ್ಥವಾಗುತ್ತದೆ. ಕಲ್ಯಾಣ ಕೀರ್ತಿಯ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿದು ಕೊಳ್ಳುವುದು ಕುತೂಹಲಕರವಾದ ಸಂಗತಿ.

ಕಲ್ಯಾಣಕೀರ್ತಿ ಹೆಸರಿನ ಕನ್ನಡದ ಕವಿಯೊಬ್ಬನು ಇದೇ ಪರಿಸರದಲ್ಲಿದ್ದಂತೆಯೂ ತಿಳಿದು ಬರುತ್ತದೆ. ಕಾರ್ಕಳದಲ್ಲಿ ದೊರೆತಿದ್ದ ಕಾಮನ ಕಥೆ ಎಂಬ ಕನ್ನಡ ಕಾವ್ಯವೊಂದರಲ್ಲಿ ಅದರ ಕರ್ತೃವಾಗಿದ್ದ ಕಲ್ಯಾಣ ಕೀರ್ತಿಯು "ಭೂಮಿಪ ಭೈರವಸುತ ಪಾಂಡ್ಯ ರಾಯನು ಕಾಮನ ಕಥೆಯನು ಕೇಳುವಡೆ ಕಾಮಿಸಿ ಪ್ರಾರ್ಥಿಸಲಾಂ ಮನದಂದೆನು ಕಾಮನ ಕಥೆಯನು ರಚಿಸಲು" ಎಂದು ಹೇಳಿರುವುದರಿಂದ, ಈತನು ಕಾರ್ಕಳದಲ್ಲಿ ಶ್ರೀ ಗೋಮಟೇಶ್ವರ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದ್ದ ವೀರ ಪಾಂಡ್ಯ (ಕ್ರಿ. ಶ. 1420-1460)ನ ಆಸ್ಥಾನದಲ್ಲಿದ್ದಿರಬಹುದು. ಜತೆಗೆ ವಯಸ್ಸಿನಲ್ಲಿ ಅಥವಾ ಸಾಮಾಜಿಕ ಪ್ರಾಧಾನ್ಯತೆಯಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿರಬಹುದು. ಈತನು ತನ್ನ "ಜ್ಞಾನ ಚಂದ್ರಾಭ್ಯುದಯ" ಎಂಬ ಕಾವ್ಯದ ಪ್ರಾರಂಭದಲ್ಲಿ ತನ್ನ ಪರಮ ದೀಕ್ಷಾಗುರು ವರತಪಃ

ಶ್ರೀ ಲಲಿತಕೀರ್ತಿ ಮುನಿರಾಜರನ್ನು ಆರಾಧಿಸಿರುವುದರಿಂದ ಈತನು ಒಬ್ಬ ಜೈನ ದೀಕ್ಷೆಯನ್ನು ಹೊಂದಿದ ಮುನಿಯಾಗಿರಬೇಕೆಂಬುದು ನಿಶ್ಚಿತ. ತನ್ನ "ನಾಗಕುಮಾರ ಚರಿತೆ" ಯ ಕೊನೆಯಲ್ಲಿ "ಉನ್ನತ ಶ್ರೀಮುದಿಯ ಭೂಪನೆ ಎನ್ನ ಶಕ್ತಿಗೆ ತಕ್ಕ ಪರಿಯಿಂ (ನಾಗ ಕುಮಾರ ಚರಿತೆ ಯನ್ನು) ರಚಿಸಲೆಳಸಿದೆನು." ಎಂದಿರುವುದರಿಂದ ಈತನ ನಿಜವಾದ ಹೆಸರು ಮುದಿಯ ಭೂಪ ಎಂದಾಗಿತ್ತೇ ಎಂಬ ಅನುಮಾನವೂ ಬರುತ್ತದೆ.

ಅಂತೂ ಕನ್ನಡದ ಈ ಹಿರಿಯ ಕವಿಯ ಹೆಸರಿನ ಕುರಿತು ಊಹೆಗಳಿಗೆ ಅವಕಾಶ ವಿದ್ದರೂ ಈತನು ತನ್ನ ಕೃತಿಗಳಲ್ಲಿ ತಾನು ಕಲ್ಯಾಣ ಕೀರ್ತಿಯೆಂದು ಕರೆದು ಕೊಂಡಿರುವುದರಿಂದ ಸದ್ಯ ನಾವು ಈತನ್ನು ಕಲ್ಯಾಣ ಕೀರ್ತಿ ಎಂದು ಕರೆಯುವುದು ಒಳಿತು. ಆದರೆ ಕವಿಯು ತನ್ನ ಪೂರ್ವಾಶ್ರಮದ ತಂದೆ, ತಾಯಿ, ಊರು, ಪರಂಪರೆ ಇವುಗಳ ಕುರಿತು ಏನೂ ಹೇಳಿರುವುದಿಲ್ಲ.

ತುಳುನಾಡಿನಲ್ಲಿ ಬ್ರಾಹ್ಮಣ ಪ್ರಭಾವದಿಂದ ವೈಷ್ಣವ ಧರ್ಮವು ಪ್ರಾಬಲ್ಯವನ್ನು ಪಡೆಯುತ್ತಿದ್ದು ಜೈನ ಧರ್ಮವು ಕ್ಷೀಣ ಸ್ಥಿತಿಗೆ ಬರುತ್ತಿದ್ದುದನ್ನು ಕಂಡು ಕಾರ್ಕಳದ ಜೈನ ಪೀಠಾಧ್ಯಕ್ಷರಾಗಿದ್ದ ಲಲಿತಕೀರ್ತಿ ಮುನಿಗಳು ಜೈನ ಧರ್ಮದ ವ್ಯಾಪಕ ಪ್ರಸಾರಕ್ಕೆ ಬದ್ಧ ಕಂಕಣರಾದರು. ಪ್ರತಿಭಾ ಸಂಪನ್ನರಾದ ತರುಣರ ಸಹಾಯದಿಂದ ಈ ಕಾರ್ಯವು ಸಾಧ್ಯವೆಂದು ತಿಳಿದು ತನ್ನ ನಾಯಕತ್ವದಲ್ಲಿ ಈ ಕಾರ್ಯವನ್ನು ಪ್ರಾರಂಭಿಸಿದರು. ಅಂತಹ ಪ್ರತಿಭಾವಂತ ತರುಣರಲ್ಲಿ ಕಲ್ಯಾಣಕೀರ್ತಿಯೂ ಒಬ್ಬನು. ಕಾಮನ ಕಥೆಯಲ್ಲಿ ಕವಿಯು "ವರ ಗುರು ಲಲಿತಕೀರ್ತಿಯ ಚರಣಾಂಭೋರುಹ ಯುಗಳಕೆ ಮುದದಿಂ ಕರಗಳ ಮುಗಿದೆರಗುವೆನು" ಎಂದಿಷ್ಟೇ ಹೇಳಿರುವುದರಿಂದ ಕವಿಯು ಲಲಿತಕೀರ್ತಿ ಮುನಿಗಳ ಒಬ್ಬ ಆಪ್ತ ಶಿಷ್ಯನಾಗಿದ್ದನೆಂದಿಷ್ಟೇ ತಿಳಿಯಬಹುದಾಗಿದೆ.

ಜಿನಧರ್ಮ ಬೋಧನೆಗಾಗಿ ಉತ್ತಮವಾದ ಕಥೆಗಳನ್ನು ಆರಿಸಿಕೊಂಡು ತಮ್ಮ ಪ್ರತಿಭೆಯಿಂದ ಸುಂದರಗೊಳಿಸಿ ಜನರ ಮನ ಮುಟ್ಟುವಂತೆ ಅವುಗಳನ್ನು ವಿವರಿಸುತ್ತಿದ್ದುದು ಅಂದಿನ ರೂಢಿ. ರಾಜಕುಮಾರನೋ, ವಿಷಯಾಸಕ್ತನಾಗಿದ್ದ ಯಾವನೋ ಒಬ್ಬ ವ್ಯಕ್ತಿ ಜೈನ ಧರ್ಮವನ್ನು ಸ್ವೀಕರಿಸಿ ಅದರ ಪ್ರಭಾವದಿಂದ ಆತ್ಮೋತ್ಕರ್ಷ ಪಡೆದು ಮೋಕ್ಷ ಹೊಂದುವ ಕಥೆಯನ್ನು ವಿವರಿಸುವುದು ಮತ ಪ್ರಸಾರಕರ ಸಾಮಾನ್ಯ ಸೂತ್ರವಾಗಿತ್ತು. ಕಲ್ಯಾಣಕೀರ್ತಿಯು ಇಂತಹ ಕಾರ್ಯಕ್ಕೆ ಮನಸ್ಸು ಹರಿಸಿದನು. ಆದುದರಿಂದಲೇ ಅವನ ಲೇಖನಿಯಿಂದ ಧರ್ಮೋಪದೇಶವನ್ನು ಮಾಡುವ ಉದ್ದೇಶದ ಜ್ಞಾನ ಚಂದ್ರಾಭ್ಯುದಯ, ನಾಗಕುಮಾರ ಚರಿತೆ, ಕಾಮನ ಕಥೆ ಎಂಬ ಮೂರು ಕಾವ್ಯಗಳೂ, ಚಿನ್ಮಯ ಚಿಂತಾಮಣಿ, ಅನುಪ್ರೇಕ್ಷೆ, ಆನಂದ ಕಂದಳಿ, ತತ್ವಭೇದಾಷ್ಟಕ ಎಂಬ ಜಿನತತ್ವ ನಿರೂಪಕ ಕೃತಿಗಳೂ ಹೊರಬಂದುವು. ಕೆಲವು ಕವಿ ಚರಿತೆಕಾರರು ಹೇಳುವಂತೆ ಈತನು

ಒಬ್ಬ ಸಂಸ್ಕೃತ ವಿದ್ವಾಂಸನೂ, ವೈದ್ಯಶಾಸ್ತ್ರ ನಿಪುಣನೂ ಆಗಿದ್ದನು. 'ಜಿನಯಜ್ಞ ಫಲೋದಯ' ಎಂಬುದು ಈತನು ಬರೆದ ಸಂಸ್ಕೃತ ಕೃತಿ ವಿದ್ವಾಂಸರು ಹೇಳುವಂತೆ ಯಶೋಧರ ಚರಿತೆಯನ್ನು ಈತನೇ ಬರೆದುದೆಂದಾದರೆ ಈತನೊಬ್ಬ ಮಹಾನ್ ಸಂಸ್ಕೃತ ಕವಿಯಾಗುತ್ತಾನೆ. ಕೆಲವು ಕವಿ ಚರಿತೆಕಾರರು ಈತನನ್ನು ಸಂಸ್ಕೃತ ಕವಿಯೆಂದೂ ಗಣಿಸಿದ್ದಾರೆ. ಯಾಕೆಂದರೆ, ಈತನು ಬರೆದನೆಂದು ಹೇಳುವ ಯಶೋಧರ ಚರಿತೆಯು 1850 ಪದ್ಯಗಳಿರುವ ಒಂದು ಬೃಹತ್ ಕಾವ್ಯವಾಗಿದೆ. ಈ ಗ್ರಂಥವು ಕಲ್ಯಾಣಕೀರ್ತಿಯ ಕಾಲದಲ್ಲೇ ರಚಿತವಾದರೂ (ಸುಮಾರು ಕ್ರಿ. ಶ. 1453) ಈತನೇ ಈ ಗ್ರಂಥದ ಕರ್ತೃ ಎಂದು ಹೇಳಲು ಈವರೆಗೆ ದೊರೆತಿರುವ ಆಧಾರಗಳು ಸಾಲವು. ರಾಜಾವಳಿ ಕಥೆಯಲ್ಲಿ ಹೇಳುವಂತೆ ಈತನು 'ಸಿದ್ಧರಾಶಿ' ಎಂಬ ಗ್ರಂಥವನ್ನು ಬರೆದಿರುವನು.

ಜ್ಞಾನ ಚಂದ್ರಾಭ್ಯುದಯವು ಕಲ್ಯಾಣಕೀರ್ತಿಯ ಕನ್ನಡದ ಮೇರು ಕೃತಿ. ವಿವಿಧ ಷಟ್ಪದಿಗಳಲ್ಲಿ ರಚಿತವಾದ ಈ ಕೃತಿಯಲ್ಲಿ ಏಳು ಸಂಧಿಗಳಿದ್ದು ಒಟ್ಟು 908 ಪದ್ಯಗಳಿವೆ. ಪರಿವರ್ಧಿನೀ ಷಟ್ಪದಿಯನ್ನು ಹೆಚ್ಚು ಬಳಸಿಕೊಂಡು ಅದರ ಕೊನೆಯ ಚರಣವನ್ನು ಹಾಡಲು ಅನುಕೂಲವಾಗುವಂತೆ ಮಾಡಿಕೊಂಡಿದ್ದಾನೆ ಕವಿ. ಒಂದೊಂದು ಸಂಧಿಯಲ್ಲಿ ಒಂದೊಂದು ಷಟ್ಪದಿಯನ್ನು ಬಳಸಿಕೊಳ್ಳುವ ಮುಖಾಂತರ ತನ್ನ ಕಾವ್ಯದಲ್ಲಿ ಛಂದೋ ವೈವಿಧ್ಯವನ್ನು ತಂದಿದ್ದಾನೆ. ಕಲ್ಯಾಣಕೀರ್ತಿ ಪ್ರಾಕೃತ ಭಾಷೆಯಲ್ಲಿ ವಾಸವೇಂದು ಎಂಬ ಕವಿಯು ರಚಿಸಿದ ಜ್ಞಾನಚಂದ್ರನ ಕಥೆಯನ್ನು ತಾನು ಕನ್ನಡದಲ್ಲಿ ಬಹು ಸಂಕ್ಷಿಪ್ತವಾಗಿ ಆದರೂ ಉಪಕಥೆಗಳೊಂದಿಗೆ ಸ್ವಾರಸ್ಯ ಪೂರ್ಣವಾಗಿ ವರ್ಣಿಸಿರುವನು. ಈ ಕೃತಿಯಲ್ಲಿ ಜ್ಞಾನಚಂದ್ರನೆಂಬ ರಾಜನು ಹಲವಾರು ಭವಗಳನ್ನು ದಾಟಿ ಆತ್ಮೋದ್ಧಾರ ಪಡೆಯುತ್ತಾ 'ಕೇವಲ ಜ್ಞಾನಿ'ಯಾಗಿ ಕೊನೆಯಲ್ಲಿ ಕಾಪಿಷ್ಠಕಲ್ಪದಲ್ಲಿ ಸುರನಾಗಿ ಜನಿಸಿದ ಕಥೆಯನ್ನು ಸುಂದರವಾಗಿ ವರ್ಣಿಸಲಾಗಿದೆ. ಕಾವ್ಯವು ಕಥೆಯನ್ನು ವಿವರಿಸುತ್ತಾ ಕ್ಷಿಪ್ರ ಗತಿಯಲ್ಲಿ ಸಾಗುತ್ತಿದ್ದಂತೆ ಕಲ್ಯಾಣಕೀರ್ತಿಯು ಅಲ್ಲಲ್ಲಿ ಜೈನ ತತ್ವಗಳನ್ನು ಪೋಣಿಸಿದ್ದಾನೆ. ಕಾವ್ಯಾಧ್ಯಯನದಲ್ಲಿ ಮುಂದುವರಿದಂತೆ ಮಾರ್ಗಾಯಾಸವೇ ತಿಳಿಯಲಾರದು. ಅಲ್ಲಿ ಉನ್ನತ ವ್ಯಕ್ತಿತ್ವದ ಶೃಂಗಗಳಿವೆ. ಪಾದ ಲಾಲಿತ್ಯದ ಮಂಜುಳ ನಾದವಿದೆ. ಸರಳ ಸುಂದರ ಭಾಷೆಯು ತಂಗಾಳಿಯಿದೆ.

ಕಾಮನ ಕಥೆಯು ಐದು ಸಂಧಿಗಳಿರುವ ಒಂದು ಚಿಕ್ಕ ಕಾವ್ಯ. ಇದು ಮನ್ಮಥನ ಹುಟ್ಟು ಬೆಳವಣಿಗೆಗಳನ್ನು ತಿಳಿಸುವುದಾದರೂ ಅದನ್ನು ಜೈನ ಧರ್ಮದ ಚೌಕಟ್ಟಿನಲ್ಲಿ ವಿವರಿಸಲಾಗಿದೆ. ಕೃಷ್ಣನು ರುಕುಮಿಣಿ (ರುಕ್ಮಿಣಿ)ಯನ್ನು ಮದುವೆಯಾಗಿ ಅವರಲ್ಲಿ ಕಾಮನ ಜನನವಾಗುವುದೇ ಇದರ ಕಥಾ ವಸ್ತು. ಇದು ಕಾಮನ ಕಥೆಯಾದರೂ, ಕವಿಯು ತಾನು ಗುರುದೀಕ್ಷೆಯನ್ನು ಹೊಂದಿದವನೆಂಬುದನ್ನು ಮರೆತಿರುವಂತೆ ಕಾಣುವುದಿಲ್ಲ. ಹಿತವೂ, ಮಿತವೂ ಆದ ಹಾಸ್ಯವು ಈ ಕೃತಿಗೆ ಇನ್ನಷ್ಟು ಮೆರುಗನ್ನು ಕೊಡುವುದರಲ್ಲಿ ಸಫಲವಾಗಿದೆ.

ಜಯದೇವ ಕವಿಯ ಸಂಸ್ಕೃತ 'ಫಣಿ ಕುಮಾರ ಚರಿತೆ'ಯನ್ನು ಆಧರಿಸಿಕೊಂಡು

ತಾನು ಕುಸುಮ ಷಟ್ಪದಿಯಲ್ಲಿ ನಾಗಕುಮಾರ ಚರಿತೆಯನ್ನು ಬರೆದೆನೆಂದು ಕಲ್ಯಾಣಕೀರ್ತಿಯು ಹೇಳಿರುವನಾದರೂ ಈತನು ಬಳಸಿರುವುದು ಭಾಮಿನಿ ಷಟ್ಪದಿಯಾಗಿದೆ. ಅಲ್ಲಲ್ಲಿ ಕಂದ ಪದ್ಯಗಳೂ, ವೃತ್ತಗಳೂ ಸುಳಿಯುತ್ತವೆ. ಕಥಾ ನಾಯಕನಾದ ನಾಗಕುಮಾರನು ಅನೇಕ ಭವಗಳನ್ನು ದಾಟಿ ಮೋಕ್ಷ ಪಡೆಯುವ ಕಥೆಯನ್ನು ಕವಿಯು ಹೃದಯಂಗಮವಾಗಿ ಹೇಳಿದ್ದಾನೆ.

ಚಿನ್ಮಯ ಚಿಂತಾಮಣಿ, ಆನಂದ ಕಂದಳಿ, ಅನುಪ್ರೇಕ್ಷೆ, ತತ್ವಭೇದಾಷ್ಟಕಗಳೆಂಬ ಈ ನಾಲ್ಕು ಚಿಕ್ಕ ಕೃತಿಗಳು ಜಿನತತ್ತ್ವೋಪದೇಶದ ಉದ್ದೇಶವುಳ್ಳವುಗಳು. ಕವಿಯು ತನ್ನ ಪ್ರತಿಭಾ ಶಕ್ತಿಯನ್ನು "ಜಿನಧರ್ಮಾಮೃತ ಪಾರವ ತಿಳಿಪುವ ಜಿನಕಥೆಯನ್ನು ಪರಿಚಿಸು"ವುದಕ್ಕೆ ಉಪಯೋಗಿಸಿಕೊಂಡನೇ ಹೊರತು ಧನಕನಕಾದಿಗಳನ್ನು ಗಳಿಸುವುದಕ್ಕಾಗಿ ಉಪಯೋಗಿಸಿಕೊಳ್ಳಲಿಲ್ಲ. 'ಇಲ್ಲಿ ರಚನಾ ವಿಧಾನದ ವಿಮರ್ಶೆಗಿಂತಲೂ ಅವುಗಳಲ್ಲಿ ಅಡಕವಾಗಿರುವ ಜೈನ ತತ್ವಗಳು ಮುಖ್ಯವಾದುವುಗಳು. ಜಗತಿನ ನಶ್ವರತೆ, ಜೀವವು ದಾಟಿ ಹೋಗುವ ಹಲವಾರು ಭವಬಂಧಗಳು, ಅವುಗಳಿಂದ ಪಾರಾಗಲು ಅನುಸರಿಸಬೇಕಾದ ತತ್ವ, ನೀತಿ, ಜೀವನ ವಿಧಾನಗಳನ್ನು ಕಲ್ಯಾಣಕೀರ್ತಿಯು ಬಹಳ ಸರಳವಾಗಿಯೂ, ಔಚಿತ್ಯಪೂರ್ಣವಾಗಿಯೂ ನಿರೂಪಿಸಿರುವನು. ರಚನೆಯಲ್ಲಿ ತಾಳ ಲಯಗಳು ಸ್ಪಷ್ಟವಾಗಿರುವುದರಿಂದ ಇವುಗಳನ್ನು ಸರಾಗವಾಗಿ ಹಾಡಬಹುದು.

ಈವರೆಗೆ ವಿವರಿಸಿದ ಎಲ್ಲಾ ಕಾವ್ಯಗಳನ್ನು, ಗ್ರಂಥಗಳನ್ನು, ವೈದ್ಯಶಾಸ್ತ್ರವನ್ನು ಕಲ್ಯಾಣಕೀರ್ತಿಯೇ ರಚಿಸಿರುವನೆಂದಾದರೆ ಈತನು ನಿಜವಾಗಿಯೂ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಒಬ್ಬ ಶ್ರೇಷ್ಠ ವಿದ್ವಾಂಸನೂ, ಕವಿಯೂ ಆಗುತ್ತಾನೆ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿ ಹೋದ ಕವಿಗಳ ಸಾಲಿನಲ್ಲಿ ಈತನು ಅತ್ಯುನ್ನತ ಸ್ಥಾನವನ್ನು ಏರಲು ಅರ್ಹನು ಎಂದರೂ ತಪ್ಪಾಗಲಾರದು. ಅವನ ಗ್ರಂಥಗಳ ಅಧ್ಯಯನದಿಂದ ಇದು ಸತ್ಯವೆಂದು ಕಾಣದಿರದು. ಕೇವಲ ಕೃತಿಗಳ ಸಂಖ್ಯೆಯಿಂದಲೇ ಒಬ್ಬನ ಯೋಗ್ಯತೆಯನ್ನು ನಿರ್ಧರಿಸುವುದು ಸಾಧುವಲ್ಲವೆಂಬುದು ನಿಜ. ಆದರೆ ಕಲ್ಯಾಣಕೀರ್ತಿಯ ಕೃತಿಗಳ ಮಟ್ಟವನ್ನು ತೆಗೆದುಕೊಂಡರೂ ಆತನು ಒಬ್ಬ ಮಹಾಕವಿಯೇ ಆಗಿದ್ದಾನೆ. ಕನ್ನಡ ಷಟ್ಪದಿಗಳನ್ನೂ, ಕಂದ ಪದ್ಯಗಳನ್ನೂ ಈತನು ಬಳಸಿಕೊಂಡರೂ ಅಲ್ಲಲ್ಲಿ ಸಂಸ್ಕೃತ ಭಾಷೆಯ ಮೆರುಗೂ, ನಿರೂಪಣೆಯಲ್ಲಿ ಸಹಜತೆಯೂ, ಪದಲಾಲಿತ್ಯವೂ ಕಂಡು ಬರುತ್ತದೆ. ಎಲ್ಲಿಯೂ ತನ್ನ ವಿದ್ವತ್ತನ್ನು ಪ್ರದರ್ಶಿಸಲು ಕಲ್ಯಾಣಕೀರ್ತಿಯು ಪ್ರಯತ್ನಪಟ್ಟಂತೆ ಕಂಡುಬರುವುದಿಲ್ಲ. ಪದಜೋಡಣೆಯಲ್ಲಿ ನಿರರ್ಗಳತೆ ಇದೆ, ಸೌಂದರ್ಯವಿದೆ, ನಾದ ಮಾಧುರ್ಯವಿದೆ. ತನಗೆ ಆಸಕ್ತವಾದ ವಿಷಯವನ್ನು ಬಹಳಷ್ಟು ವರ್ಣಿಸಿ ತಾನು ಮಾತ್ರ ತೃಪ್ತಿಪಟ್ಟು ಕೆರಳಿದ ಓದುಗರ ಆಸಕ್ತಿಗೆ ನೀರೆರಚುವಂತಹ ಕೆಲಸವನ್ನು ಕಲ್ಯಾಣಕೀರ್ತಿಯು ಎಲ್ಲಿಯೂ ಮಾಡಿಲ್ಲ. ಸರಳ ಮಂಜುಳ ನಿನಾದದಿಂದ ವೇಗವಾಗಿ ಹರಿಯುತ್ತಾ ಅಲ್ಲಲ್ಲಿ ಧರ್ಮೋಪದೇಶದ ತೆರೆ ನೊರೆಗಳಿಂದ ಈ ಕಾವ್ಯಪ್ರವಾಹವು ರಮಣೀಯವೂ, ಹೃದ್ಯವೂ ಆಗಿ ಶೋಭಿಸುತ್ತದೆ.

ಕಲ್ಯಾಣಕೀರ್ತಿಯು ಬಹಳ ಗಹನವಾದ ವಿಷಯವನ್ನು ಸರಳವಾಗಿಯೂ, ಸಂಕ್ಷಿಪ್ತವಾಗಿಯೂ ಹೇಳುವುದರಲ್ಲಿ ನಿಪುಣನು. ಕಾವ್ಯ ರಚನೆಯ ಸಂಪ್ರದಾಯಗಳಿಗೆ ಕಟ್ಟು ಬೀಳದೆ ತನ್ನ ಕೃತಿಗಳನ್ನು ತೀರ ಸಹಜ ನಿರೂಪಣೆಯಿಂದಲೇ ಸುಂದರಗೊಳಿಸುವುದರಲ್ಲಿ ನಿಪುಣನು. ಜನರಾಡುವ ಮಾತುಗಳನ್ನು ಉಪಯೋಗಿಸಿಕೊಂಡು ಓದುಗರನ್ನು ಬಹು ಸುಲಭವಾಗಿ ತನ್ನಡೆಗೆ ಸೆಳೆದುಕೊಳ್ಳುತ್ತಾನೆ. ಪುರಾಣ ಕತೆಗಳನ್ನು ಹೇಳುವಾಗ ಜೈನ ಧರ್ಮಕ್ಕೆ ಅನುಕೂಲವಾದ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿರುವನೇ ಹೊರತು ಕವಿಯು ಮೂಲ ಕಥೆಗಳ ಸತ್ಯವನ್ನು ಎಂದೂ ಕೈ ಬಿಟ್ಟಿಲ್ಲ.

ಕಲ್ಯಾಣಕೀರ್ತಿಯಲ್ಲಿ ಕಂಡು ಬರುವ ಇನ್ನೊಂದು ಶ್ಲಾಘ್ಯ ಗುಣವೆಂದರೆ ತನ್ನ ಕಾವ್ಯಗಳಲ್ಲಿ ಎಲ್ಲಿಯೂ ಪರಧರ್ಮ ನಿಂದೆ ಮಾಡದಿರುವುದು. ಕಥೆಗಳ ಮುಖಾಂತರ ಜೈನ ತತ್ವಗಳನ್ನು ಎತ್ತಿ ಹಿಡಿದಿದ್ದಾನೆ ಎಂಬುದು ತೀರ ನಿಜವಾದರೂ ಇತರ ಧರ್ಮಗಳನ್ನು ಅವನೆಂದಿಗೂ ಹಳಿದಿಲ್ಲ. ಜಿನ ನಿರೂಪಿತ ತತ್ವಗಳನ್ನು ನೆನೆದು ನಂಬಿದವರಿಗೆ ಮಹಾ ದುರಂತಗಳು ಎಂದೂ ಬರಲಾರವು ಎಂದು ಹೇಳಿರುವಂತೆ "ದಿವಿಜ ಪೂಜ್ಯರ ಪೂಜೆಯಿಂ, ವಿವಿಧ ಪಾವನ ನುತಿಗಳಿಂ, ನವ ನವೋಜ್ವಲ ಪುಣ್ಯದಾಸ್ರವಗಳಪ್ಪುವು ತಪ್ಪದೆ" ಎಂದು ಹೇಳಿರುವನು. ತನ್ನ ಆನಂದ ಕಂದಳಿಯಲ್ಲಿ "…..ಕವಿನುತ ಕಲ್ಯಾಣಕೀರ್ತಿ ಸೌಖ್ಯಾಸ್ಪದಮಂ ಸುವಿಧಾನದಿಂದೆ ಮೋಕ್ಷದ ಶಿವಗತಿಯಂ ಬಿಡದೆ ನೆನೆವುದೆನಗೆಂದಹುದೋ" ಎಂದು ಹೇಳಿರುವನು. ಇವೆಲ್ಲವೂ ಕಲ್ಯಾಣ ಕೀರ್ತಿಯ ಹೃದಯ ವೈಶಾಲ್ಯವನ್ನೂ, ನಿಜ ನೈತಿಕ ಜೀವನವನ್ನು, ಗೌರವಿಸುವ ಅವನ ಮನಸ್ಸನ್ನೂ, ಜೈನಧರ್ಮದಲ್ಲಿ ಅವನಿಗಿದ್ದ ಶ್ರದ್ಧೆಯನ್ನೂ ಪ್ರತಿಬಿಂಬಿಸುತ್ತದೆ.

ಅಂತೂ ಜೀವವು ಕಲ್ಯಾಣ ಹೊಂದುವ ರಾಜಮಾರ್ಗವನ್ನು ತನ್ನ ಜನ್ಮಸಿದ್ಧ ಪ್ರತಿಭಾ ಶಕ್ತಿಯ ಸಹಾಯದಿಂದ ಸ್ವಾರಸ್ಯಕರವಾಗಿ ನಿರ್ದೇಶಿಸಿರುವ ಕೀರ್ತಿಯು ಈ ಕಲ್ಯಾಣ ಕೀರ್ತಿಗೆ ಸಲ್ಲುತ್ತದೆ. ತಾನು ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯಗಳಿಗೆ ಅಮೂಲ್ಯವಾದ ಕೃತಿಗಳನ್ನು ಕೊಟ್ಟು ಸಾಹಿತ್ಯ ಲೋಕದಲ್ಲಿ ಘನವೂ, ಗಣ್ಯವೂ ಆದ ಸ್ಥಾನವನ್ನು ಈ ಮಹಾಕವಿಯು ಪಡೆದಿದ್ದಾನೆ. ಯಾವುದೋ ಒಂದು ಕಾಲದಲ್ಲಿ ಮಿಂಚಿ ಹೋದ ಈ ವಿದ್ಯುಲ್ಲತೆಯು ಒಮ್ಮೆ ಸಾಹಿತ್ಯಲೋಕವನ್ನು ಬೆಳಗಿರಬೇಕು. ಅಂದಿನ ಜನ ಈ ಪ್ರಭೆಯನ್ನು ಅನುಭವಿಸಿದರು, ಅದನ್ನು ಮೆಚ್ಚಿಕೊಂಡರು. ಆದರೆ ಅದರ ಮೇಘ ಗರ್ಜನೆ ಕೇವಲ ಗ್ರಂಥಗಳಲ್ಲಿ ಮಾತ್ರ ಉಳಿದು ಹೋಯಿತು.

ಮುಂಬೆಳಕಿನತ್ತ ಬಂಗ ಅರಸು ಮನೆತನ

ಬಂಗ ಅರಸರ ಮೂಲ

ಬಂಗ ಅರಸರ ಮೂಲದ ಕುರಿತು ಏನನ್ನೂ ನಿರ್ಧಾರಾತ್ಮಕವಾಗಿ ಹೇಳಲು ಸಾಧ್ಯವಿಲ್ಲ. ಇವರು ಮೊದಲಿನಿಂದಲೂ ಈ ಬಂಗಾಡಿಯಲ್ಲೇ ವಾಸಿಸುತ್ತಿದ್ದ ಮೂಲ ನಿವಾಸಿಗಳೇ, ಅಥವಾ ಬೇರೆ ಕಡೆಯಿಂದ ಇಲ್ಲಿಗಾಗಮಿಸಿ, ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದವರೇ -ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ನಿಜವಾಗಿಯೂ,ಇವರ ಮೂಲದ ಕುರಿತು ಸರಿಯಾದ ಮಾಹಿತಿಯನ್ನು ಒದಗಿಸುವ ಸಮಕಾಲೀನ ದಾಖಲೆಗಳಾವುವೂ ಸಿಗುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇವಲ 15ನೇ ಶತಮಾನದ ಪ್ರಾರಂಭದಿಂದ ಬರೆಯಲ್ಪಟ್ಟ ಶಾಸನಗಳಲ್ಲಿ ಮಾತ್ರ ಇವರ ಉಲ್ಲೇಖವಿದೆ. ಆದರೆ, ಅದಕ್ಕಿಂತ ಮೊದಲಿನ ಶಾಸನಗಳಲ್ಲಿ ಇವರ ಉಲ್ಲೇಖವಿಲ್ಲ, ಎಂಬ ಮಾತ್ರದಿಂದಲೇ ಇವರ ಆಳ್ವಿಕೆಯೇ ಇರಲಿಲ್ಲವೆಂದು ನಿರ್ಧರಿಸುವುದು ಸರಿಯಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸವೆಂಬ ಗ್ರಂಥದಲ್ಲಿ ಶ್ರೀ ಗಣಪತಿ ರಾವ್ ಐಗಳವರು ಕ್ರಿ. ಶ. 12ನೇ ಶತಮಾನದಿಂದಲೇ ಬಂಗರಸರು ಇಲ್ಲಿಂದ ರಾಜ್ಯವಾಳುತ್ತಿದ್ದರು ಎಂದು ತೋರಿಸಿಕೊಟ್ಟಿದ್ದಾರೆ. ಕ್ರಿ. ಶ. 1460ರ ಸುಮಾರಿಗೆ ಕಾಮಿರಾಜ ಬಂಗನ ಆಸ್ಥಾನದಲ್ಲಿದ್ದ ವಿಜಯವರ್ಣಿಯು ತನ್ನ "ಶೃಂಗಾರಾರ್ಣವ ಚಂದ್ರಿಕಾ" ಎಂಬ ಗ್ರಂಥದಲ್ಲಿ ತನ್ನ ಪ್ರಭುವಿಗಿಂತ ಮೊದಲು ಈ ಅರಮನೆಯಿಂದ ಆಳಿದ ಕೆಲವು ಅರಸರ ಕುರಿತು ಕೆಲವು ಮಾಹಿತಿಗಳನ್ನು ಒದಗಿಸಿದ್ದಾನೆ. ಹಾಗೆಯೇ ಕರ್ನಲ್ ಮೆಕೆನ್ಜಿಯಿಂದ ಬರೆಯಲ್ಪಟ್ಟ ಬಂಗಾಡಿಯ ಕೈಫಿಯತ್ತು ಕೂಡಾ ಬಂಗರು ಕ್ರಿ. ಶ. 12ನೇ ಶತಮಾನದಷ್ಟು ಪ್ರಾಚೀನ ಕಾಲದಿಂದಲೇ ಇಲ್ಲಿಂದ ಆಡಳಿತ ನಡೆಸುತ್ತಿದ್ದರೆಂಬುದಕ್ಕೆ ಪುರಾವೆಗಳನ್ನು ಒದಗಿಸುತ್ತದೆ. ಈ ಕೈಫಿಯತ್ತಿನಲ್ಲಿ ಹೇಳಿರುವಂತೆ ಬಂಗರಸರ ಮೊದಲ ಅರಸನಾದ ವೀರನರಸಿಂದ ಬಂಗನಿಗೆ ಶಾಲಿವಾಹನ ಶಕ 1079 (ಅಂದರೆ 1157ನೇ ಇಸವಿ)ನೇ ಬಹುಧಾನ್ಯ ಸಂವತ್ಸರದ ಫಾಲ್ಗುಣ ಬಹುಳ ದಶಮಿಯಂದು ಬಂಗಾಡಿಯಲ್ಲಿ ಪಟ್ಟಾಭಿಷೇಕವಾಗಿ ಆ ದಿನದಿಂದಲೇ ಅವನ ರಾಜ್ಯಭಾರವು ಪ್ರಾರಂಭವಾಯಿತು. ಮುಂದೆ ನಿರಂತರವಾಗಿ ಬಂಗರಸರು ಬಂಗಾಡಿಯಿಂದ ರಾಜ್ಯವಾಳುತ್ತಿದ್ದರು.

ಆದರೆ, ಬಂಗಾಡಿಯಿಂದ ಆಳಲು ಪ್ರಾರಂಭಿಸಿದ ಒಂದನೇ ವೀರನರಸಿಂಹ ಬಂಗನು ಯಾರು? ಅವನ ಮೂಲವು ಯಾವುದು? ಅವನು ಇಲ್ಲಿಯವನೇ? ಅಥವಾ ಬೇರೆ ಕಡೆಯಿಂದ ಇಲ್ಲಿಗೆ ಬಂದು ನೆಲೆಸಿದವನೇ? ಎಂಬ ವಿಷಯದಲ್ಲೂ ಅಷ್ಟೇ ಭಿನ್ನಾಭಿಪ್ರಾಯಗಳಿವೆ. ಈ ವರೆಗೆ ದೊರೆತ ದಾಖಲೆಗಳ ಪ್ರಕಾರ ಬಂಗರು ಇಲ್ಲಿಗೆ

ಬೇರೆ ಕಡೆಯಿಂದ ಬಂದವರೇ ಆಗಿದ್ದಾರೆ. ಶ್ರೀ ಗಣಪತಿ ರಾವ್ ಐಗಳ್ ಅವರ ಗ್ರಂಥವೂ, ಕರ್ನಲ್ ಮೆಕೆನ್ಜಿಯು ಬರೆದ ಬಂಗಾಡಿಯ ಕೈಫಿಯತ್ತೂ ಬಂಗರು ಬೇರೆ ಕಡೆಯಿಂದ ಇಲ್ಲಿಗೆ ವಲಸೆ ಬಂದವರೆಂದು ಹೇಳುತ್ತವೆ. ಡಾ| ಗುರುರಾಜ ಭಟ್ಟರು ತಮ್ಮ "ತುಳುನಾಡಿನ ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನ" ಎಂಬ ತಮ್ಮ ಗ್ರಂಥದಲ್ಲಿ ಇದೇ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಬಂಗರು ಇಲ್ಲಿಗೆ ಬೇರೆ ಕಡೆಯಿಂದ ಬಂದವರಾದರೆ, ಅವರ ಮೂಲ ಸ್ಥಾನ ಯಾವುದು? ಇಲ್ಲಿಗೆ ಬರುವುದಕ್ಕಿಂತ ಮೊದಲು ಅವರು ಎಲ್ಲಿದ್ದರು? ಎಂಬುದು ಇನ್ನೊಂದು ಪ್ರಶ್ನೆ. ಇದನ್ನು ನಿರ್ಧರಿಸುವುದು ಸ್ವಲ್ಪ ಕಷ್ಟದ ವಿಚಾರ. ಆದರೂ ವ್ಯಾಪಕ ಅಧ್ಯಯನ ಮಾಡಿ ನೋಡಿದಾಗ, ಬೆಳ್ತಂಗಡಿ ತಾಲೂಕಿನಲ್ಲಿರುವ ಬಂಗಾಡಿ ಅಥವಾ ಬಂಗವಾಡಿಯಂತೆ ಕರ್ನಾಟಕದ ಕೋಲಾರ ಜಿಲ್ಲೆಯ ಮುಳುಬಾಗಿಲು ತಾಲೂಕಿನಲ್ಲಿ ಬಂಗವಾಡಿ ಎಂಬ ಒಂದು ಊರು ಇದ್ದುದು ಕಂಡುಬರುತ್ತದೆ. ಕ್ರಿ. ಶ. 10ನೇ ಶತಮಾನಕ್ಕಿಂತ ಮೊದಲಿನ ಕಾಲದ ಶಿಲಾ ಶಾಸನವೊಂದು ಆ ಬಂಗವಾಡಿಯಲ್ಲಿ ಇರಿವನೊಳಂಬನೆಂಬೊಬ್ಬನು ಒಂದು ಕೆರೆಯನ್ನು ಕಟ್ಟಿಸಿದ ವಿಚಾರವನ್ನು ತಿಳಿಸುತ್ತದೆ. ಅದೇ ಸ್ಥಳದಲ್ಲಿ ಸಿಕ್ಕಿರುವ ಇನ್ನೊಂದು ಶಾಸನವು ಕ್ರಿ. ಶ. 950ರದ್ದಾಗಿದ್ದು ಅದು ಶ್ರೀಮತ್ ವಿಕ್ರಮಾದಿತ್ಯ ತಿರುವಯ್ಯ ಎಂಬವನು ಆಳುತ್ತಿದ್ದಾಗ ಬಂಗವಾಡಿಯ ಕೆರೆಗೆ ಧನಸಹಾಯ ಕೊಟ್ಟ ವಿಷಯವನ್ನು ಹೇಳುತ್ತದೆ. ಇದೇ ಜಿಲ್ಲೆಯ ತುರುವೇಕೆರೆ ತಾಲೂಕಿನ ಸೂಳೆಕೆರೆ ಎಂಬಲ್ಲಿ ಸಿಕ್ಕಿರುವ ಕ್ರಿ. ಶ. 1113ರ ಶಿಲಾ ಶಾಸನವು ಬಂಗವಾಡಿಯನ್ನು ಉಲ್ಲೇಖಿಸುತ್ತದೆ. ಅದರಂತೆ ಇನ್ನೊಂದು ಶಾಸನವೂ ಬಂಗವಾಡಿಯನ್ನು ಕುರಿತು ಪ್ರಸ್ತಾಪಿಸುತ್ತದೆ. ಈ ಎಲ್ಲಾ ಉಲ್ಲೇಖಗಳಿಂದ ಕ್ರಿ. ಶ. 1113ರವರೆಗೆ ಬಂಗವಾಡಿಯೆಂಬ ಊರೊಂದು ಕೋಲಾರ ಜಿಲ್ಲೆಯಲ್ಲಿ ಇತ್ತೆಂದಾಯಿತು. ಆದರೆ, ಅಲ್ಲೊಂದು ಬಂಗವಾಡಿ ಇತ್ತು, ಇಲ್ಲೊಂದು ಬಂಗವಾಡಿ ಇದೆ ಎಂಬ ಮಾತ್ರದಿಂದಲೇ ಅದಕ್ಕೂ ಇದಕ್ಕೂ ಸಂಬಂಧ ಕಲ್ಪಿಸಿ ಹೇಳುವುದು ಸರಿಯಾಗಲಾರದು. ಒಂದೇ ಹೆಸರಿನ ಊರುಗಳು ಹಲವು ಕಡೆ ಇರುತ್ತವೆ. ಎರಡನೆಯದಾಗಿ, ಬಂಗವಾಡಿ ಎಂಬ ಊರು ಅಲ್ಲಿದ್ದರೂ, ಬಂಗರು ಎಂಬ ಅರಸರು ಅಲ್ಲಿ ಇದ್ದರು ಎಂಬುದನ್ನು ಮೇಲೆ ಹೇಳಿದ ಯಾವ ಶಾಸನವೂ ಸೂಚಿಸುವುದಿಲ್ಲ. ಆದುದರಿಂದ, ಈ ಬಂಗರಸರು ಮೂಲದಲ್ಲಿ ಅಲ್ಲಿದ್ದವರು ಮತ್ತು ಅಲ್ಲಿಂದ ಇಲ್ಲಿಗೆ ಬಂದವರು ಎಂದು ಹೇಳಲು ಸಾಧ್ಯವಿಲ್ಲ. ಮೂರನೆಯದಾಗಿ, ಒಂದು ವೇಳೆ ಬಂಗರು ಅಲ್ಲಿ ಇದ್ದಿದ್ದರೆ ಅವರು ಇಷ್ಟು ದೂರಕ್ಕೆ ವಲಸೆ ಬರುವ ಕಾರಣವೇನಿರಬಹುದು? ಅಂತಹ ವಲಸೆಯು ಸಂದರ್ಭವಾದರೂ ಯಾಕೆ ಬಂದಿರಬಹುದು? ಅವರು ಅಲ್ಲಿಂದ ವಲಸೆ ಬಂದ ವಿವರಣೆಯನ್ನು ಯಾವ ದಾಖಲೆಗಳೂ ನಮಗೆ ಒದಗಿಸುವುದಿಲ್ಲ. ಆದುದರಿಂದ ಈ ಬಂಗರಸರು ಕೋಲಾರ

ಜಿಲ್ಲೆಯ ಬಂಗವಾಡಿಯಿಂದ ಇಲ್ಲಿಗೆ ಬಂದವರು ಎಂದು ಹೇಳಲು ಸಾಧ್ಯವಿಲ್ಲ.

ಆದರೆ, ಈಗಿನ ಬಂಗಾಡಿ ಅರಮನೆಯ ಸದಸ್ಯರು ತಾವು ಗಂಗನಾಡು, ವಂಗದೇಶದಿಂದ ಬಂದವರೆಂದು ಹೇಳುತ್ತಾರೆ. ಈ ಗಂಗನಾಡು ಯಾವುದು? ಗಂಗನಾಡು ಎಂಬ ಒಂದು ಊರು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಶಿರೂರಿನಿಂದ ನೇರವಾಗಿ ಪೂರ್ವಕ್ಕೆ ಸುಮಾರು 15 ಕಿ. ಮೀ. ದೂರದಲ್ಲಿದೆ. ಬಂಗ ವಂಶದವರು ಅಲ್ಲಿಂದ ಬಂದಿರಬಹುದೇ? ಎರಡನೆಯದಾಗಿ, ನಿಜವಾಗಿಯೂ ಅವರು ಹೇಳುವಂತಹ ವಂಗದೇಶವಾದರೂ ಯಾವುದು? ಬಹು ಪ್ರಾಚೀನ ಕಾಲದಿಂದಲೂ ವಂಗದೇಶವೆಂದು ಪ್ರಸಿದ್ಧವಾಗಿರುವುದು ಈಗಿನ ಬಂಗಾಳ. ಬಂಗರು ಬಂಗಾಳದಿಂದ ಬಂದಿರಬಹುದೆಂಬುದನ್ನು ಸಮರ್ಥಿಸಲು ಈಗ ಸಿಗುವ ಆಧಾರಗಳೇನೂ ಸಾಕಾಗಲಾರವು.

ಬಂಗವಾಡಿಯ ಬಂಗರು ಮತ್ತು ಮೈಸೂರು ಜಿಲ್ಲೆಯಲ್ಲಿರುವ ಗಂಗವಾಡಿಯ ಗಂಗರು* ಎಂಬ ಈ ಎರಡು ರಾಜವಂಶಗಳ ಇತಿಹಾಸವನ್ನೂ, ಪರಸ್ಪರ ಅವರೊಳಗೆ ಇರಬಹುದಾದ ಸಂಬಂಧವನ್ನೂ ನಾವು ಆಳವಾಗಿ ಅಧ್ಯಯನ ಮಾಡಿದರೆ, ಕೆಲವು ವಿಶಿಷ್ಟ ಸಂಗತಿಗಳು ತಿಳಿದುಬರುತ್ತವೆ. ಗಂಗ ಅರಸರ ಆಳ್ವಿಕೆಯ ಕಾಲದಲ್ಲಿ ಅವರ ರಾಜ್ಯವು ಕರ್ನಾಟಕ, ಉತ್ತರ ತಮಿಳುನಾಡು ಹಾಗೂ ಪಶ್ಚಿಮ ಆಂಧ್ರಪ್ರದೇಶಗಳ ಮೇಲೆ ಹರಡಿತ್ತು.

ಈ ಗಂಗರು ಕ್ರಿ. ಶ. 1004ರಲ್ಲಿ ಚೋಳರೊಡನೆ ಮಾಡಿದ ಯುದ್ಧದಲ್ಲಿ ಪೂರ್ಣವಾಗಿ ಸೋತುಹೋಗಿ ತಮ್ಮ ಅರಸೊತ್ತಿಗೆಯನ್ನು ಕಳೆದುಕೊಂಡರು. ಆದುದರಿಂದ ಪ್ರಾಧಾನ್ಯತೆಯಿಂದ ಅದೃಶ್ಯರಾದ ಗಂಗರು ಮುಂದೆ ತಲೆ ಎತ್ತಲಿಕ್ಕಾಗಿ ಸ್ಥಳವನ್ನು ಹುಡುಕುತ್ತಾ ಸಮಯವನ್ನು ಕಾಯುತ್ತಿದ್ದರು. ಕೆಲವು ದಶಕಗಳ ಬಳಿಕ, ಘಟ್ಟದಿಂದ ಇಳಿದು ಬಂದ ಈ ಗಂಗರು ಪ್ರಾಯಶಃ ತಮ್ಮ ವಂಶದ ಹೆಸರನ್ನು ಬಂಗರು

---

*ಕ್ರಿ. ಶ. 345ರಿಂದ 1004ರವರೆಗೆ ದೀರ್ಘಕಾಲದ ಆಳ್ವಿಕೆಯನ್ನು ಮಾಡಿದ ಕರ್ನಾಟಕದ ಒಂದು ಪ್ರಮುಖ ರಾಜವಂಶ ಈ ಗಂಗರು. ಇವರಲ್ಲೊಬ್ಬ ಅರಸನಾದ ದುರ್ವಿನೀತನು ಭಾರವಿ, ದಂಡಿಯಂತಹ ಮಹಾ ಕವಿಗಳಿಗೆ ಆಶ್ರಯವನ್ನು ಕೊಟ್ಟುದಲ್ಲದೆ ಸ್ವತಃ ತಾನೇ ಕವಿಯಾಗಿದ್ದನು. ಇನ್ನೊಬ್ಬ ಅರಸನಾಗಿದ್ದ ನಾಲ್ಕನೇ ರಾಚಮಲ್ಲನ ಕಾಲದಲ್ಲಿ ಅವನ ಪ್ರಧಾನಿ ಹಾಗೂ ದಂಡನಾಯಕನಾಗಿದ್ದ ಚಾಮುಂಡರಾಯನಿಂದ ಶ್ರವಣಬೆಳಗೊಳದಲ್ಲಿ ಕ್ರಿ. ಶ. 981ರಲ್ಲಿ ಶ್ರೀ ಗೋಮಟೇಶ್ವರ ಪ್ರತಿಷ್ಠಾಪನೆಯಾಯಿತು. ಚಾಮುಂಡರಾಯ, ಕೇಶಿರಾಜ, ರನ್ನ, ನಾಗಚಂದ್ರ, ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳಂತಹ ವಿದ್ವಾಂಸರಿಗೆ ಈ ರಾಜವಂಶವು ಆಶ್ರಯವನ್ನು ಕೊಟ್ಟಿತ್ತು.

ಎಂದು ಬದಲಾಯಿಸಿಕೊಂಡು ತಮ್ಮ ರಾಜ್ಯದ ಹೆಸರನ್ನು ಗಂಗವಾಡಿಯ ಬದಲು ಬಂಗವಾಡಿ ಎಂದೂ ಬದಲಾಯಿಸಿಕೊಂಡರು -ಎಂದು ಹೇಳಲು ಸಾಧ್ಯವಿದೆ. ಶತ್ರುಗಳ ಧಾಳಿಯಿಂದ ಸುರಕ್ಷಿತವಾಗಿರಲು ಅನುಕೂಲಕರವಾಗಿರುವಂತಹ, ಸುತ್ತಲಿರುವ ಪರ್ವತಗಳಿಂದ ರಕ್ಷಿಸಲ್ಪಟ್ಟಂತಹ ಹಾಗೂ ಭವ್ಯ ಸಂಪತ್ತಿನಿಂದ ತುಂಬಿದ್ದ ಈಗಿನ ಬಂಗಾಡಿಯಲ್ಲಿ ಅವರು ತಮಗೆ ಸರಿಯಾಗಿ ಸುರಕ್ಷಿತ ಸ್ಥಾನವನ್ನು ಪಡೆದಿರಬಹುದು.

ಕ್ರಿ. ಶ. 1004ರಲ್ಲಿ ಗಂಗವಾಡಿಯಲ್ಲಿ ಸೋತುಹೋದ ಗಂಗರು, ಅಲ್ಲಿ ಮತ್ತೆ ತಲೆ ಎತ್ತಿರುವುದು ನಮಗೆ ಕಂಡುಬರುವುದಿಲ್ಲ. ಪ್ರಾರಂಭದಿಂದಲೇ ಸಮರ್ಥವಾದ ಆಳ್ವಿಕೆಯನ್ನು ಹೊಂದಿದ್ದ ಬಂಗರು ಕ್ರಿ. ಶ. 1004ಕ್ಕಿಂತ ಮೊದಲು ನಮಗೆ ಇತಿಹಾಸದಲ್ಲಿ ಕಂಡುಬರುವುದಿಲ್ಲ. ಆದುದರಿಂದ, ಅಲ್ಲಿ ಅರಸೊತ್ತಿಗೆ ಕಳೆದುಕೊಂಡ ಗಂಗರು ಇಲ್ಲಿ ಬಂಗರಾಗಿ ಮತ್ತೆ ತಲೆ ಎತ್ತಿರಬಹುದು. ಗಂಗರು ಜೈನ ಮತೀಯರು. ಅದರಂತೆ ಬಂಗರೂ ಮೊದಲಿನಿಂದಲೇ ಜೈನ ಮತೀಯರಾಗಿರುವುದು ನಮಗೆ ತಿಳಿದುಬರುತ್ತದೆ. ಗಂಗರು ಶ್ರೀ ಆದೀಶ್ವರ ಸ್ವಾಮಿಯನ್ನು ತಮ್ಮ ಕುಲದೇವತೆಯನ್ನಾಗಿ ಪೂಜಿಸುತ್ತಿದ್ದರು. ಇಂದಿಗೂ ಬಂಗರ ಅರಮನೆಯಲ್ಲಿ ಈ ಆದೀಶ್ವರ ಸ್ವಾಮಿಯ ಬಸದಿಯಿದೆ. ಸರ್ವಧರ್ಮ ಪ್ರೋತ್ಸಾಹಕರಾದ ಗಂಗರು ಸೋಮನಾಥ, ಮಹಾಲಿಂಗೇಶ್ವರ, ಗಣಪತಿ ಮುಂತಾದ ಹಿಂದೂ ದೇವತೆಗಳ ಭಜಕರಾಗಿದ್ದು, ಆ ದೇವತೆಗಳಿಗೆ ತಮ್ಮ ರಾಜ್ಯಗಳಲ್ಲಿ ದೇವಸ್ಥಾನಗಳನ್ನು ಕಟ್ಟಿಸಿಕೊಟ್ಟಿದ್ದರು. ಅದರಂತೆ ಬಂಗಾಡಿಯ ಬಂಗರೂ, ಇದೇ ದೇವತೆಗಳಿಗೆ ದೇವಾಲಯಗಳನ್ನು ಕಟ್ಟಿಸಿಕೊಟ್ಟಿದ್ದರು. ಅದರಂತೆ ಬಂಗಾಡಿಯ ಬಂಗರೂ, ಇದೇ ದೇವತೆಗಳಿಗೆ ದೇವಾಲಯಗಳನ್ನು ಕಟ್ಟಿಸಿದ್ದರೆ, ಗಂಗರು ಭಾರವಿ, ದಂಡಿಯಂತಹ ಸಂಸ್ಕೃತ ಕವಿಗಳಿಗೆ ಆಶ್ರಯವನ್ನು ಕೊಟ್ಟಿದ್ದಾರೆ. ಬಂಗರೂ, ವಿಜಯವರ್ಣಿಯಂತಹ ಶ್ರೇಷ್ಠ ಕವಿಗಳಿಗೆ ತಮ್ಮ ಆಳ್ವಿಕೆಯ ಪ್ರಾರಂಭದಲ್ಲೇ ರಾಜಾಶ್ರಯವನ್ನು ಕೊಟ್ಟರು.

ಕೊನೆಯದಾಗಿ, ಬಂಗರಸರ ಮೂಲದ ಕುರಿತು ಇರುವ ಜನಜನಿತವಾದ ಹೇಳಿಕೆಯನ್ನು ಈಗ ವಿಮರ್ಶಿಸಬಹುದು. ಇದು ಶ್ರೀ ಗಣಪತಿ ರಾವ್ ಐಗಳ್ ಅವರ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ ಹಾಗೂ ಕರ್ನಲ್ ಮೆಕೆನ್ಜಿಯ ಕೈಫಿಯತ್ತಿನಲ್ಲಿ ಹೇಳಲ್ಪಟ್ಟಿದೆ. ಅದರಂತೆ ಬಂಗರು ಮೈಸೂರು ಜಿಲ್ಲೆಯಲ್ಲಿದ್ದ ಗಂಗವಾಡಿಗೆ ಸೇರಿದ್ದ ಚಿಕ್ಕದೊಂದು ರಾಜ್ಯದಿಂದ ಬಂದವರು. ಬಂಗರ ಪೂರ್ವಜರಾಗಿದ್ದ ಚಂದ್ರಶೇಖರನೆಂಬವನೊಬ್ಬನು ಗಂಗವಾಡಿಗೆ ಸೇರಿದ್ದ ಸಣ್ಣ ರಾಜ್ಯವನ್ನು ಆಳಿಕೊಂಡಿರುವಾಗ ಹೊಯ್ಸಳ ರಾಜನಾದ ವಿಷ್ಣುವರ್ಧನನು (ಕ್ರಿ. ಶ. 1108-52) ಇವನೊಡನೆ ಯುದ್ಧ ಸಾರಿದನು. ಆ ಯುದ್ಧದಲ್ಲಿ ಚಂದ್ರಶೇಖರ ರಾಜನು ಮಡಿದನು. ರಾಜ್ಯವು ಹೊಯ್ಸಳರ ವಶವಾಯಿತು. ಎಲ್ಲವನ್ನೂ ಕಳೆದುಕೊಂಡ ಚಂದ್ರಶೇಖರನ

ಪರಿವಾರದವರು ಆ ಅರಸನ ಕುಮಾರನೊಂದಿಗೆ ಮಲೆನಾಡಿನಲ್ಲಿ ಅಡಗಿಕೊಂಡಿದ್ದರು. ಮುಂದೆ ವಾಸ್ತವ್ಯಕ್ಕಾಗಿ ಸುರಕ್ಷಿತ ಸ್ಥಳವನ್ನು ಹುಡುಕುತ್ತಾ ಪಶ್ಚಿಮ ಘಟ್ಟಗಳನ್ನು ದಾಟಿ ಈ ಕಡೆಗೆ ಬಂದರು. ಸುತ್ತಲೂ ಎತ್ತರವಾದ ಘಟ್ಟಗಳಿಂದ ರಕ್ಷಿಸಲ್ಪಟ್ಟು ಮಧ್ಯದಲ್ಲಿ ವಿಶಾಲವಾಗಿ ಹರಡಿದ್ದ ಈಗಿನ ಬಂಗಾಡಿಯ ಬಯಲು ಪ್ರದೇಶಕ್ಕೆ ಬಂದು ನೆಲೆಸಿದರು. ತಮ್ಮ ಕುಲದೇವರಾದ ಸೋಮನಾಥನನ್ನೂ, ಶಾಂತೀಶ್ವರನನ್ನೂ ಪೂಜಿಸುತ್ತಾ ಮಂಜುಳನಾದದೊಂದಿಗೆ ಹರಿಯುತ್ತಿದ್ದ ನೇತ್ರಾವತಿ ನದಿಯ ಸನಿಹದಲ್ಲೇ ಸಂತೋಷದಿಂದ ಜೀವನವನ್ನು ನಡೆಸುತ್ತಿದ್ದರು.

ವಿಷ್ಣುವರ್ಧನನ ನಂತರ ಪಟ್ಟಕ್ಕೆ ಬಂದ ಅವನ ಮಗನಾದ ವೀರನರಸಿಂಹ (ಕ್ರಿ. ಶ. 1152-73)ನು ತನ್ನ ರಾಜ್ಯದ ವಿವಿಧ ಭಾಗಗಳ ಜನಜೀವನವನ್ನು ವೀಕ್ಷಿಸುತ್ತಾ ಬಂಗಾಡಿಗೆ ಬಂದನು. ಆಗ ಚಂದ್ರಶೇಖರನ ರಾಜಪರಿವಾರದವರು ಹಸುಳೆಯಾಗಿದ್ದ ರಾಜಕುಮಾರನೊಂದಿಗೆ ಸಾರ್ವಭೌಮನ ಬಳಿಗೆ ಹೋದರು. ಸರ್ವ ರಾಜ್ಯ ಲಕ್ಷಣಗಳಿಂದ ಸಂಪನ್ನನಾಗಿದ್ದ ಈ ಮಗುವನ್ನು ಆತನು ಆತ್ಮೀಯತೆಯಿಂದ ಬರಮಾಡಿಕೊಂಡು, ಆತನಿಗೆ ತನ್ನ ಹೆಸರನ್ನೇ ಇಟ್ಟು ವೀರನರಸಿಂಹ ಬಂಗರಾಜನೆಂದು ಕರೆದನು. ತನ್ನ ಸಾಮ್ರಾಜ್ಯದ ಈ ಭೂಭಾಗಕ್ಕೆ ಆತನನ್ನೇ ಒಡೆಯನನ್ನಾಗಿ ನೇಮಿಸಿದನು. ನೇತ್ರಾವತಿ ನದಿಯು ಸಮುದ್ರ ಸೇರುವವರೆಗಿನ ಪ್ರದೇಶದಲ್ಲಿದ್ದ 15 ಮಾಗಣೆಗಳನ್ನು ಆತನ ರಾಜ್ಯವನ್ನಾಗಿ ನಿರ್ಣಯಿಸಿದನು. ಅಂದು ಅವನ ರಾಜ್ಯಕ್ಕೆ ಸೇರಿದ್ದ 15 ಮಾಗಣೆಗಳು ಇವು- ಮೇಲ್ಬಂಗಾಡಿ, ಕೆಳಬಂಗಾಡಿ, ಬೆಳತಂಗಡಿ, ಮಾಯಾಬಯಲು, ಉಪ್ಪಿನಂಗಡಿ, ಪುತ್ತೂರು, ಮಾಗರ್ನಾಡು, ಮಣಿನಾಲ್ಕೂರು, ಬಾಯರ್ಕಜೆಕಾರು, ಬಂಟವಾಳ, ಕೊಡಿಯಾಲ, ಸಜಿಪ, ಹರೇಕಳ, ವರ್ಕಾಡಿ ಮತ್ತು ಮಂಜೇಶ್ವರ. ಹೊಯ್ಸಳ ವೀರನರಸಿಂಹನು ಕೊಟ್ಟಿದ್ದ ವೀರನರಸಿಂಹ ಎಂಬ ಹೆಸರನ್ನು ಮುಂದಿನ ಎಲ್ಲಾ ಬಂಗ ಅರಸರೂ ತಮ್ಮ ಹೆಸರಿನೊಂದಿಗೆ ಸೇರಿಸಿಕೊಳ್ಳುತ್ತಿದ್ದರು. ಈ ರೀತಿಯಿಂದ ಅರಸು ಕುಮಾರರನ್ನು ಬಂಗರಾಜ್ಯದ ಅಧಿಪತಿಯನ್ನಾಗಿ ನೇಮಿಸುವಾಗ ಒಬ್ಬ ಅರಸನಿಗಿರಬೇಕಾದ ಎಲ್ಲಾ ವಸ್ತುಗಳನ್ನು ಹೊಯ್ಸಳ ಸಾರ್ವಭೌಮನು ಒದಗಿಸಿಕೊಟ್ಟನು. ಬಿಳಿಯ ಪಟ್ಟದ ಕುದುರೆ, ರಣಕಹಳೆ, ಚಾಮರಗಳು, ಮುದ್ರೆಯುಂಗುರ, ಪಟ್ಟದ ಕತ್ತಿ, ಪಟ್ಟದ ಆನೆ -ಮುಂತಾದ ಸಕಲ ಸಾಹಿತ್ಯಗಳೊಂದಿಗೆ ಈ ಅರಸುಕುಮಾರನು ಕೆಳ ಬಂಗಾಡಿಗೆ ಬಂದು ಶಾಲಿವಾಹನ ಶಕ 1079 (ಕ್ರಿ. ಶ. 1157)ರಲ್ಲಿ ವಿದ್ಯುಕ್ತವಾಗಿ ಪಟ್ಟಾಭಿಷಿಕ್ತನಾಗಿ ರಾಜ್ಯವಾಳತೊಡಗಿದನು.

ಬಂಗರ ಸಂಕ್ಷಿಪ್ತ ಇತಿಹಾಸ

ಬಂಗಾಡಿಯಿಂದ ಆಳಿದ ಅರಸರ ಪೈಕಿ ವೀರನರಸಿಂಹ ಬಂಗನೇ ಮೊಟ್ಟಮೊದಲಿನ

ಅರಸ. ಹೊಯ್ಸಳ ಸಾರ್ವಭೌಮನಾದ ವಿಜಯನರಸಿಂಹನಿಂದ ರಾಜನೆಂದು ಗಣಿಸಲ್ಪಟ್ಟ ಬಳಿಕ ವೀರನರಸಿಂಹ ಬಂಗನು ಕೆಳ ಬಂಗಾಡಿಯಲ್ಲಿ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿ, ಆ ಕಾಲದಲ್ಲಿ ಹಲವಾರು ಲೋಕೋಪಯೋಗಿ ಕೆಲಸಗಳನ್ನು ಕೈಗೊಂಡನು. ತನ್ನ ರಾಜ್ಯವನ್ನು ವಿಭಾಗಿಸಿ ನಾಲ್ಕು ಜನ ಗುತ್ತಿನವರಿಗೆ ಅದರ ಆಡಳಿತೆಯನ್ನು ವಹಿಸಿಕೊಟ್ಟು ತನ್ನ ರಾಜ್ಯದಲ್ಲಿ ಆಡಳಿತವು ಸುಸೂತ್ರವಾಗಿ ನಡೆಯುವಂತೆ ಮಾಡಿದನು.

ಈತನು ಸಜೀಪ ಗ್ರಾಮದ ಮುನ್ನೂರು ಎಂಬ ಮನೆತನದ ಬ್ರಾಹ್ಮಣನೊಬ್ಬನನ್ನು ತನ್ನ ಕುಲ ಪುರೋಹಿತನನ್ನಾಗಿ ನೇಮಿಸಿಕೊಂಡನು. ಆ ಬಳಿಕ ಬಂಗಾಡಿಯ ಬಳಿಯಿರುವ ಕಿಲ್ಲೂರಿನಲ್ಲಿ ಕೊಳ್ಳಿ ದುರ್ಗಾಂಬಾ ದೇವಾಲಯವನ್ನು ಕಟ್ಟಿಸಿದನು. ಹಾಗೆ ತಾನು ಕಟ್ಟಿಸಿದ ತನ್ನ ನೂತನ ಅರಮನೆಯ ಬಳಿಯಲ್ಲೇ, ತನ್ನ ಕುಲದೇವತೆಯಾದ ಶ್ರೀ ಸೋಮನಾಥನಿಗೂ ಒಂದು ದೇವಾಲಯವನ್ನು ಕಟ್ಟಿಸಿದನು. ಅದರಂತೆ, ಮುಂದೆ ಬಂಗಾಡಿಯಲ್ಲಿ ಮಹಾಗಣಪತಿ ದೇವಾಲಯವನ್ನೂ, ವೀರಭದ್ರ ದೇವಾಲಯವನ್ನೂ ಕಟ್ಟಿಸಿದನು ಎಂದು ತಿಳಿದುಬರುತ್ತದೆ. ಬಂಗಾಡಿಯಲ್ಲಿ ಅತ್ಯಂತ ಪ್ರಾಚೀನವೂ, ವಿಶೇಷ ದೈವಿಕ ಶಕ್ತಿಯುಳ್ಳದ್ದೂ ಆಗಿರುವ ಶ್ರವಣಕುಂಡ ಮತ್ತು ಕ್ಷೇತ್ರಪಾಲನ ಸ್ಥಾನಗಳನ್ನೂ ಈತನೇ ನಿರ್ಮಿಸಿದನೆಂದು ಹೇಳಲಾಗಿದೆ.

ಈತನು ಒಂದು ಹೊಸ ರಾಜವಂಶಕ್ಕೆ ಅಗತ್ಯವೆನಿಸುವ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡನು. ಆಡಳಿತದಲ್ಲಿ ಸಮರ್ಥತೆಯು ಹೆಚ್ಚುವಂತೆ ಮಾಡುವುದಕ್ಕಾಗಿ ಸರ್ವಧರ್ಮಗಳನ್ನು ಸಮಾನವಾಗಿ ಪ್ರೋತ್ಸಾಹಿಸುವ ಉದಾತ್ತ ನೀತಿಯನ್ನು ಪ್ರಾರಂಭಿಸಿ ತನ್ನ ವಂಶದ ಮುಂದಿನವರಿಗೆ ಒಂದು ಆದರ್ಶವನ್ನು ಹಾಕಿಕೊಟ್ಟನು. ಈತನು ತನ್ನ ಧಾರ್ಮಿಕ ಕಾರ್ಯಗಳಿಗಿಂತಲೂ ಆಡಳಿತದಲ್ಲಿ ಸಮರ್ಥನೆನಿಸಿಕೊಂಡು ಸುಮಾರು ಐವತ್ತೊಂದು ವರ್ಷಗಳ ಕಾಲ ರಾಜ್ಯವನ್ನಾಳಿ ಕ್ರಿ. ಶ. 1208ರಲ್ಲಿ ಕಾಲವಾದನೆಂದು ತಿಳಿದು ಬರುತ್ತದೆ.

ಈ ರೀತಿ ಅರಮನೆ, ಅರಮನೆಯವರ ಪರಿವಾರದವರ ಮನೆಗಳು ಮತ್ತು ದೇವಾಲಯಗಳು ನಿರ್ಮಾಣಗೊಂಡಿದ್ದರಿಂದ ಬಂಗಾಡಿಯು ಅಗಲೇ ಒಂದು ಚಿಕ್ಕ ಪಟ್ಟಣವಾಗಿ ಬೆಳೆಯಿತು. ಈ ಪಟ್ಟಣಕ್ಕೆ ರಕ್ಷಣೆಯ ದೃಷ್ಟಿಯಿಂದ ಅಗತ್ಯವೆನಿಸಿದ್ದ ಒಂದು ಕೋಟೆಯನ್ನು ಈ ಪಟ್ಟಣದ ಸುತ್ತಲೂ ಕಟ್ಟಿಸಿದನು. ಅಂದಿನ ಬಂಗಾಡಿಯ ಪಟ್ಟಣವು ಈಗಿನ ಅರಮನೆಯ ವಾಯುವ್ಯ ದಿಕ್ಕಿನಲ್ಲಿ ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿದ್ದು ಇಂದಿಗೂ ಆ ಪ್ರದೇಶವನ್ನು ಕೋಟೆ ಎಂದು ಕರೆಯುತ್ತಾರೆ.

ಒಂದನೆಯ ವೀರ ನರಸಿಂಹ ಬಂಗನ ಮರಣಾನಂತರ ಅವನ ಮಗನಾದ

ಚಂದ್ರಶೇಖರನು ಕ್ರಿ. ಶ. 1208ರಲ್ಲಿ ಪಟ್ಟವೇರಿದನು. ಈತನ ಕಾಲದಲ್ಲಿ ಬಂಗರ ರಾಜ್ಯವು ಇನ್ನಷ್ಟು ವಿಸ್ತಾರವಾಗಿ ಮಂಗಳೂರಿನವರೆಗೂ ಹರಡಿತು. ಆದುದರಿಂದ ಮಂಗಳೂರಿನಲ್ಲಿರುವ ಶರವು ಶ್ರೀ ಮಹಾಗಣಪತಿ ದೇವಾಲಯದ ಬಳಿಯಲ್ಲಿ ತನ್ನ ಅರಮನೆಯನ್ನು ಕಟ್ಟಿಸಿದನು. ಆಗ ಮಂಗಳೂರಿನ ಕುಲಶೇಖರದಲ್ಲಿ ಆಲೂಪರೆಂಬ ಹಿಂದೂ ಅರಸರು ಆಳುತ್ತಿದ್ದರು. ಚಂದ್ರಶೇಖರನಿಗೆ ಅವರಿಗಿಂತ ತಾನು ಹೆಚ್ಚು ಬಲಶಾಲಿಯೂ, ಐಶ್ವರ್ಯವಂತನೂ ಆಗಬೇಕೆಂಬ ಆಸೆಯುಂಟಾಯಿತು. ಶರವು ಮಹಾಗಣಪತಿಗೆ ಹರಕೆ ಹೊತ್ತರೆ ಎಲ್ಲಾ ಅಭೀಷ್ಟಗಳು ಕೈಗೂಡುವವೆಂದು ತಿಳಿದುಬಂದುದರಿಂದ ಚಂದ್ರಶೇಖರನು ತನಗೆ ಸಂಪತ್ತನ್ನು ದಯಪಾಲಿಸಬೇಕೆಂದು ಆ ದೇವರಿಗೆ ಪ್ರಾರ್ಥಿಸಿ ಹರಕೆ ಹೊತ್ತನು. ಅದೇ ಸಮಯಕ್ಕೆ ಚೀನಾ ದೇಶದಿಂದ ಎಲ್ಲಿಗೋ ಪ್ರಯಾಣಿಸುತ್ತಿದ್ದ ಕೆಲವು ಹಡಗುಗಳು ಬಿರುಗಾಳಿಯಿಂದಾಗಿ ಮಂಗಳೂರಿನ ಬಂದರಕ್ಕೆ ಬಂದವು. ಅದರಲ್ಲಿದ್ದ ಜನರಿಗೆ ರಕ್ಷಣೆಯನ್ನು ಕೊಟ್ಟು, ಅವರಿಗೆ ಎಲ್ಲಾ ಅನುಕೂಲತೆಗಳನ್ನು ಚಂದ್ರಶೇಖರ ಬಂಗರಾಜನು ಒದಗಿಸಿಕೊಟ್ಟನು. ಇದರಿಂದ ಸಂತೋಷಗೊಂಡ ಚೀನಾ ದೇಶದ ವ್ಯಾಪಾರಿಗಳು ಇವನಿಗೆ ಕೊಟ್ಟ ಕಾಣಿಕೆಯು ಬಹು ಬೆಲೆಬಾಳುವಂತಹದ್ದಾಗಿದ್ದು, ಈತನು ಒಮ್ಮೆಯೇ ಐಶ್ವರ್ಯವಂತನಾದನು. ಇದರಿಂದಾಗಿ ಚಂದ್ರಶೇಖರನು ಶರವು ದೇವಾಲಯದ ತೆಂಕು ದಿಕ್ಕಿನ ಗೋಡೆಯ ಬದಿಯಲ್ಲಿ ಮಹಾಗಣಪತಿಯನ್ನು ಪ್ರತಿಷ್ಠಾಪಿಸಿ ದಿನ ಒಂದಕ್ಕೆ 108 ತೆಂಗಿನ ಕಾಯಿಗಳ ಗಣಹೋಮವು ನಡೆಯುವಂತೆ ಏರ್ಪಡಿಸಿ ಅದಕ್ಕೆ ಬೇಕಾದ ಉಂಬಳಿಯನ್ನು ಕೊಟ್ಟನು. ಈತನು ಐಶ್ವರ್ಯವಂತನಾದ ಕಾರಣದಿಂದ ಮುಂದೆ ಬಂಗರನ್ನು "ಹಣವಿನ ಬಂಗ"ರೆಂದು ಕರೆಯುವುದು ರೂಢಿಯಾಯಿತು.

ವ್ಯಾಪಾರ ವಹಿವಾಟುಗಳಿಗೆ ಅನುಕೂಲತೆ ಒದಗಿಸಿ ಕೊಡುವ ದೃಷ್ಟಿಯಿಂದ ಚಂದ್ರಶೇಖರ ಬಂಗರಾಜನು ಮಂಗಳೂರಿನ ಅಳಿವೆಯ ಬಾಗಿಲಲ್ಲಿ ಒಂದು ಕೋಟೆಯನ್ನು ಕಟ್ಟಿಸಿ, ಅಲ್ಲಿ ಚಿಕ್ಕದೊಂದು ಸೈನ್ಯವನ್ನು ಇರಿಸಿದನು. ಇದರಿಂದ, ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಬಳಸಲ್ಪಡುತ್ತಿದ್ದ ಸಾಮಾನು ಸರಂಜಾಮುಗಳಿಗೆ ರಕ್ಷಣೆಯೊದಗಿತು. ಈ ಬಂಗರಾಜನು ಮಂಗಳೂರಿನ ಶ್ರೀ ಮಂಗಲಾದೇವಿ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಅದಕ್ಕೆ ಉಂಬಳಿಯನ್ನು ಬಿಟ್ಟನು. ಈ ರೀತಿಯಾಗಿ ರಾಜ್ಯವನ್ನು ವಿಸ್ತರಿಸಿ, ಶರವು ಮಹಾಗಣಪತಿಯನ್ನು ಪ್ರತಿಷ್ಠಾಪಿಸಿ ವ್ಯಾಪಾರ ವಹಿವಾಟುಗಳಿಗೆ ಅನುಕೂಲತೆಯನ್ನು ಒದಗಿಸಿ ತುಂಬಾ ಐಶ್ವರ್ಯವನ್ನು ಗಳಿಸಿಕೊಂಡು ಸುಮಾರು 16 ವರ್ಷಗಳ ಕಾಲ ರಾಜ್ಯವಾಳಿ ಈತನು ಕ್ರಿ. ಶ. 1224ರಲ್ಲಿ ಕಾಲವಾದನು.

ಚಂದ್ರಶೇಖರ ಬಂಗರಾಜನಿಗೆ ಮಕ್ಕಳಿಲ್ಲದ್ದರಿಂದ ಆತನ ಬಳಿಕ ಅವನ ತಮ್ಮ ಪಾಂಡ್ಯಪ್ಪರಸ ಬಂಗರಾಜನು ರಾಜ್ಯವಾಳಿದನು. ಈತನ ಆಳ್ವಿಕೆಯ ಕುರಿತು ವಿಶೇಷ

ಮಾಹಿತಿಗಳು ನಮಗೆ ತಿಳಿದುಬರುವುದಿಲ್ಲ. ಆತನ ಬಳಿಕ ಆತನ ತಂಗಿಯಾದ ವಿಠಲದೇವಿಯೂ, ಆಕೆಯ ಅನಂತರ ಆಕೆಯ ಮಗನಾದ ಕಾಮರಾಯನು, ಅವನ ನಂತರ ಅವನ ಸೊಸೆ ಪದುಮಲ ದೇವಿಯೂ ರಾಜ್ಯವಾಳಿದರು.

ಪದುಮಲಾದೇವಿಯ ಬಳಿಕ ಆಕೆಯ ಮಗನಾದ ಒಂದನೇ ಹಾವಳಿ ಬಂಗರಾಯನು ಕ್ರಿ. ಶ. 1287ರಲ್ಲಿ ಪಟ್ಟವೇರಿದನೆಂದು ತಿಳಿದುಬರುತ್ತದೆ. ಈತನು ತನ್ನ ಆಳ್ವಿಕೆಯ ಪ್ರಾರಂಭದಲ್ಲಿ ಬೆಳ್ತಂಗಡಿಯ ಕುತ್ಯಾರಿನಲ್ಲಿರುವ ಶ್ರೀ ಸೋಮನಾಥ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ, ಅದಕ್ಕೆ ಉಂಬಳಿಯನ್ನು ಕೊಟ್ಟನು. ಅದರಂತೆ ಅಲ್ಲಿ ಒಂದು ಕೋಟೆಯನ್ನೂ ಕಟ್ಟಿಸಿದನು. ಕ್ರಮೇಣ ಬೆಳ್ತಂಗಡಿಯ ಪೇಟೆಯು ಬೆಳೆದು, ಜನಸಂಖ್ಯೆಯೂ ಹೆಚ್ಚಾಯಿತು. ಅಲ್ಲಿದ್ದ ಜೈನ ಶ್ರಾವಕರಿಗಾಗಿ ಹೊಸದಾಗಿ ಬೆಳ್ತಂಗಡಿ ಬಸದಿಯನ್ನು ಕಟ್ಟಿಸಿ ಅದಕ್ಕೆ ಉಂಬಳಿಯನ್ನೂ ಹಾವಳಿ ಬಂಗರಾಯನು ಕೊಟ್ಟನು. ಈತನು ಸುಮಾರು 36 ವರ್ಷಗಳ ಕಾಲ ರಾಜ್ಯವಾಳಿ ಕ್ರಿ. ಶ. 1323ರಲ್ಲಿ ಕಾಲವಾದನು.

ಅವನ ನಂತರ ಆಳ್ವಿಕೆಗೆ ಬಂದ ಆತನ ತಂಗಿ ಶಂಕರದೇವಿಯ ಕಾಲದಲ್ಲಿ ಆಲೂಪ ಅರಸನು ತನ್ನ ಅಧೀನದಲ್ಲಿದ್ದ ಪೇಜಾವರ, ಮುಂಡುಕೂರು, ವಾಮಂಜೂರು, ನೀರುಮಾರ್ಗ ಮುಂತಾದ 7 ಸೀಮೆಗಳನ್ನು ಶಂಕರದೇವಿಗೆ ಕೊಟ್ಟು ಆಕೆಯನ್ನು 'ಒಡೆಯ' ಎಂಬ ಬಿರುದಿನಿಂದ ಗೌರವಿಸಿಕೊಂಡನು. ಇದೇ ಸಮಯಕ್ಕೆ ಹೊಯ್ಸಳ ಬಲ್ಲಾಳರೂ ಅಧಿಕಾರದಲ್ಲಿ ಬಹು ಕ್ಷೀಣಗೊಂಡದ್ದರಿಂದ ಈಕೆಯು ಸ್ವತಂತ್ರಳಾಗಿ ಆಳತೊಡಗಿದಳು. ಈಕೆಯು ಕ್ರಿ. ಶ. 1349ರಲ್ಲಿ ತೀರಿಹೋಗಿ, ಮುಂದಿನ ಸುಮಾರು 51 ವರ್ಷಗಳ ಕಾಲ ಈಕೆಯ ಮಗನಾದ ಎರಡನೇ ಹಾವಳಿ ಬಂಗರಾಜನು ರಾಜ್ಯವಾಳಿದನೆಂದು ತಿಳಿದುಬರುತ್ತದೆ.

ಈತನ ಅನಂತರ ಕ್ರಿ. ಶ. 1400ರಲ್ಲಿ ಪಟ್ಟಕ್ಕೆ ಬಂದ ಒಂದನೇ ಲಕ್ಷ್ಮಪ್ಪರಸ ಬಂಗರಾಯನ ಕಾಲದಲ್ಲಿ ಹಲವಾರು ಪ್ರಮುಖ ಘಟನೆಗಳು ನಡೆದುವು. ಈತನ ರಾಜ್ಯದ ಮೇಲೆ, ಮುಖ್ಯವಾಗಿ ಮಂಗಳೂರಿನ ಮೇಲೆ, ನೀಲೇಶ್ವರದ ಮೂತರಾಜನು ಆಗಾಗ ಧಾಳಿಯನ್ನು ನಡೆಸುತ್ತಿದ್ದನು. ಇದರಿಂದಾಗಿ ಲಕ್ಷ್ಮಪ್ಪರಸ ಬಂಗರಾಯನು ಮೂಡುಬಿದ್ರೆಯ ಚೌಟ ಅರಸ, ಅಲ್ಲಪ್ಪಶೇಖ ಚೌಟನೊಡನೆ ಸ್ನೇಹವನ್ನು ಬೆಳೆಸಿ, ತಮ್ಮಿಬ್ಬರ ಸೈನ್ಯದ ಸಹಾಯದಿಂದ ಆ ನೀಲೇಶ್ವರದ ಅರಸನನ್ನು ಸೋಲಿಸಿದನು. ಈ ಸಹಾಯಕ್ಕಾಗಿ ಅಲ್ಲಪ್ಪಶೇಖ ಚೌಟರಾಯನಿಗೆ ಈತನು ಮಣೇಲ, ಪೇಜಾವರ, ಮುಂಡುಕೂರು ಎಂಬ ಮೂರು ಸೀಮೆಗಳನ್ನು ಬಿಟ್ಟುಕೊಟ್ಟನು.

ಮಂಗಳೂರಿನಲ್ಲಿ ಇದ್ದು ಬಂಗಾಡಿಗೂ ಮಂಗಳೂರಿಗೂ ಮಧ್ಯೆ ಇನ್ನೊಂದು ಅರಮನೆಯನ್ನು ಕಟ್ಟಬೇಕೆಂದು ಭಾವಿಸಿಕೊಂಡನು. ಹಾಗೆ ನದಿಯ ಸಮೀಪವಿದ್ದು,

ವ್ಯಾಪಾರಕ್ಕೆ ಅನುಕೂಲವಾಗಿದ್ದ ಪಾಣೆಮಂಗಳೂರಿನ ಹತ್ತಿರ ಕ್ರಿ. ಶ. 1417ನೇ ಇಸವಿಯಲ್ಲಿ ನಂದಾವರದ ಅರಮನೆಯನ್ನು ಕಟ್ಟಿಸಿದನು. ಸುಮಾರು ಇದೇ ಸಮಯಕ್ಕೆ ಪುತ್ತೂರು ಅರಮನೆಯನ್ನೂ ಕಟ್ಟಿಸಿದನು. ಮುಂದೆ ಕೆಲವು ಶತಮಾನಗಳವರೆಗೆ ನಂದಾವರವು ಬಂಗರ ಉಪರಾಜಧಾನಿಯಾಗಿ ಮೆರೆಯಿತು. ನಂದಾವರದ ಈ ಅರಮನೆಯ ಸುತ್ತಲೂ ಮಣ್ಣಿನ ಒಂದು ಕೋಟೆಯನ್ನು ಕಟ್ಟಿಸಿ, ಕೋಟೆಯ ಒಳಗಡೆಯೇ ಶಿಲಾಮಯವಾದ ವೀರಭದ್ರ ದೇವಾಲಯವನ್ನು ಕಟ್ಟಿಸಿದನು. ಇದನ್ನು ಇತ್ತೀಚೆಗಿನವರೆಗೂ ಕಾಣಬಹುದಾಗಿತ್ತು. ಅದರಂತೆ, ಆದೀಶ್ವರ ಸ್ವಾಮಿಗೆ ಒಂದು ಬಸದಿಯನ್ನೂ, ಮುಖ್ಯಪ್ರಾಣ ದೇವರಿಗೆ ಒಂದು ಗುಡಿಯನ್ನೂ, ಪಿಲಿಚಾಮುಂಡಿ ದೈವಕ್ಕೆ ಒಂದು ಸ್ಥಾನವನ್ನೂ, ಮುಸಲ್ಮಾನರಿಗೆ ಒಂದು ಮಸೀದಿಯನ್ನೂ ಬಳಿಯಲ್ಲೇ ಕಟ್ಟಿಸಿ ಅವುಗಳಿಗೆ ಉಂಬಳಿಯನ್ನು ಕೊಟ್ಟನು. ಈತನ ಕಾಲಕ್ಕಾಗುವಾಗ ಬಂಗ ಅರಸರಿಗೆ ಬಂಗಾಡಿ, ಬೆಳ್ತಂಗಡಿ, ಮಂಗಳೂರು, ನಂದಾವರ, ಪುತ್ತೂರು -ಎಂಬ ಐದು ಕಡೆಗಳಲ್ಲಿ ಅರಮನೆಗಳಿದ್ದವು. ಈತನ ಅನಂತರ ಈತನ ತಂಗಿಯಾದ ಶಂಕರ ದೇವಿಯು ಕ್ರಿ. ಶ. 1455ರಿಂದ 1491ರವರೆಗೆ ರಾಜ್ಯವಾಳಿದಳು.

ಶಂಕರ ದೇವಿಯ ತರುವಾಯ ಆಕೆಯ ಮಗನಾದ ಇಮ್ಮಡಿ ಕಾಮರಾಯನು ಕ್ರಿ. ಶ. 1491ರಲ್ಲಿ ಪಟ್ಟಕ್ಕೆ ಬಂದು ಸುಮಾರು 42 ವರ್ಷಗಳ ಕಾಲ ರಾಜ್ಯವಾಳಿದನು. ಈತನ ಕಾಲದಲ್ಲಿ ಪೋರ್ಚುಗೀಸರು ಮಂಗಳೂರಿನ ಬಂದರಿಗೆ ನಾನಾ ರೀತಿಯ ಕೀಟಲೆಗಳನ್ನು ಕೊಡುತ್ತಿದ್ದರಿಂದ ಅವರೊಂದಿಗೆ ಕೆಲವು ಒಪ್ಪಂದಗಳನ್ನು ಮಾಡಿಕೊಂಡನು. ಅದರಂತೆ ವಿಜಯನಗರದ ಚಕ್ರವರ್ತಿ ಶ್ರೀಕೃಷ್ಣದೇವರಾಯನೊಂದಿಗೂ ಒಳ್ಳೆಯ ಸಂಬಂಧವನ್ನಿಟ್ಟುಕೊಂಡಿದ್ದನು. ಈತನು 1509ರಲ್ಲಿ ಬೆಳ್ತಂಗಡಿ ಬಸದಿಯಲ್ಲಿ ಧಾರ್ಮಿಕ ಉತ್ಸವವನ್ನು ನಡೆಸಲಿಕ್ಕಾಗಿ ಭೂಮಿಯ ಉಂಬಳಿಯನ್ನು ಕೊಟ್ಟನು.

ಇಮ್ಮಡಿ ಕಾಮರಾಯ ಬಂಗನ ತರುವಾಯ ಕ್ರಿ. ಶ. 1533ರಲ್ಲಿ ನಂದಾವರದಲ್ಲಿ ಪಟ್ಟವಾದ ಮುಮ್ಮಡಿ ಹಾವಳಿ ಬಂಗರಾಯನು ನಂದಾವರದ ಗಣಪತಿಯ ದೇವಾಲಯದ ಪಶ್ಚಿಮ ದಿಕ್ಕಿಗೆ ಶಂಕರನಾರಾಯಣ ದೇವಾಲಯವನ್ನು ಕಟ್ಟಿಸಿದನು.

ಈತನ ತರುವಾಯ ಕ್ರಿ. ಶ. 1545ರಿಂದ ಆಳಿದ ಇಮ್ಮಡಿ ಲಕ್ಷ್ಮಪ್ಪರಸ ಬಂಗರಾಯನು ಮೂಡುಬಿದ್ರೆಯ ಚೌಟ ರಾಣಿಯಾದ ಅಬ್ಬಕ್ಕ ದೇವಿಯನ್ನು ಮದುವೆ ಮಾಡಿಕೊಂಡನು. ಈತನ ಆಳ್ವಿಕೆಯ ಕಾಲದಲ್ಲಿ ನಡೆದ ಒಂದು ವಿಶೇಷ ಘಟನೆಯು ಬಹಳ ಜನಜನಿತವಾಗಿದೆ. ಅದೇನೆಂದರೆ, ಯಾವುದೋ ಕಾರಣಕ್ಕಾಗಿ ವೇಣೂರಿನ ತಿಮ್ಮಣ್ಣಾಜಿಲನಿಗೂ, ಲಕ್ಷ್ಮಪ್ಪರಸ ಬಂಗನಿಗೂ ವಿವಾದ ಉಂಟಾಗಿ ಯುದ್ಧ ಸನ್ನಿಹಿತವಾಯಿತು. ಈ ಯುದ್ಧದಲ್ಲಿ ತಿಮ್ಮಣ್ಣಾಜಿಲನ ಸೇನಾಪತಿಯಾದ ಪೆರಿಂಜೆಗುತ್ತು

ದೇವಪೂಂಜನು ಬಂಗ ಸೈನ್ಯಾಧಿಪತಿಯಾದ ಮಣಿಗುತ್ತಿನ ದುಗ್ಗಣ್ಣ ಕೊಂಡೆಯನ್ನು ಕೊಂದನು. ಆದರೆ ಸ್ವಲ್ಪವೇ ಸಮಯದ ನಂತರ ದೇವಪೂಂಜನು ಬಂಗರಾಜನ ಸೇನಾಧಿಪತಿಯಾಗಿ ಸೇರಿಕೊಂಡನು.

ಇದೇ ಲಕ್ಷ್ಮಪ್ಪರಸ ಬಂಗನಿಗೆ ಬೈಲಂಗಡಿಯ ಮೂಲರ ವಂಶದ ಸೋಮಲಾದೇವಿ ಎಂಬವಳೊಡನೆ ವಿವಾಹವಾಗಿತ್ತು. ಮೊದಲಿನಿಂದಲೂ ಬಂಗರಿಗೂ, ಬೈಲಂಗಡಿಯ ಮೂಲರಿಗೂ ವೈಷಮ್ಯವಿದ್ದಂತೆ ಕಾಣುತ್ತದೆ. ಇದಕ್ಕೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. ಒಂದು ದಿನ ಬಂಗಾಡಿಯ ಬಸದಿಯಲ್ಲಿ ಅನಂತನೋಂಪಿಯ ಕಾರ್ಯಕ್ರಮ ಆಚರಿಸುತ್ತಿದ್ದಾಗ ಸೋಮಲಾದೇವಿಯು ತನಗೆ ಅರಸನಂತೆಯೇ ಬಲಬದಿಗೆ ಕುಳಿತುಕೊಳ್ಳಲು ಅವಕಾಶ ಕೊಡಬೇಕೆಂದು ಹಟಹಿಡಿದಳು. ಆದರೆ, ಲಕ್ಷ್ಮಪ್ಪರಸನು ಇದಕ್ಕೆ ಒಪ್ಪಲಿಲ್ಲ. ಇದರಿಂದ ಕುಪಿತಳಾದ ಸೋಮಲಾದೇವಿಯು ತನ್ನ ಊರಾದ ಬೈಲಂಗಡಿಗೆ ಹೋಗಿ ಇಂಥಹದೇ ಬಸದಿಯೊಂದನ್ನು ಕಟ್ಟಿಸಿ, ಅದರಲ್ಲಿ ತನ್ನ ನೋಂಪಿಯನ್ನು ಪೂರೈಸಿಕೊಂಡಳು. ಒಮ್ಮೆ ಲಕ್ಷ್ಮಪ್ಪರಸ ಬಂಗನು ತನ್ನ ಪರಿವಾರದೊಡನೆ ಬೈಲಂಗಡಿಗೆ ಹೋದಾಗ ಸೋಮಲಾದೇವಿಯು ಯಾರೋ ತನ್ನ ಅರಮನೆಯನ್ನು ಮುತ್ತಿಗೆ ಹಾಕಲು ಬರುತ್ತಿರುವರೆಂದು ಭಾವಿಸಿಕೊಂಡು ಯಾರನ್ನೂ ಅರಮನೆಯ ಮೆಟ್ಟಲನ್ನೇರಿ ಬರಲು ಬಿಡಬಾರದೆಂದೂ, ಒಂದು ವೇಳೆ ಬಲಾತ್ಕಾರದಿಂದ ಬಂದರೆ ಅವರನ್ನು ಮುಗಿಸಿಬಿಡಬೇಕೆಂದು ಆಜ್ಞೆಯನ್ನಿತ್ತು, ಕಾವಲುಗಾರರನ್ನು ಮೆಟ್ಟಲಲ್ಲೇ ನಿಲ್ಲಿಸಿದಳು. ತನ್ನ ರಾಣಿಯ ಮನೆಯೆಂದು ಭಾವಿಸಿ ಲಕ್ಷ್ಮಪ್ಪರಸನು ಒಬ್ಬನೇ ಮೆಟ್ಟಲೇರಿ ಬಂದಾಗ ಶಿರಚ್ಛೇದನಕ್ಕೆ ಒಳಗಾದನು. ಇದನ್ನು ತಿಳಿದ ಸೋಮಲಾದೇವಿಯು ದುಃಖದಿಂದ ಪ್ರಾಣತ್ಯಾಗ ಮಾಡಿಕೊಂಡಳು. ಇವರಿಬ್ಬರ ನಿಶಿಧಿಗಳನ್ನು ಈಗಲೂ ಬೈಲಂಗಡಿಯಲ್ಲಿ ಕಾಣಬಹುದು.

ಇಮ್ಮಡಿ ಲಕ್ಷ್ಮಪ್ಪರಸ ಬಂಗನ ತರುವಾಯ, ಆತನ ಅಳಿಯನಾದ ಮುಮ್ಮಡಿ ಕಾಮರಾಯನು ಕ್ರಿ. ಶ. 1556ರಲ್ಲಿ ಪಟ್ಟಕ್ಕೆ ಬಂದನು. ಈತನು ಪೋರ್ಚುಗೀಸರೊಡನೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಂಡಿದ್ದನು. ಕಾಮರಾಯನ ತಂಗಿಯಾದ ಕಾಮಲಾದೇವಿಯನ್ನು ಕಾರ್ಕಳದ ಇಮ್ಮಡಿ ಭೈರವರಾಯನಿಗೆ ಮದುವೆ ಮಾಡಿಕೊಡುವುದೆಂದು ನಿಶ್ಚಯವಾಗಿತ್ತು. ಆದರೆ ಅಷ್ಟರೊಳಗೆ ಒಂದು ಯುದ್ಧದಲ್ಲಿ ಚೌಟರ ರಾಣಿ ತಿರುಮಲಾದೇವಿಯು ಭೈರವರಾಯನಿಂದ ಕೊಲ್ಲಲ್ಪಟ್ಟ ಕಾರಣ ಆತನಿಗೆ ಬಂಗರ ಅರಮನೆಯಿಂದ ಹೆಣ್ಣು ಕೊಡಬಾರದೆಂದು ನಿರ್ಣಯವಾಯಿತು. ಇದು ತನಗಾದ ಅಪಮಾನವೆಂದು ಭಾವಿಸಿಕೊಂಡ ಭೈರವರಾಯನು ಬಂಗರ ಮೇಲೆ ಯುದ್ಧವನ್ನು ಸಾರಿದನು. ಇದರಲ್ಲಿ ಕಾಮರಾಯ ಬಂಗನು ಸೋತುಹೋದನು. ಅಧಿಕಾರವನ್ನು ಕಳೆದುಕೊಂಡು ಕಾಮರಾಯನು ತನ್ನ ಮಾವನಾದ ಲಕ್ಷ್ಮಪ್ಪರಸ ಬಂಗನ ಪತ್ನಿ ಉಳ್ಳಾಲದ

ರಾಣಿ ಅಬ್ಬಕ್ಕದೇವಿಯ ವಿರುದ್ಧವಾಗಿ ಪೋರ್ಚುಗೀಸರನ್ನು ಎತ್ತಿ ಕಟ್ಟಿ, ಅವರೊಳಗೆ ಯುದ್ಧವಾಗುವಂತೆಯೂ ಮಾಡಿದನು. ಆಗ ಅಬ್ಬಕ್ಕರಾಣಿಯು ವೀರಾವೇಶದಿಂದ ಕಾದಾಡಿ, ಪೋರ್ಚುಗೀಸರನ್ನು ಸೋಲಿಸಿ, ತನ್ನನ್ನೂ, ತನ್ನ ಜನರನ್ನೂ ರಕ್ಷಿಸಿಕೊಂಡಳು.

ಕಾಮರಾಯರಸನು ಕ್ರಿ. ಶ. 1612ರಲ್ಲಿ ತೀರಿಕೊಂಡ ಮೇಲೆ ಪಟ್ಟಕ್ಕೆ ಬಂದ ಆತನ ಅಳಿಯನಾದ ಮುಮ್ಮಡಿ ಲಕ್ಷ್ಮಪ್ಪರಸ ಬಂಗರಾಯನು ಪೋರ್ಚುಗೀಸರೊಡನೆ ಹೆಚ್ಚು ಸ್ನೇಹವನ್ನು ಬೆಳೆಸಿಕೊಂಡು, ಇಕ್ಕೇರಿಯ ನಾಯಕರ ವಿರೋಧವನ್ನು ಕಟ್ಟಿಕೊಳ್ಳಬೇಕಾಯಿತು. ಇದರಿಂದಾಗಿ ಕೆಳದಿಯ ವೆಂಕಟಪ್ಪ ನಾಯಕನು ಬಂಗರ ರಾಜ್ಯದ ಮೇಲೆ ಧಾಳಿಯನ್ನು ನಡೆಸಿ, ಬಂಗರನ್ನು ಸೋಲಿಸಿದನು. ಅದರಂತೆ, ಬಂಗರಸನು 3500 ವರಹಗಳ ಕಪ್ಪವನ್ನು ಕೊಡಬೇಕೆಂದೂ ವಿಧಿಸಿದನು.

ಈ ಲಕ್ಷ್ಮಪ್ಪರಸ ಬಂಗನ ತರುವಾಯ, ಆತನ ಅಳಿಯನಾದ ನಾಲ್ಮಡಿ ಹಾವಳಿ ಬಂಗರಾಜ ಒಡೆಯನು ಕ್ರಿ. ಶ. 1628ರಲ್ಲಿ ಪಟ್ಟಕ್ಕೆ ಬಂದನು. ಇಕ್ಕೇರಿಯ ಅರಸರು ವಿಧಿಸಿದ ಕಪ್ಪವನ್ನು ಕೊಡದಿದ್ದುದರಿಂದ ಇಕ್ಕೇರಿಯ ಅರಸ ಶಿವಪ್ಪ ನಾಯಕನು ಬಂಗರಾಜ ಒಡೆಯನನ್ನು ಸೆರೆ ಹಿಡಿದು ಇಕ್ಕೇರಿಗೆ ಕೊಂಡೊಯ್ದನು.

ಆಗ ಬಂಟವಾಳದ ದಾಮರ್ಸ ಪೈಯೆಂಬವನು ಆ ಕಪ್ಪದ ಮೊತ್ತವನ್ನು ಇಕ್ಕೇರಿಯ ಅರಸನಿಗೆ ಕೊಟ್ಟು, ಅವನನ್ನು ಸೆರೆ ಬಿಡಿಸಿಕೊಂಡು ಬಂದನು. ಆ ಬಳಿಕ ಬಂಗರಾಜ ಒಡೆಯನು ಬಂಟವಾಳದ ದೇವಾಲಯಕ್ಕೆ ಉಂಬಳಿಯನ್ನು ಕೊಟ್ಟನೆಂದು ತಿಳಿದು ಬರುತ್ತದೆ.

ಈ ಹಾವಳಿ ಬಂಗರಾಜ ಒಡೆಯನ ನಂತರ, ಆತನ ತಂಗಿ ಶಂಕರ ದೇವಿಯು ರಾಜ್ಯವಾಳತೊಡಗಿದಳು. ಈಕೆಯ ಆಳ್ವಿಕೆಯ ಕಾಲದಲ್ಲಿ ಬಂಗರ ಕೈಯಿಂದ ಮಂಗಳೂರು ತಪ್ಪಿಹೋಗಿ, ಅದು ಇಕ್ಕೇರಿಯ ಅರಸರ ನೇರ ಆಡಳಿತಕ್ಕೆ ಒಳಗಾಯಿತು. ಅದರಂತೆ ಬಂಗರಸರು ಬಂಗಾಡಿಯಲ್ಲದೆ ಇತರ ಕಡೆಗಳಲ್ಲಿ ಅರಮನೆಗಳನ್ನೂ, ಕೋಟೆಗಳನ್ನೂ ಹೊಂದಿರಬಾರದೆಂದು ಬಲಾತ್ಕರಿಸಲಾಯಿತು. ಆದರೆ ನಂದಾವರದಲ್ಲಿದ್ದ ಕೋಟೆಯು ಬಂಗರ ಕೈತಪ್ಪಿ ಹೋಗಲಿಲ್ಲ.

ಶಂಕರ ದೇವಿಯ ಬಳಿಕ ಐದನೇ ಹಾವಳಿ ಬಂಗರಾಯನೂ, ಅನಂತರ ನಾಲ್ಮಡಿ ಲಕ್ಷ್ಮಪ್ಪರಸ ಬಂಗರಾಜನೂ ರಾಜ್ಯವಾಳಿದರು. ಈ ನಾಲ್ಮಡಿ ಲಕ್ಷ್ಮಪ್ಪರಸನ ಕಾಲದಲ್ಲಿ (ಕ್ರಿ. ಶ. 1699-1767) ಹೈದರಾಲಿಯು ಇಕ್ಕೇರಿ ಅರಸರ ರಾಜಧಾನಿಯಾಗಿದ್ದ ಬಿದನೂರನ್ನು 1763ರಲ್ಲಿ ಗೆದ್ದುಕೊಂಡು, ಬಂಗರ ರಾಜ್ಯವಾದ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗಕ್ಕೆ ಬಂದನು. ಆಗ ಬಂಗರಾಜನು ಅವನನ್ನು ರಾಜೋಚಿತ ಗೌರವಗಳೊಂದಿಗೆ ಬರಮಾಡಿಕೊಂಡು ಸತ್ಕರಿಸಿದನು. ಆದರೆ ಹೈದರನು ನೇಮಿಸಿದ್ದ

ಮಂಗಳೂರಿನ ಶೇಕಾಲಿಯೆಂಬ ಅಧಿಕಾರಿಯು ಬಂಗರಸನಿಗೆ ಬಹುರೀತಿಯಲ್ಲಿ ಉಪಟಳವನ್ನು ಕೊಡುತ್ತಿದ್ದನು. ಇದರಿಂದ ಉಂಟಾದ ದುಃಖದಿಂದಲೇ ನಾಲ್ಕ್ಮಡಿ ಲಕ್ಷ್ಮಪ್ಪರಸ ಬಂಗರಾಜನು ಕ್ರಿ. ಶ. 1767ರಲ್ಲಿ ತೀರಿಕೊಂಡನು.

ಆ ಬಳಿಕ ನಾಲ್ಕ್ಮಡಿ ಕಾಮಪ್ಪರಸ ಬಂಗರಾಯನು ಬಹು ಶ್ರದ್ಧೆಯಿಂದ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿದಾಗ, ಹೈದರಾಲಿಯು ನೇಮಿಸಿದ್ದ ಮಂಗಳೂರಿನ ಅಧಿಕಾರಿಯೂ ಆತನಿಗೆ ಉಪಟಳ ಕೊಡುತ್ತಿದ್ದುದಲ್ಲದೆ, ನಂದಾವರದ ಅರಮನೆಯನ್ನು ಸುಲಿಗೆ ಮಾಡಿದನು. ಅನಂತರ ಕಾಮಪ್ಪರಸನನ್ನು ಬೆಳ್ತಂಗಡಿಯ ಜಮಲಾಬಾದ್ ಕೋಟೆಯಲ್ಲಿ ಗಲ್ಲಿಗೇರಿಸಿದರು. ಇದೇ ಸಮಯದಲ್ಲಿ ಕೊಡಗಿನ ಅರಸನ ಕಡೆಯವನಾದ ಗೋಪ ಗೌಡನು ನಂದಾವರದ ಅರಮನೆಯನ್ನು ಲೂಟಿ ಮಾಡಿ ಕೊನೆಗೆ ಅದನ್ನು ಸುಟ್ಟು ಹಾಕಿದನು.

ಕ್ರಿ. ಶ. 1799ರ ಮೇ ತಿಂಗಳಲ್ಲಿ ಟಿಪ್ಪು ಸುಲ್ತಾನನು ಬ್ರಿಟಿಷರ ಕೈಯಿಂದ ನಾಲ್ಕನೇ ಮೈಸೂರು ಯುದ್ಧದಲ್ಲಿ ಮಡಿದುದರಿಂದ ದಕ್ಷಿಣ ಕನ್ನಡ ಜಿಲ್ಲೆಯೂ ಬ್ರಿಟಿಷರ ವಶವಾಯಿತು. ಇಲ್ಲಿಯ ಜನರನ್ನು ಒಲಿಸಿಕೊಳ್ಳುವುದಕ್ಕಾಗಿ, 1800ನೇ ಇಸವಿಯಲ್ಲಿ ನಂದಾವರದ ಹೊಸ ಅರಮನೆಯಲ್ಲಿ 5ನೇ ಲಕ್ಷ್ಮಪ್ಪರಸ ಬಂಗನಿಗೆ ಬಹಳ ವೈಭವದಿಂದ ಬ್ರಿಟಿಷರು ಪಟ್ಟಕಟ್ಟಿದರು. ಮುಂದೆ ಕೆಲವು ವರ್ಷಗಳ ವರೆಗೆ ಈ ಬಂಗರಾಜನು ಬಹು ಶಾಂತಿಯಿಂದ ರಾಜ್ಯವಾಳಿದನು. ಆದರೆ ಆ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದು ಲಕ್ಷ್ಮಪ್ಪರಸ ಬಂಗನು ಅದಕ್ಕೆ ಬೆಂಬಲವನ್ನು ಕೊಡಬೇಕಾಯಿತು. ಕ್ರಿ. ಶ. 1837ರಲ್ಲಿ ಕೊಡಗಿನಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಇಳಿದು ಬಂದ ಕಲ್ಯಾಣಪ್ಪನ ದಂಗೆ (ಕಾಟಕಾಯಿ)ಯು ನಂದಾವರಕ್ಕೆ ಬಂದಾಗ ಈ ಬಂಗರಾಯನು ಅದನ್ನು ಸೇರಿಕೊಂಡನು. ಈ ದಂಗೆಯು ತೀವ್ರ ರೂಪವನ್ನು ತಾಳಿದಾಗ ಬ್ರಿಟಿಷರು ಕಲ್ಯಾಣಪ್ಪನನ್ನೂ, ಲಕ್ಷ್ಮಪ್ಪರಸ ಬಂಗರಾಯನನ್ನೂ ಸೆರೆಹಿಡಿದು ಮಂಗಳೂರಿನ ಬಿಕ್ರನಕಟ್ಟೆಯಲ್ಲಿ ಕ್ರಿ. ಶ. 1838ರಲ್ಲಿ ಶಿರಚ್ಛೇದನ ಮಾಡಿದರು. ಆಗ ಬ್ರಿಟಿಷರು ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಮೇಲೆ ಅಧಿಕಾರವನ್ನು ಹೊಂದಿದ್ದರಿಂದ ಬಂಗರು ಮತ್ತೆ ಅರಸು ಮನೆತನದವರಾಗಿ ಮೊದಲಿನಂತೆ ಮುಂದುವರಿಯಲಿಲ್ಲ.

ಈ ಲಕ್ಷ್ಮಪ್ಪರಸ ಬಂಗರಾಯನ ತರುವಾಯ, ಐದನೇ ಕಾಮರಾಯ ಬಂಗ ಮತ್ತು ಲಕ್ಷ್ಮಪ್ಪರಸ ಪದ್ಮರಾಜ ಬಂಗರೆಂಬವರು ನಂದಾವರದ ಅರಮನೆಯಿಂದ ರಾಜ್ಯವಾಳಿದರು. ಲಕ್ಷ್ಮಪ್ಪರಸ ಪದ್ಮರಾಜ ಬಂಗನು ಬಂಗಾಡಿಯ ಶ್ರೀ ಶಾಂತೀಶ್ವರ ಸ್ವಾಮಿಯ ಬಸದಿಯನ್ನು ಪೂರ್ಣವಾಗಿ ಜೀರ್ಣೋದ್ಧಾರ ಮಾಡಿ ಈಗಿನ ಬಂಗಾಡಿ ಅರಮನೆಯನ್ನು 1901ನೇ ಇಸವಿಯಲ್ಲಿ ಕಟ್ಟಿಸಿದನು. ಇವನ ಅನಂತರ ಈ ವಂಶದಲ್ಲಿ ಹುಟ್ಟಿದವರೇ, ಐದನೇ ಕಾಮರಾಯ ಬಂಗನ ತಮ್ಮ ಪಟ್ಟಾಭಿಷಿಕ್ತನಾಗದಿದ್ದ ಶಾಂತಿರಾಜ

ಬಲ್ಲಾಳ, (ಪಟ್ಟಾಭಿಷೇಕವಾಗದಿರುವ ಬಂಗ ಅರಸರನ್ನು ಬಲ್ಲಾಳ ಎಂದು ಕರೆಯುವುದು ರೂಢಿ) ಅವನ ಮಗ ದೇವರಾಜ ಬಲ್ಲಾಳ ಮತ್ತು ಅವರ ಮಗ ಈಗಿನ ಬಂಗಾಡಿ ಅರಮನೆಯಲ್ಲಿರುವ ಶ್ರೀಯುತ ರವಿರಾಜ ಬಲ್ಲಾಳರು.

ಇತರ ಅರಮನೆಗಳೊಡನೆ ಬಂಗರಸರು ಇಟ್ಟುಕೊಂಡಿದ್ದ ಸಂಬಂಧ

ಈಗಿನ ಬೆಳ್ತಂಗಡಿ, ಪುತ್ತೂರು, ಬಂಟ್ವಾಳ, ಮಂಗಳೂರು ತಾಲೂಕುಗಳು ಮತ್ತು ಕಾರ್ಕಳ ತಾಲೂಕಿನ ಕೆಲವು ಭಾಗಗಳ ಮೇಲೆ ತಮ್ಮ ರಾಜಕೀಯ ಅಧಿಕಾರವನ್ನು ಹೊಂದಿದ್ದ ಬಂಗರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಭಾವಶಾಲಿ ಅರಸು ಮನೆತನದವರಾಗಿದ್ದರು. ಶಾಂತಿ ಸೌಹಾರ್ದಗಳ ಸದುದ್ದೇಶದಿಂದ ಈ ಜಿಲ್ಲೆಯ ಹಲವು ರಾಜ ಮನೆತನಗಳೊಡನೆ ಇವರು ವೈವಾಹಿಕ ಸಂಬಂಧವನ್ನು ಹೊಂದಿದ್ದರು. ಅದರಂತೆ ಕೆಲವು ರಾಜಕೀಯ, ಶಾಂತಿ ಒಪ್ಪಂದಗಳನ್ನೂ ಮಾಡಿಕೊಂಡಿದ್ದರು. ವಿಜಯನಗರದ ಚಕ್ರವರ್ತಿಗಳು ಹಾಗೂ ಅವರು ನೇಮಿಸಿದ್ದ ಮಂಗಳೂರಿನ ರಾಜ್ಯಪಾಲರುಗಳೊಡನೆ ಇವರು ಸೌಹಾರ್ದಯುತ ಸಂಬಂಧವನ್ನು ಇರಿಸಿಕೊಂಡಿದ್ದರಿಂದ, ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ ವರ್ತುಲದಲ್ಲಿ ಇವರು ತಮ್ಮ ಸ್ಥಾನ ಗೌರವವನ್ನು ಹೆಚ್ಚಿಸಿಕೊಂಡಿದ್ದರು.

ಕ್ರಿ. ಶ. 1484ರಿಂದ ಬಂಗಾಡಿಯಿಂದ ಆಳುತ್ತಿದ್ದ ಒಂದನೇ ಲಕ್ಷ್ಮಪ್ಪರಸ ಬಂಗನು "ಭೈರರಸ" ಎಂಬ ಒಂದು ವಿಶಿಷ್ಟ ಬಿರುದನ್ನು ಹೊಂದಿದ್ದುದು ನಮಗೆ ಒಂದು ಶಾಸನದಿಂದ ತಿಳಿದುಬರುತ್ತದೆ. ಇದು ಕಾರ್ಕಳದ ಭೈರರಸನನ್ನು ತಾನು ಸೋಲಿಸಿದ್ದರಿಂದ ಇಟ್ಟುಕೊಂಡಿರುವ ಬಿರುದಾಗಿರಬೇಕು. ಕಾರ್ಕಳದ ಅರಸನನ್ನು ಸೋಲಿಸಿದ ನಂತರ ಈ ಎರಡೂ ರಾಜಮನೆತನಗಳೊಳಗೆ ವೈವಾಹಿಕ ಸಂಬಂಧವೇರ್ಪಟ್ಟಿರಬೇಕೆಂದು ಡಾ| ಗುರುರಾಜ ಭಟ್ಟರು ಹೇಳಿದ್ದಾರೆ. ಇದರಿಂದ ಬಂಗರ ಸೈನಿಕ ಶಕ್ತಿಯ ಅರಿವು ನಮಗಾಗುತ್ತದೆ.

ಇನ್ನೊಂದು ವಿಶಿಷ್ಟ ಸಂಗತಿಯೆಂದರೆ, ಕಾರ್ಕಳದ ಅರಸರಲ್ಲಿ ಅತ್ಯಂತ ಪ್ರಸಿದ್ಧನಾದ ಇಮ್ಮಡಿ ಭೈರವೇಂದ್ರನು ತನ್ನ ಕ್ರಿ. ಶ. 1586ರ ಕಾರ್ಕಳದ ಚತುರ್ಮುಖ ಬಸದಿಯಲ್ಲಿರುವ ಒಂದು ಶಾಸನದಲ್ಲಿ ತಾನು ವೀರನರಸಿಂಹ ಬಂಗ ಮತ್ತು ಗುಮ್ಮಟಾಂಬಿಕೆಯರ ಮಗನೆಂದು ಹೇಳಿಕೊಂಡಿದ್ದಾನೆ. ಅಳಿಯ ಸಂತಾನ ಪದ್ಧತಿಯಂತೆ, ಬಂಗರ ಅರಮನೆಯ ರಾಜಕುಮಾರನಾದ ಇಮ್ಮಡಿ ಭೈರವೇಂದ್ರನ ತಂದೆಯಾದ ವೀರನರಸಿಂಹ ಬಂಗನು ಮೇಲೆ ಹೇಳಿದ ಒಂದನೇ ಲಕ್ಷ್ಮಪ್ಪರಸ ಬಂಗನ ಅಳಿಯನಾಗಿರಬೇಕು.

ಬಂಗರಸರ ಮತ್ತು ಪುತ್ತಿಗೆಯ ಚೌಟರ ಸಂಬಂಧವು ಎಲ್ಲಾ ಕಾಲದಲ್ಲಿಯೂ ಸೌಹಾರ್ದಯುತವಾಗಿತ್ತೆಂದು ಹೇಳಬರುವುದಿಲ್ಲ. ಈ ಲೇಖಕನು 6-5-1984ರಂದು

"ಉದಯವಾಣಿ"ಯಲ್ಲಿ ಪ್ರಕಾಶನಗೊಳಿಸಿದ ಅಲ್ಲಪ್ಪಶೇಖ ಚೌಟನ ಮೂಡುಬಿದ್ರೆಯ ತಾಮ್ರಶಾಸನದಲ್ಲಿ ಚೌಟ ಅರಸನಾಗಿದ್ದ ಅಲ್ಲಪ್ಪ ಶೇಖ ಚೌಟನು ಬಂಗರಸ ಕಾಮರಾಯನೊಡನೆ ಕ್ರಿ. ಶ. 1467ರಲ್ಲಿ ಒಂದು ಶಾಂತಿ ಒಪ್ಪಂದವನ್ನು ಮಾಡಿಕೊಂಡಿರುವುದು ತಿಳಿದುಬರುತ್ತದೆ. ಹಿಂದೊಮ್ಮೆ ಅವರೊಳಗೆ ನಡೆದಿದ್ದ ಒಂದು ಅಹಿತಕರ ಘಟನೆಯ ಸಂದರ್ಭದಲ್ಲಿ ಅವರು ಪರಸ್ಪರ ವಿಚಾರ ವಿನಿಮಯವನ್ನು ನಡೆಸಿಕೊಂಡು ಆ ಮೂಲಕ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಂಡಿದ್ದರು. ಇನ್ನು ಮುಂದೆ ತಾನು ಬಂಗರ ರಾಜ್ಯಕ್ಕೆ ಸೇರಿದ್ದ ದತ್ತಮಂಗಲ, ಅಮ್ಮೆಂಬಳ, ಹರಿಯಕಳ, ಉಳ್ಳಾಲ, ಮಂಜೇಶ್ವರ, ಉದ್ಯಾವರ, ಅರ್ಕುಳ ಇತ್ಯಾದಿ ಸ್ಥಳಗಳ ಮೇಲೆ ತಾನು ಅತಿಕ್ರಮಣ ಮಾಡಿಸುವುದಿಲ್ಲವೆಂದೂ, ಅಲ್ಲಿಯ ಜನರಿಗೆ ಯಾವುದೇ ಉಪದ್ರವವನ್ನು ಕೊಡುವುದಿಲ್ಲವೆಂದೂ ಮಾತುಕೊಟ್ಟು ಅಲ್ಲಪ್ಪಶೇಖ ಚೌಟನು ಈ ಒಪ್ಪಂದವನ್ನು ಮಾಡಿಕೊಂಡಿದ್ದನು. ಇದಕ್ಕೆ ಪುತ್ತಿಗೆಯ ಸೋಮನಾಥ, ಕುತ್ಯಾರಿನ ಸೋಮನಾಥ, ಕಡೆಶಿವಾಲ್ಯದ ನಾರಸಿಂಹ ಮುಂತಾದ ದೇವರುಗಳ ಸಾಕ್ಷಿಯನ್ನಿಟ್ಟಿದ್ದನು. ಈ ಒಪ್ಪಂದದ ಒಕ್ಕಣೆಗಳನ್ನು ಓದಿದರೆ, ಬಂಗರಸರು ಬಹಳ ಪ್ರಬಲರಾಗಿಯೂ, ಪ್ರಭಾವಶಾಲಿಗಳಾಗಿಯೂ ಇದ್ದರೆಂದು ಅರ್ಥವಾಗುತ್ತದೆ.

ಇದರಂತೆ, ವೀರನರಸಿಂಹ ಬಂಗನೂ, ಪುತ್ತಿಗೆಯ ಅರಸ ತಿರುಮಲರಸ ಚೌಟನೂ ಕ್ರಿ. ಶ. 1528ರಲ್ಲಿ ಇನ್ನೊಂದು ಒಪ್ಪಂದವನ್ನು ಮಾಡಿಕೊಂಡದ್ದು ನಮಗೆ ಇನ್ನೊಂದು ಶಾಸನದಿಂದ ತಿಳಿದು ಬರುತ್ತದೆ. ಈ ಶಾಸನದಲ್ಲಿ ಹೇಳಿರುವಂತೆ ಚೌಟರಿಗೂ, ಬಂಗರಿಗೂ ಉಂಟಾಗಿದ್ದ ಒಂದು ವಿವಾದವನ್ನು ವಿಜಯನಗರದ ಅಧಿಕಾರಿಯಾಗಿದ್ದ ಕೃಷ್ಣಾನಂದ ಒಡೆಯನೆಂಬವನ ಶಿಷ್ಯನಾಗಿದ್ದ ವೇದಾಂತ ಒಡೆಯನ ಮಧ್ಯಸ್ಥಿಕೆಯಲ್ಲಿ ಪರಿಹರಿಸಿಕೊಂಡು, ಈ ಒಪ್ಪಂದವನ್ನು ಮಾಡಲಾಗಿತ್ತು. ಇದರಲ್ಲಿ ಈ ಎರಡು ಅರಸುಮನೆತನಗಳಿಗೆ ಸಂಬಂಧಪಟ್ಟ ಸೀಮೆಗಳನ್ನು ಸರಿಯಾಗಿ ತಿಳಿಸಿ, ಮುಂದೆ ಅವರೊಳಗೆ ಈ ಕುರಿತಾದ ವಿವಾದಗಳು ಉಂಟಾಗದಂತೆ ಮಾಡಲಾಗಿತ್ತು. ಆದರೆ, ಚೌಟರ ಸೀಮೆಯೂ, ಬಂಗರ ಭೂಮಿಯೂ, ನೆರೆಹೊರೆಯಲ್ಲಿ ಇದ್ದುದರಿಂದ ಈ ರೀತಿಯ ವೈಮನಸ್ಸುಗಳೂ, ತಿಕ್ಕಾಟಗಳೂ ಸರ್ವೇಸಾಮಾನ್ಯವಾಗಿದ್ದವೆಂದು ತಿಳಿಯುತ್ತದೆ.

ಬಂಗರಸರು ತಮ್ಮ ರಾಜ್ಯದ ಆಗ್ನೇಯ ಭಾಗದಲ್ಲಿ ಪಶ್ಚಿಮ ಘಟ್ಟದವರೆಗಿನ ಪ್ರದೇಶವನ್ನು ಆಳುತ್ತಿದ್ದ, ಬೈಲಂಗಡಿಯ ಮೂಲರೊಡನೆ ವೈವಾಹಿಕ ಸಂಬಂಧವನ್ನು ಹೊಂದಿದ್ದರು. ಆದರೂ ಈ ಸಂಬಂಧವು ಯುದ್ಧ ಹಾಗೂ ವಿರೋಧವನ್ನು ಕಡಿಮೆ ಮಾಡಿಕೊಂಡು, ಶಾಂತಿಯಿಂದ ಇರುವುದಕ್ಕಾಗಿ ಮಾಡಿಕೊಂಡದ್ದೆಂದು ಕಾಣುತ್ತದೆ. ಎರಡನೇ ಲಕ್ಷ್ಮಪ್ಪರಸ ಬಂಗನು ಬೈಲಂಗಡಿಯ ಮೂಲರ ವಂಶಕ್ಕೆ ಸೇರಿದ ರಾಜಕುಮಾರಿ ಸೋಮಲಾದೇವಿಯನ್ನು ಮದುವೆಯಾಗಿದ್ದನು. ಆದರೆ ಇವರ ದಾಂಪತ್ಯವು

ಸುಖಕರವಾಗಿರಲಿಲ್ಲ. ಪತ್ನಿಯಾದ ಸೋಮಲಾದೇವಿಯು ಪತಿಯನ್ನು ಧಿಕ್ಕರಿಸಿ ತನ್ನ ಊರಿಗೆ ಬಂದು, ತಾನು ಸ್ವತಂತ್ರವಾಗಿ ಬಸದಿಯೊಂದನ್ನು ಕಟ್ಟಿಸಿ, ಕೊನೆಗೆ ಕ್ರಿ. ಶ. 1556ರಲ್ಲಿ ಆತನ ಹತ್ಯೆಗೆ ಕಾರಣಳಾದಳು. ಆದರೆ ಪಶ್ಚಾತ್ತಾಪ ಪಟ್ಟು ಮುಂದೆ ತಾನೇ ಪ್ರಾಣತ್ಯಾಗ ಮಾಡಿಕೊಂಡಳು. ಈ ರೀತಿಯಾಗಿ ಪ್ರಾರಂಭದಲ್ಲಿ ಈ ಎರಡು ಮನೆತನಗಳೊಡನೆ ವೈಷಮ್ಯವಿದ್ದುದಾಗಿ ತಿಳಿದು ಬರುತ್ತದೆ.

ಬೈಲಂಗಡಿಯಲ್ಲಿರುವ ಶ್ರೀ ಪಾರ್ಶ್ವನಾಥ ಸ್ವಾಮಿ ಬಸದಿಯ ಭದ್ರ ಮಂಟಪದ ಕಂಬದ ಮೇಲಿರುವ ಶಾಸನವು ಬಂಗರಿಗೂ ಮೂಲರಿಗೂ ಇದ್ದ ಒಳ್ಳೆಯ ಸಂಬಂಧಕ್ಕೆ ಸಾಕ್ಷಿಯಾಗಿದೆ. ಈ ಶಾಸನದಲ್ಲಿ ಹೇಳಿರುವಂತೆ, ಕ್ರಿ. ಶ. 1611ರಲ್ಲಿ ವೀರನರಸಿಂಹ ಲಕ್ಷ್ಮಪ್ಪರಸ ಬಂಗನೂ, ಆತನ ಪತ್ನಿಯೂ ಬಂಗಾಡಿಯಲ್ಲಿ ಸುಖ ಶಾಂತಿಗಳಿಂದ ರಾಜ್ಯವಾಳುತ್ತಿದ್ದರು. ಆಗ ಹಿಂದಿನ ಪ್ರಧಾನಿಯಾಗಿದ್ದ ಕೃಷ್ಣಸೇನ ಬೋವನ ಮಗನಾದ ಈಶ್ವರ ಸೇನಬೋವನು ಈ ರಾಜದಂಪತಿಗಳಿಗೆ ಶಾಶ್ವತವಾದ ಕೀರ್ತಿ ಪುಣ್ಯಗಳು ಸಂಪಾದನೆಯಾಗಬೇಕೆಂದು, ಬೈಲಂಗಡಿ ಬಸದಿಯಲ್ಲಿ ದೋಷನಿವಾರಣೆ ಮಾಡಿಕೊಂಡು ಆ ಬಸದಿಯ ಜೀರ್ಣೋದ್ಧಾರ ಮಾಡಿದನು. ಒಬ್ಬ ಶ್ಯಾನುಭಾಗನು ರಾಜದಂಪತಿಗಳ ಮೇಲೆ ಈ ರೀತಿಯಾದ ಗೌರವದಿಂದ ಒಂದು ಕಾರ್ಯಕ್ರಮ ಕೈಗೊಂಡನೆಂದರೆ, ಆ ಕಾಲದಲ್ಲಿ ಶಾಂತಿಯು ನೆಲೆಸಿತ್ತೆಂದೂ, ಆಗ ಅರಮನೆಯ ಸ್ಥಿತಿ ಚೆನ್ನಾಗಿತ್ತೆಂದೂ ತಿಳಿಯಬಹುದಾಗಿದೆ.

ಬಂಗರ ರಾಜ್ಯದ ಸ್ಥಿತಿ

ಕ್ರಿ. ಶ. 12ನೇ ಶತಮಾನದಲ್ಲಿ ಬಂಗಾಡಿಯಲ್ಲಿ ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದ ಈ ಬಂಗರಸರು, ಕವಿ ವಿಜಯವರ್ಣಿಯು ಹೇಳುವಂತೆ, ಪೂರ್ವ ದಿಶೆಯಲ್ಲಿ ಉನ್ನತವಾಗಿರುವ ಸಹ್ಯಾದ್ರಿ ಬೆಟ್ಟಗಳಿಂದ ಪಶ್ಚಿಮದ ಅರಬೀ ಸಮುದ್ರದವರೆಗೂ ರಾಜ್ಯವಾಳುತ್ತಿದ್ದರು. ನೇತ್ರಾವತಿ ನದಿಯ ಇಕ್ಕೆಲಗಳಲ್ಲಿದ್ದ ಈ ಭೂ ಪ್ರದೇಶವನ್ನು ಆಳುತ್ತಾ ಸಂಪದ್ಭರಿತವಾದ ಭೂ ಭಾಗವನ್ನು ಹೊಂದಿದ್ದರು. ಕೃಷಿಯಿಂದಾಗಿ ಸಾಕಷ್ಟು ದವಸ ಧಾನ್ಯಗಳು ಇವರ ರಾಜ್ಯದಲ್ಲಿ ಬೆಳೆಯುತ್ತಿದ್ದವು. ಇವರ ರಾಜ್ಯದ ಪೂರ್ವ ಭಾಗವು ಹೆಚ್ಚು ಕಾಡಿನಿಂದ ಕೂಡಿದ್ದುದರಿಂದ ವನ್ಯ ಸಂಪತ್ತು ಈ ಪ್ರದೇಶದಲ್ಲಿ ಹೇರಳವಾಗಿತ್ತು. ತಮ್ಮ ಆಳ್ವಿಕೆಯ ಕಾಲದಲ್ಲಿ ವಿದೇಶೀಯರಾದ ಪೋರ್ಚುಗೀಸರೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿದ್ದುದರಿಂದ ಇಲ್ಲಿಯ ಜನರು ಮಂಗಳೂರು ಬಂದರಿನ ಮುಖಾಂತರ ವಿದೇಶಿ ವ್ಯಾಪಾರವನ್ನು ಮಾಡುತ್ತಿದ್ದರು. ಸಂಚಾರ ಸಾಗಾಟಕ್ಕೆ ಈಗಿನಷ್ಟು ಅನುಕೂಲತೆ ಇಲ್ಲದ ಅಂದಿನ ಕಾಲದಲ್ಲಿ ನೇತ್ರಾವತಿ ನದಿಯು ದೋಣಿಯ ಮುಖಾಂತರ ಸಾಮಾನು ಸರಂಜಾಮುಗಳನ್ನು ಸಾಗಿಸಲು ಬಹಳ ಅನುಕೂಲತೆಯನ್ನು ಒದಗಿಸುತ್ತಿತ್ತು. ಉಪ್ಪಿನಂಗಡಿಯಿಂದ ಪಾಣೆಮಂಗಳೂರಿನವರೆಗೂ, ಅಲ್ಲಿಂದ ಮಂಗಳೂರಿನವರೆಗೂ

ಸರಾಗವಾದ ದೋಣಿ ಸಂಚಾರವಿತ್ತು. ಇದರಿಂದಾಗಿ ಬಂಗರ ರಾಜ್ಯದ ಜನರಿಗೆ ಪೇಟೆ ಪಟ್ಟಣಗಳಿಂದ ಸಿಗುವ ವಸ್ತುಗಳು ಬಹು ಸುಲಭವಾಗಿ, ಕಡಿಮೆ ಬೆಲೆಗೆ ಸಕಾಲಕ್ಕೆ ದೊರಕುತ್ತಿದ್ದವು. ಅದರಂತೆ ಇಲ್ಲಿಯ ರೈತರು ಬೆಳೆಸುತ್ತಿದ್ದ ಕೃಷ್ಯುತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆಯೂ ಮಂಗಳೂರಿನಲ್ಲಿ ದೊರೆಯುತ್ತಿದ್ದು, ಕೃಷಿಯು ಒಂದು ಲಾಭದಾಯಕ ಉದ್ಯಮವಾಗಿತ್ತು.

ಬಂಗರಸರು ನೆರೆಕರೆಯ ಅರಸುಮನೆತನಗಳಾದ ವೇಣೂರಿನ ಅಜಿಲರು, ಬೈಲಂಗಡಿಯ ಮೂಲರು, ಮೂಲ್ಕಿಯ ಸಾಮಂತರು, ಮಂಗಳೂರಿನ ಆಲೂಪರು ಹಾಗೂ ಕಾರ್ಕಳದ ಭೈರರಸರೊಡನೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಂಡಿದ್ದುದರಿಂದ ಇವರ ರಾಜ್ಯಕ್ಕೆ ಸೇರಿದ ಜನರು ಶಾಂತಿಯಿಂದ, ಯುದ್ಧ ಭೀತಿ ಇಲ್ಲದೆ, ಜೀವನ ನಡೆಸಲು ಸಾಧ್ಯವಾಗುತ್ತಿತ್ತು. ಶಾಂತಿ ನೆಲೆಸಿದ್ದಾಗ ಆರ್ಥಿಕ ಅನುಕೂಲತೆಗಳನ್ನು ಒದಗಿಸಿಕೊಂಡು ಸಾಂಸ್ಕೃತಿಕ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಸಾಧ್ಯವಾಗುತ್ತದೆ. ಅದು ಬಂಗರಸರ ಆಳ್ವಿಕೆಯ ಕಾಲದಲ್ಲಿ ಸಾಧ್ಯವಾಗಿತ್ತು. ಇವರ ಆಳ್ವಿಕೆಯಲ್ಲಿ ವ್ಯವಸ್ಥಿತವಾಗಿ ರೂಪುಗೊಂಡ ಆಡಳಿತ ವ್ಯವಸ್ಥೆಗಳು ಇದ್ದುದರಿಂದ ಬಹಳಷ್ಟು ಜನರಿಗೆ ಅದರಲ್ಲಿಯೂ ಉದ್ಯೋಗವು ದೊರೆಯುತ್ತಿದ್ದು, ಹಲವಾರು ಕುಟುಂಬಗಳು ಇದರಿಂದಾಗಿ ಜೀವನ ನಡೆಸುತ್ತಿದ್ದವು.

ಸ್ವತಃ ಬಂಗರಸರು ತಮ್ಮ ರಾಜ್ಯದ ಆರ್ಥಿಕ ಅಭಿವೃದ್ಧಿಗಾಗಿ ಸೂಕ್ತ ಕಾರ್ಯಗಳನ್ನು ಕೈಗೊಳ್ಳುತ್ತಿದ್ದುದು ನಮಗೆ ತಿಳಿದುಬರುತ್ತದೆ. ಬಂಗ ರಾಜ್ಯದ ಆರ್ಥಿಕ ಉನ್ನತ ಸ್ಥಿತಿಯಿಂದಾಗಿ ಬಂಗರು "ಹಣವಿನ ಬಂಗ"ರೆಂದು ಇತಿಹಾಸದಲ್ಲಿ ಪ್ರಸಿದ್ಧರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಒಂದೊಂದು ಅರಮನೆಯವರು ಒಂದೊಂದು ವಿಷಯಕ್ಕೆ ಪ್ರಸಿದ್ಧರಾಗಿದ್ದಂತೆ, ಬಂಗರು ತಮ್ಮ ಐಶ್ವರ್ಯಕ್ಕೆ ಪ್ರಸಿದ್ಧರಾಗಿದ್ದರು. ಇವರು ಸಾಹಿತ್ಯ ಕಲೆಗಳಿಗೆ ಕೊಟ್ಟ ಪ್ರೋತ್ಸಾಹಗಳನ್ನು ಗಮನಿಸಿದರೆ ಇವರ ರಾಜ್ಯದ ಆರ್ಥಿಕ ಸ್ಥಿತಿಯು ಚೆನ್ನಾಗಿತ್ತೆಂದೇ ಹೇಳಬೇಕಾಗುತ್ತದೆ.

ಬಂಗರಸರು ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದರೆಂಬ ವಿಷಯ ನಮಗೆ ಇತಿಹಾಸದಿಂದಲೂ, ಶಾಸನಗಳಿಂದಲೂ ತಿಳಿದುಬರುತ್ತದೆ. ಇವರು ಬಂಗಾಡಿ ಗದ್ಯಾಣಗಳೆಂಬ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದರು. ಕೆಲವು ವರ್ಷಗಳ ಹಿಂದೆ ಬಂಗಾಡಿಯಲ್ಲಿ ನೆಲವನ್ನು ಅಗೆಯುವಾಗ ಬಂಗಾಡಿಯ ಈ ಚಿನ್ನದ ಗದ್ಯಾಣಗಳು ಸಿಕ್ಕಿದ್ದ ವಿಷಯವನ್ನು ನಾವು ವಾರ್ತಾ ಪತ್ರಿಕೆಯಲ್ಲಿಯೂ ಓದಿರುವೆವು. ಇವುಗಳಲ್ಲಿ ಎರಡು ವರ್ಗಕ್ಕೆ ಸೇರಿದ ನಾಣ್ಯಗಳಿದ್ದು, ಅವುಗಳಲ್ಲಿ ವಿಭಿನ್ನ ಬರಹಗಳೂ, ಆಕೃತಿಗಳೂ ಕಂಡುಬರುತ್ತವೆ. ಸುಮಾರು 8 ಮಿ. ಮೀ. ವ್ಯಾಸ ಹಾಗೂ 1.5 ಮಿ. ಮೀ. ದಪ್ಪದ ದೊಡ್ಡ ಗಾತ್ರದ ನಾಣ್ಯಗಳ ಮೇಲೆ ಸಂಸ್ಕೃತ ಅಕ್ಷರಗಳೂ, ಇನ್ನೊಂದು ಬದಿಗೆ ಉಮಾಮಹೇಶ್ವರ ಅಥವಾ ಸೋಮನಾಥನ ಆಕೃತಿಗಳೂ ಕಂಡುಬರುತ್ತವೆ. ಅದರಂತೆ

ಇನ್ನೊಂದು ವರ್ಗದ ನಾಣ್ಯಗಳು ಸುಮಾರು 5 ಮಿ. ಮೀ. ವ್ಯಾಸ ಹಾಗೂ 1 ಮಿ. ಮೀ. ದಪ್ಪವಿದ್ದು, ಅವುಗಳ ಒಂದು ಬದಿಗೆ ಮೀನು ಮತ್ತು ಶಂಖದ ಆಕೃತಿಯೂ, ಇನ್ನೊಂದು ಬದಿಗೆ ಬಹು ಸೂಕ್ಷ್ಮವಾದ ಸಂಸ್ಕೃತ ಅಕ್ಷರಗಳೂ ಕಂಡುಬರುತ್ತವೆ. ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ಬಂಗಾಡಿಯ ಗದ್ಯಾಣಗಳು ಇವೇ ಆಗಿರಬೇಕು. ಆದುದರಿಂದ ನಾಣ್ಣುಡಿಯಂತೆ ಬಂಗಾಡಿಗೆ ಹೋದರೆ ಬಂಗಾರದ ಅನ್ನ ಎಂಬುದು ಇವರ ಶ್ರೀಮಂತಿಕೆಯಿಂದ ಅನ್ವರ್ಥಕವಾಗಿ ಕಾಣುತ್ತದೆ.

ಬಂಗರಸರು ಇತಿಹಾಸದಲ್ಲಿ ಶಾಂತಿಪ್ರಿಯರಾಗಿ ಸಾಮಾಜಿಕ ಸಾಮರಸ್ಯಕ್ಕೆ ಹೆಚ್ಚು ಬೆಲೆ ಕೊಡುತ್ತಿದ್ದರೆಂದೂ ಕಂಡುಬರುತ್ತದೆ. ಆದುದರಿಂದ ಅವರ ರಾಜ್ಯದಲ್ಲಿ ಸಾಮಾಜಿಕ ಶಾಂತಿ, ಸೌಹಾರ್ದ, ಸಹಕಾರ ಮನೋಭಾವಗಳು ಬೆಳೆದಿದ್ದವು. ಅವರ ಪರಮತ ಸಹಿಷ್ಣುತೆಯಿಂದಾಗಿ ಧರ್ಮದ ಹೆಸರಿನಲ್ಲಿ ತಪ್ಪುಗ್ರಹಿಕೆಗಳೂ, ವಿವಾದಗಳೂ, ಒಳಜಗಳಗಳೂ ಇಲ್ಲದೆ ಸಮಾಜದಲ್ಲಿ ಶಾಂತಿಯು ನೆಲೆಸಿತ್ತು. ಅವರ ರಾಜ್ಯದಲ್ಲಿ ಜೈನರು, ಹಿಂದುಗಳು, ಕ್ರೈಸ್ತರು, ಮಹಮ್ಮದೀಯರು ಹಾಗೂ ಕೆಲವು ಲಿಂಗಾಯತರು ನೆಲೆಸಿದ್ದರು. ಮಂಗಳೂರು ಬಹಳ ಕಾಲದವರೆಗೂ ಇವರ ರಾಜ್ಯದ ಒಂದು ಭಾಗವಾಗಿದ್ದು, ಅಲ್ಲಿ ವಿಭಿನ್ನ ಜಾತಿಯ ಜನರು ನೆಲೆಸಿದ್ದು, ಸೌಹಾರ್ದದಿಂದ ಜೀವನ ಮಾಡುತ್ತಿದ್ದಂತೆ ಕಾಣುತ್ತದೆ. ವಿಭಿನ್ನ ಮತದ ಜನರಿಗೆ ಬೇಕಾದ ದೇವಾಲಯಗಳು, ಪ್ರಾರ್ಥನಾಲಯಗಳು ಮತ್ತು ಪೂಜಾಗೃಹಗಳನ್ನು ಬಂಗರಸರು ಕಟ್ಟಿಸಿ ಕೊಟ್ಟಿದ್ದ ಉದಾಹರಣೆಗಳು ನಮಗೆ ಸಿಗುತ್ತವೆ.

ಬಂಗರ ಮನೆತನದಲ್ಲಿ ಶಂಕರದೇವಿ, ವಿಠ್ಠಲಾದೇವಿಯಂಥವರು ತಾವೇ ಸ್ವತಂತ್ರ ರಾಣಿಯರಾಗಿ ರಾಜ್ಯವಾಳಿದುದು ನಮಗೆ ತಿಳಿದಿದೆ. ಇಷ್ಟು ಸ್ತ್ರೀ ಸ್ವಾತಂತ್ರ್ಯವು ಅರಮನೆಯಲ್ಲಿಯೇ ಇರುತ್ತಿದ್ದಾಗ ಸಮಾಜದಲ್ಲಿಯೂ ಅದು ನೆಲೆಸಿತ್ತು ಎಂದು ನಾವು ತಿಳಿದುಕೊಳ್ಳಬಹುದು. ಬಂಗರಸರು ವಿದ್ಯಾಭ್ಯಾಸಕ್ಕೆ ವಿಶೇಷ ಗಮನ ಕೊಡುತ್ತಿದ್ದರೆಂಬುದನ್ನು ಕವಿಗಳಿಗೆ, ಸಾಹಿತಿಗಳಿಗೆ, ಜ್ಯೋತಿಷ್ಯರಿಗೆ, ವೈದ್ಯರಿಗೆ, ಯೋಗ ಶಾಸ್ತ್ರಜ್ಞರಿಗೆ ತಮ್ಮ ಅರಮನೆಯಲ್ಲಿಯೇ ಕೊಟ್ಟ ಪ್ರೋತ್ಸಾಹದಿಂದ ತಿಳಿದುಕೊಳ್ಳಬಹುದು.

ಬಂಗರಸರು ಜೈನ ಮತಕ್ಕೆ ಸೇರಿದವರು. ಆದರೆ, ಅವರು ತಮ್ಮ ವೈಯಕ್ತಿಕ ಜೀವನದಲ್ಲಿಯೂ, ಆಡಳಿತದಲ್ಲಿಯೂ ಪರಮತ ಸಹಿಷ್ಣುತೆಯನ್ನು ಅನುಸರಿಸುತ್ತಿದ್ದರು. ಇವರು ಪ್ರಾಚೀನ ಕಾಲದಿಂದಲೂ ಕಾರ್ಕಳದ ಶ್ರೀ ಲಲಿತಕೀರ್ತಿ ಭಟ್ಟಾರಕ ಪೀಠಕ್ಕೆ ಸಂಬಂಧಿಸಿದವರು. ಬಂಗಾಡಿಯಲ್ಲಿ ಶ್ರೀ ಲಲಿತಕೀರ್ತಿಗಳ ಶಾಖಾ ಮಠವಿತ್ತೆಂಬುದನ್ನು ಕ್ರಿ. ಶ. 1700ರಲ್ಲಿ ಬಂಗಾಡಿಯ ಅರಮನೆಯಲ್ಲಿದ್ದ ಕವಿ ಚಂದ್ರಶೇಖರನು ಹೇಳಿದ್ದಾನೆ. ಇವರ ರಾಜ್ಯ ದೇವತೆ ಶ್ರೀ ಆದೀಶ್ವರ ಸ್ವಾಮಿ. ಇವರು ಬಂಗಾಡಿಯಲ್ಲಿ ತಮ್ಮ

ಆಳ್ವಿಕೆಯನ್ನು ಪ್ರಾರಂಭಿಸಿದಾಗಲೇ ಶ್ರೀ ಶಾಂತಿನಾಥ ಸ್ವಾಮಿಯ ಬಸದಿಯೊಂದನ್ನು ಇಂದು ಕೋಟೆ ಎಂದು ಕರೆಯಲ್ಪಡುವ ಸ್ಥಳದಲ್ಲೇ ಕಟ್ಟಿದ್ದರು. ಅನಂತರ, ಈಗ ಬಂಗಾಡಿ ಪೇಟೆಯಲ್ಲಿರುವ ಹೊಸ ಶ್ರೀ ಶಾಂತಿನಾಥ ಸ್ವಾಮಿಯ ಬಸದಿಯನ್ನು ಕಟ್ಟಿಸಿದರು. ಅದರಂತೆ ಕ್ರಿ. ಶ. 1484ರಲ್ಲಿ ಬಂಗರಸನೊಬ್ಬನು ಬೆಳ್ತಂಗಡಿಯಲ್ಲಿರುವ 'ಬಂಗರ ಬಸದಿ'ಯಲ್ಲಿ ಧಾರ್ಮಿಕ ಕಾರ್ಯಗಳನ್ನು ಸಾಂಗವಾಗಿ ನೆರವೇರಿಸುವುದಕ್ಕಾಗಿ ಸಮೀಪದ ಭೂಮಿಯೊಂದನ್ನು ಉಂಬಳಿ ಬಿಟ್ಟಿರುವುದಾಗಿ ಇದೇ ಬಸದಿಯ ಆವರಣದಲ್ಲಿರುವ ಒಂದು ಶಿಲಾ ಶಾಸನದಿಂದ ತಿಳಿದು ಬರುತ್ತದೆ. ಬೆಳ್ತಂಗಡಿಯ ಹಲರ (ಜೈನ ವ್ಯಾಪಾರಿಗಳ) ಸಮ್ಮತದಿಂದ ಬಂಗರಸನು ಕ್ರಿ. ಶ. 1509ರಲ್ಲಿ ಈ ಬಸದಿಯ ಧಾರ್ಮಿಕ ಉತ್ಸವಗಳು ನಡೆದುಕೊಂಡು ಬರಲು ಉಂಬಳಿ ಬಿಟ್ಟಿದ್ದನೆಂದು ಇಲ್ಲಿರುವ ಇನ್ನೊಂದು ಶಾಸನದಿಂದ ತಿಳಿದುಬರುತ್ತದೆ. ಶಂಕರ ದೇವಿಯೆಂಬ ಬಂಗರಾಣಿಯು ಕ್ರಿ. ಶ. 1611ರಲ್ಲಿ ಇಲ್ಲಿರುವ ಶಾಂತಿನಾಥ ಬಸದಿಯ ಪೂಜಾ ವಿನಿಯೋಗಕ್ಕೆ ಹಿಂದೆ ಬಿಟ್ಟಿದ್ದ ಉಂಬಳಿಯನ್ನು ಊರ್ಜಿತಗೊಳಿಸಿ, ಶ್ರೀ ಸ್ವಾಮಿಗೆ ಪಂಚಕಲ್ಯಾಣೋತ್ಸವವನ್ನು ಮಾಡಿ, ಕೆಲವು ನೋಂಪಿಗಳನ್ನು ನಡೆಸಿದಳು.

ವೈಯಕ್ತಿಕವಾಗಿ ಬಂಗರಸರು ಜೈನ ಮತಾವಲಂಬಿಗಳಾಗಿದ್ದರೂ, ಹಿಂದೂ ದೇವತೆಗಳನ್ನು ಸಮಾನ ಗೌರವದಿಂದ ಪೂಜಿಸುತ್ತಿದ್ದರು. ಶ್ರೀ ಸೋಮನಾಥನು ಇವರ ರಾಜ್ಯದ ಪ್ರಧಾನ ಹಿಂದೂ ದೇವತೆ. ಇವರು ಘಟ್ಟದ ಮೇಲಿಂದ ಇಳಿದು ಬರುವಾಗಲೇ ಈ ದೇವರ ಮೂರ್ತಿಯನ್ನು ಇಲ್ಲಿಗೆ ತಂದು ಪ್ರತಿಷ್ಠಾಪಿಸಿದರೆಂದು ನಾವು ತಿಳಿದುಕೊಂಡಿದ್ದೇವೆ. ಶೈವ ಸಂಪ್ರದಾಯದತ್ತ ಗೌರವವನ್ನು ಹೊಂದಿದ್ದ ಬಂಗರಸರು ತಮ್ಮ ರಾಜ್ಯಕ್ಕೆ ಸೇರಿದ್ದ ಗುರುವಾಯನಕೆರೆಯು ಒಂದು ವೀರಶೈವ ಕೇಂದ್ರವಾಗಿ ಬೆಳೆಯುವಲ್ಲಿ ಆತಂಕವನ್ನುಂಟುಮಾಡಲಿಲ್ಲ. ವೈಷ್ಣವ ಸಂಪ್ರದಾಯಕ್ಕೂ ಬಂಗರಸರು ಅಷ್ಟೇ ಗೌರವವನ್ನು ಹೊಂದಿದ್ದರೆಂಬುದನ್ನು ಅವರ ವೀರ ನರಸಿಂಹ, ಲಕ್ಷ್ಮಪ್ಪ, ವಿಠಲಾದೇವಿ ಎಂಬ ಹೆಸರುಗಳೇ ಶ್ರುತಪಡಿಸುತ್ತವೆ. ಅದರಂತೆ ಉಜಿರೆಯ ಶ್ರೀ ಜನಾರ್ದನ ದೇವಸ್ಥಾನಕ್ಕೂ ಅವರು ಉಂಬಳಿ ಕೊಟ್ಟಿದ್ದರು. ಕುಕ್ಕೆ ಸುಬ್ರಹ್ಮಣ್ಯ ದೇವಾಲಯಕ್ಕೆ ಅವರಿಂದ ಕೊಡಲ್ಪಟ್ಟ 270 ಗದ್ಯಾಣಗಳ ಉಲ್ಲೇಖವು ಸುಬ್ರಹ್ಮಣ್ಯದಲ್ಲಿ ದೊರಕಿರುವ ಶಾಸನವೊಂದರಿಂದ ತಿಳಿದು ಬರುತ್ತದೆ. ಬಂಗಾಡಿಯ ಮೊದಲ ಬಂಗರಸನಾದ ವೀರ ನರಸಿಂಹ ಬಂಗನೇ ಇಲ್ಲಿ ಗಣಪತಿ ದೇವಾಲಯವನ್ನು ಕಟ್ಟಿಸಿದ್ದನು. ಅದರಂತೆ ಕಿಲ್ಲೂರಿನಲ್ಲಿ ಕೊಳ್ಳಿ ದುರ್ಗಾಂಬಾ ದೇವಾಲಯವನ್ನು ಕಟ್ಟಿಸಿದನು. ಮುಂದೆ ಬಂಗಾಡಿಯಲ್ಲಿ ವೀರಭದ್ರ ದೇವಾಲಯ, ಉಳ್ಳಾಲ್ತಿಯ ಗುಡಿ, ಶ್ರವಣಕುಂಡ, ಬ್ರಹ್ಮ ಸ್ಥಾನಗಳಂತಹ ಶಕ್ತಿ ಪ್ರಧಾನವಾದ ಕ್ಷೇತ್ರಗಳನ್ನು ಬಂಗರಸರು ಬೆಳೆಸಿಕೊಂಡು ಬಂದರು. ಅದರಂತೆ ತಮ್ಮ ರಾಜ್ಯಕ್ಕೆ ಸೇರಿದ ಕುತ್ಯಾರು, ಪುತ್ತೂರು, ಮಂಗಳೂರು, ಶರವು,

ನಂದಾವರ, ಸುಬ್ರಹ್ಮಣ್ಯ, ಗುರುವಾಯನಕೆರೆ ಮತ್ತು ಉಜಿರೆ ಮುಂತಾದ ಕಡೆಗಳಲ್ಲಿ ವಿಭಿನ್ನ ಹಿಂದೂ ದೇವತೆಗಳಿಗೆ ದೇವಾಲಯಗಳನ್ನು ಕಟ್ಟಿಸಿ ಅಥವಾ ಜೀರ್ಣವಾದ ದೇವಾಲಯಗಳನ್ನು ಪುನರುದ್ಧರಿಸಿ, ಅದಕ್ಕೆ ಉಂಬಳಿ ಉತ್ತಾರಗಳನ್ನು ಕೊಟ್ಟರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊತ್ತ ಮೊದಲು ಕ್ರೈಸ್ತರು ನೆಲೆ ನಿಂತದ್ದೇ ಬಂಗ ರಾಜ್ಯಕ್ಕೆ ಸೇರಿದ ಮಂಗಳೂರಿನಲ್ಲಿ ಸುಮಾರು ಕ್ರಿ. ಶ. 1530ರಲ್ಲಿ. ಇಲ್ಲಿ ಶಾಶ್ವತವಾಗಿ ನೆಲೆಸಲು ಅವಕಾಶ ಮಾಡಿಕೊಟ್ಟದ್ದೇ ಅಲ್ಲದೆ, ಅವರು ಪ್ರಾರ್ಥನಾಲಯಗಳನ್ನು ಕಟ್ಟಿಕೊಳ್ಳಲು ಬಂಗರಸರು ಸಹಾಯಧನವನ್ನು ಕೊಟ್ಟರು. ಕ್ರೈಸ್ತರ ನೆಲೆವೀಡುಗಳಿಂದಾಗಿ ವ್ಯಾಪಾರಕ್ಕಾಗಿ ಈ ಊರಿಗೆ ಬಂದಿದ್ದ ಪೋರ್ಚುಗೀಸರು ಇಲ್ಲಿ ಅವರ ವ್ಯಾಪಾರ ವಹಿವಾಟುಗಳಿಗೆ ಸರಿಯಾದ ನೆಲೆಯನ್ನು ಕಂಡು ಕೆಲವು ವ್ಯಾಪಾರದ ಮಳಿಗೆಗಳನ್ನು ಸ್ಥಾಪಿಸಿಕೊಂಡರು. ಇದರಿಂದಾಗಿ, ಬಂಗರ ರಾಜ್ಯಕ್ಕೆ ಆರ್ಥಿಕವಾಗಿ ಲಾಭವಾಗುವುದರ ಜೊತೆಗೆ ಅವರ ಪೂರ್ಣ ಸಹಾಯ, ವಿಧೇಯತೆ, ಸಹಕಾರಗಳು ಬಂಗರಸರಿಗೆ ಸಿಕ್ಕಿದವು. ನಂದಾವರದಲ್ಲಿ ಅರಮನೆಯನ್ನು ಕಟ್ಟುವಾಗ ಬಂಗರಸನೊಬ್ಬನು ಮುಸ್ಲಿಮರಿಗೆ ಮಸೀದಿಯನ್ನು ಕಟ್ಟಿಸಿಕೊಟ್ಟಿರುವುದು ಕಂಡುಬರುತ್ತದೆ. ಹೈದರಾಲಿಯು ಕ್ರಿ. ಶ. 1763ರಲ್ಲಿ ಬಿದನೂರನ್ನು ಗೆದ್ದುಕೊಂಡು ಮೂಡುಬಿದ್ರೆಗಾಗಿ ಬಂಗರ ರಾಜ್ಯಕ್ಕೆ ಬಂದಾಗ ಅವನನ್ನು ಉಚಿತ ಗೌರವಗಳಿಂದ ನೋಡಿಕೊಳ್ಳಲಾಯಿತು. ಅದರಂತೆ ಮುಂದಿನ ಮುಸ್ಲಿಂ ಅಧಿಕಾರಿಗಳಿಗೆ ಮತದ ಹಿನ್ನೆಲೆಯಿಂದ ಅವಗಣಿಸಲಾಗುತ್ತಿರಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟವು ತೀವ್ರವಾದಾಗ, ಬಂಗರಸರಲ್ಲಿ ಒಬ್ಬನಾದ ಲಕ್ಷ್ಮಪ್ಪರಸ ಬಂಗನು ಸ್ವಾತಂತ್ರ್ಯ ಹೋರಾಟಕ್ಕೆ ಇಳಿದು ದೇಶಕ್ಕಾಗಿ ಪ್ರಾಣವನ್ನರ್ಪಿಸಿದನು.

ಇತಿಹಾಸ ಕಾಲದಲ್ಲಿ ಬಂಗಾಡಿಯ ವೈಭವ

ಬಂಗಾಡಿಯು, ಸುಮಾರು 650 ವರ್ಷಗಳ ಕಾಲ ಬಂಗರ ರಾಜಧಾನಿಯಾಗಿ ಮೆರೆದ ಸ್ಥಳ ವಿಭಿನ್ನ ಕಾಲಗಳಲ್ಲಿ ಬಂಗರಸರು ಮಂಗಳೂರು, ನಂದಾವರ, ಬೆಳ್ತಂಗಡಿ, ಪುತ್ತೂರುಗಳಲ್ಲಿ ತಮ್ಮ ಅರಮನೆಗಳನ್ನು ಕಟ್ಟಿಕೊಂಡು ಆಳುತ್ತಿದ್ದರೂ, ಬಂಗಾಡಿಯೇ ಅವರ ಪಾರಂಪರ್ಯದ, ನಿರಂತರವಾದ ರಾಜಧಾನಿಯಾಗಿತ್ತು. ಸಾಮಾನ್ಯವಾಗಿ ಹಿರಿಯ ಅಣ್ಣನಾಗಲೀ, ಸಹೋದರಿಯಾಗಲೀ, ಪೂರ್ವಜರ ಬಂಗಾಡಿಯ ಅರಮನೆಯಿಂದಲೇ ರಾಜ್ಯವಾಳುತ್ತಿದ್ದು, ಇತರ ಕಿರಿಯರು ಮೇಲೆ ಹೇಳಿದ ಉಪ ಅರಮನೆಗಳಲ್ಲಿದ್ದು, ಅವರ ಪ್ರತಿನಿಧಿಗಳಾಗಿ ಆಳುತ್ತಿದ್ದರು. 15ನೇ ಶತಮಾನದ ಪೂರ್ವಾರ್ಧದಲ್ಲಿ ಕಾಮರಾಯ ಬಂಗನು ಬಂಗಾಡಿಯಿಂದ ರಾಜ್ಯವಾಳುತ್ತಿದ್ದು, ಆತನ ಸಹೋದರನಾದ ಪಾಂಡ್ಯಪ್ಪರಸ ಬಂಗನು ಪುತ್ತೂರಿನ ಅರಮನೆಯಿಂದ ರಾಜ್ಯವಾಳುತ್ತಿದ್ದುದು, ನಮಗೆ ಪುತ್ತೂರಿನ ಶ್ರೀ ಮಹಾಲಿಂಗೇಶ್ವರ ದೇವಾಲಯದ ಪ್ರಾಂಗಣದಲ್ಲಿರುವ ಶಿಲಾಶಾಸನದಿಂದ

ತಿಳಿದು ಬರುತ್ತದೆ. ಆದುದರಿಂದ ವಂಶಪಾರಂಪರ್ಯದಿಂದ ಬಂಗರ ರಾಜಧಾನಿಯಾಗಿ ಮೆರೆದಿದ್ದ ಬಂಗಾಡಿಯು ವೈಭವದಿಂದ ಕೂಡಿತ್ತು. ಅಲ್ಲಿ ಅರಮನೆ ಇತ್ತು, ಜಿನಾಲಯಗಳಿದ್ದವು, ಸೈನ್ಯವಿತ್ತು, ಅಧಿಕಾರಿಗಳ ಮತ್ತು ನೌಕರರ ಮನೆಗಳಿದ್ದವು. ವ್ಯಾಪಾರ ವಹಿವಾಟುಗಳು ನಿರಂತರವಾಗಿ ನಡೆಯುತ್ತಿದ್ದ ನಗರವಿತ್ತು. ಆದುದರಿಂದ ಇತಿಹಾಸ ಕಾಲದಲ್ಲಿ ಬಂಗಾಡಿಯು ಒಂದು ಆಕರ್ಷಕ ಕೇಂದ್ರವಾಗಿತ್ತು. ಒಂದು ದೊಡ್ಡ ಪಟ್ಟಣವಾಗಿ ಮೆರೆದಿತ್ತು.

ಪೂರ್ವದಲ್ಲಿ ಎತ್ತರವಾಗಿ ನಿಂತಿದ್ದ ಪಶ್ಚಿಮ ಘಟ್ಟಗಳು, ಈಶಾನ್ಯಕ್ಕೆ ದೂರದಲ್ಲಿ ಕಾಣುವ ಬಲ್ಲಾಳರಾಯನ ದುರ್ಗ, ಉತ್ತರಕ್ಕೆ ಎಳನೀರು ಮುಂತಾದ ಊರುಗಳವರೆಗೂ ಹರಡಿದ್ದ ಪರ್ವತಗಳು, ವಾಯುವ್ಯಕ್ಕೆ ರುದ್ರರಮಣೀಯವಾಗಿ ಕಂಗೊಳಿಸುವ ಕುದುರೆಮುಖ ಬೆಟ್ಟದ ಸಾಲುಗಳು, ಸುತ್ತಲೂ ವನರಾಜಿ, ಕೃಷಿ ಭೂಮಿ -ಇವುಗಳಿಂದ ಆವೃತವಾದ ಬಂಗಾಡಿಯು ಬಹಳ ಸುಂದರ ಪ್ರದೇಶವಾಗಿತ್ತು. ಅದರಂತೆ ಹಿತ ಹವಾಗುಣದಿಂದಾಗಿ ವಾಸಿಸಲು ಯೋಗ್ಯವಾದ ಸ್ಥಳವಾಗಿತ್ತು. ಬಂಗರ ಅರಮನೆಯಲ್ಲಿದ್ದ ಕವಿಗಳು ಬಂಗಾಡಿಯ ವೈಭವವನ್ನು ಹಾಡಿ ಹೊಗಳಿರುವರು. ಅವರಲ್ಲಿ ಮುಖ್ಯನಾದವನು ನಾಲ್ಮಡಿ ಲಕ್ಷ್ಮಪ್ಪರಸ ಬಂಗನ ಆಸ್ಥಾನದಲ್ಲಿದ್ದು, ಕ್ರಿ. ಶ. ಸುಮಾರು 1700ರಲ್ಲಿ ಶ್ರೀ ರಾಮಚಂದ್ರ ಚರಿತ್ರ ಎಂಬ ಸಾಂಗತ್ಯ ಕಾವ್ಯವನ್ನು ಬರೆದವನು. ಈತನು ತನ್ನ ಈ ಗ್ರಂಥದ ಪೀಠಿಕಾ ಸಂಧಿಯ 24ನೇ ಪದ್ಯದಿಂದ ಮುಂದಿನ ಪದ್ಯಗಳಲ್ಲಿ ಕೊಟ್ಟಿರುವ ವಿವರಣೆಗಳನ್ನು ಈ ಕೆಳಗೆ ಸಂಗ್ರಹಿಸಿಕೊಡಲಾಗಿದೆ.

ಇಡೀ ನಾಡಿಗೆ ಐಶ್ವರ್ಯಭರಿತವೆಂದು ಪ್ರಸಿದ್ಧವಾಗಿರುವ ತುಳು ನಾಡೆಂಬ ಹೆಣ್ಣಿನ ಸುಂದರ ಮುಖದಂತೆ ಈ ಬಂಗಾಡಿಯು ಮನೋಹರವಾಗಿರುವುದು. ಮನ್ಮಥನು ರತಿದೇವಿಗೆ ಹಾಕಿರುವ ಹೂಮಾಲೆಯೋ, ದೇವರು ಪ್ರಕೃತಿಗೆ ಹಾಕಿರುವ ಮಂಗಳ ಸೂತ್ರವೋ ಎನ್ನುವಂತೆ ಇಲ್ಲಿ ನೇತ್ರಾವತಿ ನದಿಯಿರುವುದು. ಮನ್ಮಥನು ತನ್ನ ವಿಹಾರಕ್ಕಾಗಿ ಮಾಡಿಕೊಂಡ ಉದ್ಯಾನವನಗಳಂತೆ ಇಲ್ಲಿ ಪುಷ್ಪೋದ್ಯಾನಗಳಿವೆ. ಪ್ರಕೃತಿ ಸೌಂದರ್ಯದಿಂದ ಮೆರೆಯುವ ಬಂಗಾಡಿಯಲ್ಲಿ ಶಾಲಿಕಮಲ, ರಾಜಾನ್ನ, ಕುಂಕುಮ ಗಂಧಶಾಲಿ - ಮುಂತಾದ ಭತ್ತವನ್ನು ಬೆಳೆಸುವ ಗದ್ದೆಗಳೇ ಇವೆ. ಇಲ್ಲಿರುವ ಶ್ರೀ ಶಾಂತಿನಾಥ ಸ್ವಾಮಿಯ ಬಸದಿಯನ್ನು ಕವಿಯು ಹೀಗೆಂದು ವರ್ಣಿಸಿರುವನು:-

ಪುರವನಿತೆಯ ಮಣಿಮುಕುಟವೋ ಸಕಲಭ
ವ್ಯರ ಪುಣ್ಯ ಪುಂಜವೋಯೆನಲು
ಪುರದ ಮಧ್ಯದೊಳಮರೇಂದ್ರವಂದಿತ ಶಾಂತೀ
ಶ್ವರ ಚೈತ್ಯಾವಾಸವೊಪ್ಪಿದುದು|| (1-32)

ಈ ಬಸದಿಯ ಇನ್ನೊಂದು ಮಗ್ಗುಲಲ್ಲೇ ರತ್ನತ್ರಯ ಬಸದಿಯಿದೆ. ಅದರ ಬಳಿಯಲ್ಲೇ ಜನಗಳಿಗೆ ವೈರಾಗ್ಯವನ್ನು ಬೋಧಿಸುವ ಲಲಿತಕೀರ್ತಿ ಮುನಿಗಳ ಮಠವಿದೆ. ಬಂಗಾಡಿ ಪೇಟೆಯಲ್ಲಿರುವ ಅರಮನೆ ಮತ್ತು ಶಾಂತಿನಾಥ ಬಸದಿಗಳ ಕುರಿತು ಕವಿಯು ಈ ರೀತಿ ಹೇಳಿದ್ದಾನೆ. :-

ಧರೆಯೆಂಬ ಗಣಿಕೆಯ ಬಟ್ಟಮೊಲೆಗಳೆನೆ
ಅರಮನೆ ಬಸದಿಗಳಿರಲೂ ||
ಪರಮೇಷ್ಠಿಸಿದ ಹಾರಲತೆಯ ನೆಲೆಗಳೆಸೆವುವು
ಪರದರಕೇರಿಗಳಲ್ಲಿ || (1-36)

ಈ ರೀತಿಯಾಗಿ ಬಂಗಾಡಿ ಪೇಟೆಯಲ್ಲಿ ಹಲವಾರು ಶ್ರೀಮಂತರ ನಿವಾಸಗಳಿರುವ ಬೀದಿಗಳಿವೆ. ಅವರು ಸೂರ್ಯನ ಕುದುರೆಗಳಿಗೆ, ಇಂದ್ರನ ಹಾಗೂ ಚಂದ್ರನ ರಾಣಿಯರ ಕೊರಳಲ್ಲಿ ಶೋಭಿಸುವ ಪದಕಗಳಿಗೆ, ಭೂಮಿಯನ್ನು ಆಧರಿಸಿ ಹಿಡಿದಿರುವ ಆದಿಶೇಷನ ಹೆಡೆಯ ಮೇಲಿರುವ ರತ್ನಮಣಿಗೆ ಬೆಲೆ ಕಟ್ಟುವಷ್ಟು ಶ್ರೀಮಂತರಾಗಿದ್ದರು. - ಎಂದು ಚಂದ್ರಶೇಖರ ಕವಿಯು ಹೇಳಿದ್ದಾನೆ.

ಐಶ್ವರ್ಯದಿಂದಲೂ, ಐಶ್ವರ್ಯವಂತರಿಂದಲೂ ತುಂಬಿದ್ದ ಬಂಗಾಡಿಯಲ್ಲಿ ಜಿನಮತವೆಂಬ ಆಕಾಶದಲ್ಲಿ ಸಮ್ಯಕ್ತ್ವವೆಂಬ ರಥವನ್ನೇರಿ ಚಂದ್ರನಂತಿರುವ ಲಕ್ಷ್ಮಪ್ಪರಸ ಬಂಗರಾಯನು ಆಳುತ್ತಿದ್ದನು. ಈ ರಾಜನು ಒಮ್ಮೆ ಸಿಟ್ಟಿನಿಂದ ಬಿಲ್ಲನ್ನು ತೆಗೆದುಕೊಂಡು ಝೇಂಕರಿಸಿದರೆ ಆತನ ಶತ್ರುಗಳು ಹೆದರಿ, ಅವರ ರಾಜ್ಯವನ್ನು ಬಿಟ್ಟು ಕಾಡನ್ನು ಸೇರುತ್ತಿದ್ದರು. ಇಲ್ಲದಿದ್ದರೆ, ಈ ಕಾಡು ಮನುಷ್ಯರೆಂಬವರು ಎಲ್ಲಿಂದ ಉಂಟಾಗುತ್ತಾರೆ ಎಂದು ಕವಿಯು ಕೇಳುತ್ತಾನೆ. ಇಂತಹ ಪರಾಕ್ರಮಶಾಲಿಯಾದ ರಾಜನಿಗೆ, ಭರತ ಚಕ್ರವರ್ತಿಗೆ ಬುದ್ಧಿಸಾಗರನು ಮಂತ್ರಿಯಾಗಿದ್ದಂತೆ, ಗುರುವು ದೇವೇಂದ್ರನಿಗೆ ಮಂತ್ರಿಯಾಗಿದ್ದಂತೆ, ಪದ್ಮಶ್ರೇಷ್ಠಿಯೆಂಬವನು ಪ್ರಧಾನಮಂತ್ರಿ ಯಾಗಿದ್ದನು. ಮಲಯ ಮಾರುತದಿಂದ ಅರಳಿದ ಪುಷ್ಪಗಳಿಂದ ಮಧುವೂ, ಸುಗಂಧವೂ ಹರಡುತ್ತದೆ. ಅಂತಹ ಆಕರ್ಷಕ ಪುಷ್ಪಗಳಿಂದ ತನ್ನ ಬಾಣಗಳನ್ನು ಮಾಡಿಕೊಳ್ಳುವ ಮನ್ಮಥನಂತೆ ಈ ರಾಜನು ಶೋಭಿಸುತ್ತಿದ್ದನು. ಈ ರಾಜನ ಸಭೆಯು ಬಹಳ ವೈಭವಯುತವಾದುದು. ಅಲ್ಲಿ ಅರುವತ್ತನಾಲ್ಕು ಕಲೆಗಳಲ್ಲಿಯೂ ನಿಷ್ಣಾತರಾದ ವಿದ್ವಾಂಸರಿದ್ದರು. ಅವರಲ್ಲಿ ಪದ್ಮನಾಭನೆಂಬ ಹಿರಿಯ ಕವಿಯೊಬ್ಬನಿದ್ದನು. ಎಲ್ಲಾ ಕವಿಗಳ ಮತ್ತು ವಿದ್ವಾಂಸರ ಪೈಕಿ ತಾನು ಅಲ್ಪಮತಿಯೆಂದು ಚಂದ್ರಶೇಖರ ಕವಿಯು ಹೇಳಿಕೊಂಡಿದ್ದಾನೆ.

ಇತಿಹಾಸದ ಕಾಲದಲ್ಲಿ ಬಂಗಾಡಿಯು ಬಹು ವೈಭವದಿಂದ ಮೆರೆದಿತ್ತೆಂಬುದಕ್ಕೆ ನಮಗೆ ಇತರ ದಾಖಲೆಗಳು ಸಾಕಷ್ಟು ಸಾಕ್ಷಿ ನೀಡುತ್ತವೆ. ಕೃಷಿ, ವ್ಯಾಪಾರ, ಉದ್ಯಮ ಮತ್ತು ಅರಮನೆ ಸೇವೆಯಲ್ಲಿ ದುಡಿಯುತ್ತಿದ್ದ ಜನರು ಹೇರಳ ಸಂಪತ್ತನ್ನು ಗಳಿಸಿಕೊಳ್ಳುತ್ತಿದ್ದರು. ಅವರು ಬಂಗಾಡಿಯಲ್ಲಿ ತಮ್ಮ ಸುಂದರ ಸೌಧಗಳನ್ನು

ಹೊಂದಿದ್ದರು. ಇಲ್ಲಿ ಶ್ರೀಮಂತರ ಮನೆಗಳೇ ವಿಶೇಷವಾಗಿದ್ದವು. ಇತರ ಅರಸು ಮನೆತನಗಳವರು ಹಾಗೂ ಪೋರ್ಚುಗೀಸ್ ಅಧಿಕಾರಿಗಳು ಇಲ್ಲಿಗೆ ಬಂದಾಗ ಅವರ ವಾಸ್ತವ್ಯಕ್ಕೆಂದು ನಿರ್ಮಿಸಿದ್ದ ವಿಶೇಷ ಬಂಗಲೆಗಳಿದ್ದವು. ಕವಿಗಳಿಗಾಗಿ ಹಾಗೂ ವಿದ್ವಾಂಸರುಗಳಿಗಾಗಿ ಅವರವರ ಸ್ಥಾನಮಾನಗಳಿಗೆ ತಕ್ಕಂತೆ ಅರಮನೆಗಳನ್ನೇ ಹೋಲುವಂತೆ ಕಟ್ಟಿದ್ದ ಮನೆಗಳಿದ್ದವು. ಅರಮನೆಯ ಸುತ್ತಲೂ ಹರಡಿದ್ದ ಈ ಪೇಟೆಯನ್ನು ಚದುರಂಗ ಪೇಟೆ ಎಂದು ಕರೆಯಲಾಗುತ್ತಿತ್ತು.

ಜಿನ ಮತವನ್ನು ತಮ್ಮ ಬಾಳಿನ ಉಸಿರನ್ನಾಗಿ ಮಾಡಿಕೊಂಡು ಅದಕ್ಕಾಗಿ ಬದುಕುತ್ತಿರುವ ಅಸಂಖ್ಯಾತ ಭವ್ಯ ಜನರು ಬಂಗಾಡಿಗೆ ಪದೇ ಪದೇ ಬರುತ್ತಿದ್ದರು. ಅಂದಿಗೆ ಬಂಗಾಡಿಯು ಅತಿಶಯ ಪುಣ್ಯ ಕ್ಷೇತ್ರವಾಗಿದ್ದುದರಿಂದ ಶ್ರವಣ ಕುಂಡಕ್ಕೆ, ಬ್ರಹ್ಮಸ್ಥಾನಕ್ಕೆ ಮತ್ತು ಶ್ರೀ ಶಾಂತಿನಾಥ ಸ್ವಾಮಿ ಬಸದಿಗೆ ಜನರು ಸಾಲು ಸಾಲಾಗಿ ಬರುತ್ತಿದ್ದರು. ಇನ್ನೊಂದು ಕಡೆಯಿಂದ ಅಧಿಕಾರಿಗಳು, ಸೈನಿಕರು, ಶ್ರಾವಕರು, ಸಂದರ್ಶಕರು, ವಿದ್ವಾಂಸರು ಮತ್ತು ಪ್ರವಾಸಿಗರು ಹಿಂಡುಗಟ್ಟಿ ಹೋಗುತ್ತಿದ್ದರು. ಅರುಣೋದಯುದ ನಸುಕಿನಿಂದ ಜಾಗೃತಗೊಂಡು ಹೊತ್ತೇರಿದಂತೆ ಹೆಚ್ಚು ಚಟುವಟಿಕೆಯಿಂದ ಕೂಡಿ, ಸುಂದರ ಪ್ರಕೃತಿಯಿಂದಾವೃತವಾದ ಈ ಬಂಗಾಡಿ ನಗರವು ಮಯ ನಿರ್ಮಿತ ಮಾಯಲೋಕದಂತೆ ಕಂಗೊಳಿಸುತ್ತಿತ್ತು.

ಬಂಗಾಡಿಯು ಒಂದು ತೀರ್ಥ ಕ್ಷೇತ್ರವಾಗಿ....

ಬಂಗರಸರ ಅರಮನೆಯಿದ್ದು ಬಹು ಪ್ರಾಚೀನ ಕಾಲದಿಂದಲೂ ಅವರ ರಾಜಧಾನಿಯಾಗಿ ಮೆರೆದ ಬಂಗಾಡಿಯು ಒಂದು ಪುಣ್ಯ ಕ್ಷೇತ್ರವೂ ಹೌದು. ಮೂರೂ ಮುಕ್ಕಾಲು ಘಳಿಗೆಯ ಕಾಲ ನೀರಿನ ಮೇಲೆ ಇಲ್ಲಿ ಕಲ್ಲಿನ ಗುಂಡು ತೇಲುತ್ತಿದ್ದುದರಿಂದ, ಈ ಕ್ಷೇತ್ರಕ್ಕೆ ಅತಿಶಯವಾದ ಕಾರಣಿಕವಿದೆಯೆಂದು ನಂಬಲಾಗಿದೆ. ಈ ಗುಂಡು ದರ್ಶನವನ್ನು ಕಾಣಲು ಆಶ್ಚರ್ಯ ಕುತೂಹಲಗಳಿಂದ ದೂರದೂರುಗಳಿಂದ ಜನರು ಬರುತ್ತಿದ್ದರು.

ಈ ಗುಂಡು ದರ್ಶನವು ಬಂಗಾಡಿಯ ಶ್ರವಣಕುಂಡವೆಂಬ ಆವರಣದೊಳಗೆ ನಡೆಯುತ್ತಿತ್ತು. ಇಲ್ಲಿ ಬ್ರಹ್ಮದೇವನ ಸ್ಥಾನವಿದೆ. ಅಸಾಮಾನ್ಯವಾದ ಶಕ್ತಿಶಾಲಿಯಾದ ದೇವನೀತ. ಈತನ ಮಹಿಮೆ, ಗರಿಮೆಗಳ ಕುರಿತಾಗಿ ಮಹೇಂದ್ರನೆಂಬ ದಕ್ಷಿಣ ಕನ್ನಡ ಜಿಲ್ಲೆಯ ಜೈನ ಕವಿಯೊಬ್ಬನು ಒಂದು ಕೃತಿಯನ್ನೇ ರಚಿಸಿದ್ದಾನೆ. ಈ ಬ್ರಹ್ಮದೇವನನ್ನು ಸ್ತುತಿಸುತ್ತಾ ಕವಿಯು:-

ಭಲದಂಕ ಮಲ್ಲನೆನಿಸುವ।
ಬಲಯುತ ತಾನಾಳುತಿರ್ಪ ಬಂಗನರೇಂದ್ರಂ ।
ಕುಲಸ್ವಾಮಿಯೆಂದು ಮೆರೆಯುವ।
ಭಲೆ ಭಲೆ ನಿನಗಾರು ಸರಿಯೇಗೆಜ್ಜೆ ಬ್ರಹ್ಮಾ॥ ಎಂದು ಹೇಳಿರುವನು.

ಆದುದರಿಂದ ಈ ಬ್ರಹ್ಮದೇವನು ಬಂಗರಸರ ಕುಲದೇವತೆಯಾಗಿ ಇವರನ್ನು ರಕ್ಷಿಸಿಕೊಂಡು ಬರುತ್ತಿದ್ದನು. ಇಲ್ಲಿ ನೀರು ತುಂಬಿದ ಒಂದು ದೊಡ್ಡ ಹೊಂಡದಲ್ಲಿ ಗುಂಡು ಕಲ್ಲನ್ನು ಈ ಬ್ರಹ್ಮದೇವನು ತೇಲಿಸುತ್ತಿದ್ದನು. ಪ್ರಕೃತಿಯಲ್ಲೇ ವಿಚಿತ್ರವೆನಿಸುವ ಈ ಘಟನೆಯು ಕ್ರಿ. ಶ. 1911ನೇ ಇಸವಿಯವರೆಗೂ ಇಲ್ಲಿ ನಡೆಯುತ್ತಿದ್ದು, ಒಮ್ಮಿಂದೊಮ್ಮೆಗೇ ನಿಂತು ಹೋಯಿತು. ಗುಂಡುಕಲ್ಲು ಇದ್ದಲ್ಲಿಂದ ಮಾಯವಾಯಿತು. ಜನರೆಲ್ಲ ದಿಗಿಲಾದರು. ಆದುದರಿಂದ 1914ನೇ ಇಸವಿ ಜುಲ್ಯಾ 1ರಂದು ಈ ಕ್ಷೇತ್ರದ ಆಡಳಿತ ಸಮಿತಿಯ ಎಲ್ಲ ಸದಸ್ಯರೂ ಶ್ರೀ ಲಲಿತಕೀರ್ತಿ ಭಟ್ಟಾರಕ ಸ್ವಾಮಿಗಳವರೂ, ಅರಮನೆಯ ಲಕ್ಷ್ಮಪ್ಪರಸ ಪದ್ಮರಾಜ ಬಂಗರೂ, ಶ್ರೀ ಧರ್ಮಸ್ಥಳದ ಧರ್ಮಾದಿ ಕಾರಿಗಳಾಗಿದ್ದ ಶ್ರೀ ಚಂದಯ್ಯ ಹೆಗ್ಗಡೆಯವರೂ, ಪೇಟೆ, ಮಾಗಣೆ, ಸೀಮೆಯ ಎಲ್ಲ ಆಸ್ತಿಕರೂ, ಒಟ್ಟು ಸೇರಿ ಈ ಗುಂಡು ದರ್ಶನವನ್ನು ಪುನಃ ನಡೆಸಿ ಕೊಡಬೇಕೆಂದು ದೇವನಲ್ಲಿ ಪ್ರಾರ್ಥಿಸಿಕೊಂಡರು. ಈ ಪ್ರಾರ್ಥನೆಗೆ ಒಲಿದು ಬ್ರಹ್ಮದೇವನು ಪಾತ್ರಿಯ ಮೇಲೆ ಆವೇಶಿತನಾಗಿ ಪುನಃ ಈ ಪ್ರಕೃತಿ ವಿಚಿತ್ರವಾದ ಗುಂಡು ದರ್ಶನವನ್ನು ನಡೆಸಿಕೊಡುವುದಾಗಿ ಅಭಯವನ್ನಿತ್ತು ನೇರವಾಗಿ ನೇತ್ರಾವತಿ ನದಿಗೆ ಹೋದನು. ಅಲ್ಲಿಯ ನೀರೊಳಕ್ಕೆ ಮುಳುಗಿ, ಒಂದು ಗುಂಡು ಶಿಲೆಯನ್ನು ತೆಗೆದುಕೊಂಡು ಬಂದು, ದೈವಿಕ ಶಕ್ತಿಯುಳ್ಳ ಶ್ರವಣ ಕುಂಡದಲ್ಲಿ ಪುನಃ ಈ ಗುಂಡು ದರ್ಶನವನ್ನು ಮಾಡಿತೋರಿಸಿ, ಈ ಕ್ಷೇತ್ರದ ಅತಿಶಯ ಮಹಿಮೆಯನ್ನು ತೋರಿಸಿಕೊಟ್ಟನು. ಆ ದಿನದಿಂದ ಈ ಆಶ್ಚರ್ಯವು ನಡೆಯುತ್ತಿದ್ದು, ಕಾಲದ ಕುಟಿಲಗತಿಯಂತೆ 1954ರಿಂದ ಪುನಃ ನಿಂತು ಹೋಗಿದೆ. ಆದರೆ, ದೇವರ ಮಹಿಮೆಯನ್ನೂ, ಲೀಲಾವಿನೋದವನ್ನೂ ಬಲ್ಲವರಾರು?

ಈ ಶ್ರವಣ ಕುಂಡದ ಬಳಿಯ ಕಲ್ಲೊಂದರ ಮೇಲೆ ಚಾರಣ ಮುನಿಗಳ ಪಾದಗಳೆರಡು ಮೂಡಿ ಬಂದಿವೆ. ಈ ಚಾರಣ ಮುನಿಗಳು ತಮಗೆ ಇಚ್ಛೆ ಬಂದ ಸ್ಥಳಕ್ಕೆ ಕ್ಷಣಾರ್ಧದಲ್ಲಿ ಆಕಾಶ ಮಾರ್ಗದ ಮೂಲಕ ಹೋಗಬಲ್ಲವರಾಗಿರುತ್ತಾರೆ. ಅವರು ದಿವ್ಯ ಜ್ಞಾನವುಳ್ಳವರು. ಒಂದು ಚಿಕ್ಕ ವನವಾಗಿರುವ ಈ ಶ್ರವಣ ಕುಂಡವು ಆ ಚಾರಣ ಮುನಿಗಳ ತಪೋಭೂಮಿಯಾಗಿತ್ತು. ಅವರ ತಪಶ್ಶಕ್ತಿಯಿಂದಾಗಿ ಶ್ರವಣಕುಂಡದ ಈ ಅತಿಶಯ ಕ್ಷೇತ್ರಕ್ಕೂ, ಬಂಗಾಡಿಗೂ ವಿಶೇಷ ಶಕ್ತಿ ಸಂಚಯನವಾಗಿತ್ತು. ಇಂದಿಗೂ ಇಲ್ಲಿ ವ್ಯವಸ್ಥಿತವಾಗಿ ಕಟ್ಟಲ್ಪಟ್ಟಿರುವ ಎರಡು ನೀರಿನ ತೊಟ್ಟಿಗಳು, ಇನ್ನೊಂದು ಮಗ್ಗುಲಲ್ಲಿ ಗುಂಡು ತೇಲುತ್ತಿದ್ದ ನೀರು ತುಂಬಿರುವ ನೀರಿನ ಹೊಂಡ, ಬಳಿಯಲ್ಲಿರುವ ಶಿಲಾಮೂರ್ತಿ, ಹತ್ತಿರದಲ್ಲಿ ಬೆಳೆದಿರುವ ಒಂದು ಬೃಹದಾಕಾರದ ಹುತ್ತ ಮತ್ತು ಚಾರಣ ಮುನಿಗಳ ಪಾದಗಳು ಕಂಡು ಬರುತ್ತಿದ್ದು ಅವು ಈ ಕ್ಷೇತ್ರವನ್ನು ಇಂದಿಗೂ ರಮ್ಯವನ್ನಾಗಿಸಿವೆ. ಇದರಿಂದಾಗಿ, ಈ ಕ್ಷೇತ್ರಕ್ಕೆ ಬಂದಾಗ ಮನಸ್ಸಿನಲ್ಲಿ ಭಕ್ತಿಭಾವವುಂಟಾಗುತ್ತದೆ.

ಬಂಗಾಡಿಯಲ್ಲಿ ಕಂಡು ಬರುವ ಇನ್ನೊಂದು ಪವಿತ್ರ ಸ್ಥಳವೆಂದರೆ, ಇಲ್ಲಿಯ ಇತಿಹಾಸ ಪ್ರಸಿದ್ಧವಾದ ಶ್ರೀ ಶಾಂತಿನಾಥ ಸ್ವಾಮಿಯ ಬಸದಿ. ಬಂಗ ವಂಶದ ಮೊದಲ ಅರಸನಾದ ವೀರನರಸಿಂಹ ಬಂಗನು ಶಾಂತಿನಾಥ ಬಸದಿಯನ್ನು ಕಟ್ಟಿಸಿದ್ದನೆಂದು ಹೇಳಲಾಗಿದ್ದರೂ, ಅದು ಈಗ ಕೋಟೆಯೆಂದು ಕರೆಯಲ್ಪಡುವ ಸ್ಥಳದಲ್ಲಿ ಕಟ್ಟಿಸಿದ್ದದ್ದಾಗಿರಬೇಕು. ಅದರ ಅವಶೇಷಗಳು ಈಗ ಅಲ್ಲಿ ಕಾಣುತ್ತವೆ. ಈಗ ಇರುವ ಶ್ರೀ ಶಾಂತಿನಾಥ ಬಸದಿಯು ಕ್ರಿ. ಶ. 1700ಕ್ಕಿಂತ ಮೊದಲು ಕಟ್ಟಲ್ಪಟ್ಟಿತು, ಯಾಕೆಂದರೆ ಇದರ ಕುರಿತು, 1700ರಲ್ಲಿ ಶ್ರೀ ರಾಮಚಂದ್ರ ಚರಿತ್ರವನ್ನು ಬರೆದಿರುವ ಕವಿ ಚಂದ್ರಶೇಖರನು ಇದನ್ನು ಉಲ್ಲೇಖಿಸಿದ್ದಾನೆ. ಕಾಲಸ್ಥಿತಿಯಿಂದಾಗಿ ಈ ಬಸದಿಯು ಜೀರ್ಣಗೊಂಡಿದ್ದರೂ ಕಳೆದ ಶತಮಾನದ ಉತ್ತರಾರ್ಧದಲ್ಲಿ ಶ್ರೀಮಂತರಾದ ಬೆಳ್ಳೂರುಗುತ್ತಿನವರು ಈ ಬಸದಿಯ ಮಾಡಿಗೆ ತಾಮ್ರದ ತಗಡನ್ನು ಹೊದಿಸಿ ಶ್ರೀ ಸ್ವಾಮಿಗೆ ಪಂಚ ಕಲ್ಯಾಣ ವಿಧಿಯನ್ನು ನೆರವೇರಿಸಿದರು. ಅದರಂತೆ 1898-99ರಲ್ಲಿ ಅರಮನೆಯ ಲಕ್ಷ್ಮಪ್ಪರಸ ಬಂಗರಾಜನು ಈ ಜಿನಾಲಯದ ಪೂರ್ಣ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಂಡನು.

ಈ ಶಾಂತಿನಾಥ ಬಸದಿಯಲ್ಲಿ ಕೋಟೆಯ ಹಳೆ ಬಸದಿಯಲ್ಲಿದ್ದದ್ದೆಂದು ಹೇಳಲಾಗುವ ಸುಮಾರು ಮೂರು ಅಡಿ ಎತ್ತರದ ಆದಿ ಶಾಂತಿನಾಥ ಸ್ವಾಮಿಯ ಬಿಂಬವನ್ನು ಇಡಲಾಗಿದೆ. ಈ ಬಸದಿಯ ಗರ್ಭಗೃಹದಲ್ಲಿ ಸುಮಾರು 4.5ಅಡಿ ಎತ್ತರದ, ಮಕರ ತೋರಣಗಳಿಂದಲಂಕೃತವಾದ ಪ್ರಭಾವಲಯವಿರುವ ಖಡ್ಗಾಸನದ ಶ್ರೀ ಶಾಂತೀಶ್ವರ ಸ್ವಾಮಿಯ ಮನೋಹರ ಬಿಂಬವಿದೆ. ಈ ಬಸದಿಯ ಪ್ರಾರ್ಥನಾ ಮಂಟಪದಲ್ಲಿ ಒಂದು ಚಿಕ್ಕ ಶಿಲಾ ಖಂಡದ ಮೇಲೆ ಮುನಿಗಳ ಎರಡು ಪಾದಗಳ ಆಕೃತಿಯನ್ನು ಮಾಡಿಡಲಾಗಿದೆ. ಈ ಬಸದಿಯ ಮೇಗಿನ ನೆಲೆ (ಮಾಳಿಗೆ)ಯಲ್ಲಿ ವಿಶಿಷ್ಟವಾದ ಕಂಚಿನ ಖಡ್ಗಾಸನದ ಸುಮಾರು 2.5 ಅಡಿ ಎತ್ತರದ ಶ್ರೀ ಆದೀಶ್ವರ ಸ್ವಾಮಿಯ ಬಿಂಬವಿದೆ. ಈ ಬಿಂಬದಲ್ಲಿ ಸ್ವಾಮಿಯ ಕೇಶವು ಭುಜಗಳ ಮೇಲೆ ಹರಡಿರುವುದನ್ನೂ, ಪ್ರಭಾವಲಯದಲ್ಲಿ ಚೌಕುಳಿಯಾಕಾರದ ಚಿತ್ರಿಕೆಗಳಿರುವುದನ್ನೂ ಗಮನಿಸಿಕೊಂಡರೆ, ಈ ಜಿನಬಿಂಬವು ಬಹು ಪ್ರಾಚೀನವಾದುದೆಂದು ಹೇಳಬೇಕಾಗುತ್ತದೆ. ಪ್ರಾಯಶಃ ಬಂಗಾಡಿಯಲ್ಲಿರುವ ಜಿನ ಬಿಂಬಗಳ ಪೈಕಿ ಅತ್ಯಂತ ಪ್ರಾಚೀನ ಬಿಂಬವಾಗಿದೆ.

ಹಿಂದೂ, ಜೈನ ಸಂಪ್ರದಾಯಗಳೆರಡರಲ್ಲೂ, ಪ್ರಸಿದ್ಧವಾಗಿರುವ ಶ್ರೀ ವೀರಭದ್ರ ದೇವಾಲಯವು ಬಂಗಾಡಿಯಲ್ಲಿದೆ. ಪೂರ್ಣವಾಗಿ ಶಿಲಾಮಯವಾಗಿರುವ ಈ ದೇವಾಲಯವು ಬಹಳ ಪ್ರಾಚೀನವಾಗಿರುವಂತೆ, ಬಂಗರಸರ ಪರಮತ ಸಹಿಷ್ಣುತೆಗೆ ಸಾಕ್ಷಿಯಾಗಿದೆ. ಶೈವ ಸಂಪ್ರದಾಯಕ್ಕೆ ಸೇರಿದ ಈ ದೇವತೆಯು ಸಂತಾನ ಪ್ರಾಪ್ತಿಗಾಗಿ ಬಂಗಾಡಿಯಲ್ಲಿ ಭಜಿಸಲ್ಪಡುತ್ತಿದ್ದುದು ಇದೇ ದೇವಾಲಯದ ಗರ್ಭ ಗೃಹದ ಮುಂದಿನ

ಮಂಟಪದಲ್ಲಿರುವ ಕ್ರಿ. ಶ. 1473ನೇ ಇಸವಿಯ ಕಾಮಿರಾಯ ಬಂಗನ ಶಾಸನದಿಂದ ತಿಳಿದು ಬರುತ್ತದೆ.

ಜೈನ ಬಂಗರಸರ ರಾಜಧಾನಿ ಬಂಗಾಡಿಯಲ್ಲಿ ಶ್ರೀ ಲಲಿತಕೀರ್ತಿ ಭಟ್ಟಾರಕ ಸ್ವಾಮಿಗಳ ಶಾಲಾ ಮಠವೊಂದಿರುವುದು ಒಂದು ವಿಶೇಷವಾಗಿದೆ. ಇದು ಕ್ರಿ. ಶ. 1700ಕ್ಕಿಂತ ಮೊದಲೇ ಇಲ್ಲಿ ಅಸ್ತಿತ್ವದಲ್ಲಿತ್ತೆಂಬುದು ಕವಿ ಚಂದ್ರಶೇಖರನ ಶ್ರೀ ರಾಮಚಂದ್ರ ಚರಿತ್ರೆಯಿಂದ ತಿಳಿದುಬರುತ್ತದೆ. ಕವಿಯು ಹೇಳುವಂತೆ, ಬಂಗಾಡಿಯ ಜೈನ ಶ್ರಾವಕರಿಗೆ ಶ್ರೀ ಲಲಿತಕೀರ್ತಿ ಸ್ವಾಮಿಗಳು ಈ ಮಠದಲ್ಲಿದ್ದು ವೈರಾಗ್ಯವನ್ನು ಬೋಧಿಸುತ್ತಿದ್ದರು. ಇದರಿಂದಾಗಿ, ಇಲ್ಲಿಯ ಜನರಲ್ಲಿ ಆಧ್ಯಾತ್ಮಿಕ ಶ್ರದ್ಧೆಯಿದ್ದು, ಧಾರ್ಮಿಕ ಜಾಗೃತಿಯು ನೆಲೆಸಿತ್ತು- ಎಂದು ಹೇಳಬಹುದು.

ಶ್ರೀ ಶಾಂತಿನಾಥ ಬಸದಿಯ ಆವರಣದ ಎಡ ಮಗ್ಗುಲಿಗೆ ಕ್ರಿ. ಶ. 1700ರಿಂದಲೇ ರತ್ನತ್ರಯ ಬಸದಿಯಿದ್ದುದು ನಮಗೆ ತಿಳಿದು ಬರುತ್ತದೆ. ಆದರೆ, ಬಸದಿಗೆ ಇರಬೇಕಾದ ಎಲ್ಲಾ ಮಂಟಪಗಳು, ಇಲ್ಲದ್ದ ಈ ರತ್ನತ್ರಯ ಬಸದಿಯಲ್ಲಿ ಕೇವಲ ಶ್ರೀ ಪದ್ಮಪ್ರಭ ತೀರ್ಥಂಕರರ ಸುಮಾರು ಮೂರು ಅಡಿ ಎತ್ತರದ ಕಂಚಿನ ಬಿಂಬಕ್ಕೆ ಮಾತ್ರವಿದೆ. ಹೇಗಿದ್ದರೂ, ಈ ಬಸದಿಯು ಇತ್ತೀಚಿನ ರಚನೆ ಎಂಬುದು ನಿರ್ವಿವಾದ. ಇದೇ ಶಾಂತಿನಾಥ ಬಸದಿಯ ಬಲ ಬದಿಗೆ ಚತುರ್ವಿಂಶತಿ ತೀರ್ಥಂಕರರ ಬಸದಿಯಿದೆ. ಇಲ್ಲಿರುವ ಸುಮಾರು ಒಂದೂವರೆ ಅಡಿ ಎತ್ತರದ ಕಂಚಿನ 24 ತೀರ್ಥಂಕರರ ಬಿಂಬಗಳೂ, ಶ್ರೀ ಪದ್ಮಾವತಿ ಹಾಗೂ ಶ್ರೀ ಜ್ವಾಲಾಮಾಲಿನಿಯ ಶಿಲಾ ಬಿಂಬಗಳೂ ಮನೋಹರ ವಾಗಿದ್ದು ಮನಸ್ಸಿನಲ್ಲಿ ಭಕ್ತಿಭಾವವನ್ನುಂಟು ಮಾಡುತ್ತವೆ.

ಜೈನ ರಾಜಧಾನಿಯಾದ ಈ ಬಂಗಾಡಿಗೆ ಬಂದು ನೆಲೆ ನಿಂತು ಮೊತ್ತ ಮೊದಲು ಆಳ್ವಿಕೆಯನ್ನು ಪ್ರಾರಂಭಿಸಿದ ವೀರ ನರಸಿಂಹ ಬಂಗನು ಶ್ರೀ ಸೋಮನಾಥ ದೇವಾಲಯವನ್ನೂ, ಶ್ರೀ ಗಣಪತಿ ದೇವಾಲಯವನ್ನೂ ಕಟ್ಟಿಸಿದ್ದನೆಂದು ಹೇಳಲಾಗಿದೆ. ಅವುಗಳ ಪೈಕಿ ಶ್ರೀ ಗಣಪತಿಯ ದೇವಾಲಯವು ಈಗಿನ ಬಂಗಾಡಿ ಪೇಟೆಯ ಸಮೀಪದಲ್ಲಿದೆ.

ಲಲಿತಕೀರ್ತಿ ಮುನಿಗಳಿಂದ ಸ್ಥಾಪಿಸಲ್ಪಟ್ಟುದೆಂದು ಹೇಳಲಾಗುವ ಶ್ರೀ ಚಂದ್ರಪ್ರಭ ಸ್ವಾಮಿಯ ಮಠದ ಬಸ್ತಿಯು ಬಂಗಾಡಿಯಲ್ಲಿ ಕಂಡು ಬರುವ ಇನ್ನೊಂದು ಪುಣ್ಯ ನಿಧಿ. ಬಹು ಪ್ರಾಚೀನ ಕಾಲದಲ್ಲಿ ಕಟ್ಟಲ್ಪಟ್ಟಿದ್ದ ಈ ಬಸದಿಯು ಕೆಲವು ವರ್ಷಗಳ ಹಿಂದೆ ಪೂರ್ಣ ಜೀರ್ಣವಾಗಿದ್ದು ಅಲ್ಲಿಯ ಶ್ರೀ ಚಂದ್ರಪ್ರಭ ಸ್ವಾಮಿಯ ಬಿಂಬವನ್ನು ಶಾಂತಿನಾಥ ಬಸದಿಯಲ್ಲಿಟ್ಟಿದ್ದರು. ಈ ಬಿಂಬವನ್ನು ಈ ಬಸದಿಯಲ್ಲಿ ಪ್ರತಿ ಷ್ಠಾಪಿಸಲಾಗಿದೆ. ಗಂಭೀರ ಮುಖ ಮುದ್ರೆಯೊಂದಿಗೆ ಪರ್ಯಂಕಾಸನದಲ್ಲಿರುವ

ಬಿಳಿಶಿಲೆಯ ಈ ಸ್ವಾಮಿಯ ಬಿಂಬವು ಬಹು ಪ್ರಾಚೀನವಾಗಿರುವಂತೆ ಬಂಗರಿಗೂ, ತಲಕಾಡಿನ ಗಂಗರಿಗೂ ಸಂಬಂಧವನ್ನು ಕಲ್ಪಿಸುವಲ್ಲಿ ಪ್ರಧಾನ ಕೊಂಡಿಯಾಗಿದೆ.

ಇಂದಿನ ಅರಮನೆ ಬಸದಿಯೊಳಗಿರುವ ಶ್ರೀ ಆದೀಶ್ವರ ಸ್ವಾಮಿಯು ಅರಮನೆಯ ಜೀವದಂತಿದ್ದು ಪ್ರಾಚೀನ ಕಾಲದಿಂದಲೂ, ಅರಸುಮನೆತನವನ್ನು ರಕ್ಷಿಸುತ್ತಾ ಸತ್ಪಥದಲ್ಲಿ ನಡೆಸುತ್ತಿರುವ ಅರಮನೆಯವರ ಪ್ರಧಾನ ಆರಾಧ್ಯ ದೈವ.

ಬಂಗರ ರಾಜಧಾನಿಯಾಗಿಯೂ, ಜೈನರ ಅತಿಶಯ ಕ್ಷೇತ್ರವಾಗಿಯೂ ಮೆರೆಯುತ್ತಿರುವ ಬಂಗಾಡಿಯ ಸ್ಥಿತಿಯು ಹಾಳಾದಾಗ ಅದನ್ನು ಇನ್ನೊಮ್ಮೆ ಆಧರಿಸಿ, ಸಬಲಗೊಳಿಸಿದ ಕೀರ್ತಿಯು ಈ ಶತಮಾನದ ಪ್ರಾರಂಭದಲ್ಲಿದ್ದ ಶ್ರೀ ಚಂದಯ್ಯ ಹೆಗ್ಗಡೆಯವರಿಂದ ತೊಡಗಿ, ಶ್ರೀ ಕ್ಷೇತ್ರ ಧರ್ಮಸ್ಥಳದ ಮುಂದಿನ ಎಲ್ಲಾ ಧರ್ಮಾಧಿಕಾರಿಗಳಿಗೂ ಸಲ್ಲುತ್ತದೆ. ಶ್ರೀ ಶಾಂತಿನಾಥ ಬಸದಿಯ ರಥೋತ್ಸವದಂತಹ ಪುಣ್ಯ ಕಾರ್ಯದಲ್ಲಿಯೂ ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಕೊಡುವ ಸಹಾಯವೂ ಅಭಿನಂದನೀಯವಾದುದು.

ಸಾಹಿತ್ಯ ಕಲೆಗಳಿಗೆ ಬಂಗರಸರ ಕೊಡುಗೆ

ತಮ್ಮ ಪ್ರಜಾ ಹಿತಕಾರಿ ಉತ್ತಮ ಆಡಳಿತದ ಮುಖಾಂತರ ಆರ್ಥಿಕ ಉನ್ನತಿ ಹಾಗೂ ಸಾಮಾಜಿಕ ಸಾಮರಸ್ಯಗಳನ್ನು ಸಾಧಿಸಿಕೊಂಡ ಬಂಗರಸರು ಸಾಹಿತ್ಯ ಕಲೆಗಳಿಗೆ ವಿಶೇಷ ಪ್ರೋತ್ಸಾಹವನ್ನೂ ಕೊಟ್ಟಿದ್ದರು. ಇವರ ಅರಮನೆಯು ಕವಿಗಳ, ಕಲಾವಿದರ, ವೈದ್ಯರ, ಜ್ಯೋತಿಷ್ಕರ ಮತ್ತು ವಿದ್ವಾಂಸರ ನೆಲೆವೀಡಾಗಿತ್ತು. ಅವರನ್ನು ತಮ್ಮ ಅರಮನೆಗೆ ಕರೆದು ಅವರಿಗೆ ಆಶ್ರಯವನ್ನೂ, ಪ್ರೋತ್ಸಾಹವನ್ನೂ ಇವರು ನಿರಂತರವಾಗಿ ಕೊಡುತ್ತಾ ಬಂದಿದ್ದರು. ಕ್ರಿ. ಶ. 1460ರ ಸುಮಾರಿಗೆ ಕಾಮರಾಯ ಬಂಗನ ಆಸ್ಥಾನ ಕವಿಯಾಗಿದ್ದ ವಿಜಯವರ್ಣಿಯು ತನ್ನ ಅಲಂಕಾರ ಶಾಸ್ತ್ರದ ಗ್ರಂಥವಾಗಿ ಶೃಂಗಾರಾರ್ಣವ ಚಂದ್ರಿಕಾ ಎಂಬ ಗ್ರಂಥದ ಒಂದನೆಯ ಪರಿಚ್ಛೇದದ 18-19ನೇ ಶ್ಲೋಕಗಳಲ್ಲಿ, "ಶ್ರೀ ಕಾಮಿರಾಯ ಬಂಗೇಂದ್ರಃ ಪಾಲಯತ್ಯಮಲಶ್ರಿಯಂ ॥ ಸ ರಾಜಾ ಕಾವ್ಯ ಗೋಷ್ಠಿಷು ಸಭಾಜನ ವಿಭೂಷಿತಃ ॥" ಎಂದಿರುವುದರಿಂದ ಆಗಲೇ ಅರಮನೆಯಲ್ಲಿ ಕಾವ್ಯ ಗೋಷ್ಠಿಗಳು ನಡೆಯುತ್ತಿದ್ದುವೆಂದು ಹೇಳಬಹುದು. ಅದರಂತೆ, ರಾಜನೇ ಸ್ವತಃ ಕವಿಯಾಗಿದ್ದನೆಂಬುದಾಗಿ ವಿಜಯವರ್ಣಿಯು ಹೇಳಿರುವನು. ಕ್ರಿ. ಶ. 1700ರಲ್ಲಿ ಲಕ್ಷ್ಮಪ್ಪರಸ ಬಂಗನ ಆಸ್ಥಾನದಲ್ಲಿದ್ದ ಕವಿ ಚಂದ್ರಶೇಖರನು ರಾಜನ ಆಸ್ಥಾನದಲ್ಲಿ ಸಕಲ ವಿದ್ಯಾಪಾರಂಗತರಾದ ವಿದ್ವಾಂಸರಿದ್ದರೆಂಬುದನ್ನು ತನ್ನ ಕಾವ್ಯದ ಪೀಠಿಕಾ ಸಂಧಿಯಲ್ಲಿ ಈ ರೀತಿ ಹೇಳಿರುವನು:-

ಆ ನೃಪ ಸಭೆಯೊಳಖಿಲ ಚತುಃ ಷಷ್ಟಿಕ
ಲಾ ನಿಪುಣರ ನಟ್ಟನಡುವೆ

ನಾನಲ್ಪಬುದ್ಧಿ ಶಂಕರನಾಮ ಕವಿ ಚಂಡ
ಭಾನುವಿದಿರ ಸೊಡರಂತೆ । (1-30)

ಆದುದರಿಂದ, ಆ ರಾಜನ ಸಭೆಯಲ್ಲಿ 64 ಕಲೆಗಳಲ್ಲಿಯೂ ಪರಿಪೂರ್ಣವಾಗಿರುವ ನಿಷ್ಣಾತರಾದ ವ್ಯಕ್ತಿಗಳಿದ್ದರೆಂದಾಯಿತು. ಅಂತಹವರ ಪೈಕಿ ಆ ರಾಜನ ಸಭೆಯಲ್ಲಿದ್ದ ಪದ್ಮನಾಭನೆಂಬ ಕವಿಯೂ ಪ್ರಮುಖನಾದವನು ಎಂದು ಹೇಳಿರುವನು.

ಬಂಗರ ಅರಮನೆಯಲ್ಲಿ ಸುಖೋಪಯೋಗಿ ವಿಭಿನ್ನ ವಸ್ತುಗಳನ್ನು ತಯಾರಿಸುವ ಕುಶಲಕರ್ಮಿಗಳಿದ್ದರು. ಚಿನ್ನದ ಹಣ ಟಂಕಿಸುವಷ್ಟು ಶ್ರೀಮಂತರಾಗಿದ್ದ ಬಂಗರಿಗಾಗಿ ಚಿನ್ನ, ಬೆಳ್ಳಿ ಹಾಗೂ ನವರತ್ನ ಖಚಿತವಾದ ಆಭರಣಗಳನ್ನು ತಯಾರಿಸುವ ಸೂಕ್ಷ್ಮ ಕುಶಲ ಕರ್ಮಿಗಳಿದ್ದರು. ಶಿಲಾ ಅಥವಾ ಕಂಚಿನ ಮೂರ್ತಿಗಳನ್ನು ತಯಾರಿಸುವ ಶಿಲ್ಪಿಗಳಿಗೆ ಬಂಗರಸರು ರಾಜಾಶ್ರಯ ನೀಡಿದ್ದರು. ಶಿಲಾಶಾಸನಗಳನ್ನು ಬರೆಯುವವರು, ಜ್ಯೋತಿಷ್ಕರು, ವೈದ್ಯರು, ಯೋಗಾಭ್ಯಾಸಿಗಳು, ರಾಜನೀತಿ ಚತುರರು ಹಾಗೂ ತತ್ವಜ್ಞಾನಿಗಳು ಈ ಅರಮನೆಯಲ್ಲಿದ್ದರೆಂಬುದು ಈ ರಾಜ ಸಭೆಯಲ್ಲಿ ಬರೆಯಲ್ಪಟ್ಟ ಕೃತಿಗಳಿಂದ ತಿಳಿದುಬರುತ್ತದೆ.

ಬಂಗರಸರ ಅರಮನೆಯಲ್ಲಿದ್ದ ಕವಿಗಳ ಪೈಕಿ ವಿಜಯವರ್ಣಿ ಎಂಬ ಅಲಂಕಾರ ಶಾಸ್ತ್ರಜ್ಞನಾದ ಕವಿಯು ಅತಿ ಪ್ರಸಿದ್ಧನು. ಈತನು ಕಾಮರಾಜನ ಆಸ್ಥಾನದಲ್ಲಿ ತನ್ನ ಶೃಂಗಾರಾರ್ಣವ ಚಂದ್ರಿಕಾ ಎಂಬ ಅಲಂಕಾರ ಶಾಸ್ತ್ರದ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿರುವನು. ಇವನು ಜಿನ ದೀಕ್ಷೆಯನ್ನು ತೆಗೆದುಕೊಂಡಿದ್ದ ಬ್ರಹ್ಮಚಾರಿ. ಇವನ ಗ್ರಂಥವನ್ನು ಅಲಂಕಾರ ಸಂಗ್ರಹವೆಂದೂ ಕರೆಯಲಾಗಿದೆ. ಇದು ದಂಡಿಯ ಕಾವ್ಯಾದರ್ಶದ ಮಟ್ಟಕ್ಕೆ ಸಮಾನವಾಗಿದ್ದುದರಿಂದ 1969ನೇ ಇಸವಿಯಲ್ಲಿ ಭಾರತೀಯ ಜ್ಞಾನಪೀಠ ದವರಿಂದ ಪ್ರಕಟವಾಗಿದೆ. ಈ ಗ್ರಂಥವು ಬಂಗಾಡಿಯ ಹೆಸರನ್ನು ಅಖಿಲ ಭಾರತಕ್ಕೆ ಪರಿಚಯ ಮಾಡಿಕೊಟ್ಟಿದೆ. ಇದರಲ್ಲಿ ಅಲಂಕಾರ ಶಾಸ್ತ್ರದ ನಿಯಮಗಳನ್ನು ವಿವರಿಸು ವುದರೊಂದಿಗೆ ಕವಿಯು ಹಲವಾರು ಐತಿಹಾಸಿಕ ಘಟನೆಗಳನ್ನು ಉಲ್ಲೇಖಿ ಸಿದ್ದಾನೆ. ಶಾಸ್ತ್ರ ನಿಯಮಗಳನ್ನು ವಿವರಿಸುವಾಗ ಕೊಡುವ ಉದಾಹರಣೆಗಳ ಕಾಮರಾಯ ಬಂಗರಸನ ಜೀವನದಲ್ಲಿ ಬಂದಿದ್ದ ಘಟನೆಗಳೇ ಆಗಿವೆ ಎಂಬುದನ್ನು ಈ ಗ್ರಂಥದ ಅಧ್ಯಯನದಿಂದ ತಿಳಿದುಕೊಳ್ಳಬಹುದು. ಕಾಮರಾಯನವರೆಗಿನ ಬಂಗರಾಜರ ವಂಶ ಚರಿತ್ರೆಯನ್ನು ಈ ಗ್ರಂಥದ ಪ್ರಾರಂಭದಲ್ಲಿ ವಿವರಿಸಲಾಗಿದೆ. ಅಲಂಕಾರ ಶಾಸ್ತ್ರದ ವಿಭಿನ್ನ ಅಂಶಗಳಾದ ವರ್ಣಗಣಫಲ ನಿರ್ಣಯ, ಕಾವ್ಯಗತ ಶಬ್ದಾರ್ಥ ನಿಶ್ಚಯ, ರೀತಿ ನಿಶ್ಚಯ, ವೃತ್ತಿ ನಿಶ್ಚಯ, ಶೈಯ್ಯಾಪಾಕ ನಿಶ್ಚಯ, ಅಲಂಕಾರ ನಿರ್ಣಯ ಮತ್ತು ದೋಷಗುಣ ನಿರ್ಣಯ- ಎಂಬ ಹತ್ತು ಪರಿಚ್ಛೇದಗಳಲ್ಲಿ ಇದನ್ನು ವಿವರಿಸಿರುವನು.

ಕೇಶವ ಮಿತ್ರನೆಂಬವನು ಬಂಗರ ನಂದಾವರದ ಅರಮನೆಯವರ ಆಶ್ರಯದಲ್ಲಿದ್ದು, ತರ್ಕ ಪರಿಭಾಷಾ ಎಂಬ ಸಂಸ್ಕೃತ ಗ್ರಂಥವನ್ನು ಬರೆದಿರುವಂತೆ, ಮೂಡುಬಿದ್ರೆಯ ಶ್ರೀಮತಿ ರಮಾರಾಣಿ ಜೈನ ಸಂಶೋಧನಾ ಕೇಂದ್ರದಲ್ಲಿರುವ ಗ್ರಂಥದಿಂದ ತಿಳಿದುಬರುತ್ತದೆ. ಈ ಗ್ರಂಥವನ್ನು ಕನ್ನಡ ಲಿಪಿಯಲ್ಲಿ ಬರೆಯಲಾಗಿದೆ. ತರ್ಕಶಾಸ್ತ್ರಕ್ಕೆ ಸಂಬಂಧಪಟ್ಟ ಈ ಗ್ರಂಥದಲ್ಲಿ ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ, ದೃಷ್ಟಾಂತ, ಸಿದ್ಧಾಂತ ಇತ್ಯಾದಿ ವಿಷಯಗಳನ್ನು ಬಾಲಕರಿಗೆ ತಿಳಿಯ ಹೇಳುವ ತಾನು ಹೇಳಿರುವುದಾಗಿ ಗ್ರಂಥ ಕರ್ತನು ಹೇಳಿಕೊಂಡಿದ್ದಾನೆ. ತಾನು ಈ ರೀತಿಯಲ್ಲಿ ಗ್ರಂಥವನ್ನು ನಂದಾವರದ ಜೈನ ಬಸದಿಯೊಂದರಲ್ಲಿ ದುಂದುಭಿನಾಮ ಸಂವತ್ಸರದ ವೈಶಾಖ ಕೃಷ್ಣಪಕ್ಷ ಸಪ್ತಮಿ ರವಿವಾರದಂದು ಬರೆದು ಮುಗಿಸಿರುವುದಾಗಿ ಹೇಳಿದ್ದಾನೆ. ಗ್ರಂಥಾರಂಭದಲ್ಲಿ ಆದಿ ಜಿನನನ್ನೂ, ಗುರು ದೇವವರ್ಣಿಯನ್ನೂ ಸ್ಮರಿಸಿಕೊಂಡಿರುವುದರಿಂದ ಕವಿಯು ಜೈನನೆಂದು ಕಾಣುತ್ತದೆ.

ಶಾಂತರಸನೆಂಬ ಕವಿಯು "ಯೋಗ ರತ್ನಾಕರ" ಎಂಬ ಸಂಸ್ಕೃತ ಗ್ರಂಥವನ್ನು ಲಕ್ಷ್ಮಪ್ಪರಸ ಬಂಗನ ಆಸ್ಥಾನದಲ್ಲಿ ಬರೆದಿದ್ದನು. ಚಿಕ್ಕದಾಗಿರುವ ಈ ಗ್ರಂಥದ ಹಸ್ತಪ್ರತಿಯು ಮೂಡುಬಿದ್ರೆಯ ಶ್ರೀಮತಿ ರಮಾರಾಣಿ ಜೈನ ಸಂಶೋಧನಾ ಕೇಂದ್ರದಲ್ಲಿ ಲಭ್ಯವಿದೆ. ಈತನು ಚಂದ್ರಶೇಖರ ಕವಿಯ ಮಾರ್ಗದರ್ಶನದಲ್ಲಿ ಶಾಲಿವಾಹನ ಶಕ 1641 (ಕ್ರಿ. ಶ. 1719)ನೇ ವಿಕಾರಿ ಸಂವತ್ಸರದ ಫಾಲ್ಗುಣ ಹುಣ್ಣಿಮೆಯಂದು ಬರೆದು ಮುಗಿಸಿದನು. ಯೋಗ ಶಾಸ್ತ್ರದ ಎಲ್ಲಾ ವಿಷಯಗಳನ್ನೂ ಕವಿಯು ಬಹು ಸಂಕ್ಷಿಪ್ತವಾಗಿ ವಿವರಿಸಿ, ಜೈನ ಮಂಗಲ ಶ್ಲೋಕದೊಂದಿಗೆ ಈ ಗ್ರಂಥವನ್ನು ಕೊನೆಗೊಳಿಸಿದ್ದಾನೆ. ಇದರಿಂದಾಗಿ ಈತನೂ ಜೈನ ಮತದವನೆಂದೇ ನಾವು ತಿಳಿಯಬಹುದು.

ಲಕ್ಷ್ಮಪ್ಪರಸ ಬಂಗನ ಆಸ್ಥಾನದಲ್ಲಿದ್ದ ಕವಿ ಪದ್ಮನಾಭನೆಂಬವನು "ಯೋಗ ರತ್ನಾಕರ"ವೆಂಬ ಇನ್ನೊಂದು ಗ್ರಂಥವನ್ನು ಕನ್ನಡದಲ್ಲಿ ರಚಿಸಿರುವನು. ಶಾಂತರಸನು ಸಂಸ್ಕೃತದಲ್ಲಿ ವಿವರಿಸಿದ್ದ ಯೋಗಶಾಸ್ತ್ರವನ್ನು ಬಹಳ ಸರಳವಾದ ಕನ್ನಡದಲ್ಲಿ ತಾನು ವಿವರಿಸುತ್ತಿರುವುದಾಗಿ ಕವಿಯು ಹೇಳಿಕೊಂಡಿದ್ದಾನೆ. ಪ್ರಾಯಶಃ ಇದು ಆ ಸಂಸ್ಕೃತ ಗ್ರಂಥದ ಅಪ್ಪಟ ಭಾಷಾಂತರ. ಈತನು ಬ್ರಾಹ್ಮಣ ವರ್ಗಕ್ಕೆ ಸೇರಿದ್ದ ಚಂದ್ರಶೇಖರನೆಂಬ ವೈದಿಕನ ಮಗನು. ಆದರೆ ಈ ಗ್ರಂಥದ ಪ್ರಾರಂಭದಲ್ಲಿ ಜಿನಸ್ತುತಿಯಿದ್ದು ಮುಂದೆ ಅರಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು ಮತ್ತು ಸರ್ವಸಾಧುಗಳು ಎಂಬ ಪಂಚ ಪರಮೇಷ್ಠಿಗಳನ್ನು ಸ್ತುತಿಸಲಾಗಿದೆ. ಅಲ್ಲಲ್ಲಿ ಜೈನ ರತ್ನತ್ರಯಗಳಾದ, ಸಮ್ಯಕ್‌ದರ್ಶನ, ಸಮ್ಯಕ್ ಚಾರಿತ್ರ್ಯ ಮತ್ತು ಸಮ್ಯಕ್ ಜ್ಞಾನಗಳನ್ನು ಉಲ್ಲೇಖಿಸಲಾಗಿದೆ. ಇದರಿಂದಾಗಿ ಈತನೂ ಜೈನ ಮತಾವಲಂಬಿಯಾಗಿರಬಹುದೆಂದು ಹೇಳಬಹುದು. ಯೋಗಶಾಸ್ತ್ರವನ್ನು ವಿವರಿಸುವ ಈ ಕೃತಿಯು ಗಾತ್ರದಲ್ಲಿ ಚಿಕ್ಕದಾಗಿದ್ದು, ಇದರಲ್ಲಿ

ಒಟ್ಟು 503 ಪದ್ಯಗಳಿರುವ ಎಂಟು ಅಂಗಗಳಿವೆ. ಅದಕ್ಕಿಂತ ಮೊದಲು ಸಂಸ್ಕೃತದಲ್ಲಿ ವಿವರಿಸಲ್ಪಟ್ಟ ಈ ಶಾಸ್ತ್ರವನ್ನು ಕನ್ನಡದಲ್ಲಿ ವಿವರಿಸುವಾಗ ಕವಿಯು ಸಂಸ್ಕೃತ ಭಾಷೆಯಿಂದ ವಿಶೇಷವಾಗಿ ಪ್ರಭಾವಿತನಾಗದೆ, ಸರಳಗನ್ನಡದಲ್ಲೇ ವಿಷಯವನ್ನು ವಿಸ್ತರಿಸಿರುವುದು ಕಂಡುಬರುತ್ತದೆ. ಇದು ಈ ಗ್ರಂಥದ ಹಿರಿಮೆ.

ಚಂದ್ರಮನೆಂಬ ಒಬ್ಬ ಕವಿಯು ಬಂಗಾಡಿಯ ಶ್ರೀ ಶಾಂತಿನಾಥ ಬಸದಿಯಲ್ಲಿದ್ದು ಕೊಂಡು "ಶ್ರೀ ಪದ್ಮಾವತಿ ಚರಿತ್ರೆ"ಯನ್ನು ಬರೆದಿರುವನೆಂದು ಇತರ ಗ್ರಂಥಗಳಿಂದ ನಮಗೆ ತಿಳಿದು ಬಂದರೂ, ಆ ಕವಿಯ ಜೀವನ ವೃತ್ತಾಂತವಾಗಲೀ, ಅವನ ಗ್ರಂಥದ ಕುರಿತಾದ ಯಾವುದೇ ಹೆಚ್ಚಿನ ಮಾಹಿತಿಗಳಾಗಲೀ ಲಭ್ಯವಾಗುವುದಿಲ್ಲ.

ಕವಿ ಧರಣಿಗ ಅಥವಾ ಧರಣೇಂದ್ರನೆಂಬವನು 1835ರಲ್ಲಿ ನಂದಾವರದ ಅರಮನೆಯಲ್ಲಿ ಆಳುತ್ತಿದ್ದ ವಿಮಲ ಪುಣ್ಯೋದಯ ಲಕ್ಷಣ ಮಹಿವರನಾದ ಲಕ್ಷ್ಮಪ್ಪರಸ ಬಂಗನ ಆಸ್ಥಾನದಲ್ಲಿ ಒಂದು ಸ್ತುತಿ ಸಂಗ್ರಹವನ್ನು ಬರೆದಿರುವನು. ಕವಿಯು ತಾನು ನಂದಾವರದ ಪದುಮಣ್ಣನ ಮಗನೆಂದು ಹೇಳಿ ಕೊಂಡಿರುವನು. ಈ ಕೃತಿಯನ್ನು ನಂದಾವರದ ಅರಮನೆಯ ರಾಣಿ ಚಂದ್ರಮತಿ ಕೇಳಿಕೊಂಡ ಅನುಸಾರ ಬರೆದಿರುವುದಾಗಿ ಕವಿಯು ಹೇಳಿದ್ದಾನೆ. ಈ ಕೃತಿಯ ತಾಡಪತ್ರ ಗ್ರಂಥವು ಈಗ ಬಂಗಾಡಿ ಅರಮನೆ ಯಲ್ಲಿರುವ ಶ್ರೀ ರವಿರಾಜರ ವಶದಲ್ಲಿದೆ. ಇದರಲ್ಲಿ ಕವಿ ಧರಣಿಗನು ಬರೆದಿರುವ "ಪದ್ಮಾವತಿ ಶೋಭಾನೆ" ಎಂಬ 25 ಪದ್ಯಗಳೂ, "ಶ್ರೀ ಶಾಂತಿನಾಥ ಶೋಭಾನೆ" ಎಂಬ 125 ಗೀತೆಗಳೂ, "ಸುವಾಲಿ ಪದಗಳು" ಎಂಬ 33 ಹಾಡುಗಳೂ, "ನೇಮೀಶ್ವರನ ತೊಟ್ಟಿಲ ಪದ" ಎಂಬ 40 ಜೋಗುಳದ ಹಾಡುಗಳೂ ಇವೆ. ಪರಮಾತ್ಮನೊಂದಿಗೆ ತಾದಾತ್ಮ್ಯವನ್ನು ಭಾವಿಸಿಕೊಂಡು ಬರೆದ ಈ ಪದ್ಯಗಳು ತುಂಬ ಮಾರ್ಮಿಕವಾಗಿದ್ದು ಆನಂದದಾಯಕವಾಗಿವೆ.

ನಾಲ್ಕಡಿ ಲಕ್ಷ್ಮಪ್ಪರಸ ಬಂಗರಾಜನ ಆಸ್ಥಾನದಲ್ಲಿದ್ದ ಇನ್ನೊಬ್ಬ ಹಿರಿಯ ಕವಿಯೆಂದರೆ, ಶ್ರೀ ರಾಮಚಂದ್ರ ಚರಿತ್ರ ಎಂಬ ಬೃಹತ್ ಕಾವ್ಯವೊಂದರ ಪೂರ್ವಾರ್ಧವನ್ನು ಬರೆದ ಚಂದ್ರಶೇಖರ ಕವಿ. 37 ಸಂಧಿಗಳೂ, 5269 ಸಾಂಗತ್ಯ ಪದ್ಯಗಳೂ ಇರುವ ಈ ಕಾವ್ಯದ ಮೊದಲಿನ 16 ಸಂಧಿಗಳು ಹಾಗೂ ಮುಂದಿನ ಸಂಧಿಯ 13 ಪದ್ಯಗಳನ್ನು ಬರೆದು ಕಾವ್ಯ ರಚನೆಯನ್ನು ಥಕ್ಕನೆ ನಿಲ್ಲಿಸಿರುವುದು ಕಂಡು ಬರುತ್ತದೆ. ಕವಿಯು ಅಷ್ಟರಲ್ಲಿ ಸ್ವರ್ಗಸ್ಥನಾಗಿರಬೇಕು. ಅರ್ಧದಲ್ಲಿ ಬರೆದು ನಿಲ್ಲಿಸಿದ್ದ ಈ ಕಾವ್ಯ ವನ್ನು ಬಂಗಾಡಿ ಅರಸರ ನೆಂಟರಿಷ್ಟರಾದ ಮೂಲ್ಕಿಯ ಸಾಮಂತರ ಅರಮನೆಯಲ್ಲಿದ್ದ ಪದ್ಮನಾಭನೆಂಬ ಕವಿಯು ಪೂರ್ಣಗೊಳಿಸಿದನು. ಈ ಗ್ರಂಥವು ಇನ್ನೂ ಪ್ರಕಟವಾಗಿಲ್ಲ.

ಚಂದ್ರಶೇಖರ ಕವಿಯ ಈ ರಾಮಚಂದ್ರ ಚರಿತ್ರವು ಬಂಗರ ಇತಿಹಾಸಕ್ಕೆ ಸಂಬಂಧ ಪಟ್ಟ ಹಲವಾರು ಅಮೂಲ್ಯ ಮಾಹಿತಿಗಳನ್ನು ಒದಗಿಸುವ ಒಂದು ಉಪಯುಕ್ತ ಗ್ರಂಥ.

ಶ್ರೀ ರಾಮಚಂದ್ರನ ಚರಿತ್ರೆಯನ್ನು ವಿವರಿಸುವುದೇ ಇದರ ಉದ್ದೇಶ. ಶ್ರೀ ರಾಮನನ್ನು ಈ ಕಾವ್ಯದಲ್ಲಿ ಒಬ್ಬ ಜೈನ ಭಟ್ಟಾರಕನನ್ನಾಗಿ ಚಿತ್ರಿಸಲಾಗಿದೆ. ರಾಮ, ವಿಭೀಷಣ, ಹನುಮಂತರು ಕೊನೆಯಲ್ಲಿ ಕೇವಲಿಗಳಾಗುತ್ತಾರೆ. ಒಬ್ಬ ಹಿರಿಯ ಕವಿಯ ಎಲ್ಲಾ ಯೋಗ್ಯತೆಗಳೂ ಕವಿ ಚಂದ್ರಶೇಖರನಲ್ಲಿ ಇದ್ದುವು. ಆದುದರಿಂದ ಈ ರಾಮಚಂದ್ರ ಚರಿತ್ರವನ್ನು ಪೂರ್ಣಗೊಳಿಸಿದ ಕವಿ ಪದ್ಮನಾಭನು ಈತನನ್ನು - ತ್ರೈವಿದ್ಯ ಚಕ್ರೇಶ, ಅಮಲಸಾಹಿತ್ಯ ಕಲಾವರ, ಊರ್ಜಿತ ತೇಜ, ಕೋವಿದ ಚಂದ್ರಶೇಖರ ಕವಿ ಎಂಬ ಮಾತುಗಳಿಂದ ಸ್ತುತಿಸಿರುವನು. ಅಂತೂ ಕ್ರಿ. ಶ. 1700ರಲ್ಲಿ ರಚಿತವಾದ ಈ ಕಾವ್ಯವು ಬಂಗಾಡಿಯಲ್ಲಿ ರಚಿತವಾದ ಕಾವ್ಯಗಳ ಪೈಕಿ ಬಹಳ ಉನ್ನತ ಮಟ್ಟದ್ದಾಗಿದೆ.

ಬಂಗರಸನ ಆಸ್ಥಾನದಲ್ಲಿ ಬರೆಯಲ್ಪಟ್ಟ ಗ್ರಂಥಗಳ ಪೈಕಿ ಇವು ಕೆಲವು ಮಾತ್ರ. ಮೂರನೆಯ ಲಕ್ಷ್ಮಪ್ಪರಸ ಬಂಗರಾಯನ ಅರಮನೆಯಲ್ಲಿ ಚಂದ್ರಶೇಖರನಂತಹ ಶ್ರೇಷ್ಠ ಕವಿಗಳಿಂದ ವಿಪುಲವಾದ ಸಾಹಿತ್ಯ ಕೃಷಿಯಾಗುವುದಕ್ಕಿಂತ ಮೊದಲು ನಮಗೆ ಸಿಗುವ ಕವಿ ವಿಜಯವರ್ಣಿಯೊಬ್ಬನು ಮಾತ್ರ. ಕಾಮಿರಾಜನ ಆಸ್ಥಾನವು ಕವಿಗೋಷ್ಠಿಯಿಂದ ಭೂಷಿತವಾಗಿತ್ತೆಂದು ವಿಜಯವರ್ಣಿಯೇ ಹೇಳಿರುವನು. ಅವನಂತಹ ಒಬ್ಬ ಅಖಿಲ ಭಾರತ ಮಟ್ಟದ ಕವಿಗೆ ಆಶ್ರಯವನ್ನು ಕೊಟ್ಟಿದ್ದ ಬಂಗರ ಅರಮನೆಯು ಒಮ್ಮಿಂದೊಮ್ಮೆಗೇ ಈ ಭವ್ಯ ಪರಂಪರೆಯನ್ನು ಕೈ ಬಿಟ್ಟಿರಲಿಕ್ಕಿಲ್ಲ. ಆ ಹಿರಿಯ ಕವಿಯ ದಾರಿಯಲ್ಲಿ ಕೆಲವರಾದರೂ ಮುಂದುವರಿದಿರಬಹುದು. ಆದರೆ, ಆ ಕಾಲದ ಸಾಹಿತ್ಯ ಸೃಷ್ಟಿಯ ಕುರಿತು ಏನೊಂದು ವಿಷಯವೂ ನಮಗೆ ತಿಳಿದು ಬರುವುದಿಲ್ಲ. ಆದರೆ ಇಂದಿನ ಬಂಗರ ಅರಮನೆಯ ಶ್ರೀಯುತ ರವಿರಾಜರಲ್ಲಿ ಹತ್ತಾರು ತಾಡಪತ್ರ ಗ್ರಂಥಗಳಿವೆ. ಅವುಗಳನ್ನು ಅಧ್ಯಯನ ಮಾಡಿದರೆ ಅಮೂಲ್ಯವಾದ ಸಾಹಿತ್ಯಿಕ ಹಾಗೂ ಐತಿಹಾಸಿಕ ವಿಷಯಗಳು ತಿಳಿದು ಬರಬಹುದು. ಅವರು ಕೊಟ್ಟಿರುವ ಕೈಫಿಯತ್ತಿನಿಂದಲೂ, ಬಂಗಾಡಿಯಲ್ಲಿ ಸಿಗುವ ಹಲವಾರು ಶಾಸನಗಳ ಅಧ್ಯಯನದಿಂದಲೂ ಇಷ್ಟು ವಿಷಯವನ್ನು ಸಂಗ್ರಹಿಸಿ ಬರೆಯಲು ಸಾಧ್ಯವಾಯಿತು.

ಸುಮಾರು 700 ವರ್ಷಗಳಷ್ಟು ದೀರ್ಘಕಾಲ ರಾಜ್ಯವಾಳಿದ ಬಂಗರ ಭವ್ಯ ಇತಿಹಾಸದಲ್ಲಿ ಬರುವ ಮಹತ್ವಪೂರ್ಣವಾದ ಘಟನೆ ಹಾಗೂ ಸಾಧನೆಗಳನ್ನು ಸಂಗ್ರಹಿಸುವ ಒಂದು ಚಿಕ್ಕ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಆದರೆ, ಇವರ ಇತಿಹಾಸಕ್ಕೆ ಸಂಬಂಧಪಟ್ಟ ಇನ್ನೆಷ್ಟೋ ಉಪಯುಕ್ತ ಮಾಹಿತಿಗಳು ಇನ್ನಾವುದೋ ಮೂಲಗಳಲ್ಲಿ ಅಡಗಿರಬಹುದು. ಅವೆಲ್ಲವುಗಳ ಸಮಗ್ರ ಅಧ್ಯಯನದಿಂದ ಆ ಅರಸು ಮನೆತನಕ್ಕೆ ಸಂಬಂಧಿಸಿದ ಇನ್ನಷ್ಟು ಉಪಯುಕ್ತ ಇತಿಹಾಸವು ಬೆಳಕಿಗೆ ಬರುವ ಶುಭ ದಿನವನ್ನು ನಿರೀಕ್ಷಿಸುತ್ತೇನೆ.

ಬಂಗಾಡಿಯಲ್ಲಿ ದೊರೆಯುವ ಶಾಸನಗಳು

1. ಬಂಗಾಡಿಯ ಶ್ರೀ ವೀರಭದ್ರ ದೇವಸ್ಥಾನದಲ್ಲಿ ಸಿಗುವ ಶಾಸನ:

ಈ ಶಾಸನವು ಶ್ರೀ ವೀರಭದ್ರ ದೇವಾಲಯದ ಗರ್ಭಗೃಹದ ಮುಂದಿನ ಮಂಟಪದಲ್ಲಿ 70 ಸೆಂ. ಮೀ. ಎತ್ತರ, 36 ಸೆಂ. ಮೀ. ಅಗಲ ಮತ್ತು 15 ಸೆಂ. ಮೀ. ದಪ್ಪವಿರುವ ಕಂಬದಂತಹ ಶಿಲಾಫಲಕದ ಮೇಲೆ ಬರೆದುದು ಕಂಡು ಬರುತ್ತದೆ. ಪೂರ್ತಿಯಾಗಿ ಕನ್ನಡದಲ್ಲಿ ಬರೆಯಲ್ಪಟ್ಟ ಈ ಶಾಸನವು ಬಂಗ ಅರಸನಾದ ಕಾಮಿರಾಯ ಬಂಗನದ್ದಾಗಿದೆ. ಈ ಶಾಸನದ ಕಾಲ ಶಾಲಿವಾಹನ ಶಕ 1395ನೇ ವಿಜಯ ಸಂವತ್ಸರದ ಕಾರ್ತಿಕ ಶುದ್ಧ 10 ಅಂದರೆ ಕ್ರಿ. ಶ. 1473ನೇ ಇಸವಿ, ನವಂಬರ್ ತಿಂಗಳ 4ನೇ ತಾರೀಕು, ಗುರುವಾರ. ಅಂದು ಚಂದ್ರಗ್ರಹಣವಿತ್ತು. ಶಾಸನದ ಪೂರ್ಣಪಾಠವು ಈ ರೀತಿಯಿದೆ.

1. ಶ್ರೀ ಗಣಾಧಿಪತ ಏ (ಯೇ) ನಮಃ ನಮಸ್ತುಂಗ ಶಿ
2. ರಶ್ಚುಂಬಿ ಚಂದ್ರಚಾಮ (ರ) ಚಾರವೇ ತ್ರಯಿಲೋ
3. ಕ್ಯ ನಗರಾರಂಭಂ ಮೂಲಸ್ತಂಭಾ
4. ಯ ಶಂಭವೇ ಸ್ವಸ್ತಿ ಶ್ರೀ ಜಯಾಭ್ಯುದಯ
5. ವಹ ಶಕ ವರುಷ ೧೩೯೫ ವರ್ತ್ತಮಾನ ವಿಜ
6. ಯ ಸಂವತ್ಸರದ ಕಾರ್ತಿಕ ಶು ೧೫ ನೆಲು ಬಂಗ
7. ವಾಡಿಯ ವೀರಭದ್ರ ದೇವರ ಆಮ್ರುತ ಪ (ಡಿ)
8. ಯ ಧಂರ್ಮಕೆ ಕಾಮಿರಾಯ ಅರಸರ (ರಾ) ದ (ಬ)
9. ಂಗರೂ ಬರಸಿಕೊಟ (ಟ್ಟ) ಶಿಲಾ ಶಾಸನದ ಕ್ರಮವೆ
10. ಂತೆಂದರೆ ಪಲ್ಲಶಂತದದುಕದ ಭೂಮಿ ಬಯಲು ಬಿ
11. ತ್ತುವ ಮು ೭ ಬೆಟ (ಟ್ಟು) ಮಜಲು ಮೂ ೩೮ ಉಭಯಂ
12. ಪಲಶಂತದುಕದಲ್ಲಿ ಬಿಂತ್ತು (ಬಿತ್ತು) ವ ಮು ೪೫ ಕಳವಿಯಲು ಬಿ
13. ತ್ತುವ ಬಯಲು ಮು ೧೮ ಉಭಯ ಬಗೆ ಎರಡ
14. ಂಬಿತ್ತುವ ಮುಡಿತ್ತಾದೆ ಬಯಲು ಮು ೨೫ ಬೆಂಟು (ಟ್ಟು)
15. ಮಜಲು ಮು ೩೮ ಉಭಯಂ ಮು ೬೩ ಅಕ್ಷರದಲು
16. ಮುಡಿತಾದೆ ಅರುವತ್ತ ಮು (ಮೂ) ರು ಅದಕೆ ಸಲುವ
17. ಕರ ಮರ ಸಹವಾಗಿ ಧಾರೆಯನೆರೆದು ಕೊಟೆ (ಟ್ಟೆ) ವಾಗಿ ಆ ಭೂಮಿ
18. ಯನು ನಂಜಪ್ಪನೂ ಬಳಿ ವೀರಭದ್ರ ದೇವರ ಅಮ್ರುತ ಪಡಿ
19. ಗೆ ಪ್ರತಿ ವರುಸ (ಷ) ೧ಕ್ಕೆ ನಡೆಸಿಬಹ ಭತ್ತ ಮೂ ೧೦೩ ಅಕ್ಷರದ

20. ಲು ನು (ನೂ)ರ ಮೂರು ಮುಡೆ ಭತ್ತವನು ನಡಸಿ ಆ ದೇವರ ದೇವಸ್ವಪೂಜೆಯ
21. ನು ಮಾಡಿಕೊಂಡು ಸಂತಾನ ಅಭಿವೃದ್ಧಿಯಾಗಿ ಗಂ
22. ಡು ಸಂತಾನ ಉಂಟಾದರೆ ಅವರು ಕರ್ತ
23. ರಾಗಿ ಬಾಳುವರು ಯಿಲ್ಲದೆ ಯಿದ್ದ
24. ರೆ ಆತನ ಹೆಂಣು ಸಂತಾನ ಬಾಳುವಾ (ವ)
25. ರು ಆ ನಂಜಪ್ಪನ ಗಂಡು ಸಂತಾನ ಹೆಂ
26. ಣು ಸಂತಾನವಿಲ್ಲದೆ ಯಿದ್ದರೆ ಅವರು ಗ
27. ಳ ಸೊಂಮು ಸಂಮ್ಮಂಧಉ ಆ ಭೂಮಿಯೂ
28. ವೀರಭದ್ರ ದೇವರಿಗೆ ಸಲುವುದು ಯೀ ಧಂ
29. ಮ್ಮ್ರಕ್ಕೆ ಆವನಾನೊಬ್ಬನು ಅಳುಪಿದರೆ ವಾ (ರ)
30. ಣಾಸಿಯಲಿ ಸಹಸ್ರ ಕಪಿಲೆಯ ಕೊಂ
31. ದ ದೋಷಿಯಹನು ಯೀ ಧಂಮ್ಮ್ರವನು ಆವ
32. ನಾನೊಬ್ಬ ಪ್ರತಿಪಾಲ್ಲಿ (ಲಿ) ಸಿದರೆ ಯಿಹದ
33. ಲ್ಲಿ ಸಕಲ ಸುಖವನು ಅನುಭೋಗಿಸು
34. ವನು ಪರದಲ್ಲಿ ಶ್ರೀ ವಿಷ್ಣುವಿನ ಪರಮ
35. ಪದವನೆಯಿದುವನು ಎಂಬ (ರ) ಸಿ ಕೊಟ್ಟ
36. ಶಿಲಾ ಶಾಸನ ಯೀ ಭೂಮಿಗೆ ಸೇಸೆ ಸಿ
37. ದ್ಧಾಯ ನಟ್ಟು ಬೇಡುದುಃಖ ಒಸಗೆ
38. ಆ ಉದ್ದ ಸಲ್ಲದು ಎಂದು ಬರೆಸಿ ಕೊ
39. ಟ್ಟ ಸವರ (ರವ) ಮಾಂನ್ಯ ಶ್ರೀ ವೀರಭದ್ರ ದೇವ
40. ರ ದೇವಸ್ಯ ಒಪ್ಪ ಶ್ರೀ ಸೋಮನಾತಾ (ಥ)

2. ಬಂಗಾಡಿಯ ಶ್ರೀ ಶಾಂತಿನಾಥ ಸ್ವಾಮಿಯ ಬಸದಿಯಲ್ಲಿ ಸಿಗುವ ಶಾಸನಗಳು:-

ಅ) ಕಾಲ ನಿರೂಪಣೆಯಿಲ್ಲದ ಈ ಶಾಸನವು ಲಾಂಛನವಿಲ್ಲದ ಒಂದು ಜಿನ ಬಿಂಬ ಪೀಠದ ಮೇಲೆ ಬರೆಯಲಾಗಿದೆ. ಶಾಸನವು ಈ ರೀತಿ ಇದೆ.

1. ಶ್ರೀಮತು ಪಳಿಯದ ಭೋಗಾರ ಗುಂಮಿ ಸೆಟ್ಟಿಯರು ಮಾಡಿಸಿದ ಗುಂಮಳ (ಟ) ದೇವರು ತೊಲೆ ೧ ಹಲ ೮

ಆ) ಕಂಚಿನ ಶ್ರೀ ಪದ್ಮಾವತಿ ದೇವಿಯ ಪೀಠದ ಮೇಲಿರುವ ಶಾಸನವು ಈ ರೀತಿ ಇದೆ.

ಎಡಮಗ್ಗುಲಲ್ಲಿ	:	ಶ್ರೀ ಧರ್ಮ ಸೆಟ್ಟಿಯಮ
ಎದುರಿನಲ್ಲಿ	:	ಗ ಅಮಿತ ಬನಿಯ ವದ್ರ್ಮ ಸೆಟ್ಟಿಯು ಪದ್ಮಾವತಿಗೆ ಪೀಠ ಪ್ರ
ಬಲ ಮಗ್ಗುಲಲ್ಲಿ	:	ಭಾವಳಿಯ ಪುಂಣ್ಯಾರ್ಥವಾಗಿ
ಇದರ ಕೆಳಗಿನ ಪಂಕ್ತಿ	:	ಯೆರಗಿಸಿ ಕೊಟ್ಟ ಮಂಗಲ ಮಹಾ ಶ್ರೀ

ಇ) ವೃಷಭಾದ್ಯನಂತ ತೀರ್ಥಂಕರರ ಕಂಚಿನ ಮೂರ್ತಿಯ ಪೀಠದ ಮೇಲಿರುವ ಶಾಸನವು ಈ ರೀತಿ ಇದೆ.

ಬಲಮಗ್ಗುಲಲ್ಲಿ	:	ಶ್ರೀ ವೀತರಾಗಾಯ ನಮಃ
ಎದುರು ಬದಿಯಲ್ಲಿ	:	ಮಾಣಿಕ ಶ್ರೀಯ ಮಗಳು ಮಾಡಿಸಿದ
ಬಲಮಗ್ಗುಲಲ್ಲಿ	:	ದೇಹಾರ

ಈ) ಬಿಳಿ ಶಿಲೆಯ ಸಿದ್ಧ ಬಿಂಬದ ಚಕ್ರಾಕಾರದ ಪಾಣಿಪೀಠದ ಮೇಲೆ ಈ ಶಾಸನವಿದೆ:-

ಶ್ರೀಮುಳ್ಳರ ನೇಮರಸರ ಮಗ ದೇವರಸರು ಮೋಕ್ಷಾರ್ಥವಾಗಿ ಪ್ರತಿಷ್ಠಾಪಿಸಿದ ಸಿದ್ಧರ ಪ್ರತುಮೆಗೆ ಮಂಗಲ ಶ್ರೀ ಶ್ರೀ

ಉ) 30 ಸೆಂ. ಮೀ. ಎತ್ತರದ ಬಾಹುಬಲಿ ಸ್ವಾಮಿಯ ಕಂಚಿನ ವಿಗ್ರಹದ ಬೆನ್ನಿಗೆ ತಾಗಿಕೊಂಡಿರುವ ಕಂಚಿನ ಫಲಕದ ಮೇಲಿರುವ ಈ ಶಾಸನವು ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಪ್ರಾರಂಭದ 9 ಪಂಕ್ತಿಗಳು ಆ ಕಂಚಿನ ಫಲಕದ ಮೇಲೆಯೂ ಅನಂತರದ 12 ಪಂಕ್ತಿಗಳು ಆ ಫಲಕದ ಮೇಲೆ, ಎದುರು, ಬಲ ಮತ್ತು ಎಡ ಪಾರ್ಶ್ವಗಳ ಮೇಲೆಯೂ ಬರೆಯಲಾಗಿದೆ. ಶಾಸನದ ಕಾಲ ಶಾಲಿವಾಹನ ಶಕ 1388ನೆಯ ವ್ಯಯ ಸಂವತ್ಸರದ ಜ್ಯೇಷ್ಠ ಬ 5 ಗುರುವಾರ. ಆದರೆ, ಪಂಚಮಿ ತಿಥಿಯು ಮಂಗಳವಾರ ಬರುತ್ತದೆ. 15ನೇ ತಿಥಿಯು ಮಾತ್ರ ಗುರುವಾರ ಬರುತ್ತದೆ. ಆದುದರಿಂದ ಈ ಶಾಸನವನ್ನು ಬರೆಯುವಾಗ 1ನ್ನು ಸೇರಿಸಲು ಬಿಟ್ಟು ಹೋಗಿ, ಕೇವಲ 5 ಎಂದು ತಪ್ಪಾಗಿ ಬರೆದಿರಬೇಕು. ಮೇಲೆ ಹೇಳಿದ ಮಾಸ, 15ನೇ ತಿಥಿಯಂತೆ ಅಂದಿನ ತಾರೀಕು 12-6-1466 ಎಂದಾಗುತ್ತದೆ.

ಶಾಸನದ ಪೂರ್ಣಪಾಠವು ಈ ರೀತಿಯಿದೆ:-

1. ಸ್ವಸ್ತಿ ಶ್ರೀ ವಿಜಯಾಭ್ಯುದಯ
2. ಶಕವರ್ಷ ೧೩೮೮ನೆಯ
3. ವ್ಯಯ ಸಂವತ್ಸರದ ಜೇ
4. ಷ್ಠ ಬ ೫ ಗುರುವಾರದ

5. ಲು ಅಭಿನವ ಲಲಿತ
6. ಕೀರ್ತಿ ದೇವರ ಸಂನಿಧಿಯ
7. ಲ್ಲಿ ಕಾಮಿರಾಯರಸ ರಾ
8. ದ ಬಂಗರ ಕಾಲದಲ್ಲಿ
9. ಬಂಗವಾಡಿಯ ಹ

ಎದುರು 1	:	ಲರ ಬಸ್ತಿಗೆ ಪಟ್ಟಣ ಬ
ಎಡಬದಿ	:	ಳಿಯ ಸೇನಬೋಯ
ಹಿಂಬದಿ	:	ತ್ತಿ ದೇವಕ್ಕ ಸೆಟ್ಟಿತ್ತಿಯು
ಬಲಬದಿ	:	ತಂನ್ನ ಮಗು ಗುಂಮ
ಎದುರು 2	:	ಟ ಸೆಟ್ಟಿಗೆ ಮಾಡಿಸಿದ
ಎಡಬದಿ	:	ಗುಂಮಟನಾಥನ ದೇಹಾ
ಹಿಂಬದಿ	:	ರಕ್ಕೆ ತೊಲೆ ೧ ಯಿೂ ದೇಹಾ
ಬಲಬದಿ	:	ರಕ್ಕೆ ಏನುಂಟಾದ ಧರ್ಮ್ಮ
ಎದುರು3	:	ವನೂ ಆತನ ತಂಮ ಸೇನಬೋ
ಎಡಬದಿ	:	ವತ್ತಿಯ ಬಿರುಮಂಣ
ಹಿಂಬದಿ	:	ಸೆಟ್ಟಿ ನಡೆದು ಬಹನು ಮಂ
ಬಲಬದಿ	:	ಗಲ ಮಹಾ ಶ್ರೀ ಶ್ರೀ

3. ಬೈಲಂಗಡಿಯಲ್ಲಿರುವ ಶ್ರೀ ಪಾರ್ಶ್ವನಾಥ' ಬಸದಿಯ ಭದ್ರಮಂಟಪದ ಬಲಬದಿಯಲ್ಲಿರುವ, ಹಿಂಬದಿಯ ಕಂಬದ ತಳಭಾಗದಲ್ಲಿ ಎದುರಿಗೂ, ಎಡ ಬದಿಯಲ್ಲಿಯೂ ಬರೆದಿರುವ ಶಾಸನ:

ಈ ಶಾಸನವನ್ನು 54 ಸೆಂ. ಮೀ. ಅಗಲ ಮತ್ತು 41 ಸೆಂ. ಮೀ. ಎತ್ತರವಿರುವ ಶಿಲೆಯ ಕಂಬದ ತಳಭಾಗದಲ್ಲಿ ಬರೆಯಲಾಗಿದೆ. ಭಾಷೆ ಮತ್ತು ಲಿಪಿ ಮಧ್ಯಯುಗದ ಕನ್ನಡ. ಕಾಲ ಕ್ರಿ. ಶ. 1611 (ಶಾಲಿವಾಹನ ಶಕ 1533ನೇ ವಿರೋಧಿಕೃತು ಸಂವತ್ಸರದ ಜ್ಯೇಷ್ಠ ಶುದ್ಧ 11ನೇ ರವಿವಾರ) ಇಲ್ಲಿ ಪಂಕ್ತಿಯ ಕ್ರಮ ಸಂಖ್ಯೆಯೊಂದಿಗಿರುವ ಬರವಣಿಗೆಯು ಕಂಬದ ಎದುರು ಭಾಗದಲ್ಲಿಯೂ, ಎರಡನೇ ಪಂಕ್ತಿಯಲ್ಲಿರುವ ಬರವಣಿಗೆಯು ಅದರ ಎಡ ಮೈಮೇಲೆಯೂ ಬರೆಯಲ್ಪಟ್ಟಿದೆ.

ಈ ಶಿಲಾ ಶಾಸನದ ಪೂರ್ಣಪಾಠ ಈ ರೀತಿ ಇದೆ.

1. ಶ್ರೀವೀತರಾಗಾಯನಮಃ । ಶ್ರೀಮತ್ಪರಮಗಂಭೀರ ಸಾದ್ವಾದಾ।
ಮೋಘಲಾಂಛನಂ ತ್ರೈಲೋಕ್ಯನಾಥಸ್ಯ

2. ಶಾಸನಂ ಜಿನಶಾಸನಂ। ಸ್ವಸ್ತಿ ಶ್ರೀ ಜಯಾಭ್ಯುದಯ
ಶಾಲಿವಾಹನ ಶಕವರುಷ ೧೫೩೩ನೇ ಸಂದುವರ್ತಮಾ
3. ನ ವಿರೋಧಿಕೃತು ಸಂವತ್ಸರದ ಜ್ಯೇಷ್ಠ ಶುದ್ಧ ೧೧ನೇ ರವಿವಾರ
ದಲು ಶ್ರೀಮತು ಬಯಲಂಗಡಿಯ ಪಾರೀಶ್ವನಾಥ ಸ್ವಾಮಿಯ ಚೈ
4. ತ್ಯಾಲಯದ ಭದ್ರಮಂಟಪದ ಬಲದ ದಿಕ್ಕಿನ ಸ್ತಂಭ
ದಲ್ಲು ಬರಸಿದ ಶಿಲಾ ಶಾಸನದ ಕ್ರಮವೆಂತೆಂದರೆ ಬಂಗವಾಡಿ
5. ಯಲು ಶ್ರೀ ವೀರನೃಸಿಂಹ ಲಕ್ಷ್ಮಪ್ಪರಸರಾದ ಬಂಗರಾಜವೊ
ಡೆಯರೂ ಸ್ಥಿರ ಸಾಂದ್ರೋಪ್ಯವಾಗಿ ರಾಜ್ಯವ ಪ್ರತಿಪಾಲಿಸು
6. ವ ಕಾಲದಲೂ ಅದರ ಅರ್ಧಾಂಗಿಯರಾದ ಶಂ
ಕರದೇವಿಯರಾದ ಮೂಲರು ಬಂಗರಾಜವೊಡೆ
7. ಯರೂ (ಬಂಗವಾಡಿ?)ಯ ರಾಜ್ಯವನು ಸ್ಥಿ
ರ ಸಾಂದ್ರೋಪ್ಯವಾಗಿ ಪ್ರತಿಪಾಲಿಸುವ ಕಾಲದಲ್ಲೂ-
8. ಗಳು ಈ ಚಯಿತ್ಯಾಲಯದ ಜೀರ್ಣೋದ್ಧಾರದ (ದೋಷ?)ನಿವಾರಣದ
- ಸಭೆಯ ಬಂಗರಾಜವೊಡೆಯರ ಪ್ರಧಾನ ಕ್ರ
9. ಷ್ಣ ಸೇನಬೋವರ ಮಗ ಭಂಡಾರದ ಯೀಶ್ವರಸೇನ ಬೋವಗೆ ಕೊಟ್ಟ ಕ
ತಿಕೆಯ ಪ್ರಧಾನಿಕೆಯನ್ನು ವಪ್ಪಿಸಲಾಗಿ (ದೊರೆ?) ವೀರನರಸಿಂಹ ಲಕ್ಷ್ಮ
10, ಪ್ಪರಸರಾದ ಬಂಗರಾಜ ವೊಡೆಯರಿಗೂ ಶಂಕರ
ದೇವಿಯರಾದ ಮೂಲರಿಗೂ ಆ ಚಂದ್ರಾರ್ಕ ಸ್ಥಾಯಿ
11. ಯಾದ ಕೀರ್ತಿ ಪುಣ್ಯವಾಗಬೇಕೆಂದು ಯೀಶ್ವರ
ಸೇನಬೋವನು ಶ್ರೀ ಪಾರೀಶ್ವನಾಥ ಸ್ವಾಮಿ ಚೈ
12. ತ್ಯಾಲಯದ ಜೀರ್ಣೋದ್ಧಾರ ದೋಷ ನಿವಾರಣದ
ಕೆಲಸವನ್ನು ಗೈಸೆ (ಅವರ ಅಭೀ)ಷ್ಟೆಯು- ಭ
13. ದ್ರಂ ಭೂಯಾತ್ ಮಂಗಳ ಮಹಾ ಶ್ರೀ ಶ್ರೀ
ಶ್ರೀ ಶ್ರೀ

ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೫ನೇ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ-ಕನ್ನಡಿಗ-ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೆ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಗದಗದಲ್ಲಿ ನಡೆಯುತ್ತಿರುವ ಅಖಿಲ ಭಾರತ ೭೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್. ಆರ್. ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಬಾಗೂರು ಮಾರ್ಕಂಡೇಯ